# ಕನ್ನಡ ಭಾಷಾ ಪತ್ರ

## ಬಿ.ಸಿ.ಎ ಮೊದಲನೆಯ ಸೆಮಿಸ್ಟರ್ (2020–21)

## ಬೆಂಗಳೂರು ನಗರ ವಿಶ್ವವಿದ್ಯಾನಿಲಯ

# ಪರಿವಿಡಿ


**I. ಪ್ರೀತಿ**

1. ಪ್ರೀತಿ ಇಲ್ಲದ ಮೇಲೆ – ಡಾ. ಜಿ.ಎಸ್. ಶಿವರುದ್ರಪ್ಪ
2. ಹೇಮಕೂಟದಿಂದ ಬಂದ ಮೇಲೆ
   – ಮಾಸ್ತಿ ವೆಂಕಟೇಶ ಅಯ್ಯಂಗಾರ್
4. ನೀಲಿ ಮೂಗಿನ ನತ್ತು – ಹೆಚ್.ಆರ್. ಸುಜಾತ
3. ನನ್ನ ನಾಯಿ – ಪು.ತಿ.ನ. (ಓದು ಪಠ್ಯ)

**II. ಶಿಕ್ಷಣ**

1. ಯಾವುದು ವಿಮೋಚನೆಯನ್ನು ತಂದುಕೊಡುತ್ತದೋ ಅದೇ ಶಿಕ್ಷಣ
   – ಅನು. ಬಿ.ಎಸ್. ಜಯಪ್ರಕಾಶ್ ನಾರಾಯಣ
2. ಹಾರುವ ಓತಿ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ
3. ಮಗನಿಗೊಂದು ಪತ್ರ
   – ಡಾ. ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ
4. ಮಹಿಳಾ ವಿಮೋಚನೆ ಮತ್ತು ಶಿಕ್ಷಣ (ಓದು ಪಠ್ಯ)
   – ಡಾ. ವಿಜಯಾ ದಬ್ಬೆ

**III. ಕುಲ**

1. ಭೀಷ್ಮ – ಕರ್ಣ ವಿವಾದ – ಪಂಪ
   ಗದ್ಯಾನುವಾದ : ಡಾ. ಎಲ್. ಬಸವರಾಜು
2. ವಚನಗಳು ಮತ್ತು ಕೀರ್ತನೆಗಳು
3. ಮಹಾಡ್ ಕೆರೆಯ ಪ್ರಸಂಗ – ಡಾ. ಬಿ.ಆರ್. ಅಂಬೇಡ್ಕರ್
4. ಬಾಳ್ವೆಯ ಹುಣ್ಣು – ಚೋಮನದುಡಿ (ಓದು ಪಠ್ಯ)
   – ಡಾ. ಕೆ. ಶಿವರಾಮ ಕಾರಂತ

**IV. ವಿನೋದ**

1. ದೆವ್ವಗಳನ್ನು ಕುರಿತು
   – ಡಾ. ಎ.ಎನ್. ಮೂರ್ತಿರಾವ್
2. ಶಿವನ ಮೀಸುವ ಹಾಡು – ವೈದೇಹಿ
3. ಏಳಯ್ಯ ಬೆಳಗಾಯಿತು! – ಪ್ರೊ. ಅ.ರಾ. ಮಿತ್ರ
4. ಊರು ಕೇರಿ – ಡಾ. ಸಿದ್ಧಲಿಂಗಯ್ಯ (ಓದು ಪಠ್ಯ)




# I. ಪ್ರೀತಿ

ಬದುಕಿನ ಬಗೆಗಿನ ಗಾಢವಾದ ಆಶಾವಾದವೇ ಪ್ರೀತಿ. ಒಂದು ಅಮೂರ್ತ ಕಲ್ಪನೆಯಾಗಿರುವ ಪ್ರೀತಿಯು ಇತರ ವ್ಯಕ್ತಿಯ ಬಗೆಗಿನ ನಿಷ್ಕಲ್ಮಶವಾದ ಕಾಳಜಿಯಾಗಿದೆ. ಪ್ರೀತಿಯು ಅನಿರ್ವಚನೀಯವಾದ ಭಾವನೆಗಳನ್ನು ಸಾಮಾನ್ಯವಾಗಿ ಸೂಚಿಸುತ್ತದೆಯಾದರೂ ಆಳದಲ್ಲಿ ಸಹಾನುಭೂತಿ, ಅನುಕಂಪ, ದಯೆ, ಅನುರಾಗಗಳನ್ನೊಳಗೊಂಡಿರುತ್ತದೆ. ಬುದ್ಧ ಮನುಕುಲದ ಸಂಕಷ್ಟಗಳಿಗೆ ಪರಿಹಾರವನ್ನು ಕಾಣಲೆಂದು ರಾಜ್ಯವನ್ನು ತೊರೆದನು. ಮುಂದೆ ಮೋಕ್ಷವನ್ನರಸುತ್ತಾ ಪ್ರೀತಿಯ ಬಂಧನದಲ್ಲಿ ಸಿಲುಕಿದನು. ಬಸವಣ್ಣನವರು ಸಕಲ ಜೀವಾವಳಿಗೆ ಲೇಸನ್ನು ಬಯಸುವುದೇ ಪ್ರೀತಿಯಾಗಿದ್ದು, ದಯೆಯೇ ಧರ್ಮದ ಮೂಲವೆಂದಿದ್ದಾರೆ. ಯೇಸು ಕ್ರಿಸ್ತ ನಿಷ್ಕಲ್ಮಶವಾದ ಪ್ರೀತಿಯುಳ್ಳವನಾಗಿ ಶತೃಗಳನ್ನೂ ಕ್ಷಮಿಸಿದ. ತ್ಯಾಗ, ಬಲಿದಾನ, ಕ್ಷಮೆಗಳು ಪ್ರೀತಿಯ ದಾರಿಗಳೆಂದು ಓಶೋ ಸಾರಿದ್ದಾರೆ. ಪ್ರೀತಿ ಎಲ್ಲವನ್ನೂ ಜಯಿಸುತ್ತದೆಯೆಂದು ವರ್ಜಿಲ್ ಹೇಳಿದರೆ, ನಿಮಗೆ ಬೇಕಿರುವುದು ಪ್ರೀತಿ ಮಾತ್ರ ಎಂದು ಬೀಟಲ್ಸ್ ಹೇಳುತ್ತಾನೆ. ಲೀಬ್ನಿಜ್ ಎಂಬ ತತ್ತ್ವಜ್ಞಾನಿ ಪ್ರೀತಿ ಎನ್ನುವುದು ಅನ್ಯರ ಸಂತೋಷದಿಂದ ಹೊಂದುವ ಪರಮಾನಂದವೆಂದು ಹೇಳಿದ್ದಾನೆ.

ಪ್ರೀತಿಯನ್ನು ಪಡೆಯಲು ಹೆಣಗಿದವರು ಹೇರಳವಾಗಿರುವಂತೆ ಇರುವ ಪ್ರೀತಿಯನ್ನು ಉಳಿಸಿಕೊಳ್ಳಲು ಹೋರಾಡಿದವರು ಚರಿತ್ರೆಯಲ್ಲಿ ಕಾಣಸಿಗುತ್ತಾರೆ. ಪ್ರೀತಿಯೆಂಬುದು ಪಡೆಯುವುದಲ್ಲ, ಅದು ಕೊಡುವುದೆಂದು ಸಂತರು ಸೂಫಿಗಳು ಸಾರಿದ್ದಾರೆ. ತಾನು ಮತ್ತು ಸಮಾಜ, ಬಂಧು–ಬಳಗ, ವಸ್ತು, ಊರು– ದೇಶ – ಜಗತ್ತು, ಕಾಲ ಪ್ರೀತಿಯ ಪ್ರತೀಕವಾಗಿವೆ. ತೀರ ವೈಯಕ್ತಿಕತೆಯಿಂದ ಹಿಡಿದು ವಿಶ್ವಾತ್ಮಕತೆಯವರೆಗೂ ಪ್ರೀತಿಯ ವ್ಯಾಖ್ಯಾನ ವಿಸ್ತಾರವಾಗಿದೆ. ತಾಯಿ ಮತ್ತು ಮಗುವಿನ ಪ್ರೀತಿಗೆ ಸಾಟಿಯೇ ಇಲ್ಲ. ವಿಶ್ವದಲ್ಲಿ ಕಾಣಬರುವುದು ಪ್ರೀತಿ ತತ್ತ್ವವಾಗಿದೆ. : ಜಿ.ಎಸ್. ಶಿವರುದ್ರಪ್ಪನವರು "ಪ್ರೀತಿಯಿಲ್ಲದೆ ಹೂವು ಅರಳೀತು ಹೇಗೆ" ಎಂದು ಪ್ರಶ್ನಿಸುತ್ತಲೇ ಪ್ರೀತಿಯ ಮಹತ್ತ್ವವನ್ನು ಅರಹುತ್ತಾರೆ.

# ಪ್ರೀತಿ ಇಲ್ಲದ ಮೇಲೆ

**– ಡಾ. ಜಿ.ಎಸ್. ಶಿವರುದ್ರಪ್ಪ**

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡೀತು ಹೇಗೆ?
ಅರ್ಥ ಹುಟ್ಟೀತು ಹೇಗೆ?
ಬರೀ ಪದಕ್ಕೆ ಪದ ಜತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ
ದಕ್ಷಿಣಾಫ್ರೀಕದ ಕಗ್ಗತ್ತಲಿಗೆ
ಬೆಳಕು ಮೂಡೀತು ಹೇಗೆ
ಸೆರೆಮನೆಯ ಕಂಬಿಯ ನಡುವೆ
ಕಮರುವ ಕನಸು ಕೊನರೀತು ಹೇಗೆ?
ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ–
ಸಂಶಯದ ಗಡಿಗಳುದ್ದಕ್ಕು
ಸಿಡಿಗುಂಡುಗಳ ಕದನ ನಿಂತೀತು ಹೇಗೆ?
ಜಾತಿ–ಮತ–ಭಾಷೆ–ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ?

❑



# ಹೇಮಕೂಟದಿಂದ ಬಂದ ಮೇಲೆ

**– ಮಾಸ್ತಿ ವೆಂಕಟೇಶ ಅಯ್ಯಂಗಾರ್**

ಮಾಲಿನೀ ತೀರದ ಕಣ್ವ ಋಷಿಗಳ ಆಶ್ರಮದ ಸಮೀಪ. ಹಸ್ತಿನಾವತಿಯಿಂದ ಆಶ್ರಮಕ್ಕೆ ಬರುವ ದಾರಿಯಲ್ಲಿ ಇಬ್ಬರು ತರುಣಿಯರು ಮೆಲ್ಲಗೆ ಮಾತನಾಡಿಕೊಳ್ಳುತ್ತ ಮೆಲ್ಲನೆ ಆಶ್ರಮದಿಂದ ನಡೆದು ಹೋಗುತ್ತಿದ್ದಾರೆ. ಒಬ್ಬಳು ಈ ಹೊತ್ತಾದರೂ ಬರುವರೋ ಇಲ್ಲವೋ ಇಷ್ಟು ಹೊತ್ತಿಗೆ ಬರಬೇಕಾಗಿತ್ತಲ್ಲ ಎಂದಳು. ಇನ್ನೊಬ್ಬಳು ಏನು ಕೆಲಸವೋ ಒಂದು ರಾಷ್ಟ್ರದ ರಾಣಿಯೆಂದಮೇಲೆ ಎಲ್ಲವನ್ನೂ ಬಿಟ್ಟು ಬರುವುದು ಸುಮ್ಮನೆ ಆಗುತ್ತದೆಯೇ, ಇಂದಲ್ಲದಿದ್ದರೆ ನಾಳೆಯಾದರೂ ಬರುತ್ತಾರೆ ಎಂದಳು. ಮೊದಲನೆಯವಳು ನನಗೆ ಸುಮ್ಮನೆ ಆಸೆಯಾಗುತ್ತದೆ. ನಮ್ಮ ಶಕುಂತಲೆಯನ್ನು ನೋಡಬೇಕೆಂದು, ನೋಡಿ ಏಳು ವರ್ಷದ ಮೇಲಾಯಿತಲ್ಲ. ಈಗ ಹೇಗಾಗಿದ್ದಾಳೋ, ಮಗುವನ್ನಂತೂ ನಾವು ನೋಡಿಯೇ ಇಲ್ಲ ಎಂದಳು. ಅವಳ ಜೊತೆಯವಳು ನನಗೂ ಬಹಳ ಆಸೆ, ಈ ಏಳು ವರ್ಷದಲ್ಲಿ ಅವಳನ್ನು ಎಷ್ಟು ಸಲ ಕನಸಿನಲ್ಲಿ ನೋಡಿದೆನೋ, ನಮ್ಮ ಶಕುಂತಲೆಯೂ ಖಂಡಿತ ನಮ್ಮನ್ನು ಬಹಳ ಸಲ ನೆನೆದುಕೊಂಡಿರಬಹುದು ಎಂದಳು.

ಮೊದಲು ಮಾತನಾಡಿದವಳು ಅನಸೂಯೆ, ಎರಡನೆಯವಳು ಪ್ರಿಯಂವದೆ. ಅವರು ರಾಣಿಯಾದ ಶಕುಂತಲೆಯ ಬರವನ್ನು ನಿರೀಕ್ಷಿಸುತ್ತಿದ್ದರು. ಅವಳು ಹಿಂದಿನ ದಿನವೇ ಬರಬೇಕಾಗಿತ್ತು; ಬರಲಿಲ್ಲ. ಇಂದು ಬರುವೆನೆಂದು ಹೇಳಿಕಳುಹಿಸಿದ್ದಳು. ಆಶ್ರಮದ ಬಾಗಿಲ ಬಳಿ ರಾಣಿಯನ್ನು ಬರಮಾಡಿಕೊಳ್ಳುವುದಕ್ಕೆ ಆಶ್ರಮದ ಪ್ರತಿನಿಧಿಗಳು ನಿಂತಿದ್ದರು. ಅವಳ ಈ ಸಖಿಯರಿಬ್ಬರೂ ಅವಳು ಬರುವವರೆಗೂ ಕಾದಿರಲು ಮನಸ್ಸು ತಡೆಯದೆ ಮೆಲ್ಲನೆ ದಾರಿಯಲ್ಲಿ ಮುಂದುವರಿದಿದ್ದರು. ರಾಣಿ ರಥದಲ್ಲಿ ಬರುತ್ತಿರಬೇಕಾದರೆ, ಐದು ನಿಮಿಷ ಮುಂದಾಗಿ ಅವಳನ್ನು ನೋಡಬೇಕೆಂದು ಇವರ ಆಸೆ.

ಬರುವವರನ್ನು ಎದುರುನೋಡುತ್ತ ಹೊತ್ತನ್ನು ಕಳೆಯುವುದು ಬಹು ಬೇಸರದ ಕೆಲಸ. ಇವರೋ ಶಕುಂತಲೆಯೊಂದಿಗೆ ಹತ್ತಾರು ವರ್ಷ ಅಕ್ಕ–ತಂಗಿಯರಂತೆ ಬೆಳೆದಿದ್ದ ಸಖಿಯರು; ಶಕುಂತಲೆಯ ಜೀವದ ಅರ್ಧವೆಂಬಂತೆ ಇದ್ದವರು. ಅವಳನ್ನು ಏಳು ವರ್ಷದ ಹಿಂದೆ ದುಷ್ಯಂತನ ಬಳಿಗೆ ಕಳುಹಿಸುವ ಸಂದರ್ಭದಲ್ಲಿ ನೋಡಿದ್ದೇ ನೋಡಿದ್ದು. ಈಚೆಗೆ ಇವರಿಗೆ ಅವಳನ್ನು ನೋಡುವ ಅವಕಾಶವಿರಲಿಲ್ಲ. ಶಕುಂತಲೆ ಆಶ್ರಮದಿಂದ ಹೋದ ತಿಂಗಳ ಮೇಲೆ ಗೌತಮಿಯೂ ಶಾರ್ಙ್ಗರವ ಶಾರದ್ವತರೂ ಹಿಂದಕ್ಕೆ ಬಂದರು. ಅವರಿಂದ ಶಕುಂತಲೆಗೆ ಆದ ಅವಮಾನದ ಕತೆಯನ್ನು ಕೇಳಿ ಆಶ್ರಮವಾಸಿಗಳೆಲ್ಲ ನೊಂದರು. ಶಕುಂತಲೆಯನ್ನು ಮೇನಕೆ ಕರೆದುಕೊಂಡು ಹೋದದ್ದಾಗಲಿ, ಅವಳು

ಮರೀಚ ಋಷಿಗಳ ಆಶ್ರಮದಲ್ಲಿ ಮಗನನ್ನು ಹೆತ್ತು ಸುಖವಾಗಿದ್ದಾಳೆಂಬುದಾಗಲಿ ಇವರಿಗೆ ತಿಳಿಯಲಿಲ್ಲ. ಕಣ್ವ ಋಷಿಗಳಿಗೆ ತಿಳಿಯಿತೇನೊ; ಅವರು ಆ ಮಾತನ್ನು ಎತ್ತಲಿಲ್ಲ. ಗೌತಮೀದೇವಿ ಒಂದು ಸಲ ಋಷಿಗಳನ್ನು ಕುರಿತು, "ಮಗು ಸುರಕ್ಷಿತವಾಗಿದ್ದಾಳೆಯೇ? ಹೇಗೋ ವರ್ತಮಾನ ತರಿಸಿಕೊಂಡರೆ ನನಗೆ ಮನಸ್ಸು ಸ್ವಲ್ಪ ಸಮಾಧಾನವಾಗಿರುತ್ತದೆ" ಎಂದಳು. ಋಷಿಗಳು ಅದಕ್ಕೆ "ಅವಳು ಸೌಖ್ಯವಾಗಿದ್ದಾಳೆ. ಆದರೆ ಈಗಣ ಅನಿಷ್ಟವು ಕಳೆಯುವುದಕ್ಕೆ ಸ್ವಲ್ಪ ದಿನ ಬೇಕು, ಆಗ್ಯೆ ಎಲ್ಲಾ ಸರಿಹೋಗುತ್ತದೆ. ಅದುವರೆಗೆ ನಾವು ವಿಚಾರಿಸಿ ಪ್ರಯೋಜನವಿಲ್ಲ, ಆಗ್ಯೆ ಅವಳ ಕ್ಷೇಮಸಮಾಚಾರ ನಮಗೆ ತಾನೇ ತಿಳಿಯುತ್ತದೆ" ಎಂದರು. ಉಳಿದ ವಿವರ ಅವರನ್ನು ಇವರು ಯಾರೂ ಕೇಳುವಂತಿಲ್ಲ. ಅವರು ಅದನ್ನು ಇವರೊಂದಿಗೆ ಚರ್ಚೆಮಾಡುವವರೂ ಅಲ್ಲ. ಹೀಗೆ ಹತ್ತಿರ ಹತ್ತಿರ ಆರು ವರ್ಷಗಳ ಮೇಲೆ ಒಂದು ದಿನ ರಾಜಪುರುಷನೊಬ್ಬನು ಚಕ್ರವರ್ತಿಯ ಕಡೆಯಿಂದ ಮರ್ಯಾದೆಗಳ ಸಮೇತ ಬಂದು ರಾಜನು ಹೇಮಕೂಟದಲ್ಲಿ ಶಕುಂತಲೆಯನ್ನು ಕಂಡ ವಿಷಯವನ್ನೂ, ಅಲ್ಲಿಂದ ಅವಳನ್ನೂ ಕುಮಾರ ಭರತನನ್ನೂ ಕರೆತಂದ ವಿಷಯವನ್ನೂ ಕಣ್ವ ಋಷಿಗಳ ಸನ್ನಿಧಿಯಲ್ಲಿ ನಿವೇದಿಸಿದನು. ಆ ದಿನ ಆಶ್ರಮವಾಸಿಗಳ ಆನಂದ ಎಷ್ಟೆಂದು ಹೇಳುವಂತಿಲ್ಲ. ಕುಲಪತಿಗಳು ಐದು ವರ್ಷ ನಕ್ಕಿರಲಿಲ್ಲ, ಅಂದು ನಕ್ಕರು. ಸಂಜೆಯಲ್ಲಿ ಪ್ರಿಯಂವದೆಯೂ ಅನಸೂಯೆಯೂ ಹೋಮಾಂತದಲ್ಲಿ ಹರಸುವುದಕ್ಕೆ ತಮ್ಮ ಮಕ್ಕಳನ್ನು ತಂದಾಗ ಇವರು ಅವನ್ನು ಕೈಯಲ್ಲಿ ಹಿಡಿದುಕೊಂಡು ಮುದ್ದಿಸಿದರು; ಸ್ವಲ್ಪ ನಗಿಸಿದರು. ಆ ಹೊತ್ತೆಲ್ಲಾ ಅವರ ನಡೆನುಡಿಯಲ್ಲಿ ಹೊಸದೊಂದು ಉತ್ಸಾಹ ಕಾಣುತ್ತಿತ್ತು. ಸಂಯಮಿಗಳಾದ ಅವರಿಗೇ ಹಾಗಿತ್ತೆಂದ ಮೇಲೆ ಉಳಿದವರು ಮಾತೇನು? ಎಲ್ಲರಿಗೂ ಮಿತಿಮೀರಿದ ಸಂತೋಷ. ಆಶ್ರಮದ ಮೃಗಪಕ್ಷಿಗಳೂ ಸುದ್ದಿಯನ್ನು ತಿಳಿದಂತೆಯೇ ಎಂದಿಗಿಂತ ಹೆಚ್ಚಾಗಿ ನಲಿದವು. ಅಂದು ಅವಕ್ಕೆ ಕಾವಲು ಕಡಿಮೆ; ಇದೇನೋ ಹಬ್ಬವೆಂದು ಅವುಗಳ ಜೀವಕ್ಕೆ ಕಂಡಿರಬೇಕು. ಅಲ್ಲದೆ ಸಾತ್ವಿಕರ ಬಳಿಯ ಮೃಗಗಳೂ ಇನ್ನೊಂದು ಜೀವನ ನೋವು ನಲಿವಿನ ಸುಳುವನ್ನು ಸಹಜವಾಗಿ ಅರಿಯುತ್ತವೆ. ಪೂರ್ವದಿಂದ ಆಶ್ರಮದಲ್ಲಿ ಬೆಳೆದು ಋಷಿಗಳೊಡನೆ ವೃದ್ಧವಾಗಿ ಅವರ ತಪಸ್ಸಿನ ಪ್ರಭಾವದಲ್ಲಿ ಭಾಗಿಗಳಾದುವೆಂಬಂಥ ವೃಕ್ಷಗಳೂ ಅಂದು ಸಂಪ್ರದಾಯದ ಗಾಂಭೀರ್ಯದೊಡನೆ ಹೊಸದೊಂದು ಉಲ್ಲಾಸವನ್ನು ಸೂಚಿಸುವ ಮೃದುವಾದ ಶಬ್ದವನ್ನು ಮಾಡಿದವು. "ಕುಲಪತಿಗಳ ಸಾಕುಮಗಳು ಸುಖವಾಗಿದ್ದಾಳೆ, ಪತಿಯೊಂದಿಗೆ ಅರಮನೆಯಲ್ಲಿದ್ದಾಳೆ, ರಾಷ್ಟ್ರದ ರಾಣಿಯಾಗಿದ್ದಾಳೆ, ಭವಿಷ್ಯ ಚಕ್ರವರ್ತಿಯನ್ನು ಸಾಕುತ್ತಿದ್ದಾಳೆ" ಎಂಬ ಭಾವ ಆಶ್ರಮ ಹೃದಯದಲ್ಲಿ ಅಲ್ಲಿಯ ಉಳಿದೆಲ್ಲ ಜೀವನದಲ್ಲಿ ಮಾಲಿನಿಯ ಪ್ರಸನ್ನ ಸಲಿಲಾಶಯಗಳಲ್ಲಿ ತಪೋವನಕ್ಕೆ ಹರಿತಂದ ಗಾಳಿ ಬೆಳಕಿನಲ್ಲಿ ಸರ್ವತ್ರ ಪ್ರಕಾಶಗೊಂಡಿತು. ಕುಲಪತಿಗಳು ರಾಜಪುರುಷನನ್ನು ಅಂದು ಅಲ್ಲಿ ನಿಲ್ಲಿಸಿಕೊಂಡಿದ್ದು ಮಾರನೆಯ ದಿನ ತಕ್ಕ ಮರ್ಯಾದೆಯಿಂದ ರಾಜನಿಗೆ ಮಗಳಿಗೆ ತಮ್ಮ ಆಶೀರ್ವಾದವನ್ನು ತಿಳಿಸತಕ್ಕದ್ದೆಂದು ಆಜ್ಞಾಪಿಸಿ ಕಳುಹಿಸಿ ಕೊಟ್ಟರು.



ಶಕುಂತಲೆ ಸುಖವಾಗಿದ್ದಾಳೆ, ಹತ್ತು ದಿನದ ಪ್ರಯಾಣದಲ್ಲಿ ಹಸ್ತಿನಾವತಿಯಲ್ಲಿ ಸುಖವಾಗಿದ್ದಾಳೆ ಎಂದು ತಿಳಿದ ಒಡನೆಯೇ ಅನಸೂಯೆ ಪ್ರಿಯಂವದೆಯರಿಬ್ಬರಿಗೂ ಗೌತಮೀದೇವಿಗೂ ಅವಳನ್ನು ನೋಡಬೇಕೆಂದು ಆಸೆಯಾಯಿತು. ಕುಲಪತಿಗಳಾದ ಕಣ್ವರಿಗೂ ಆಸೆಯಾಗಿರಬೇಕು; ಅಂದು ಅವಳೊಡನೆ ಹೋಗಿ ನಿಷ್ಠುರದ ಮಾತನಾಡಿ ಅವಳನ್ನು ಅಲ್ಲಿ ಒಂಟಿಯಾಗಿ ಬಿಟ್ಟುಬಂದ ತರುಣ ಶಾರ್ಙ್ಗರವನಿಗೂ ಶಾರದ್ವತನಿಗೂ ಕೂಡ ಕುತೂಹಲವಿದ್ದಿರಬಹುದು. ಆದರೆ ಗಂಡಸರು ಇಂಥ ಸಂದರ್ಭದಲ್ಲಿ ಆಸೆಯನ್ನು ಬಾಯಲ್ಲಿ ಹೇಳುವುದಿಲ್ಲ. ಹೆಂಗಸರು ಹೇಳದೆ ಇರುವುದಿಲ್ಲ. ಪ್ರಿಯಂವದೆ ಅನಸೂಯೆಗೆ ಹೇಳಿಕೊಟ್ಟಳು. ಅನಸೂಯೆ ಅಜ್ಜಿಯನ್ನು ಎತ್ತಿ ಕಟ್ಟಿದಳು. ಆ ಮುದುಕಿ ಈ ಮಾತನ್ನೆತ್ತುವುದಕ್ಕೆ ನೆವ ಸಿಕ್ಕಿತಲ್ಲ ಎಂಬ ಸಂತೋಷದಿಂದ ಒಂದು ಸಂಜೆ, ಕುಲಪತಿಗಳನ್ನು ಕುರಿತು "ನಮ್ಮ ಮಗು ಹೇಗಿದ್ದಾಳೋ ಹೋಗಿ ನೋಡಿಕೊಂಡು ಬರೋಣವೆಂದು ಆಸೆಯಾಗುತ್ತದೆ. ಆಗಬಹುದೆಂದರೆ ಹೋಗಿಬರುತ್ತೇನೆ" ಎಂದಳು. ಋಷಿಗಳು, "ನೀನು ಹೋಗುವುದಕ್ಕೆ ಏನು ಅಡ್ಡಿ? ಆದರೆ ಮಕ್ಕಳೂ ಹೋಗಬೇಕೆಂದು ಆಶಿಸಬಹುದು. ಅವರನ್ನು ಬಿಟ್ಟು ಹೋಗುವುದು ಆಗುತ್ತದೆಯೇ?" ಎಂದರು. ವೃದ್ಧೆ, "ಅವರನ್ನೂ ಕರೆದುಕೊಂಡು ಹೋಗುತ್ತೇನೆ" ಎಂದಳು. ಕುಲಪತಿಗಳು, "ಮಕ್ಕಳು ಎಳೆಯವು; ಅವರು ತರುಣಿಯರು, ಅಲ್ಲದೆ ರಾಣಿರಾಜರ ಸಮಕ್ಷಮಕ್ಕೆ ಕರೆಸಿಕೊಳ್ಳದೆ ತಾವಾಗಿ ಹೋಗುವುದು ಆಶ್ರಮವಾಸಿಗಳಿಗೆ ತಕ್ಕದ್ದಲ್ಲ; ನೋಡೋಣ" ಎಂದರು. ಮುದುಕಿಗೂ ಸಖಿಯರಿಗೂ ಆಶಾಭಂಗವಾಯಿತು. ಆದರೆ ಇದಾದ ಎರಡು ವಾರದಲ್ಲಿ ಶಕುಂತಲೆ ಹಿರಿಯರಿಗೆ ಕಿರಿಯರಿಗೆ ಜಿಂಕೆಗೆ ಹಸುವಿಗೆ ಆಲದಮರಕ್ಕೆ ಮಲ್ಲಿಕಾಲತೆಗೆ ಒಂದು ಸತ್ವಕ್ಕೆ ಬಿಡದಂತೆ ಎಲ್ಲರಿಗೂ ಬಾಗಿನಗಳನ್ನು ಕಳುಹಿಸಿ ತಾನು ಮೂರು ದಿನ ಬಿಟ್ಟು ಆಶ್ರಮಕ್ಕೆ ಬರುವುದಾಗಿ ಹೇಳಿಕಳುಹಿಸಿದಳು. ಆ ಬರಬೇಕಾಗಿದ್ದದ್ದು ನಿನ್ನೆಯ ದಿನ. ಎಲ್ಲರೂ ಕಾದಿರಲಾಗಿ, ಬರುವುದು ಸ್ವಲ್ಪ ಸಾವಕಾಶವಾಗುವುದೆಂದೂ ಮಾರನೆಯ ದಿನ ಆಶ್ರಮವನ್ನು ಸೇರುವುದಾಗಿಯೂ ತಿಳಿಸುವಂತೆ ರಾಣಿ ಇನ್ನೊಂದು ಬೇಹನ್ನು ಅಟ್ಟಿದಳು. ಅದರಿಂದಲೇ ಇಂದು ಇವರೆಲ್ಲ ಅವಳ ಬರವನ್ನು ನಿರೀಕ್ಷಿಸುತ್ತ ಇಂದೂ ಬರುವಳೋ ಇಲ್ಲವೋ ಎಂದು ಚಿಂತೆ ಮಾಡುತ್ತಿದ್ದರು.

ಶಕುಂತಲೆಯನ್ನು ನೋಡಬೇಕೆಂದು ಸಖಿಯರಿಗೂ ಗೌತಮೀ ದೇವಿಗೂ ಆಸೆಯಾದಂತೆ ಶಕುಂತಲೆಗೆ ತಂದೆ ಅಜ್ಜಿ ಸಖಿಯರನ್ನೂ ಮಾಲಿನೀ ತೀರದ ಆ ಆಶ್ರಮವನ್ನೂ ನೋಡಬೇಕೆಂದು ತೀವ್ರವಾದ ಆಸೆ. ಒಲಿದ ಗಂಡನಿಂದ ನಿರಾಕೃತಳಾಗಿ ಹೋಗಿ, ಹೇಮಕೂಟದಲ್ಲಿ ಆರು ವರ್ಷವನ್ನು ಕಳೆದು ಹದಿನೆಂಟು ವರ್ಷದ ತರುಣಿ ಮೂವತ್ತೈದು ವರ್ಷದ ಹೆಂಗಸಂತೆ ಜೀವನದ ಭಾರದಿಂದ ತಗ್ಗಿ ಹೋಗಿದ್ದಳು. ಪತಿ ಬಂದು ತಪ್ಪನ್ನೊಪ್ಪಿಕೊಂಡಾಗ ಅವಳ ಸ್ವಭಾವದಲ್ಲಿ ರೋಷಕ್ಕೆ ಸ್ಥಳವಿಲ್ಲವಾಗಿ ಹೋಗಿತ್ತು. ಆಮೇಲೆ ಮಗನನ್ನು ಕರೆದುಕೊಂಡು ಹಸ್ತಿನಾವತಿಗೆ ರಾಣಿಯೆಂದು ಬಂದಾಗಲಾಗಲಿ ಅವಳ ಮನಸ್ಸು ಉತ್ಸಾಹದಿಂದ ಉಬ್ಬಲಿಲ್ಲ. ಒಂದು ಸ್ಥಿತಿ ಮೀರಿದ

ನಂತರ ಮನಸ್ಸು ಎಂಥ ಸಂತೋಷದಲ್ಲೂ ಉಬ್ಬುವುದನ್ನು ಮರೆಯುತ್ತದೆ. ಅವಳಿಗೆ ಜೀವನದಲ್ಲಿ ಕಲ್ಯಾಣ ಮರಳಿ ಮೂಡಿದ ಕ್ಷಣದಲ್ಲಿ ತನಗೆ ಸುಖ ಬಂದಿತೆಂಬ ಭಾವನೆಗಿಂತ, "ತನ್ನ ತಂದೆಗೆ ಇನ್ನು ಚಿಂತೆ ಇಲ್ಲ, ತನ್ನ ಸಖಿಯರಿಗೆ ಇನ್ನು ಖೇದವಿಲ್ಲ, ತನ್ನ ಅಜ್ಜಿ ಇನ್ನು ಯೋಚಿಸಬೇಕಾದುದಿಲ್ಲ, ತನ್ನ ಮಗನಿಗೆ ಹುಟ್ಟಿನಿಂದ ಸಲ್ಲಬೇಕಾದ ಪದವಿ ದೊರೆಯುತ್ತದೆ, ತನ್ನ ನಡತೆ ಯಾವುದರಿಂದಲಾದರೂ ಅದು ಅವನಿಗೆ ತಪ್ಪಿಹೋಗಬೇಕಾದ ಪ್ರಮೇಯವಿಲ್ಲ" ಎನ್ನುವ ಭಾವವೇ ಮುಖ್ಯವಾಗಿತ್ತು. ಆದ್ದರಿಂದ ಅವಳು ಸಾಧ್ಯವಾದಷ್ಟು ಬೇಗ ತನ್ನವರನ್ನು ನೋಡಿ ಅವರ ಕಷ್ಟಸುಖಗಳನ್ನು ವಿಚಾರಿಸಿ ತನ್ನ ಸೌಖ್ಯದ ಮಾತನ್ನು ಅವರಿಗೆ ಪ್ರತ್ಯಕ್ಷವಾಗಿ ಹೇಳಬೇಕೆಂದು ಕುತೂಹಲಪಟ್ಟಳು. ಊರಿಗೆ ಬಂದೊಡನೆಯೇ ಆಶ್ರಮಕ್ಕೆ ಹೋಗುವ ಮಾತನ್ನೆತ್ತಬೇಕೆಂದೇ ಮನಸ್ಸಿನ ಪ್ರವೃತ್ತಿ. ಆದರೆ ಇನ್ನೂ ಹೊಸದು; ತನ್ನವರನ್ನು ನೋಡಬೇಕೆಂಬ ಮಾತನ್ನು ಅಷ್ಟು ಬೇಗ ತೆಗೆಯುವುದಕ್ಕೆ ಸಂಕೋಚವಾಯಿತು; ಸುಮ್ಮನಿದ್ದಳು. ತಾವು ಸುಖವಾಗಿ ಬಂದ ಮಾತನ್ನು ಹೇಳಿಕಳುಹಿಸಿದಾಗ ತಾನೂ ಸಖಿಯರಿಗೆ ಹಿರಿಯರಿಗೆ ಒಂದೊಂದು ಮಾತನ್ನು ಹೇಳಿಕಳುಹಿಸಿದ್ದಳು. ರಾಜಪುರುಷರು ಹಿಂದಕ್ಕೆ ಬಂದಾಗ ಅವರಿಂದ ಆಶ್ರಮದ ವೃತ್ತಾಂತವನ್ನು ತಿಳಿದುಕೊಂಡಳು. ಅನಸೂಯೆ ಶಾರದ್ವತನನ್ನೂ ಪ್ರಿಯಂವದೆ ಶಾರ್ಙ್ಗರವನನ್ನೂ ಮದುವೆಯಾಗಿದ್ದರೆಂದು ಅವರ ಮಾತಿನಿಂದ ಅವಳು ಊಹಿಸಿದಳು. ಇದಾದ ಕೆಲವು ದಿನದ ಮೇಲೆ ಅವಳು ತನ್ನ ಅರಸನಲ್ಲಿ ಕಣ್ವರ ಆಶ್ರಮಕ್ಕೆ ಹೋಗುವ ಮಾತನ್ನೆತ್ತಿದಳು. ರಾಜನು "ಅಗತ್ಯ ಹೋಗಿಬರಬೇಕಾದದ್ದೇ. ಆದರೆ ಸದ್ಯದಲ್ಲಿ ನಾನು ಅಲ್ಲಿ ಬರುವುದು ಸರಿಯಲ್ಲ. ಹೋದ ಸಲ ಆ ಪುಣ್ಯ ಭೂಮಿಯಲ್ಲಿ ಕಾಲಿಟ್ಟಾಗ ನಾನು ಕುಲಪತಿಗಳಲ್ಲಿ ಅಪರಾಧ ಮಾಡಿದೆ. ಈಗಲೇ ಅವರನ್ನು ನೋಡುವುದಕ್ಕೆ ಮನಸ್ಸಿನಲ್ಲಿ ಧೈರ್ಯವಿಲ್ಲ. ನೀನು ಹೋಗಿಬರಬಹುದು" ಎಂದನು. ಶಕುಂತಲೆ ಸ್ವಲ್ಪ ನಗುತ್ತ, "ಆಗ ನೀನು ಮಾಡಿದ ಅಪರಾಧವು ತಂದೆಗೆ ಈಗ ಪ್ರಿಯವಾಗಿ ಪರಿಣಮಿಸಿದೆ. ಅಲ್ಲದೆ ಅವರು ಅಂತಹ ಕ್ರೋಧವನ್ನು ಮನಸ್ಸಿನಲ್ಲಿಟ್ಟಾರೆ" ಎಂದಳು. ದುಷ್ಯಂತನು, "ನಾನು ಸಂಕೋಚಪಡುವುದಕ್ಕೆ ಅವರು ಮನಸ್ಸಿನಲ್ಲಿ ಕ್ರೋಧವಿಡಬೇಕಾದದ್ದಿಲ್ಲ. ನನ್ನ ತಪ್ಪಿನ ಭಾವ ಇನ್ನೂ ಮನಸ್ಸಿನಿಂದ ಅಳಿಸಿಲ್ಲ, ನಾನು ನಿನ್ನನ್ನು ಕೆಲವು ಕಾಲ ಸರಿಯಾಗಿ ನೋಡಿಕೊಂಡ ಮೇಲೆ ಅವರಲ್ಲಿ ಹೋಗುವುದಕ್ಕೆ ಧೈರ್ಯಬರುತ್ತದೆ" ಎಂದನು. ಶಕುಂತಲೆ, "ನಾನೂ ಅದುವರೆಗೆ ಹೋಗುವುದಿಲ್ಲ, ತಂದೆ ಹೇಳಿದಂತೆಯೇ ಆಗಲಿ" ಎಂದಳು. ತಂದೆ ಹೇಳಿದ್ದೇನು ಎಂದು ರಾಜನಿಗೆ ತಿಳಿಯದು. ಏನು ಹೇಳಿದರು ಎಂದು ಕೇಳಿದನು. "ಏಳು ವರುಷಗಳ ಹಿಂದೆ ನಾನು ಇತ್ತ ಹೊರಟ ವೇಳೆ ಈ ಆಶ್ರಮಕ್ಕೆ ಪುನಃ ಬರುವುದು ಯಾವಾಗಲೋ ಎಂದುದಕ್ಕೆ ನಿನ್ನ ಯಜಮಾನನೊಂದಿಗೆ ತಪಸ್ಸಿಗೆ ಹೊರಟಾಗ ಎಂದು ಅಪ್ಪಣೆ ಮಾಡಿದರು" ಎಂದು ಶಕುಂತಲೆ ಹೇಳಿದಳು. ರಾಜನು "ಅದು ಆಶ್ರಮದಲ್ಲೇ ನಿಲ್ಲುವುದಕ್ಕೆ ಹೋಗುವುದು ಯಾವಾಗ ಎಂಬ ಅರ್ಥದಲ್ಲಿ ಹೇಳಿದ



ಮಾತು. ಹೋಗಿ ನೋಡಿಕೊಂಡು ಬರುವುದಕ್ಕೆ ಆ ಮಾತು ಅನ್ವಯಿಸುವುದಿಲ್ಲ, ಹೋಗಿ ಅವರ ಮನಸ್ಸನ್ನು ಸಮಾಧಾನಪಡಿಸು" ಎಂದನು. ಶಕುಂತಲೆ, "ನಾನು ನಿನ್ನ ಪಕ್ಷದ ರಾಯಭಾರಿಯೇ" ಎಂದಳು. ರಾಜನು, "ನೀನು ಹಾಸ್ಯದಲ್ಲಿ ಕೇಳುತ್ತಿದ್ದೀಯೆ. ಆದರೆ ಅದು ನಿಜವಾದ ಮಾತು" ಎಂದನು. ಇಷ್ಟೆಲ್ಲ ಆದಮೇಲೆ ರಾಣಿ ತಂದೆಯ ಆಶ್ರಮಕ್ಕೆ ತಾನು ಬರಲುಳ್ಳವಳೆಂದು ವರ್ತಮಾನ ಕಳುಹಿಸಿದಳು.

ಹೊರಡುವುದಕ್ಕೆ ಒಂದು ದಿನ ಗೊತ್ತಾಯಿತು. ಅಂದಿನ ಬೆಳಿಗ್ಗೆ ಶಕುಂತಲೆ ದೇವರ ಪೂಜೆ ಮುಗಿಸಿ ಸಪತ್ನಿಯಾದ ಹಂಸಪದಿಕೆಗೆ ತಾನು ಹೋಗಿಬರುವ ಮಾತನ್ನು ತಿಳಿಸಲು ಹೋದಳು. ಹಂಸಪದಿಕೆ ಶಕುಂತಲೆಗಿಂತ ಮೊದಲು ನಾಲ್ಕು ವರುಷದಿಂದ ರಾಜನ ಮನಸ್ಸನ್ನು ಒಲಿಸಿಕೊಂಡಿದ್ದ ರಾಣಿ. ಗಾಂಧಾರ ರಾಜನ ಪುತ್ರಿ, ಚೆಲುವೆ, ತೇಜಸ್ವಿನಿ. ಆ ಚೆಲುವೂ ತೇಜಸ್ಸೂ ನಾಲ್ಕು ವರ್ಷ ಅರಮನೆಯನ್ನು ಆಳಿದವು. ಆಮೇಲೆ ಒಂದು ದಿನ ಬೇಟೆಗೆ ಹೋಗಿ ಹಿಂದಕ್ಕೆ ಬಂದ ರಾಜನು ಅನ್ಯ ಮನಸ್ಕನಾಗಿ ಇನಿಯಳ ವಿಷಯದಲ್ಲಿ ಅಶ್ರದ್ಧೆಯಿಂದ ನಡೆದುಕೊಂಡನು. ಇದು ಆ ಕಾಲದಲ್ಲಿ ರಾಣಿಯರಿಗೆ ಸಾಮಾನ್ಯವಾದ ಅನುಭವ. ರಾಜನು ಯಾರನ್ನಾದರೂ ನೋಡಿದನೋ ಎಂದು ಅವಳು ಸಂದೇಹಪಟ್ಟಳು; ಅವನ ಜೊತೆಗೆ ಹೋಗಿದ್ದ ಜನರನ್ನು ವಿಚಾರಿಸಿದಳು. ಅವಳ ಸಂದೇಹ ನಿಜವಾಗಿತ್ತು. ಅಶ್ರದ್ಧೆಯಿಂದ ರಾಜನು ಏನೋ ಒಂದು ರೀತಿಯಲ್ಲಿ ಮಾರ್ಪಟ್ಟನು; ರಾಣಿಯ ವಿಷಯದಲ್ಲಿ ಮರಳಿ ಪ್ರೇಮವನ್ನು ತೋರಲಿಲ್ಲ. ಕೆಲವು ಕಾಲದಮೇಲೆ ಗರ್ಭಿಣಿಯಾದ ಒಬ್ಬ ಹೆಣ್ಣು ಬಂದು ರಾಜನು ತನ್ನನ್ನು ಮದುವೆಯಾದನೆಂದು ಹೇಳಿದ್ದೂ ಆ ಮೇಲಣ ಚರಿತ್ರೆಯೂ ಹಂಸಪದಿಕೆಯ ಬಾಳನ್ನು ಇನ್ನಷ್ಟು ಬರಿದಾಗಿ ಮಾಡಿದವೇ ಹೊರತು ಮತ್ತೇನೂ ಆಗಲಿಲ್ಲ. ಹೀಗೆ ಕೆಲವು ವರ್ಷಗಳಾದ ಮೇಲೆ ಆ ನಿರಾಕೃತಳಾಗಿ ಹೋಗಿದ್ದ ಶಕುಂತಲೆ ರಾಣಿಯೆಂದು ಬಂದೇ ಬಂದಳು; ಅವಳ ಮಗನೂ ಜೊತೆಗೆ ಬಂದನು. ಹಂಸಪದಿಕೆ ಇನ್ನು ತಾನು ಜೀವನದಲ್ಲಿ ನಿರೀಕ್ಷಿಸಬೇಕಾದ ಸುಖವೇನೂ ಇಲ್ಲವೆಂದು ಮನಸ್ಸು ಮಾಡಿಕೊಂಡಳು. ಶಕುಂತಲೆ ತನ್ನನ್ನು ಬಹಳ ತಿರಸ್ಕಾರದಿಂದ ಕಾಣುವಳೆಂದೇ ಅವಳ ನಿರೀಕ್ಷೆ. ಆದರೆ ಶಕುಂತಲೆ ಬಂದ ಮಾರನೆಯ ದಿನವೇ ಅವಳಿಗೆ ಜೀವನದಲ್ಲಿ ಮರಳಿ ಒಂದು ಆನಂದ ತಲೆದೋರಿತು. ಶಕುಂತಲೆ ಮಗನನ್ನು ಹೆತ್ತ ಮುಖ್ಯ ರಾಣಿ ಎಂದು ಅರಮನೆಯಲ್ಲಿ ಎಲ್ಲರಿಗೂ ಆಜ್ಞೆಯಾಗಿತ್ತು. ನ್ಯಾಯವಾಗಿ ಉಳಿದ ರಾಣಿಯರು ಅವಳಿಗೆ ಮರ್ಯಾದೆ ತೋರಬೇಕಾದದ್ದು ಸಂಪ್ರದಾಯ. ಆದರೂ ಶಕುಂತಲೆ ತಾನೇ ಇವರ ಬಳಿಗೆ ಬಂದಳು. ಬಂದು ಹಂಸಪದಿಕೆಗೆ ನಮಸ್ಕರಿಸಿ, "ನೀವು ನನಗೆ ಹಿರಿಯರು, ನಾನು ಅರಿಯದ ಹುಡುಗಿ, ನನ್ನನ್ನು ತಂಗಿಯಂತೆ ನೋಡಿಕೊಂಡು ತಿಳಿಯದ್ದನ್ನು ಹೇಳಿಕೊಡಬೇಕು" ಎಂದು ಕೇಳಿದಳು. ಇವಳ ವಿನಯವನ್ನು ನೋಡಿ ಹಂಸಪದಿಕೆಗೆ ಆಶ್ಚರ್ಯವಾಯಿತು. ಅವಳು ಶಕುಂತಲೆಯನ್ನು ಹತ್ತಿರಕ್ಕೆ ಕರೆದು ಅಪ್ಪಿಕೊಂಡು, "ಇದು ಏನು ತಂಗೀ, ನೀನು ಹೇಳುವ ಮಾತು? ರಾಜನು ನಿನ್ನ

ಆಜ್ಞೆಯಂತೆ ನಡೆಯುತ್ತಾನೆ. ನಾವು ನಿನ್ನನ್ನು ಆಶ್ರಯಿಸಬೇಕು ಹೊರತು ನೀನು ನಮ್ಮನ್ನು ಕೇಳಬೇಕಾದದ್ದೇನಿದೆ?" ಎಂದಳು. ಶಕುಂತಲೆ, "ತನಗೆ ರಾಜನ ಒಲುಮೆ ಬಹಳ ಬೇಕು, ಆದರೆ ಹಾಗೆಯೇ ತನ್ನ ಅಕ್ಕಂದಿರ ವಿಶ್ವಾಸವೂ ಇರಬೇಕು" ಎಂದು ಹೇಳಿ, ಅವಳ ಮನಸ್ಸನ್ನು ಒಲಿಸಿಕೊಂಡಳು. ಅಂದಿನಿಂದ ಇವರ ಸ್ನೇಹ ಒಂದೇ ರೀತಿ ಬೆಳೆದಿತ್ತು. ತಂದೆಯ ಆಶ್ರಮಕ್ಕೆ ಹೊರಡುವ ದಿನ ಹೋಗಿಬರುವೆನೆಂದು ಹೇಳಲು ಶಕುಂತಲೆ ಹಂಸಪದಿಕೆಯ ಬಳಿ ಹೋದಾಗ ಹಂಸಪದಿಕೆ, "ಅಲ್ಲಿ ಎಷ್ಟು ದಿನ ಇರುತ್ತೀಯೆ? ಎಂದು ಬರುತ್ತೀಯೆ? ಅಲ್ಲಿ ಯಾರು ಯಾರು ಇದ್ದಾರೆ? ಆಶ್ರಮ ಹೇಗಿದೆ?" ಎಂದು ಮೊದಲಾಗಿ ಕೇಳಿದಳು. ಇವಳ ಪ್ರಶ್ನೆಗಳಿಂದ ಶಕುಂತಲೆಗೆ ಅವಳಿಗೂ ಆಶ್ರಮಕ್ಕೆ ಬರುವ ಅಭಿಪ್ರಾಯವಿದೆಯೆಂದು ಕಂಡಿತು. ಹಂಸಪದಿಕೆಯನ್ನು ಅವಳು ನೀವೂ ಬರುತ್ತೀರಾ ಅಕ್ಕಾ ಎಂದು ಕೇಳಿದಳು. ಹಂಸಪದಿಕೆ ನೀನು ನಿಮ್ಮ ಜನರಲ್ಲಿ ಹೋಗಿ ಬರಬೇಕಾದರೆ ನಾನೇಕೆ ಮಧ್ಯೆ ಬಂದು ತೊಂದರೆ ಕೊಡಬೇಕು ಎಂದಳು. ಶಕುಂತಲೆ ಅವಳನ್ನು ಬರಬೇಕೆಂದು ಬಲವಂತ ಮಾಡಿ ಒಪ್ಪಿಸಿ ರಾಜನನ್ನೂ ರಾಜಮಾತೆಯನ್ನೂ ಕೇಳಿ ತಾವಿಬ್ಬರೂ ಹೋಗುವುದಕ್ಕೆ ಅನುಮತಿಯನ್ನು ತೆಗೆದುಕೊಂಡಳು. ಅಂದೇ ಹೊರಡುವುದಕ್ಕೆ ಹಂಸಪದಿಕೆ ಸಿದ್ಧಳಾಗಿರಲಿಲ್ಲವಾದದ್ದರಿಂದ ಮಾರನೆಯ ದಿನ ಹೊರಡುವುದಾಗಿ ಗೊತ್ತು ಮಾಡಿದಳು. ಇದರಿಂದಲೇ ಪ್ರಯಾಣ ಒಂದು ದಿನ ಮುಂದೆ ಬಿದ್ದದ್ದು, ಶಕುಂತಲೆ ತಾನು ಬರುವುದು ಒಂದು ದಿನ ಸಾವಕಾಶವಾಗುತ್ತದೆಂದು ಆಶ್ರಮಕ್ಕೆ ಹೇಳಿ ಕಳುಹಿಸಿದ್ದದ್ದು.

ಹಸ್ತಿನಾವತಿಯಿಂದ ಕಣ್ವರ ಆಶ್ರಮಕ್ಕೆ ಸಾಮಾನ್ಯವಾಗಿ ಹತ್ತು ದಿನದ ನಡಿಗೆ. ಆತುರದಿಂದ ವೇಗವಾಗಿ ಹೋಗುವ ಜನರಿಗೆ ಒಂದು ವಾರದ ಪ್ರಯಾಣ. ವಾಹನಗಳ ಮೇಲೆ ಹೋಗುವ ಪುಣ್ಯವಂತರಿಗೆ ಮೂರು ಅಥವಾ ನಾಲ್ಕು ದಿನದ ಓಟ. ರಾಜನು ರಾಣಿಯರಿಬ್ಬರನ್ನೂ ಕಳುಹಿಸಬೇಕಾದರೆ ತಕ್ಕಷ್ಟು ಪರಿವಾರವನ್ನು ಹಿಂದೆ ಕಳುಹಿಸುವ ಏರ್ಪಾಡು ಮಾಡಿದನು. ಮತ್ತು ಮಾಢವ್ಯನೂ ಅವರ ಜೊತೆಗೆಹೋಗುವುದೆಂದು ಮೋದಕಪ್ರಿಯನಾದ ಆ ವಯಸ್ಯನಿಗೆ ತಿಳಿಸಿದನು. ಶಕುಂತಲೆಯ ನಿರಾಕರಣವಾದಂದಿನಿಂದ ಮಾಢವ್ಯನಿಗೆ ಒಂದು ದಿನ ಸರಿಯಾದ ಊಟವು ದೊರೆತ ಜ್ಞಾಪಕವಿರಲಿಲ್ಲ. ಊಟ ಇದ್ದರೂ ಜ್ಞಾಪಕ ಕಷ್ಟ. ಇಲ್ಲಿ ಊಟವೂ ಇದ್ದಿರಲಿಲ್ಲ. ಅವಳು ಬಂದ ಮೇಲೆ ಅವನಿಗೆ ಬೇಸಿಗೆಯಲ್ಲಿ ಕಾದ ನೆಲಕ್ಕೆ ಮಳೆ ಬಂದಂತಾಗಿತ್ತು. ದ್ವಾದಶ ವರ್ಷಗಳ ಕ್ಷಾಮದ ಯೋಗವೆಂದು ಕಂಡಿದ್ದ ಸಂದರ್ಭ ಅವಳು ಬಂದ ದಿನ ಇದ್ದಕ್ಕಿದ್ದ ಹಾಗೆ ಕೊನೆಗಂಡಿತು. ರಾಜನು ದಿನವೂ ಮಾಢವ್ಯನಿಗೆ ಈ ತಿಂಡಿ ಮಾಡಿ ಕೊಡಬಾರದೆ, ಆ ತಿಂಡಿ ಮಾಡಿಕೊಡಬಾರದೆ ಎಂದು ಕೇಳುವುದಕ್ಕೆ ಆರಂಭ ಮಾಡಿದ್ದನು. ಇದರ ಮೇಲೆ ಶಕುಂತಲೆಯೂ ಹಿರಿಯ ರಾಣಿಯೂ ಆಶ್ರಮಕ್ಕೆ ಹೋಗಬೇಕೆಂದಾಗ ಇವನು ಅವರ ಜೊತೆಗೆ ಹೋಗತಕ್ಕದ್ದೆಂದು ಅಪ್ಪಣೆ ಮಾಡಲು ಮಾಢವ್ಯನ ಆನಂದಕ್ಕೆ ಮೊದಲು ಕೊನೆ ಇಲ್ಲವಾಯಿತು. ತಾನು ರಾಜನಿಗೆ



ಪ್ರತಿನಿಧಿಯಾಗಿ ಹೋಗುವೆನೆನ್ನುವುದು ಇದಕ್ಕೆ ಒಂದು ಕಾರಣ. ಹಿಂದಿನ ಸಲ ಅಲ್ಲಿ ಹೋಗಿದ್ದಾಗ ಯಾವನೋ ಯಃಕಶ್ಚಿತ್ತನಂತೆ ಯಾರನ್ನೂ ಮಾತನಾಡಿಸದೆ ಕುಲಪತಿಗಳಿಗೆ ದರ್ಶನವನ್ನೂ ಕೊಡದೆ ಹೊರಟುಬಂದದ್ದಾಯಿತು. ಈ ಸಲ ಹೋದರೆ ತಾನು ಎಂತಹ ಪ್ರಾಜ್ಞನೆಂದೂ ರಾಜಪರಿವಾರದಲ್ಲಿ ತನ್ನ ಸ್ಥಾನ ಎಷ್ಟು ಪ್ರಮುಖವಾದದ್ದೆಂದೂ ತೋರಿಸುವುದಕ್ಕೆ ಒಂದು ಅವಕಾಶವಾಯಿತೆನ್ನುವುದು ಇನ್ನೊಂದು ಕಾರಣ. ಇದರ ಮೇಲೆ ಭರತಕುಮಾರನೂ ಜೊತೆಗಿರುವುದರಿಂದ ಬೇಕಾದಷ್ಟು ಆಟಕ್ಕೆ ಅವಕಾಶ. ಮಾಢವ್ಯನು ಒಂದು ರಥದಲ್ಲಿ ಕುಳಿತನು. ರಾಣಿಯರು ಒಂದು ರಥದಲ್ಲಿ ಕುಳಿತರು. ಕೆಲವರು ಮಾತ್ರ ಮೈಗಾವಲ ಜನರೊಡನೆ ಇವರು ಹಸ್ತಿನಾವತಿಯಿಂದ ಪ್ರಯಾಣ ಬೆಳೆಸಿದರು.

ಹೊರಡುವಾಗ ಕುಮಾರನು ರಾಣಿಯರ ರಥದಲ್ಲಿ ಕುಳಿತನು. ಅವನು ಅಲ್ಲಿ ಕೂಡುವ ಮೊದಲು ಮಾಢವ್ಯನು ಹತ್ತಿರ ಬಂದು ಅವನ ಕಿವಿಯಲ್ಲಿ, ಸ್ವಲ್ಪ ದೂರ ಹೋದ ಮೇಲೆ ನನ್ನ ರಥಕ್ಕೆ ಬಾ ಆಡೋಣ, ಎಂದನು. ಭರತನು ಉಂ ಎಂದನು. ಪ್ರಯಾಣ ಎರಡು ಗಳಿಗೆ ಬೆಳೆದ ಮೇಲೆ ಅವನಿಗೆ ಈ ಹೆಂಗಸರ ತೇರಿನಲ್ಲಿ ಕುಳಿತು ಬೇಸರವಾಯಿತು. ನಾನು ಮಾಢವ್ಯನ ರಥಕ್ಕೆ ಹೋಗುತ್ತೇನೆಂದನು. ತೇರುಗಳನ್ನು ನಿಲ್ಲಿಸಿ ಇವನನ್ನು ಆ ರಥದಲ್ಲಿ ಕುಳ್ಳಿರಿಸಿದರು. ರಾಣಿಯರಿಗೂ ಇದರಿಂದ ಅನುಕೂಲವೇ. ಶಕುಂತಲೆಗೆ ಮಗನು ಹತ್ತಿರ ಇರಬೇಕೆಂದೇ ಆಸೆ. ಆದರೆ ಅವನಿದ್ದರೆ ತಾನು ಅಕ್ಕನನ್ನು ವಿಚಾರಿಸಿಕೊಳ್ಳುವುದು ಸಾಧ್ಯವಿಲ್ಲ. ಈಗ ತನ್ನ ತೇರಿನಿಂದ ಇನ್ನೊಂದರಲ್ಲಿ ಕುಳಿತಿರುವ ಮಗನನ್ನು ಮರಳಿ ಮರಳಿ ತಾಯ ಮಮತೆಯಿಂದ ನೋಡುತ್ತ, ಇತ್ತ ಹಿರಿಯ ರಾಣಿಯೊಂದಿಗೆ ಆ ಮಾತು ಈ ಮಾತು ಆಡುತ್ತ ಇದ್ದಳು. ಆ ತೇರಿನಲ್ಲಿ ಮಾಢವ್ಯನು ಎಲ್ಲಾ ಜಾತಿಯ ಮೃಗಪಕ್ಷಿಗಳ ಕೂಗನ್ನು ಅನುಕರಿಸಿ ತೋರಿಸುತ್ತಿದ್ದನು. ಅದರ ಹಿಂದೆ ಏಳು ದಿನ ಅವನಿಗೂ ಭರತನಿಗೂ ಇದೇ ಕೆಲಸ. ಮಾಢವ್ಯನು ಈ ಅನುಕರಣದಲ್ಲಿ ಬಹಳ ಚತುರನು. ಅವನು ಸಿಂಹದ ಹಾಗೆ ಶಬ್ದ ಮಾಡಿದಾಗ ಕುದುರೆಗಳು ಹೆದರಿ ವೇಗವನ್ನು ಹೆಚ್ಚಿಸಿದವು. ಹೀಗೆಯೇ ಅವನು ಕಾಗೆ, ಕೋಗಿಲೆ, ಗಿಳಿ, ಗೊರವಂಕ, ಹುಲಿ, ನರಿ, ತೋಳಗಳ ಕೂಗನ್ನು ಅನುಕರಿಸಿ ಭರತಕುಮಾರನನ್ನು ಮೆಚ್ಚಿಸಿದನು. ಭರತನು ಕತ್ತೆಯ ಹಾಗೆ ಕೂಗು ಎಂದನು. ದಿನವೂ ಅದೇ ಕೆಲಸವಾಗಿ ಕೇಳಿದರೆಯೇ ಮಾಢವ್ಯನು ಇದನ್ನು ಮಾಡಬೇಕಾದರೆ, ಪ್ರಯಾಣದಲ್ಲಿ ಮಧ್ಯೆ ಇವನು ತೇರಿನಲ್ಲಿ ಕತ್ತೆಯ ಹಾಗೆ ಕಿರಿಚಲು ಆರಂಭಿಸಿದರೆ ಜನರು ಇವನನ್ನು ಏನೆನ್ನಬೇಕು? ಅವನು ಈಗ ಬೇಡ, ರಾಣಿಯರು ಇದ್ದಾರೆ ಎಂದನು. ಭರತನು "ತೇರನ್ನು ಮುಂದೆ ಬಿಡಹೇಳು, ಆಮೇಲೆ ಕೂಗು. ನೀನು ಇನ್ನೆಲ್ಲಾ ಕೂಗುವುದಕ್ಕಿಂತ ಕತ್ತೆಯ ಹಾಗೆ ಕೂಗುವುದು ಚೆನ್ನಾಗಿರುತ್ತದೆ" ಎಂದನು. ಮಾಢವ್ಯನಿಗೆ ಆ ಕ್ಷಣ ಅಸಮಾಧಾನವಾಯಿತು. ಆದರೆ ಒಡನೆಯೇ ಇದು ಹಿರಿಯರು ಹೇಳಬಹುದಾದ ಕುಹಕದ ಮಾತಲ್ಲ, ಹಸುಳೆಯ ಅಚ್ಚವಾದ

ಮನಸ್ಸಿನ ತಿಳಿಮಾತೆಂದು ತಿಳಿಯಿತು. ತೇರನ್ನು ಸ್ವಲ್ಪ ಮುಂದಕ್ಕೆ ಬಿಡಹೇಳಿ ಮೆಲ್ಲನೆ ಕತ್ತೆಯ ಹಾಗೆ ಕಿರಿಚಿ ಅವನು ಕುಮಾರನ ಆಸೆಯನ್ನು ಸಲ್ಲಿಸಿದನು. ಹೀಗೆ ಇವರು ದಾರಿಯ ಬೇಸರವನ್ನರಿಯದೆ ಮುಂದುವರಿದರು.

ಮಾರನೆಯ ದಿನದ ಸಂಜೆ ಇವರು ಆಶ್ರಮದ ಹತ್ತಿರ ಹತ್ತಿರ ಬಂದರು. ಆಶ್ರಮ ಹತ್ತಿರವಾಯಿತೆಂದೊಡನೆ ಕುಮಾರನು ತೇರನ್ನು ಬೇಗನೆ ಬಿಡೆಂದು ಸೂತನಿಗೆ ಹೇಳಿದನು. ನಾವು ಮುಂದಾಗಿ ಹೋಗಿ ಅಮ್ಮಾಜಿ ಬರುತ್ತಿದ್ದಾರೆ ಎಂದು ತಿಳಿಸೋಣ ಎಂದು ಬಾಯಲ್ಲಿ ಹೇಳಿದ ಕಾರಣ. ನಿಜವಾದ ಕಾರಣ ಮುಂದಾಗಿಯೇ ಆಶ್ರಮವನ್ನು ನೋಡಬೇಕು, ಅಲ್ಲಿ ಎಲ್ಲರನ್ನೂ ಮಾತಾಡಿಸಿ ಗುರುತು ಮಾಡಿಕೊಳ್ಳಬೇಕು ಎನ್ನುವುದು. ಆ ತೇರಿನ ಸೂತನೂ ತರುಣನು. ಇನ್ನೊಂದು ತೇರಿಗಿಂತ ಮುಂದಾಗಿ ಹೋಗಬೇಕೆಂದು ಅವನಿಗೂ ಆಸೆ. ಅಂತೂ ಇವರ ತೇರು ಬರಬರುತ್ತ ಅರ್ಧ ಹರಿದಾರಿಯಷ್ಟು ಮುಂದಾಯಿತು. ಆದ್ದರಿಂದ ಅನಸೂಯೆ ಪ್ರಿಯಂವದೆಯರು ರಾಣಿಯನ್ನು ಎದುರುಗೊಳ್ಳುವುದಕ್ಕೆ ಮುಂದಾಗಿ ಬರುತ್ತಿರಬೇಕಾದರೆ, ಇವರ ತೇರು ವೇಗವಾಗಿ ಅವರೆದುರಿಗೆ ಬಂದಿತು. ಸಖಿಯರು ದೂರದಿಂದ ತೇರನ್ನು ನೋಡಿದರು. ಅದರಲ್ಲಿ ಮಾಢವ್ಯನು ಮಾತ್ರ ಕಂಡುದರಿಂದ ಯಾರೋ ಗಂಡಸರ ತೇರು ಎಂದು ಅದಕ್ಕೆ ದಾರಿ ಬಿಟ್ಟು ಬಂದು ಪಕ್ಕಕ್ಕೆ ನಿಂತರು. ಕುಮಾರನು ಮಾಢವ್ಯನನ್ನು ಇವರು ಯಾರು ಕಕ್ಕ? ಎಂದನು. ಮಾಢವ್ಯನು ರಾಣಿಯವರ ಸಖಿಯರಾಗಿದ್ದವರೆಂತ ಕಾಣುತ್ತದೆ ಎಂದನು. ಕುಮಾರನು ಅವರನ್ನು ನೋಡಿ, ಹೌದು ಹೌದು ಎಂದು ತೇರನ್ನು ನಿಲ್ಲಿಸೆಂದನು. ತೇರು ಇವರಿದ್ದ ಕಡೆ ಸರಿಯಾಗಿ ನಿಂತಿತು. ಹುಡುಗನು ತೇರಿನಿಂದ ಧುಮುಕಿ ಇವರ ಹತ್ತಿರಕ್ಕೆ ಬಂದನು. ಮುಖದ ಹೋಲಿಕೆಯಿಂದ ಸಖಿಯರಿಗೆ ಇವನು ಶಕುಂತಲೆಯ ಮಗನೆಂದು ಒಡನೆಯೇ ತಿಳಿಯಿತು. ಅಹುದೋ ಅಲ್ಲವೋ, ಮಗು ಮಾತ್ರ ಹೀಗೆ ಬರುವುದುಂಟೇ, ಎಂದು ಅವರು ಯೋಚನೆ ಮಾಡುತ್ತಿರುವಷ್ಟರಲ್ಲಿಯೇ ಕುಮಾರನು ಅವರನ್ನು ಸಮೀಪಿಸಿ ನೀವು ನಮ್ಮ ಅಮ್ಮಾಜಿಯ ಸಖಿಯರಲ್ಲಾ ಎಂದನು. ಪ್ರಿಯಂವದೆ, ಹೌದು, ಅಮ್ಮಾಜಿ ಎಲ್ಲಿ ಎಂದಳು. ಕುಮಾರನು ಬಳಿಗೆ ಬಂದು, ಹಿಂದೆ ಬರುತ್ತಾ ಇದ್ದಾರೆ, ಎಂದು ಹೇಳಿ, ನೀವು ಪ್ರಿಯಂವದೆ, ಅವರು ಅನಸೂಯೆ ಎಂದನು. ಅನಸೂಯೆ ನಿನಗೆ ಹೇಗೆ ತಿಳಿಯಿತು ಎಂದು ಅವನನ್ನು ಎತ್ತಿಕೊಂಡಳು. ಅವನು ಅವಳ ಮೂಗಿನ ಮೇಲೆ ಬೆರಳನ್ನಿಟ್ಟು ದೊಡ್ಡಮ್ಮನ ಮುಖ ಅಗಲ, ನಿಮ್ಮ ಮುಖ ಉದ್ದುದ್ದ ಎಂದು ಹೇಳಿದರು, ಅದೇ ಗುರುತು ಎಂದನು. ಪ್ರಿಯಂವದೆ, ಬರೀ ಅಷ್ಟರಿಂದ ತಿಳಿಯಿತೆ, ಎಂತಾ ಬುದ್ಧಿವಂತ, ಎಂದಳು. ಅವನು, ಇಲ್ಲ ನಿಮ್ಮ ಮೂಗು ಸ್ವಲ್ಪ ದೊಡ್ಡದು ಎಂತ ಹೇಳಿದ್ದರು, ಅದರಿಂದಲೂ ತಿಳಿದುಕೊಂಡೆ ಎಂದನು. ಸಖಿಯರಿಬ್ಬರೂ ನಕ್ಕರು; ಹುಡುಗನನ್ನು ಹಿಡಿದುಕೊಂಡು ಮುದ್ದಿಸಿದರು. ತಂದೆ ಇದ್ದ ಹಾಗೆಯೇ ಇದ್ದಾನೆ, ಚೆನ್ನಾಗಿ ಬೆಳೆದಿದ್ದಾನೆ ಎಂದುಕೊಂಡರು. ಮಾಢವ್ಯನು ಈ ವೇಳೆಗೆ ಹತ್ತಿರ ಬಂದನು; ಇವರನ್ನು



ಮಾತನಾಡಿಸಿದನು. ಸಖಿಯರು ಇವನಿಗೆ ತಕ್ಕ ಉತ್ತರವನ್ನು ಕೊಟ್ಟು ರಾಣಿ ಎಷ್ಟು ದೂರದಲ್ಲಿದ್ದಾರೆ? ಎಂದು ಕೇಳಿದರು. ಅಷ್ಟು ಹೊತ್ತಿಗೆ ದೂರದಲ್ಲಿ ಇನ್ನೊಂದು ತೇರೂ ಕಂಡಿತು. ಅಕೋ ತೇರು ಎಂದು ಅನಸೂಯೆ ಹುಡುಗನನ್ನು ಕೆಳಗಿಳಿಸಿ ಮುಂದೆ ನಡೆದಳು. ಪ್ರಿಯಂವದೆ ಹುಡುಗನನ್ನು ಎತ್ತಿಕೊಂಡು ಹಿಂದೆ ಹೋದಳು. ಶಕುಂತಲೆ ದೂರದಿಂದಲೇ ಇವರ ಗುಂಪನ್ನು ನೋಡಿ, ತೇರನ್ನು ನಿಲ್ಲಿಸುವಂತೆ ಸೂತನಿಗೆ ಆಜ್ಞೆ ಮಾಡಿ, ಅದು ನಿಂತೊಡನೆ ಇಳಿದು ಹಂಸಪದಿಕೆಯನ್ನೂ ಇಳಿಸಿ ಜೊತೆಗೆ ಕರೆದುಕೊಂಡು ಸಖಿಯರ ಬಳಿಗೆ ಬಂದಳು.

ಏಳು ವರ್ಷ ಅಗಲಿದ್ದು ಮರಳಿ ಸೇರಿದ ಈ ಸಖಿಯರ ಮನಸ್ಸಿನ ಭಾವಗಳನ್ನು ಯಾರು ಬಣ್ಣಿಸಬೇಕು. ಸ್ವಲ್ಪ ಹೊತ್ತಿಗೆ ಹಿಂದೆ ಪ್ರಿಯಂವದೆ ತನ್ನಲ್ಲಿ ತಾನೇ “ಇಂದು ಶಕುಂತಲೆ ಅಂದಿನ ಶಕುಂತಲೆಯಲ್ಲ, ರಾಣಿ. ಅವಳನ್ನು ಏನೆಂದು ಕರೆಯಬೇಕೋ, ಅವಳಿಗೆ ಏನು ಮರ್ಯಾದೆ ತೋರಬೇಕೋ” ಎಂದು ಸ್ವಲ್ಪ ಯೋಚಿಸಿದ್ದಳು. ತೇರಿನಿಂದಿಳಿದ ರಾಣಿಯನ್ನು ನೋಡಿ ಅವಳಿಗೆ ಈ ಯೋಚನೆಯೆಲ್ಲ ಎತ್ತಲೋ ಹೋಯಿತು. ಅವಳು ಶಕುಂತಲೆಯನ್ನು ರಾಣಿ ಎಂದು ಕೂಡ ಕರೆಯಲಿಲ್ಲ. ಶಕುಂತಲೇ, ಚೆನ್ನಾಗಿದ್ದೀಯಾ ಎಂದು ಕೂಗಿದಳು. ಕೊರಳು ಕಟ್ಟಿಕೊಂಡಿತು. ಕಣ್ಣಲ್ಲಿ ನೀರು ತಡೆಯಲಾರದೆ ಹರಿಯಲಾಗದೆ ಹನಿಯಾಗಿ ನಿಂತಿತು. ಅನಸೂಯೆ ಮಗುವಿನಂತೆ ಓಡಿ ಶಕುಂತಲೆಯನ್ನು ಮಾತಾಡದೆ ಅಪ್ಪಿಕೊಂಡಳು. ಅವಳ ಭುಜದ ಮೇಲೆ ತಲೆಯನ್ನಿಟ್ಟು ಬಿಕ್ಕಿ ಬಿಕ್ಕಿ ಅತ್ತಳು. ಶಕುಂತಲೆಗೂ ಕ್ಷಣ ಮಾತ್ರ ಧೃತಿ ತಪ್ಪಿತು. ಆದರೆ ಒಂದು ಕ್ಷಣದಲ್ಲಿ ಅವಳು ಧೈರ್ಯ ತಂದುಕೊಂಡು, ಬಾ ಅನಸೂಯೆ, ಇಕೊ ನೋಡು ಯಾರು ಬಂದಿದ್ದಾರೆ ಎಂದು ಬಿಡಿಸಿಕೊಂಡು, ಪ್ರಿಯಂವದೆಯನ್ನು ಹತ್ತಿರ ಸೆಳೆದುಕೊಂಡು ಹಂಸಪದಿಕೆಗೆ ಸಖಿಯರ – ಪರಿಚಯವನ್ನು ಮಾಡಿ ಕೊಟ್ಟಳು. ಸಖಿಯರಿಗೆ ಇವರು ನಮ್ಮ ಅಕ್ಕ, ನನ್ನನ್ನು ತಂಗಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದಾರೆ ಎಂದಳು. ಪ್ರಿಯಂವದೆ ನೀವೂ ನಮ್ಮ ಆಶ್ರಮಕ್ಕೆ ಬಂದದ್ದು ಸಂತೋಷ ಎಂದಳು. ಮರ್ಯಾದೆಯ ಮಾತುಗಳಾದ ಮೇಲೆ ಶಕುಂತಲೆ ತಂದೆ, ಗೌತಮೀದೇವಿ ಸುಖವಾಗಿದ್ದಾರೆಯೇ ಎಂದು ಕೇಳಿ, ಆಮೇಲೆ ಎಲ್ಲರ ಕ್ಷೇಮಸಮಾಚಾರಗಳನ್ನೂ ವಿಚಾರಿಸಿದಳು : ಮಾಢವ್ಯನು ಒಂದು ಕಡೆಗಿರಲು, ಸುಮ್ಮನೆ ಮಾತನಾಡುವುದಕ್ಕಾಗಿ, ನಮ್ಮಿಂದ ನಿಮ್ಮ ಪ್ರಯಾಣಕ್ಕೆ ಸಾವಕಾಶವಾಯಿತು ಎಂದು ಅವನಿಗೆ ಹೇಳಿ, ಮಗನನ್ನು ನಿರ್ದೇಶಿಸಿ, ಮಗು ಆಗಲೇ ನಿಮ್ಮ ಸ್ನೇಹ ಮಾಡಿಕೊಂಡನೆ ಎಂದಳು. ಪ್ರಿಯಂವದೆ ಹೌದು, ನೀನು ಮೊದಲೇ ನಮ್ಮನ್ನೆಲ್ಲಾ ಅವನಿಗೆ ವರ್ಣಿಸಿ ನನ್ನ ಮೂಗು ದೊಡ್ಡದು ಎಂತ ಹೇಳಿದ್ದೆಯಂತೆ ಎಂದಳು. ಶಕುಂತಲೆಯೂ ಹಂಸಪದಿಕೆಯೂ ನಕ್ಕರು. ಶಕುಂತಲೆ ಮಗನನ್ನು ಏನೋ ಮಗು, ಮಾತಿಗೆ ಮುಂಚೆ ದೊಡ್ಡವರನ್ನು ಇಂಥ ಮಾತು ಹೇಳುವುದೆ ಎಂದಳು. ಭರತನು “ನಾನು ಮೊದಲು ಹೇಳಲಿಲ್ಲ ಅಮ್ಮ. ದೊಡ್ಡಮ್ಮಾಜಿ ಹ್ಯಾಗೆ ಗುರುತಿಸಿದೆ? ಎಂದರು. ನಿಮ್ಮ ಮುಖ ದೊಡ್ಡದು, ಚಿಕ್ಕಮ್ಮಾಜಿ ಅವರ

ಮುಖ ಉದ್ದುದ್ದ ಎಂದೆ. ದೊಡ್ಡಮ್ಮಾಜಿ ಇಷ್ಟರಲ್ಲೇ ತಿಳಿಯಿತೆ ಎಂದರು. ಇಲ್ಲ ನಿಮ್ಮ ಮೂಗು ಸ್ವಲ್ಪವೇ ಸ್ವಲ್ಪ ದೊಡ್ಡದು ಎಂತ ಅಮ್ಮ ಹೇಳಿದ್ದರು ಎಂದೆ" ಎಂದು ದಾರಿಯ ಒಂದು ಕಲ್ಲನ್ನು ಒದ್ದನು. ಎಲ್ಲರೂ ಮರಳಿ ನಕ್ಕರು. ಮಕ್ಕಳ ಮಾತೇ ಹೀಗೆ. ಸ್ನೇಹದಿಂದಾಗಲಿ, ದುಃಖದಿಂದಾಗಲಿ ದೊಡ್ಡವರ ಕಂಠ ಕಟ್ಟಿದಾಗ ಮಕ್ಕಳ ಒಂದು ಮಾತು ಆ ಉದ್ವೇಗವನ್ನು ಇಳಿಸುತ್ತದೆ. ಹೆತ್ತವರು ಸಾಕಿದವರು ಚಿಂತೆಯಲ್ಲಿ ಮುಳುಗಿರುವಾಗ ಎಳೆಯರ ಒಂದು ನಗೆ ಅವರ ಹೃದಯದಲ್ಲಿ ಹರ್ಷವನ್ನು ಮೂಡಿಸುತ್ತದೆ. ದಿನ ಕಳೆದು ಹಿರಿಯರಾದವರು ಬಾಳೆಲ್ಲ ಬರಿದೆಂದು ಕುಗ್ಗಿದ ವೇಳೆಯಲ್ಲಿ ಹಸಿವಿನಿಂದ ಅಳುವ ಕೂಸು ಬಾಳಿನಲ್ಲಿ ಆಗಬೇಕಾದ್ದು ಬಹಳವಿದೆ ಎಂದು ಅವರನ್ನು ಎಚ್ಚರಿಸುತ್ತದೆ. ಪ್ರಿಯಂವದೆ ಅನಸೂಯೆಯರು ಮತ್ತೆ ಹುಡುಗನನ್ನು ಮುದ್ದಿಸಿ ಅವನನ್ನು ಹಿಡಿದುಕೊಂಡು ನಡೆದರು. ಜೊತೆಗೆ ಇತ್ತ ಶಕುಂತಲೆ ಇತ್ತ ಹಂಸಪದಿಕೆ. ಮಾಢವ್ಯನು ಹಿಂದೆ ಬಂದನು. ಹೀಗೆ ರಾಣಿಯರೂ ತಾಪಸರಮಣಿಯರೂ ಮಾತಾಡುತ್ತ ಆಶ್ರಮದ ಕಡೆಗೆ ನಡೆದರು. ತೇರುಗಳು ಹಿಂದೆ ಬಂದವು.

ಹೆಜ್ಜೆಗಳನ್ನಿಡುತ್ತ ಮುಂದರಿದ ಹಾಗೆಯೇ ಶಕುಂತಲೆ ತನ್ನ ಪರಿಚಯದ ಸ್ಥಳಗಳ ಮುಖಮುದ್ರೆಯನ್ನು ಒಂದೊಂದಾಗಿ ಗುರುತಿಸಿದಳು. ಇಲ್ಲಿ ದಾರಿಯ ಪಕ್ಕದಲ್ಲಿ ದೊಡ್ಡದೊಂದು ಮರ. ಅದರಲ್ಲೊಂದು ಪೊಟ್ಟರೆ. ಮರದ ಬಳಿ ಪೊಟ್ಟರೆಯಿಂದ ಸುರಿದ ಕಾಳು. ಅಲ್ಲಿ ಮಾಲಿನೀ ನದಿಯ ಸ್ನಾನಘಟ್ಟದಿಂದ ಬರುವ ದಾರಿ. ಇನ್ನಲ್ಲಿ ಆಶ್ರಮದ ಗಿಡಗಳಿಗೆ ಮೇಲ್ಗಡೆಯಿಂದ ತಂದಿರುವ ಕಾಲುವೆ. ಇಲ್ಲಿ ಮತ್ತೆ ಜಿಂಕೆಗಳ ಮಾಳ. ಯಾರು ಬಂದರೆಂಬಂತೆ ನಿಂತು ಇವರನ್ನು ನೋಡುತ್ತಿರುವವು ಕೆಲವು; ಯಾರು ಬಂದರೆ ನಮಗೇನು ಭಯ ಎಂಬಂತೆ ತಲೆಯ್ನೆತ್ತದೆ ಮೇವಿನಲ್ಲಿ ತೊಡಗಿರುವವು ಕೆಲವು. ಪ್ರಪಂಚ ಇಂದು ಅಂದಿದ್ದಂತೆಯೇ ಇದೆ ಎಂದು ಶಕುಂತಲೆಗೆ ತೋರಿತು. ಆದರೆ ಅಂದಿನ ಉಲ್ಲಾಸ ತಿರುಗಿ ಇವಳ ಮನಸ್ಸಿನಲ್ಲಿ ಮೂಡಲಿಲ್ಲ. ತನ್ನನ್ನು ಸಾಕಿದ ಸ್ಥಳವನ್ನು ನೋಡಿ ಶಕುಂತಲೆಗೆ ಸಂತೋಷ. ಅದರ ಮುಖ ಹಾಗೆಯೇ ಇದ್ದರೂ ಅದರಿಂದ ತನಗೆ ಅಂದಿನ ಸುಖ ಕಾಣಲಿಲ್ಲವೆಂದು ಒಂದು ಕೊರತೆ. ಮನಸ್ಸಿನ ಈ ಸ್ಥಿತಿಯೇಕೆಂದು ಶಕುಂತಲೆ ಅರಿಯಲಾರದೆ ಹೋದಳು. ಆಶ್ರಮದ ಬಾಗಿಲಿಗೆ ಬರುವ ವೇಳೆಗೆ ಅಲ್ಲಿ ಶಾರ್ಙ್ಗರವ ಶಾರದ್ವತರೂ ಕೆಲವರು ತಾಪಸಕುಮಾರರೂ ಕನ್ಯೆಯರೂ ಇದ್ದರು. ಶಾರ್ಙ್ಗರವನು ಒಂದು ತಟ್ಟೆಯಲ್ಲಿ ಫಲಮಂತ್ರಾಕ್ಷತೆಗಳನ್ನು ಇಟ್ಟುಕೊಂಡು ಎದುರು ಬಂದು ರಾಜಾಶೀರ್ವಾದವನ್ನು ಹೇಳಿ ಬಾಲಕನ ಮೇಲೂ ರಾಣಿಯರ ಮೇಲೂ ಅಕ್ಷತೆಯನ್ನು ಹಾಕಿದನು. ಆಮೇಲೆ ಶಕುಂತಲೆಯನ್ನು ಕುರಿತು "ರಾಣಿಯವರನ್ನು ಇಲ್ಲಿ ತಾವೇ ಇದ್ದು ಬರಮಾಡಿಕೊಳ್ಳಬೇಕೆಂದು ಕುಲಪತಿಗಳು ಉದ್ದೇಶಿಸಿದ್ದರು; ಆದರೆ ಸಂಜೆಯ ಹೋಮದ ಹೊತ್ತಾದ್ದರಿಂದ ಯಜ್ಞವಾಟಿಯಲ್ಲಿರುತ್ತೇವೆ, ಅಲ್ಲಿಗೇ ಅವರನ್ನು ಬಿಜಮಾಡಿಸಿಕೊಂಡು ಬನ್ನಿ ಎಂದು ನಮಗೆ ಅಪ್ಪಣೆ ಮಾಡಿ ಹೋದರು" ಎಂದನು. ಶಕುಂತಲೆ ಇವನ ಮರ್ಯಾದೆಯಿಂದ



ಬಹಳ ನೊಂದಳು. ಆದರೆ ಅವಳು ಒಡನೆಯೇ ಅವನನ್ನು ಧಾರಾಳವಾಗಿ ಮಾತನಾಡಿಸಿ ಇದೆಲ್ಲ ಬೇಡವೆಂದು ಹೇಳುವಂತಿರಲಿಲ್ಲ; ಅದರಿಂದ ಸುಮ್ಮನಿದ್ದಳು. ಶಾರದ್ವತನು ಹತ್ತಿರಕ್ಕೆ ಬಂದು ಚೆನ್ನಾಗಿದ್ದೀಯಾ ತಾಯಿ ಎಂದು ಮೆಲ್ಲನೆ ಕೇಳಿ, ಕುಮಾರನನ್ನು ಹತ್ತಿರಕ್ಕೆ ಕರೆದು ಶಾರ್ಙ್ಗರವರಿಗೆ ಚಕ್ರವರ್ತಿ ಕುಮಾರರು ಒಳ್ಳೇ ಸುಟಿಯಾಗಿದ್ದಾರೆ ಎಂದನು. ಶಾರ್ಙ್ಗರವನು ಎಲ್ಲ ಕುಲಪತಿಗಳ ಅನುಗ್ರಹ ಎಂದನು. ಎಲ್ಲರೂ ಅಲ್ಲಿಂದ ಯಜ್ಞವಾಟಿಗೆ ಹೋದರು.

ಕುಲಪತಿಗಳು ಹೋಮಾಗ್ನಿಯ ಮುಂದೆ ಕುಳಿತಿದ್ದರು. ಇವರು ಬಂದದ್ದು ತಿಳಿಯಲಾಗಿ ಒಳಗಿಂದ ಒಬ್ಬ ವಟುವನ್ನು ಕಳುಹಿಸಿ ಒಳಗೆ ಬರಬೇಕೆಂದು ಅಪ್ಪಣೆ ಮಾಡಿದರು. ಶಕುಂತಲೆಗೆ ಹೋಗಿ ತಂದೆಯನ್ನು ಅಪ್ಪಿಕೊಳ್ಳಬೇಕೆಂಬ ಆಸೆ. ಆದರೆ ಬೆಳೆದ ಹೆಣ್ಣಿಗೆ ಚಕ್ರವರ್ತಿಯ ಪತ್ನಿಗೆ ಚಕ್ರವರ್ತಿಯಾಗುವವನ ತಾಯಿಗೆ ಅದು ಸರಿಯಲ್ಲ. ಅವಳು ಮಗುವನ್ನು ಕುರಿತು ಬಾರಪ್ಪಾ ತಾತನಿಗೆ ನಮಸ್ಕಾರ ಮಾಡು ಎಂದು ಹೇಳಿ ನಮಸ್ಕರಿಸುತ್ತೇನೆ ಎಂದು ತಂದೆಗೆ ಮಂಡಿಯೂರಿದಳು. ಆಶೀರ್ವಾದ ಪಡೆದು ಎದ್ದು ಹಂಸಪದಿಕೆಯನ್ನು ತೋರಿ ನಮ್ಮ ಅಕ್ಕ, ಇವರು ಕೂಡ ಬರಲು ಒಪ್ಪಿದರು, ನಿಮಗೆಲ್ಲ ಅವರು ಬರುವುದು ಬಹು ಸಂತೋಷವೆಂದು ಕರೆತಂದೆನು ಎಂದಳು. ಕುಲಪತಿಗಳು ಬರಿಯ ಸಂಜ್ಞೆಯಿಂದ ಎಲ್ಲ ಮಾತನ್ನು ಒಪ್ಪಿಕೊಂಡು ಇವರನ್ನೆಲ್ಲ ಆಶೀರ್ವಾದದ ಅಕ್ಷತೆಯಿಂದ ಹರಸಿ ಕುಳಿತುಕೊಳ್ಳ ಹೇಳಿದರು. ಹೋಮ ಮುಂದಕ್ಕೆ ಸಾಗಿತು. ಹದಿನೈದು ನಿಮಿಷದ ಮೇಲೆ ಹೋಮಾಗ್ನಿಯ ಪೂಜೆಯಿಂದ ಸಂಧ್ಯಾಕಾಲದ ಸೇವೆಯನ್ನು ಮುಗಿಸಿ ಅವರು ಇವರನ್ನು ಕುಶಲಪ್ರಶ್ನೆ ಕೇಳಿದರು. ಭರತಕುಮಾರನು ಇತರರ ಹತ್ತಿರ ಆಡಿದಂತೆ ಇವರಲ್ಲಿ ಸಲಿಗೆಯಿಂದ ಆಡಲಿಲ್ಲ. ಬಹಳ ಗಂಭೀರವಾಗಿ ನಡೆದುಕೊಂಡನು. ಕುಲಪತಿಗಳು ಹಂಸಪದಿಕೆಯನ್ನು ಬಹು ಗೌರವದಿಂದ ಮಾತನಾಡಿಸಿದರು. ಈ ವೇಳೆಗೆ ಹೊಳೆಗೆ ಹೋಗಿದ್ದ ಗೌತಮೀದೇವಿ ಬಂದರು. "ಸಂಜೆಯೆಲ್ಲಾ ಕಾದಿದ್ದೆ, ನೀನು ಬರುವ ಹೊತ್ತಿಗೆ ಸರಿಯಾಗಿ ಹೊಳೆಗೆ ಹೋದೆ ನೋಡು ನಾನು" ಎನ್ನುತ್ತ ಹತ್ತಿರ ಕುಳಿತರು. ಬಂದವರು ಆಕೆಗೂ ನಮಸ್ಕಾರ ಮಾಡಿ ಆಶೀರ್ವಾದ ಪಡೆದರು. ಕಣ್ವರು ಸ್ವಲ್ಪ ಹೊತ್ತು ರಾಜನ ಮಾತನ್ನೂ ರಾಜಕುಟುಂಬದ ಮಾತನ್ನೂ ಆಡಿ ಗೌತಮಿಯನ್ನು ಕುರಿತು "ವತ್ಸೆಗೂ ರಾಣಿಯರಿಗೂ ಪ್ರಯಾಣದಿಂದ ಆಯಾಸವಾಗಿದೆ. ಮಗುವಿಗೂ ಹಸಿವಿರಬಹುದು. ಕರೆದುಕೊಂಡು ಹೋಗಿ ಉಪಚಾರ ಮಾಡಿ" ಎಂದು ಹೇಳಿದರು. ಇವರೆಲ್ಲ ಎದ್ದರು. ಕಣ್ವರು ಪ್ರಿಯಂವದೆ ಅನಸೂಯೆಯರನ್ನು ಕುರಿತು ರಾಣಿಯರಿಗೆ ನಿಮ್ಮ ಮಕ್ಕಳನ್ನು ತೋರಿಸಿ ಎಂದು ನಕ್ಕರು. ಸ್ವಲ್ಪ ನಾಚಿಕೆಯಿಂದ ಅವರು ತೋರಿಸುತ್ತೇವೆ ಎಂದರು. ಇವರೆಲ್ಲ ಬಿಡಾರದ ಮಂಟಪಗಳಿಗೆ ಹೋದರು.

ಸಖಿಯರೂ ಶಕುಂತಲೆಯೂ ಆಡಬೇಕಾದ ಮಾತು ನೂರು. ರಾಣಿ ಹಂಸಪದಿಕೆ ಇದನ್ನು ತಿಳಿದುಕೊಂಡು ತಾನು ರಾಜಕುಮಾರನಿಗೆ ಭೋಜನಮಾಡಿಸುತ್ತೇನೆಂದು

ಗೌತಮೀದೇವಿಯ ಜೊತೆಗೆ ಭೋಜನ ಶಾಲೆಗೆ ಹೋದಳು. ಆಮೇಲೆ ಆಶ್ರಮವನ್ನು ನೋಡಬೇಕೆಂಬ ನೆಪದಿಂದ ಅವನನ್ನು ಕರೆದುಕೊಂಡು ಅಲ್ಲಲ್ಲಿ ಸ್ವಲ್ಪ ಸುತ್ತಿದ ಮೇಲೆ ಬಿಡಾರಕ್ಕೆ ಬಂದಳು. ಆ ವೇಳೆಗೆ ಇವರು ಶಕುಂತಲೆಗೆ ತಮ್ಮ ಮಕ್ಕಳನ್ನು ತೋರಿಸಿ ಮರಳಿ ಬಂದು ಅವಳ ಜೊತೆಯಲ್ಲಿ ಸಖಿಯರಿಗೆ ಸಹಜವಾದ ಆಸೆಯಿಂದ ಎಲ್ಲಿಲ್ಲದ ಮಾತನ್ನು ಆಡಿದ್ದರು. ದೂರ್ವಾಸನ ಶಾಪದ ಮಾತು, ಇವರು ಭಯಪಟ್ಟಿದ್ದದ್ದು, ಅದರಂತೆಯೇ ಆದದ್ದರ ಮಾತು, ಕಣ್ವರು ವ್ಯಥೆಪಟ್ಟ ಮಾತು, ಶಾರ್ಙ್ಗರವ ಶಾರದ್ವತರು ರಾಜಧಾನಿಯಿಂದ ಹಿಂದಕ್ಕೆ ಬಂದ ಒಡನೆ ಗೌತಮೀದೇವಿ ಇವನಿಗೆ ಮದುವೆ ಮಾಡಿಬಿಡಬೇಕೆಂದು ಹಠಮಾಡಿದ ಮಾತು, ಶಕುಂತಲೆಯ ಜಿಂಕೆ ಮರಿಹಾಕಿದ ಮಾತು, ಮತ್ತೆ ಈಗ ಗರ್ಭಿಣಿಯಾಗಿರುವ ಮಾತು, ಶಾರ್ಙ್ಗರವನ ಹಠದ ಮಾತು, ಶಾರದ್ವತನ ಸರಳತೆಯ ಮಾತು, ಕಣ್ವ ಋಷಿಯ ದೊಡ್ಡ ಮನಸ್ಸಿನ ಮಾತು. ಊಟ ಮುಗಿದು ಕುಮಾರನು ಬಂದ ಮೇಲೆ ಶಕುಂತಲೆ ಅವನನ್ನು ಅಪ್ಪಿ ಮಲಗಿಸಿ ಹಂಸಪದಿಕೆಯೊಂದಿಗೆ ಊಟಕ್ಕೆ ಹೋದಳು. ಇಲ್ಲಿಯ ಜನರ ಸೌಲಭ್ಯವನ್ನು ನೋಡಿ ಹಂಸಪದಿಕೆಗೆ ಬಹಳ ಆಶ್ಚರ್ಯ. ಊಟವಾದ ಮೇಲೆ ಸ್ವಲ್ಪ ಹೊತ್ತು ಬೆಳದಿಂಗಳಲ್ಲಿ ಕುಳಿತಿದ್ದು, ಆಮೇಲೆ ಇವರೆಲ್ಲ ಮಲಗಿಕೊಳ್ಳಹೋದರು. ಆ ರಾತ್ರಿ ಶಾರದ್ವತ ಶಾರ್ಙ್ಗರವರು ತಮ್ಮ ಮಕ್ಕಳ ಕಷ್ಟಸುಖವನ್ನು ತಾವೇ ನೋಡಿಕೊಳ್ಳಬೇಕಾಯಿತು. ಶಾರದ್ವತನು ಸಾಧು. ಅವನಿಗೆ ಇದೆಲ್ಲ ಲಕ್ಷ್ಯವಿಲ್ಲ. ಶಾರ್ಙ್ಗರವನದು ಸ್ವಲ್ಪ ಕಠಿಣ ಹೃದಯ. ಅವನಿಗೆ ಅಷ್ಟು ಬೇಗ ಮದುವೆಯಾಗುವ ಉದ್ದೇಶವಿರಲಿಲ್ಲ. ಪ್ರಿಯಂವದೆಗೂ ಇನ್ನೂ ಸ್ವಲ್ಪ ದಿನವಾಗಲೆಂದೇ ಮನಸ್ಸು. ಆದರೆ ಗೌತಮೀದೇವಿ ಹಠಮಾಡಿದ್ದಳು. "ಬೆಳೆದ ಹುಡುಗಿಯನ್ನು ಇರಿಸಿಕೊಂಡು ನಮ್ಮ ಹಾಗೆ ತಾನೇ ಎಂದು ನಾನು ಅಜಾಗರೂಕತೆಯಿಂದ ಇದ್ದೇ ಆಗ ಹಾಗಾಯಿತು. ಇನ್ನು ನಿಮ್ಮಿಂದ ಒಂದಷ್ಟು ಚಿಂತೆ ಬಂದೀತು ನನಗೆ, ನೀವು ಈ ಸಲವೇ ಮದುವೆಯಾಗಬೇಕು" ಎಂದಳು. ಅನಸೂಯೆ ಶಾರದ್ವತರು ಮದುವೆಯಾಗಲು ಒಪ್ಪಿದರು. ಪ್ರಿಯಂವದೆ ಈಗ ಬೇಡವೆನ್ನಲು, ಅನಸೂಯೆ "ನೀನು ಅಕ್ಕ, ನಾನು ತಂಗಿ; ನಿನಗೇ ಮದುವೆ ಬೇಡವೆಂದರೆ ನನಗೇನು ಅವಸರ. ಸ್ವಲ್ಪ ದಿನ ಹೋಗಲೇಳು ಜೊತೆಯಾಗಿ ಮದುವೆಯಾಗೋಣ" ಎಂದಳು. ಇದನ್ನೆಲ್ಲ ನೋಡಿ ಕುಲಪತಿಗಳು ಆ ವರ್ಷವೇ ಮದುವೆಗಳನ್ನು ನಡೆಯಿಸಿದರು. ಈಗ ಅನಸೂಯೆಗೆ ಒಂದು ಹೆಣ್ಣು ಮಗು, ಪ್ರಿಯಂವದೆಗೆ ಒಂದು ಗಂಡು. ಅವರು ಸಖಿಯ ಸಲುವಾಗಿ ಅಂದು ಅವಳ ಬಿಡಾರದಲ್ಲಿ ಮಲಗಿದರು. ಮೂವರೂ ಬಹು ಹೊತ್ತು ಮಾತನಾಡುತ್ತ ನಿದ್ದೆ ಹೋದರು. ಅರಮನೆಯಿಂದ ಬಂದ ಶಕುಂತಲೆ ಈ ಬಡತನದ ಬಿಡಾರದಲ್ಲಿ ಜ್ವರವಿಳಿದ ದಿನ ತಾಯಮಡಲಲ್ಲಿ ನಿದ್ರಿಸುವ ಮಗುವಿನಂತೆ ಹಾಯಾಗಿ ನಿದ್ರಿಸಿದಳು. ಅವಳ ನಿದ್ದೆ ಬಹುದಿನದಿಂದ ಕಾಣದಿದ್ದ ಕನಸುಗಳಿಂದ ಸುಖಮಯವಾಯಿತು. ಬೆಳಗಾಗ ಎದ್ದವೇಳೆ ಕುಲಪತಿಗಳು ಆ ಮೊದಲೇ ಬಂದು ವಿಚಾರಿಸಿಕೊಂಡು



ಹೋಗಿದ್ದರೆಂದು ತಿಳಿಯಿತು. ರಾಣಿಯರು ಎದ್ದು ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡು ಯಜ್ಞವಾಟಿಗೆ ಹೋಗಿ ಹಿರಿಯರಿಗೆ ನಮಸ್ಕರಿಸಿದರು. ಆಮೇಲೆ ಶಕುಂತಲೆ ಸಖಿಯರೊಡನೆ ತನ್ನ ಮಲ್ಲಿಕಾಲತೆಯನ್ನು ನೋಡಹೋದಳು. ಅದು ಹೊರವಾಗಿ ಬೆಳೆದಿತ್ತು. ಅದೇ ಸುಂದರವಾದ ಸಹಕಾರ ವೃಕ್ಷ. ಆ ಬಳಿಯಲ್ಲಿ ದೀರ್ಘಾಪಾಂಗವೂ ಬಂದಿತು. ಮೊದಲು ಅದಕ್ಕೆ ರಾಣಿಯ ಗುರುತು ಸಿಕ್ಕಲಿಲ್ಲ. ಇವಳು ಕರೆದರೆ ಅದು ದೂರ ಹೋಯಿತು. ಸಖಿಯರು ಅದನ್ನು ಕರೆತಂದು ಹತ್ತಿರ ನಿಲ್ಲಿಸಲು ಇವಳನ್ನು ನೋಡಿ ಮೈಕೈಯನ್ನು ನೆಕ್ಕಿ ಏನೋ ಸ್ವಲ್ಪ ನೆನವು ಬಂದಂತೆ ಸಮಾಧಾನವಾಗಿ ನಿಂತಿತು. ಅದರ ಮರಿಯೂ ಅಲ್ಲೇ ಇತ್ತು. ಅದಕ್ಕೂ ತಾಯಿಗೂ ವ್ಯತ್ಯಾಸ ಹೇಳುವಂತಿರಲಿಲ್ಲ. ಶಕುಂತಲೆ ಅಲ್ಲಿಂದ ಹೊರಟು ತನ್ನನ್ನು ರಾಜನು ಮೊದಲು ನೋಡಿದ ಸ್ಥಳವನ್ನೂ ತಾನೂ ಅವನೂ ಕುಳಿತಿದ್ದ ಸ್ಥಳವನ್ನೂ ತಾನು ಪತ್ರ ಬರೆದ ಸ್ಥಳವನ್ನೂ ತನ್ನನ್ನು ಅವನು ವರಿಸಿದ ಸ್ಥಳವನ್ನೂ ಮಾಲಿನೀ ತೀರದ ಸ್ನಾನಘಟ್ಟವನ್ನೂ ನೋಡಿದಳು. ಅವಳಿಗೆ ತನ್ನ ಬಾಲ್ಯದ ಕಥೆಯೆಲ್ಲ ಕಣ್ಣೆದುರಿಗೆ ಮರಳಿ ನಡೆದಂತೆ ಆಯಿತು. ಆ ಉಲ್ಲಾಸವೇನು, ಆ ಉತ್ಸಾಹವೇನು, ಆ ಸರಳ ಭಾವನೆಯೇನು. ಇಂದು ಆಗ ಇದ್ದದ್ದಕ್ಕಿಂತ ಹೆಚ್ಚಿನ ಸುಖಸಾಮಗ್ರಿ ಇತ್ತು. ಆದರೆ ಆಗಣ ಸುಖವಿರಲಿಲ್ಲ. ಶಕುಂತಲೆ ಬಹಳ ಖಿನ್ನಳಾದಳು. ಅವಳ ಅಂದಿನ ಬಾಳು ಯಾರದೋ ಬೇರೆಯುವರೊಬ್ಬರ ಬಾಳೆಂಬಂತೆ ಕಂಡಿತು. ಆಸೆಯಲ್ಲಿ ಸುಖವಿಲ್ಲ. ಆಸೆ ತುಂಬುವುದರಲ್ಲಿ ಸುಖವಿಲ್ಲ. ಆಸೆಯರಿಯದೆ ಇರುವ ಸುಖವೇ ಸುಖ ಎಂದು ಅವಳ ಮನಸ್ಸಿಗೆ ತೋರಿತು. ಹಾಗೆಯೇ ಅಲ್ಲೆಲ್ಲಾ ಸಖಿಯರೊಡನೆ ಓಡಿಯಾಡಿ ಮರಳಿ ಅವಳು ಬಿಡಾರಕ್ಕೆ ಹೋದಳು.

ಮಧ್ಯಾಹ್ನ ಶಾರ್ಙ್ಗರವನು ಬಂದು "ಅಂದು ನಿಮ್ಮನ್ನು ಅರಮನೆಯಲ್ಲಿ ಬಿಡುವಂದು ನಾನು ಕಠಿಣವಾದ ಮಾತನ್ನಾಡಿದೆ, ಅದನ್ನು ನನ್ನ ವಿಷಯದಲ್ಲಿ ಜ್ಞಾಪಕವಿಟ್ಟುಕೊಳ್ಳಬಾರದು" ಎಂದನು.

ಶಕುಂತಲೆ "ನೀನು ನನ್ನನ್ನು ಬಹುವಚನದಿಂದ ಕರೆಯಬೇಡ ಅಣ್ಣ. ಎಂದಿದ್ದರೂ ಏನಾದರೂ ನಾನು ನಿನ್ನ ತಂಗಿ. ಇನ್ನು ಅಂದು ನೀನು ಹೇಳಿದ್ದು ಆಗಣ ಸಂದರ್ಭದಲ್ಲಿ ತಪ್ಪಲ್ಲ. ಇಂದು ಹೇಗೆ ತಪ್ಪಾದೀತು. ನೀನು ನನ್ನ ಅಣ್ಣನೆಂದು ಮಾತ್ರ ನನ್ನ ಅರಿವು, ಉಳಿದದ್ದು ನನಗೆ ಜ್ಞಾಪಕವೇ ಇಲ್ಲ" ಎಂದು ಅವನಿಗೆ ಧೈರ್ಯ ಹೇಳಿದಳು.

ಸಂಜೆಯಲ್ಲಿ ಕಣ್ವರು ಬಂದು ಹತ್ತಿರ ಕುಳಿತು ತಾವಾಗಿ "ನೀನು ಇನ್ನೊಂದು ಸಲ ಬರುವಾಗ ಚಕ್ರವರ್ತಿಗಳನ್ನು ನಾನು ಬರಹೇಳಿದೆನೆಂದು ಹೇಳಿ ಕರೆತರಬೇಕು. ನನ್ನ ಬಳಿಗೆ ಬರುವುದಕ್ಕೆ ಸಂಕೋಚ ಬೇಡವೆಂದು ತಿಳಿಸು" ಎಂದರು. ಶಕುಂತಲೆ ಕರೆತರುತ್ತೇನೆ ಎಂದಳು.

ಶಕುಂತಲೆ ಮಾರನೆಯ ಬೆಳಿಗ್ಗೆ ಎದ್ದು ನಿತ್ಯವಿಧಿಗಳನ್ನು ಮುಗಿಸಿ ತಾನು ತಂದಿದ್ದ ಒಡವೆ ವಸ್ತುಗಳನ್ನು ಎಲ್ಲರಿಗೂ ಹಂಚಿ ಹಿರಿಯರಿಗೆ ವಂದಿಸಿ ಸಖಿಯರಿಗೆ ಹೋಗಿ

ಬರುವೆನೆಂದು ಹೇಳಿ ಮರಳಿ ಹಸ್ತಿನಾವತಿಗೆ ಹೊರಟಳು. ಹಿಂದೆ ಅವಳು ಆ ಆಶ್ರಮದಿಂದ ಹೊರಟ ಸಂದರ್ಭ ಅವಳಿಗೂ ಉಳಿದೆಲ್ಲರಿಗೂ ಚೆನ್ನಾಗಿ ನೆನಪುಂಟು. ಅಂದು ಅವಳು ನಡೆಯುತ್ತ ಹೊರಟವಳು ಇಂದು ತೇರನ್ನೇರಿ ಹೊರಟಳು. ಅಂದು ಗರ್ಭದಲ್ಲಿದ್ದ ಮಗನು ಇಂದು ಬೆಳೆದು ಶುಕ್ಲಪಕ್ಷದ ಸಪ್ತಮಿ ಚಂದ್ರನಂತೆ ಅವಳ ಜೊತೆಯಲ್ಲಿ ಹೊರಟನು. ಅಂದಿದ್ದ ಸಂದೇಹ ಶಂಕೆಗಳೊಂದೂ ಇಂದಿಲ್ಲ. ಇದು ಉಳಿದೆಲ್ಲರಿಗೂ ಬಹಳ ಸಂತೋಷ. ಶಕುಂತಲೆಗೆ ಮಾತ್ರ ಮನಸ್ಸಿನ ಸ್ಥಿತಿ ಅಂದಿನ ಸ್ಥಿತಿಯಿಂದ ಬಹಳ ಬೇರೆಯಾಗಿರಲಿಲ್ಲ. ಕಾರಣವರಿಯದೆ ಅವಳು ಅಂದಿನಂತೆಯೇ ಉತ್ಕಂಠಿತೆಯಾಗಿದ್ದಳು. ಅವಳಿಗೆ, ಮರಳಿ ಈ ಆಶ್ರಮಕ್ಕೆ ಬರಬೇಕಾದರೆ ಪತಿಯೊಡನೆ ಬರಬೇಕು, ಬಂದಮೇಲೆ ತಿರುಗಿ ಹಸ್ತಿನಾವತಿಗೆ ಹೋಗಬಾರದು, ಎನ್ನಿಸಿತು. ನೋವನ್ನು ಕಾಣದೆ ನಕ್ಕ ನಗೆಯೇ ನಗೆ, ನೊಂದು ನೋವನ್ನು ಮರೆತು ಆಮೇಲೆ ನಗುವ ನಗೆ ನಗೆಯಲ್ಲ. ಕಣ್ವ ಋಷಿಯ ಸಾಕುಮಗಳಿಗೆ ಇದು ಅನುಭವಕ್ಕೆ ಬಂದಿತು. ನಿಜವಾದ ಸುಖವನ್ನು ಹಿಂದೆ ಬಿಟ್ಟದ್ದೇನೆಂದು ತಿಳಿದುಕೊಂಡೇ ಅವಳು ತೇರಿನಲ್ಲಿ ಕುಳಿತು ಹಸ್ತಿನಾವತಿಗೆ ತೆರಳಿದಳು.

❑



# ನೀಲಿ ಮೂಗಿನ ನತ್ತು

**– ಹೆಚ್.ಆರ್. ಸುಜಾತ**

"ರಂಗವವಾರೇ, ರಂಗವ್ವಾರೇ"

ದನ ಕೊಟ್ಟಿಗೆಗೆ ಬಂದಿದ್ವು. ಆ ಸದ್ದಲ್ಲಿ ಮುಂದ್ಗಡೇ ಚಾವಡಿ ಮೇಲಿಂದ ನೀಲಿ ಕೂಗಿದ್ದು ಅವರಿಗೆ ಕೇಳಲಿಲ್ಲ. ಸಾಯಂಕಾಲ ಆಗೋಗಿತ್ತು. ಕತ್ತಲು ಮನೆ ವಳಕೆ ಬರದಿಕ್ಕೆ, ಆಗ್ಲೆ ಹೊಂಚು ಹಾಕತಿತ್ತು; ಬಾವಿ ತಕೆ ಏನಾರ ಹೋಗೋವ್ರಾ? ಅಯ್ಯೋ ಶಿವನೆ ಅನ್ನಕಂದು ನೀಲಿ ಒಂದೇ ಉಸ್ರಿಗೆ ಮತ್ತದೇ ರಾಗದಲ್ಲಿ ಇನ್ನೊಸಿ ಧಡತ್ತಾಗಿ ಕೂಗ ಹಾಕಿದ್ಲು. ಸೌದೆ ಕೊಟ್ಟಿಗೇಲಿ ದಪ್ಪ ಸೌದೆ, ಅದರ ಮೇಲೆ ಸಣ್ಣ ಸೌದೆ ಇಟ್ಟಕಂಡು, ಅವಕ್ಕೆ ಬೆಂಕಿ ಹೊತ್ತಸೋಕೆ ಅಂತಲೇ ಪುಳ್ಳೆ ಪುಸ್ಕ ಮುರ್ದು ಜೋಡುಸ್ಕಂತಿದ್ದ ರಂಗವ್ವಾರ್ಗೆ ದನದ ಕೊಟ್ಟಿಗೆ ಸದ್ದನೂ ಮೀರಿದ ಈ ರಾಗ ಅದರೊಳಗಿದ್ದ ಗಾಢ ದುಃಖದ ಒಂದು ಎಳೆನೂ ಎಳಕಂಡುಬಂದು ಅವರೆದೆಗೆ ತಂದು ತಾಕಿಸದಂಗಾಯತು.

ದಿನಾ ಬೆಳಗಾದ್ರೆ ಹಸುಗಳು ಕರುಗಳನ್ನ ಮನೇಲೆ ಬುಟ್ಟು ಊರಾಚೆಗೆ ಮೇಯೋಕೆ ಹೋಗುವಾಗ, ಅವೆರಡನ್ನೂ ಅಗಲಿಸೋ ಆ ಕ್ಷಣಕ್ಕೆ ಇವರು ಕೊರಡಿನಂಗೆ ಸಾಕ್ಷಿಯಾಗಿ ನಿಲ್ಲೋರು. ದನಗಳು ಮೇಯೋಕೆ ಹೊರಟಾಗ ಕರುಗಳನ್ನ ಹಿತ್ತಲಿಗೆ ಕೂಡು ಹಾಕರಾ? ಪಾಪ! ಹಸುಗಳು ಬಿಟ್ಟಿರನಾರದೆ ಅವ ನೆಕ್ಕಿ, ಎರಡೂ ಒಂದಕ್ಕೊಂದು ಅಂಬೇ... ಅನ್ನಕಂದು ಹೊರಟ್ರೂವೆ, ತಾಯ ಹಸುಗಳು ದನದ ಗುಂಪಲ್ಲಿ ಹಿಂದೆ ಹಿಂದೆ ಉಳಕಳವು.

ಸಾಯಂಕಾಲ ದನ ಬರೊವಾಗ ಅವು ಎಲ್ಲಾ ದನಕ್ಕಿಂತ ಮುಂದಲೇ ಬಂದು, ಹಿತ್ತಲ ಬೇಲಿಯ ಕಂಡಿ ಮಾಡಕಂಡು ಒಳಿಕೆ ನುಗ್ಗಕ್ ನೋಡತಿರವು. ಕೆಚ್ಚಲಲ್ಲಿ ಕಟ್ಟಕಂಡಿರೊ ಹಾಲನ್ನ ತನ್ನ ಕರುಗಳ ಬಾಯಿಗೆ ಹರಿಬಿಟ್ಟು ಕೆಚ್ಚಲು ಭಾರ ಕರುಗಸಕೆ ಅವು ಪಾಪಾ! ಹಂಗೇ ಪರದಾಡತಿರವು. ಹಾಲ ಕರಕಳವಾಗ ಮೂತಿ ಮುಂದೆ ನಿಲ್ಲಸ್ಕಂಡಿರೊ ಕರುವ ಅಂಗೆ ತಮ್ಮ ತರತರಿಯಾಗಿರೊ ತಾಯಿ ನಾಲಿಗೆಲಿ ನೆಕ್ಕಿ ಹಾಕಬುಡವು. ಕರುಗಳು ಬಾಲ ಮೇಲಕ್ಕೆತ್ತಿ ನಿಂತಕಂದ್ರೆ ಹಸ ಅನ್ನದು ಅಂಡು ಕುಂಡಿ ಯೆಲ್ಲನೂವೆ ತನ್ನ ಜೊಲ್ಲಲ್ಲೆ ಸ್ನಾನ ಮಾಡುಸ್ತಿದ್ರೆ; ತನ್ನ ಕೂಸ ತಿರುಗುಸ್ಕಂಡು ಹೊಳ್ಳುಸ್ಕಂಡು ಆಸೇಲಿ ಮೀಯುಸ್ತಿದ್ರೆ ಮನಸೊಳಗೆ ತನ್ನದು ಅಂತ ಉಕ್ಕುರ್ಸ ಈ ಜಗತ್ತಿನ ಆಸೆ ಅನ್ನದ ಕಂಡು ಅಂಗೆ ಬುರಬುರನೆ ಊದಿ ಉಸ್ರುಬುರಡೆಯ ವಡೆದಂಗೆ ಬೀಗಿ, ಮಾತಲ್ಲೇ ಅದ ಒಡೆದು ಈರ ತಮಾಶೆ ಮಾಡನು.

"ಓಹೊಹೋ... ಸೀಮೆಗಿಲ್ಲದ ಅವ್ವ ಮಕ್ಕಳು ಕನಪ್ಪಾ ಇವು." ಅಂದಾಗೆಲ್ಲಾ, ಹಾಲು ಕರಿತಾ ಕೂತಿದ್ದ ಗೌಡಮ್ಮರು ತನ್ನ ಮಕ್ಕಳು ಬಂದಾಗ ತಾನು ಹೆಚ್ಚಗಟ್ಲೆ

ಮಾಡಿ ತಿನ್ನಿ, ಉಣ್ಣಿಸಿ, ಹಾಸನದ ಕೋಟೆಗೆ ಮಕ್ಕಳ ಹೊರಡಸೋದನ್ನ ಹೊಟ್ಟೆ ವಳಗೇ ನೆನಕಳರು.

ಹಾಲ ಕರಿತಿರುವಾಗ ಹಸಿನ ಮೊಲೆಲಿ ಸೊರ ಬಿಟ್ಟಕಂಡು, ತುಂಬಿ ತೊನೆಯೋ ಹಾಲಿನ ಧಾರೆ ಅನ್ನದು... ರಂಗವ್ವರ ಕೈ ತಾಕಿ, ಹಿತ್ತಾಳೆ ಚೊಂಬೊಳಗೆ ಚೊರ್ರಾಚೊರ್ರಾ... ಅಂತ ಸದ್ದು ಮಾಡತಾ ನೊರೆ ಗುಳ್ಳೆ ಉಕ್ಕುಸ್ತಾ... ಚೊಂಬಲ್ಲಿ ಹಾಲು ತುಳುಕಾಡತಾ ಹೋಗದು. ತುಂಬಕತಾ... ತುಂಬಕತಾ... ಆ.... ಸದ್ದು ಕಡ್ಮೆ ಆಗದು. ಹಂಗೆ ಇವರೆದೆ ವಳಗೂವೆ ರಜಕ್ಕೆ ಅಂಥ ಬಂದು ಮಕ್ಕಳು ತಿರುಗಿ ನೋಡತಾ ನೋಡತಾ, ಗುಡ್ಡದ ತೆಗ್ಗಲ್ಲಿ ಅವರಪ್ಪನ ಜೊತೆಲಿ ಮಕ್ಕಳು ಇಳುದು ಹೋಗತಾ ಇರೋವಾಗ, ಹಾಸನದ ದಿಕ್ಕಲ್ಲಿ ಕಣ್ಮರೆ ಆಗಿ ದೂರಾದಾಗ, ಅದುವರ್ಗೂ ಕೆಲಸದ ವಳಗೆ ತಡೆ ಹಿಡದಿದ್ದ ಮಮತೆ ಅನ್ನದು ಕಣ್ಣೀರಾಗಿ ತುಳಕಾಡದು.

ಊರಿನ ಕಣ್ಣಿಗೆ ಬೀಳದಂಗೆ ಸೆರಗಲ್ಲೇ ಕಣ್ಣಿರ ಇಂಗ್ಸಿ ಕಳಸಕ್ ಬಂದ ತನ್ನ ವಾರಗಿತ್ತೀರ ಜತಿಗೆ ಇವ್ರೂ ಮನಿಗೆ ಬರರು. ನನ್ನ ಅಳಲ ಏನಾರ ಮಕ್ಕಳು ಕಣ್ಣಿಗೆ ತೋರುಸ್ದೆ ಅಂದ್ರೆ ಮಕ್ಕಳು ಕರುಳಬಳ್ಳಿಯ ಇಳೆಬುಟ್ಕಂಡು ಹೋಗಕುಲ್ಲ... ಅಂಥ ಚಂಡಿ ಊರುಬುಡತಾವೆ ಅಂತ ಅನ್ನಕಂದು. ಅವರು ವಳಗೆ... ಸಂಕಟ ಅನುಭವ್ಸೋರು.

ವಿದ್ಯೆ ಅಂದ್ರೆ ಸುಮ್ಮನಾಯ್ತಾ? ಏಳೂರ ಕೆರೆ ನೀರ ಕುಡಿಬೇಕು. ಇಲ್ಲಾಂದ್ರೆ.... ನಮ್ಮಂಗೆ ಬೆಳಗಿಂದ ಸಾಯಂಕಾಲದವರ್ಗೂ ತಿಕಕ್ಕೆ ಹುಲ್ಲ ಗಿಡಕಂಡು, ಇದ್ದ ಕಡೇಲೆ ಗಾಣಕ್ಕೆ ಕಟ್ಟಿದ ಎತ್ತಿನಂಗೆ ಗೇಯತ್ತಲೇ ಇರಬೇಕು. ನಮ್ಮಕ್ಕ ಹಾಸನದ ಕೋಟೆ ಸೇರಿರೋಳು. ಇತ್ಲಾಗೆ ಮನೇಲಿ ಆಳುಕಾಳನೂ ಇಟ್ಕಂಡು, ಬಾಯಿಗೆ ಬೇಕಾದ್ದ ಅಡಿಗೆ ಮಾಡಕಂದು, ಅತ್ಲಾಗೆ ಬ್ರಾಮರ ಎಂಗಸ್ರು ಜತಿಗೆ ಹಾಡುಹಸೆ ಅನ್ನಕಂದು, ಹಾಸನದ ದನದ ಜಾತ್ರೆಲಿ ಟೆಂಟ್ ಹಾಕೊ ಗುಬ್ಬಿ ಕಂಪನಿ ನಾಟಕವಾ ನೋಡಕಂದು, ಬಾಳಿನ ಪಡಿಪಾಟಳು ಅನ್ನದ ಎಂಗೆ ಮರತಕತಾವಳೆ.

ಅಂಗೆ... ಒಂದಿನ ನನ್ನ ಮಕ್ಕಳೂ ಪ್ಯಾಟೆ ಸೇರಕಂಡು ನಿಸೂರಾಗಿರಲಿ ದೇವ್ರೇ... ಇಲ್ಲಾಂದ್ರೆ ಒಂದಿನ ಅವ್ರೂ ನನ್ನಂಗೆ ಸಗಣಿಯ ಕಾಲಲ್ಲಿ ತುಳಕಂಡು ಮಡಕೆ ತಳದ ಕರೆ ಮಸಿ ತಿಕ್ಕಂಡು ಮನೆ ತುಂಬ ಜೀತ ಮಾಡೂರ್ಗೆ ಬೇಯಸಾಕ್ಕಂಡು ಹಿತ್ತಲು ಕೋಣೆ ಮನೆ ತುಂಬಲೂ ಹಾರಾಡ್ಕಂಡು ಗೇದರೂ, ವಕ್ಕಡೆ ಕುಂತ್ಕಂಡು ಸಮಾಧಾನವಾಗಿ ಉಣ್ಣಂಗಿಲ್ಲ. ಬೆಳಗಿನ ಹೊತ್ನಲ್ಲಿ ರೊಟ್ಟಿ ಕೈಲಿ ಕಿಡಕಂದು ತಿನ್ನಕಂದೇ... ದನ ಬುಟ್ಟಕೊಡಬೇಕು. ಅಂಥ ಪಡಿಪಾಟಲು.

ಹರವಕೊಂದು ಬೇಕಾದಂಗೇನೋ ಬದುಕು ಮನೆ ವಳಿಗೆ ಬಿದ್ದೀತೆ! ತಡ್ರಸ್ಥಳಕ್ಕೆ ಪುರೊಸೊತ್ತಿಲ್ಲದಂಗೆ ನಾವು ಗೇಯ್ತೀವಿ ಅಂದ್ರೆ, ನಮ್ಮ ಮಕ್ಕಳು ಕೈಲಿ ಆಗುತ್ತಾ? ಪಾಪ! ಹಾಸನದ ಕೋಟೆ ನಮ್ಮಕ್ಕಂಗೆ ನನ್ನ ಕಂಡ್ರೆ ಪ್ರಾಣ. ಆದ್ರೆ ಅವಳು ಇಲ್ಲಿಗೆ ಬಂದು ನನ್ನ ನೋಡಕಂದು ಹೋಗವಾಗೆಲ್ಲ ಕಣ್ಣೀರ ಕೆಡುವದಲೆ ಓಗದೇ ಇಲ್ಲ.



"ಗಿಣಿ ಹಂಗೆ ಸಾಕಿದ ಮಗಳು ತಂದು ಇಂಥ ಅರೆಗಾಣಕ್ಕೆ ಹಾಕಬುಟ್ಟವನಲ್ಲ" ಅಂತ ನೊಂದಕಂದು ನಮ್ಮಪ್ಪನಿಗೆ ಶಾಪ ಹಾಕದೆ ಹೋಯ್ತಳೆ. ಅವಳ ಕಣ್ಣೀರೇನು ನಂಗ ತಿಳಿದೆ ಇರದಾ? ಒಂದೇ ಹೊಟ್ಟೆಲಿ ಹುಟ್ಟವ್ರಲ್ಲವಾ ನಾವು?

ಹಂಗಂಥ ನನ್ನ ಗಂಡನ ಪರದಾಟೇನು ಕಡಿಮಿಲ್ಲ... ತಗಳಪ್ಪಾ... ಪಾಪಾ! ಪ್ಯಾಟೇ ಮನೆ ತಿರಿಕ್ಕಂಡು, ಮಕ್ಕಳ್ಗೇ ಅಂಗೆ ಜೀವ ಬಿಟ್ಟಕಂದು ಜೀವಮಾನನೇ ತೇಯ್ತರೆ... ಅವರೂವೆ. ಹೊತ್ತೊತ್ತಿಗೆ ಊಟವ ಊರೋರಂಗೆ ಕುಂತು ಉಣ್ಣಂಗಿಲ್ಲ. ಯಾವಗ್ಲೂವೆ ಉಸ್ರು ಕಟ್ಕಂದೆ ಅಡ್ಡಾಡಬೇಕು. ಎಂಟು ಮಕ್ಕಳನ್ನೂ ತಗಹೋಗಿ ಪ್ಯಾಟೇಲಿಟ್ಟು ಮಕ್ಕಳ ಒದ್ಸೋದು ಅಂದ್ರೆ ಸುಮ್ನಾಯ್ತಾ? ಅದೇನು ಹುಡುಗಾಟದ ಮಾತ ಅಂತರೆ ಕಂಡರೆಲ್ಲರೂವೆ. ಎಂಗೋ ಮಕ್ಕಳ ಮೇಲೆ ನಮ್ಮ ಮನೆದ್ಯಾವ್ರು ಸಕನಿರಂಗ ಕಣ್ಬಿಟ್ಟು ನೋಡುದ್ರೆ ಸಾಕು ಬದುಕ್ಕತವೆ.

ಅಷ್ಟ್ರಲ್ಲಿ ಮತ್ತೆ "ರಂಗವ್ವಾರೇ, ರಂಗವ್ವಾರೇ" ಅನ್ನ ನೀಲಿ ಕೂಗು ಅವರ ಯೋಚ್ನೆಯ ತುಂಡು ಮಾಡತು. ಬಿರ್ರನೆ ಅತ್ಲಾಗೆ ಸೌದೆ ತಗಹೋಗಿ ಒಲೆ ಮೂಲೇಲಿ ಹಂಗೆ ಹಾಕಿ, ಆಮೇಲೆ ಬಂದು ಜೋಡಿಸಿ ಒಲೆ ಕತ್ತಹಾಕನ ಬುಡು ಅನ್ನಕಂದು ಚಾವಡಿಗ ಬಂದ್ರು. ಏನೋ ಆಗೀತೆ? ಅದಕ್ಕೆ ಅಂಗೆ ಕೂಗತಾ ಅವಳೇ ಅನ್ನದು ಗ್ಯಾರಂಟಿ ಆಯ್ತು.

"ಯಾಕೆ? ಇದ್ಯಾಕಗೀ? ಏನಾತೆ? ಮಗ ಹುಶಾರಾಗೀತೇನೆ? ಪಕ್ಕೆಶೂಲೆ ಎಂಗೀತೆ?" ನಡುಮನೆ ದಾಟಿ ಚಾವಡಿಗೆ ಬಂದ್ರು.

"ಇಲ್ಲಾ ಕಣೀ, ಬೆಳುಗ್ಗೆ ಆಸ್ಪತ್ರಿಗ ಕರಕಹೋಗಬೇಕು. ಇಲ್ಲದೆ ಹೋದ್ರೆ ಮಗ ಕೈ ಬುಟ್ಟೋತಿತೆ. ಇದೊಂದ್ ರಾತ್ರಿ ತುಂಬಸುದ್ರೆ ಸಾಕಾಗೀತೆ ನಮಗೆ. ಉಸ್ರ ಏಳುದು ಎಳುದು ಬುಡೋದ ನೋಡುದ್ರೆ ನನಗೆ ಈ ಭೂಮಿ ಮೇಲೆ ಯಾಕಾದ್ರೂ ಉಳ್ಕಂಡಿದಿನೋ ಅನ್ನಸ್ತೀತೆ. ನಮ್ಮಂಥ ಬಡವ್ರಿಗೆ ಯಾಕೆ ಕೊಡತಾನಿ ಆ ದೇವರು ಮಕ್ಕಳ... ನಂಗೊತ್ತಿಲ್ಲಪ್ಪಾ. ಬಡವರ ಪಾಡು ಯಾವಾಗ ತೀರುಸ್ತಾನೋ? ಅವನು" ಅಂದ ಅವಳಿಗೆ ಗೌಡಮ್ಮಾರು ವಸಿ ರೇಗಿ ಸಮಾಧಾನ ಹೇಳುದ್ರು.

"ಮಕ್ಕಳು ಕೊಟ್ಟುದ್ದೂ ಅಲ್ಲದೆಯಾ ದೇವ್ರು, ಅವ ಸೌಕರ್ಯ ಮಾಡಕ್ಕೆ ಬೇರೆ ಬತ್ತನ ನಿಮ್ಮನಿಗೆ, ಹೋಗೆ ಈಗ ಎದ್ದು. ನಾಕು ದಿಸ ಈ ಕೂಲಿನಾಲಿ ಬುಟ್ಟು ಮೊದ್ಲು ಮಗ ನಿಗಾ ಮಾಡು. ಹೊತ್ತಾರೆ ಕೋಳಿಮುಖಕ್ಕೆ ಎದ್ದು ಹೊರಡು. ದೇವ್ರಿದಾನೆ. ಎಲ್ಲಾ ಸರೋಯ್ತುದೆ ಕನ್ ಹೋಗು. ಭಂಡ ಧೈರ್ಯ ಇರಬೇಕು ಧರೆ ಮೇಲೆ ಹುಟ್ಟಿದ ಈ ಜನ್ಮಕ್ಕೆ" ಇವರ ಮಾತಿಗೆ ಪಕ್ಕದಲ್ಲಿದ್ದ ಈರ ಇಲ್ಲಿವರ್ಗೂ ಸುಮ್ಮಗ ನಿಂತಿದ್ದೋನು

"ಎಂಗಾರ ಮಾಡಿ ಗೌಡ್ರಿಗೆ ಯೋಳಿ. ನಾವು ಆಸ್ಪತ್ರೆಗೆ ಬತ್ತೀವಿ ಅಂತವ. ನಾವು ಹಾಸನದ ಕೋಟೆ ಮುಖ ನೋಡೋದೆ ಹೊಸತು. ಇನ್ನ ಆಸ್ಪತ್ರೇಲಿ ನಮ್ಮ ಯಾರು ಕ್ಯಾರೆ ಅಂತರಿ ಅಲ್ಲಿ. ಗೌಡ್ರು ಇದ್ರೆ ಆಗದು. ನಮಗೆ ಧೈರ್ಯ ಬರದು."

“ನಿಜ ಕಣ್ಲಾ ಈರ. ಗೌಡ್ರು ಇವತ್ತು ಅಲ್ಲೇ ಮಕ್ಕಳತಾವ ಉಳಕಂದರೆ. ಅವರ ಎಂಗೆ ಹಿಡಿತೀಯಪ್ಪ... ನೀನೆ ಹೇಳು”

“ನಾನು ಹೋದನೆ ವರ್ಷ ಒಂಜಿಸ ಸೌದೆ ಗಾಡಿ ತಗಹೋಗಿ ಇಳುಸುದ್ನಲ್ಲಾ! ಆ ಜಕ್ಕನಳ್ಳಿ ಲಿಂಗಾಯಿತರ ಮನಿಗೆ. ಅಲ್ಲಿಗ ಹೋಗ ದಾರಿಯ ಹೆಂಗೋ ಹಿಡಕಂಡು ಹೋಯ್ತೀನಿ. ಅವರು ಬಂದು ಅಲ್ಲಿ ನಿಮ್ಮ ಮಕ್ಕಳಿರೊ ಮನೆಯ ತೋರುಸತರಲ್ವಾ? ಅಲ್ಲಿ ಗೌಡ್ರು ಸಿಕ್ತಾರೆ ಬುಡಿ. ಆಗ, ಅಲ್ಲಿಂದ ಕರಕ ಹೋಯತೀವಿ. ಅಲ್ವೇನಿ?” ಅಂದ.

“ಹೂಂ, ಅಂಗೆ ಮಾಡು. ಕೋಳಿ ಮುಕಕ್ಕೆ ಹೊಂಟ್ರೆ ನಿಮಗೆ ಅವ್ರು ಸಿಕ್ತಾರೆ. ಅಲ್ಲೇ ಮನೇಲಿ ಒಂಚೂರ ಏನಾರ ಹೊಟ್ಟೆಗೆ ಈಸಕಂದು ತಿಂದು ಆಸ್ಪತ್ರೆ ಕೆಲ್ಸ ಮುಗುಸ್ಕಂದು ಇತ್ಲಾಗೆ ಬನ್ರೋ... ಒಲೆ ಕತ್ತ ಹಾಕಬೇಕು ಕಣೊ. ಬಂದೆ ಇರು.” ಅಂತ ವಳಗ ಹೋದ್ರು.

ಬೆಂಕಿ ಆಡಕಳ್ಳಲಿ ಅನ್ನಕಂದು, ಒಲೆ ವಳಗೆ ಬಿಟ್ಟಿದ್ದ ಸೌದೆಲಿ ಬೂದಿ ಈಚಿಗೆ ಕೆರದು ಒಲೆ ದಿಂಡಿಗೆ ವರ್ತರ್ಸಿ, ಪುಳ್ಳೆ ಮುರುದು ಹಾಕಿ ಹಂಗೇ... ಬೆಂಕಿ ತಂತಾನೆ ಕಚ್ಚಕಳ ಹುನ್ನಾರ ಮಾಡಿ, ಅದರ ಮೇಲೆ ಸಣ್ಣ ಸೌದೆ ದೊಡ್ಡ ಸೌದೆ ಇಟ್ರು. ಊದುಕೊಳವೆಲಿ ತಮ್ಮ ಪುಪ್ಪಸದ ವಳಗಿದ್ದ ಗಾಳಿಯ ಎಳೆದು ಹೊಗೆಯಾಡೊ ಸಣ್ಣ ಬೆಂಕಿ ಮಯ್ಯಗೆ ಊದಿ, ಅದರ ಮೈ ಚಳಿ ಬುಡಸಿ ಬೆಂಕಿ ರಜವಾಗೊ ಹಂಗೆ ಮಾಡದ್ರು.

ಇಷ್ಟೊತ್ತು, ಕೇವಲ ಒಂದು ಮೈ ಹೊತ್ತು ಮಲಗಿದ್ದ ಆ ಸೌದೆ ತುಂಡು ಅನ್ನೋವು, ಗಂಡನ ಶಾಪಕ್ಕೆ ಕಲ್ಲಾಗಿ ಬಿದ್ದಿದ್ದ ಅಹಲ್ಯೆ ರಾಮ ಮುಟ್ಟಿದ್ದಕ್ಕೆ ಧಡಕ್ಕನೆ ಎದ್ದು ನಿಂತಕಂದಂಗೆ, ಆ ಸಮಯದಲ್ಲಿ ಅವಳ ಹಳೆ ಬದುಕಿನ ವಾಸನೆ ತಂತಾನೆ ಉರದೋಗಿ ಆರಿ ಬೂದಿಯಾದಂಗೆ, ಅವಳು ಹೊಸ ಜನ್ಮ ಪಡೆದುಕೊಂಡ ರೀತೀಲಿ ಈ ಗೌಡಮ್ಮರು ಕೈ ಮುಟ್ಟಿ ಇಟ್ಟ ಸೌದೆಗಳು ಧಿಗ್ಗನೆ ಉರಿಯತೊಡಗಿದವು.

ಅವು ತಮ್ಮ ಹಳೆ ದೇಹದ ಮೋಹ ತೊರೆದು ಇವರ ಮನೆಯ ಹಸಿದ ಕರುಳಿಗೆ ಅನ್ನವಾಗಿ ಅರಳುವಂಥ ಜ್ಞಾನದಲ್ಲಿ ಇವರ ಪುಪ್ಪಸದ ಉಸಿರನ್ನ ತಾಗಸಕೊಂಡು, ಅವರೆದೆಯ ನೋವನ್ನೂ ಉರಿಯಾಡೊ ತಮ್ಮ ನಾಲಿಗೇಲಿ ನೆಕ್ಕುತ್ತಾ, ಅವರ ಸಣ್ಣಪುಟ್ಟ ನೋವಿಗೆ ಬೆಚ್ಚನೆ ಕಾವು ಕೊಡುತ್ತಾ, ನಾವಿದ್ದೀವಿ ಅಂತ ಆ ಹೆಣ್ಣನ್ನು ಸಂತೈಸಿ ತಮ್ಮ ಬದುಕಿನ ಕೊನೇ ಎತ್ತರದ ಉರಿದು ಬೂದಿಯಾಗುವಂಥ ಕಾಯಕದಲ್ಲಿ ತೊಡಗಿದವು.

ಈ ಜಗತ್ತಿನ ಮಾಯಕದ ಇಂಥ ಗಳಿಗೆಗಳ ಅಂತರಾಳವನ್ನು ಕೆದಕಲು ಪುರುಸೊತ್ತಿಲ್ಲದ ಈ ಗೌಡಮ್ಮರು ಬೆಂಕಿ ಕಚ್ಚಕಂದು ಉರಿಯೊ ಸೌದೆ ಕಂಡು ನಿರಾಳವಾಗಿ ಅನ್ನದ ತಪ್ಪಲೆಲಿ ನೀರ ತುಂಬಿ ಒಲೆಯ ಮೂರು ಕುಪ್ಪಿ ಮೇಲೆ ನೆಟ್ಟಗೆ ಕೂರಸಿ ಬೀರು ತೆಗೆದವರೆ, ಅದರೊಳಗೆ ಇದ್ದ ಕಡಬು ತಗಂದು ಅದರ ಮ್ಯಾಲೆ ಹಸ್ರುಮೆಣಸಿನಕಾಯನೂ ಹುಣಸೆಕಾಯನೂ ಕುದುಸಿ ಉಪ್ಪು ಹುಚ್ಚಳ್ಳು ಹುಡಿ



ಹಾಕಿ ಮಾಡಿದ ಕುದುಕ್ಲು ಹಾಕಿ, ಮ್ಯಾಲೀಟು ಮೊಸ್ರು ಸುರುದು ಮುತ್ತಗದೆಲೆಲಿ ಹಿಡಕ ತಂದು ಅವರ ಕೈ ಮೇಲೆ ಇಟ್ಟಕೊಟ್ರು. ನೀಲಿ ಅದ ಇಸ್ಕಂಡ್ರೂವೆ ಮ್ಯಾಲೆ ಎದ್ದೇಳದೆಯ ಕುಂತೇ ಇರದ ಕಂಡೋರು “ಇದ್ಯಾಕಗೀ? ಮಗಿನ್ತಕೆ ಹೋಗಬಾರದೇನೆ” ಅಂದ್ರು.

“ಇನ್ನೊಂದು ಕನಿ. ಒಂದಿಪ್ಪತ್ತೈದು ರೂಪಾಯಿ ಇದ್ರೆ ಕೊಟ್ಟಿರಿ.” ಅಂದ ಅವಳ ದೈನೇಸಿ ಮಾತಿಗೆ ಇವರು ಹೌಹಾರಿದ್ದೆ ಬಿಡಸಿ ಬಿಡಸಿ ಕೇಳುದ್ರು.

“ಏನಂದೆ ನೀನು?... ಅಲ್ಲಾಕನಗೀ, ನೀವೆ ಕಂಡಿದಿರ ನಮ್ಮನೆ ತಾಪತ್ರೆಯ ಅನ್ನದ. ನೀನೇನು ದೂರದವಳೇನೆ. ದಿನಾಲೂ ನಮ್ಮನೆ ಕಷ್ಟಸುಖ ಕಂಡೋಳು. ಮೊನ್ನೆ ಬುಧವಾರ ಸಂತೆ ದಿಸ ಕೂಲಿ ಬಟವಾಡೆ ಮಾಡಕ್ಕೆ ಗೌಡ್ರು ಅಯ್ಯೋ... ಪರದಾಡುಬುಟ್ರು. ಹಂಗೆಯ ಸಾಯಂಕಾಲ ಮಾಡುದ್ರು ಅಂತ, ನೀನೆ ಹೊಟ್ಟುರ್ಕಂಡು ಹೇಳಿದಿಯಾ... ಆಮೇಲೆ ಸಂತೆ ಮುಗಸಿ ಬರೊ ಹೊತ್ಗೆ ತಡ ಆಗೋಯ್ತು ಕಣಿ ಅಂತ ಹೇಳಿದೀಯಲ್ಲೆ. ಈಗ ನೋ...ಡುದ್ರೆ ಇಷ್ಟಂದೊಡ್ಡಿ ದುಡ್ಡು ಕೇಳ್ತಾ ನಿಂತಿದಿಯ. ಎಲ್ಲಿಂದ ತರದು? ನನ್ನತ್ರ ಹುಡುಕಿದ್ರು ಒಂದೆರಡು ರೂಪಾಯಿ ಸಿಕ್ಕುದ್ರೆ ಹೆಚ್ಚವ್ವಾ! ನಮ್ಮನೇಲಿ ಮುಚ್ಚು ಮರೆ ವ್ಯವಹಾರನೇ ಇಲ್ಲಾ ಅನ್ನದು ನಿಂಗೊತ್ತಿಲ್ವಾ?”

“ಹಂಗೆ ಕೊಡಬೇಡಿ. ಈ ಚಿನ್ನದ ಬೇಸರಿ ಇಟ್ಕಂಡು ಕೊಡಿ. ಆಮೇಲೆ ಬುಡಸ್ಕತೀನಿ. ನಿಮ್ಮನೇಲಿ ಕೂಲಿ ಗೇದಾರು ಸರಿ, ಇಲ್ಲದೆ ಹೋದ್ರೆ ಸೌದೆ ಗಾಡೀನಾರ ಹೊಡೆದು ಕೊಟ್ಟು ಬುಡ್ತೀವಿ.” ಅಂದ್ಲು ನೀಲಿ. ಅವರು ಇವರನ್ನ ಬುಟ್ಟು ಹೋಗಂಗೆ ಕಾಣಲಿಲ್ಲ.

“ನಿನಗೂ ತಿವಾಸ ಕಣೇ ನೀಲಿ. ಇಂಥ ಇಳೇ ಹೊತ್ನಲ್ಲಿ, ಎದೆ ವಳಗೆ ನೋವ ಕಟ್ಕಕಂದು ಮಗ ಉಳುಸ್ಕಳಕೆ ಅಂತವ. ನಿನ್ನ ಮೈಮೇಲೆ ಇರೊದೊಂದ ವಡವೆಯ ಬಿಚ್ಚಕಂದು ತಂದು ನನ್ನ ಕೈಗಿಡ್ತಿದಿಯಲ್ಲಾ... ಆ ನೋವು ನನ್ನ ಮನೆಗೆ ಸುತ್ತಕಳ್ಲಿ ಅಂತವ... ನಾನು, ಇದನ್ನ “ಅಡ” ಅಂತ ತಗ ಹೋಗಿ, ಅದೂ ಮನೆ ಪೆಟ್ಟಿಗೆ ವಳೀಗೆ... ಇಟ್ಟಕಳ್ಳಲಾ? ಮೊದ್ಲು ತಗ ಹೋಗು ಇದ ನೀನು. ತುಂಬಿದ ಮನೇಲಿ ಇಂಥ ಯವಾರನೇ ಬೇಡ. ನಾವು ಯಾವತ್ತೂ ಇಂಥ ದುಡ್ಡು ಕಂಡರಲ್ಲ. ಇನ್ಮುಂದಕೂ ಇಂಥ ಕಂಡೋರ ಮನೆ ಮುರ್ಯೋ ಕೆಲ್ಸ ಹೇಳಕೊಡಬೇಡ ನಮಗೆ ನೀನು. ಈ ಮನೆ ವಳಗೆ ಮಕ್ಕಳು ಮರಿ ಬದುಕ... ಮಾಡಬೇಕೋ ಬೇಡವೋ ಹೇಳು ನೋಡನ?” ಒರಟಾಗಿ ಹೇಳುದ್ರೂವೆ ಅವಳ ಭಣಗುಡೋ ಮೂಗ ನೋಡದ್ರು.

ನೀಲಿಯ ಉಂಡುಂಡಾಗಿದ್ದ ಮೂಗಲ್ಲಿ ಒಂದು ಆಕಾಶ ನೀಲಿ ಹರಳಿನ ಸುತ್ತ ಬಿಳಿ ಬಣ್ಣದ ದಾಳಿಂಬೆ ಕೆಂಪು ಬಣ್ಣದ ಹರಳ ನೇದು ಅಲಂಕಾರಕ್ಕೆ ಕಟ್ಟಿದ ಹೂವಿನ ಚೆಂಡಿನಂಗೆ ಚಂದಕ್ಕಿದ್ದ ಮೂಗು ಬಟ್ಟು ಅದು. ಅವಳ ಮುಕಕ್ಕೆ ಅಂಗೆ ಅದು ಎದ್ದು ಕಾಣದು. ಅದನ್ನ ಅವರವ್ವ ಮದುವೇಲಿ ಅಕ್ಕಸಾಲಿಗರು ಮನೇಲಿ ಕುಂತು, ಇಂಗಲ್ಲ ಇಂಗೆ, ಅಂತ ಹೇಳಿ ಮಾಡಸಿದ್ಲಂತೆ.

ಕೆಂಪಗೆ ಬಿಸಲಲ್ಲಿ ರವಗುಡೋ ಅವಳ ಮುಖದ ಬಣ್ಣಕ್ಕೂವೆ, ಆ ನತ್ತಿನ ಚೆಂದಕ್ಕೂವೆ ಅವ್ಳ ಮುಖ ಅನ್ನದು ಕಿಲಿಗುಡೋದು. ಗೌಡಮ್ಮರೆ ಆ ಬೇಸುರಿಯ ಅಂದಕ್ಕೆ ಆಗಾಗ ಮರಳಾಗೋರು. ನೀಲಿ ಬಿಳೀ ದಾಳಿಂಬೆ ರಂಗಿನ ಕುಸುರಿ ನೇಯ್ಗೆನ ಅಷ್ಟರಮಟ್ಟಿಗೆ ಮಾಡಿದ್ದ ಆಚಾರಿ. ಅದನ್ನ ಅವಳ ಕೈಲಿ ನೋಡತಿದ್ದಂಗೆ, ನಾಗರ ಹಾವಿನ ಮಚ್ಚೆ ನೋಡದಂಗೆ ದೂರಕ್ಕೆ ಮೆಟ್ಟಿ ನಿಂತ್ರು. ಅದನ್ನ ಕೈಲಿ ಮುಟ್ಟೂ ನೋಡನಿಲ್ಲ.

"ಬಡ್ಡಿಗೆ ಇಟ್ಟಕಳ್ಳಲಿ ಅನಕಂದೇ ಮಂಜಣ್ಣರ ಮನಿಗೆ ಹೋಗಿದ್ವಿ. ಅವರು ಧರ್ಮಸ್ಥಳಕ್ಕೆ ಓಗವ್ರೆ." ನೀಲಿ ಮಾತಾಡುದ್ಲು. ಆಗ ಗೌಡಮ್ಮರಗೂ ಹೊಟ್ಟುರ್ದು "ಇಷ್ಟೊತ್ನಲ್ಲಿ ವಾಡೇಗೆ ಯಾರನ್ನಾರ ಇಳಿಸಿದ್ರೆ ಆ ಮಗಿನ ಜೀವ ಉಳುಸಬೋದು. ಇಲ್ಲಾಂದ್ರೆ ಮಗಿಗೆ ಏನಾರ ಆದ್ರೆ, ಆ ಪಾಪ ನಮಗೂ ಬಂದು ಸುತ್ಕತ್ತದೆ. ಆಪತ್ತ ಧನ ಅಂದ್ರೆ ರೈತನ ಮನೇಲಿ ವಾಡೇಲಿ ತುಂಬಿರೊ ಲಕ್ಷಮಿನೆಯಾ! ಏನಪ್ಪಾ ಮಾಡದು? ಈಗ ಸಕನಿರಂಗ! ಅನ್ನಕಂದು ಅತ್ತೆಮ್ಮ ಎಲ್ಲವರೆ? ಅಂತ ನಡುಮನೆಯ ಬಗ್ಗಿ ನೋಡುದ್ರು.

ನಡುಮನೆ ವಾಡೆ ಬಾಗಲಲ್ಲೆ ಊರಗಲ ಈಚಲ ಚಾಪೆ ಹಾಸಕಂದು, ಅದರ ಮೇಲೆ ಸೀರೆ ದಟ್ಟ ಹಾಸಕಂದು, ಆಚೆ ಮನೆ ಮಕ್ಕಳು ಬಂದ್ರೆ ಮಲಕ್ಕಲಿ ಅಂತ ಇತ್ಲಾಗೆ ಜಾಗ ಬುಟ್ಟು, ಗೋಡೆ ವತ್ತಿಗೆ ಕರೆಕಂಬಳೀ ಹೊದ್ದಕಂಡು, ಕಣ್ಣ ಪಿಳಿಪಿಳಿನೆ ಬುಡತಿದ್ರು. ಅವ್ವೇ... ವಾಡೇಗೆ ಈ ರಾತ್ರಿ ಹೊತ್ನಲ್ಲಿ ಯಾರನ್ನಾದ್ರೂ ಇಳುಸುದ್ರೆ... ನನ್ನ... ಸುಮ್ಮನೆ ಬುಡತಾರ? ಮನೆ ಸೂರನೆ ಹಾರುಸ್ಬುಡ್ತಾರೆ.

ಹಿಂಗೆ ಯೋಚನೇಲಿ ಮುಳುಗಿ ಪರಿಹಾರಕ್ಕೆ ಕಾಯ್ತಾ ಚಾವಡೀಲಿ ಕುಂತಿದ್ದ ನೀಲಿ ಈರ ಜೋಡಿ ಅನ್ನೋದು ಸತ್ಯಹರಿಶ್ಚಂದ್ರನ್ನ ಪರೀಕ್ಷೆ ಮಾಡಕ್ಕೆ ಬಂದು ಕುಂತಿರೊ ವಿಶ್ವಾಮಿತ್ರನಂಗೆ ಆ ಚಣದಲ್ಲಿ ಇವ್ರಿಗೆ ಕಾಣಸ್ಕಂಡರು. ಹಾಸನದ ಅಕ್ಕನ ಮನಿಗೆ ಹೋದಾಗ ಅಕ್ಕ ಬುಡುದಲೆ ಹಾಸನದ ಜಾತ್ರಿಗೆ ಬಂದಿದ್ದ ಗುಬ್ಬಿ ಕಂಪಣಿ ಆಡೋ ಈ ನಾಟ್ಕಕ್ಕೆ ಕರಕಂದು ಹೋಗಿದ್ಲು. ಅಲ್ಲಿ ಆ ರುಷಿಮುನಿ ಹಿಂಗೆ ಬಂದು ಎದೆ ಮೇಲೆ ನಿಂತಕಳನು. ಈಗ ಊರೊಳುಗೆ ಯಾರಪ್ಪಾ... ದುಡ್ಡು ಇಟ್ಕಂಡಿರರು... ಗಂಡ ಇದ್ದಿದ್ರೆ, ಈ ಕಷ್ಟಕ್ಕೆ ಏನಾರು ಒಂದು ಗತಿ ಕಾಣಸರು.

ನೋಡನ! ತಡಿ ಅಂದು ಅಡಿಗೆಮನೆಗೆ ಬಂದು ಸೇರಲ್ಲಿ ಅಕ್ಕಿ ತಗಹೋಗಿ ಒಲೆಮೇಲೆ ಮರಳೋ ನೀರಿಗೆ ಸುರುದುಬಂದ್ರು. ಅಷ್ಟ್ರಲ್ಲಿ ರಾಗಿ ಹಿಟ್ಟು ಮಾಡುಸ್ಕಬರಕೆ ಅಂಥ, ದೊಡ್ಡಗೌಡ್ರು ಮನೆ ಗಾಡೀಗೆ ಒಂದು ಮೂವತ್ತು ಸೇರು ರಾಗೀಯಾ ಸಾಯಂಕಾಲ ಹಾಕಸಿದ್ದು ನೆಪ್ಪಾಯ್ತು. ಓ! ಎಂಗೂ... ಕೋಳಿ ಕೂಗೋ ಹೊತ್ತಿಗೆ ಗಾಡಿ ಮಿಲ್ಲಿಗೆ ಹೊರೊಡೋದು. ಇಂಥ ಊರಿಂದ ಹೊರಡೋ ಗಾಡೀಗೆ ಆಚೀಚೆ ಮನೇರೆಲ್ಲಾ ಮಿಲ್ಲು ಮಾಡುಸ್ಕಬರಂಥ ರಾಗಿ, ಬತ್ತ, ವನದಿರೊ ಅಕ್ಕಿ ನುಚ್ಚನ್ನ ಹಾಕಿರೋರು. ಗಾಡಿಲಿ ಹೋದೋರು ಅಸಿಟ್ಟು ಮಾಡುಸ್ಕಂಬಂದು ಇವ್ರಿಗೆ ಕೊಡರು.



ಇವರ ಮನೆ ಗಾಡಿ ಹೋದಾಗ, ಇವರು ಅವರಂಗೆ ಅನುಸರ್ಸೋರು. ಹಿಂಗೆ ಕೊಡುಕೊಳ್ಳು ನೆವದಲ್ಲಿ ಊರು ಸುಖ ಕಾಣದು. ಅಂತೂ ಇಂತೂ ನೀಲಿ ಮಗಿನ ಪಕ್ಕೆಶೂಲೆಗೆ ಒಂದು ಬಿಡುಗಡೆ ದಾರಿ ಈಗ ಕಾಣುಸ್ಕಂತು. ಸಡಗರ ಮಾಡಕಂಡು ದೊಡ್ಡಗೌಡರ ಗಾಡೀತಕೆ ಹೋಗಿ, ಕೆಳಗೆ ಸೇರಿಹೋಗಿದ್ದ ಆ ರಾಗಿಮೂಟೇಯ ಮೇಲಿದ್ದ ದೊಡ್ಡ ದೊಡ್ಡ ಮೂಟೇ ಸಂದಿಂದ ಅದನ್ನ ಈಚೆಗೆ ಎಳ್ಸಿ, ಗೌಡಮ್ಮರು "ಹೊತ್ಕೊ ಓಗೊ ಈರ. ಮೂವತ್ತು ಸೇರು ಅವೆ. ಅಲ್ಲೇ ರುದ್ರೇಶನ ಅಂಗಡೀಗೆ ಕೊಟ್ರೆ ಒಂದು ಮೂವತ್ತು ರೂಪಾಯಿಗೆ ಮೋಸಿಲ್ಲ. ಓಗು ಬಸ್ಸಿನ ಖರ್ಚೂ ಕಳಿತಿತೆ ನಿಮಗೆ" ಅಂತಂದರು.

ಬೀಸೋ ದೊಣ್ಣೆಯಿಂದ ಎಂಗೋ ತಪ್ಪಿಸ್ಕಂದ ಮೂರು ಜನೂವೆ ಉಸುರ ಹೊರಗಡೇಗೆ ಹಾಕದ್ರು. ಅವರ ಜೊತಿಗೆ... ಹೋಗಿ ಅವರ ಗುಡುಸ್ಲು ಬಾಗಲಲ್ಲಿ ನಿಂತು ಮಗ ಉಸ್ರೆಳೆಯದ ನೋಡೀ...

"ಇದು ನಾಟಿ ಔಸ್ತಿಗೆ ಬಗ್ಗದಲ್ಲ. ಮೊದ್ಲು ದೊಡ್ಡಾಸ್ಪತ್ರೆಗೆ ಸೇರ್ಸು ಕರಕಹೋಗಿ. ನೀವು ಇಲ್ಲಿವರ್ಗೂ ಬುಟ್ಟಿದ್ದೇ ತಪ್ಪಾತು. ಮೈ ತುಂಬ ಬೆಚ್ಚಗೆ ಹೊಚ್ಚಕಂದು ಇವತ್ತಿನ ಒಂದು ರಾತ್ರಿಯ ಎಂಗೋ ತುಂಬಿಸಿ ದೇವರಿದಾನೆ" ಅಂತಂದು ರಂಗವ್ವಾರು ಮನೆ ಕಡಿಕೆ ಬಂದ್ರು.

ಒಲೆಮೇಲಿಟ್ಟ ಅನ್ನ ಗಂಜಿ ಸುತ್ತಕತೋ? ಏನೋ? ಅನ್ನಕಂದು, ಅನ್ನ ಬಶಿಯಾಕೆ ಕಲಗಚ್ಚಿನ ಕೂನಿ ಒಲೆ ತೋಡಲ್ಲಿ ಇಟ್ಕಂಡು, ಮಂಡಿ ಮೇಲೆ ಕುಂತರು ರಂಗವ್ವಾರು. ಅನ್ನ ಬಸದು ಕೆಂಡದ ಮೇಲೆ ಪಾತ್ರೆಯ ಜೋರಾಗಿ ಅಳ್ಳಾಡುಸಿ ಇಟ್ಟರು. ಮುಚ್ಚಳ ತೆಗೆದಾಗ ಅಕ್ಕಿ ಅರಳಕೊಂಡು ಅನ್ನ ಹಂಗೆ ಹೂವಾಗಿತ್ತು. ಓಗಾಲೆ ಮೇಲಿನ ಹುರುಳಿ ಸಾರು ತಗ... ಬೆಣ್ಣೆ ಹಾಕಂಡು ಉಣ್ಣಕ್ಕೆ ಎದ್ದು ಬನ್ನಿ ಅನ್ನಕಂದು ಅಡುಗೆ ಕೋಣೆ ಇಂದ ಘಮ್ಮುಗ್ಗಟ್ಟಕೊಂಡು ಕರಿತಿತ್ತು.

ಅಜ್ಜಮ್ಮಾರು ವಚ್ಚಗಣ್ಣಿಂದ ಸೊಸೆ ಕಾರುಬಾರ ನೋಡಕಂದೇ ಮಲಗಿದ್ದವರು ಎದ್ದೋರೆ ಹಿತ್ಲ ಕಡಿಕೆ ಹೋಗಬಂದು ಸೊಸೆಯ ಕರದ್ರು.

"ಬಾ, ನಂಗೆ ಗಂಗಳಕ್ಕೆ ಇಕ್ಕೊಡು. ಬಂದೋರ ಗುಬ್ಬಿ ಪಂಚಾಯಿತಿ ಮುಗ್ದಿತಲ್ಲಾ ಈಗ" ಅಂತ ಸೊಸಿಗೆ ಮರಕುಟಕನಂಗೆ ಒಂದು ಕುಟುಕ ಹಾಕಿ, ಒಲೆ ಮುಂದೆ ಬೆಂಕಿ ಕಾವಿಗೆ ಬಂದು, ಮೈ ಕಾಯಿಸ್ತಾ ಕುಂತಕಂದರು.

ಇವ್ರು, ಅವ್ರ ಹಳೆಚಾಳಿಗೆ ಪುಸುಕ್ಕನೆ ಒಂದು ಹುಸಿನಗೆ ತಂದಕಂದು ಇಕ್ಕೊಡಕ್ಕೆ ಅಂತಲೆ ಅವರ ಕಂಚಿನ ಗಂಗಳವ ನಾಗೋಲೆ ಮೇಲಿಂದ ಕೈಗೆ ಎತ್ತಕಂಡು ಇವ್ರ ಮುಂದೆ ಇಟ್ರು. ಬೆರಣಿ ಬೂದೀಲಿ ಬೆಳಗಿದ್ದ ಆ ಗಂಗಳ ಕನ್ನಡಿಯಂಗೆ ಹೊಳುದು ಇಕ್ಕೊಡಕ್ಕೆ ಬಗ್ಗಿದ್ದ ರಂಗವ್ವರ ಮುಖವ ಅದರಲ್ಲಿ ತೇಲಿ ಬಿಡತು.

"ಇವ್ಳು ಹಿಂಗಿದಳೇ ಅಂತಲೇ ಅಲ್ಲವಾ? ಈ ಮನೆ ಹಿರೇರು ಕಿರೇರು ಮೂರು ವರುಷ ಇವರಪ್ಪನ ಮನೆ ಹೊಸಲು ಕಾದು, ಮಗನ ಹಠಕ್ಕೆ ಬಗ್ಗಿ ಇವ್ಳ ತಂದುಕಂಡಿದ್ದು."

ಹಳೆ ಮಾತ ನೆನಸಕಂತಿದ್ದ ಅತ್ತೆಮ್ಮನ ಮುಂದಕ್ಕೆ ನಗೆಮುಖದಲ್ಲಿ ತಟ್ಟೆ ಇಟ್ರು ರಂಗವ್ವರು.

ಸೊಸೆ ಮೂಗಿನ ನತ್ತು ಒಲೆ ಉರಿಲಿ ಬೆಳಗತಿತ್ತು. ಅದನ್ನೇ ಅತ್ತೆಮ್ಮಾರು ಒಂದು ಗಳಿಗೆ ದಿಟ್ಟಿಸಿ ನೋಡದ್ರು. ತಂಬೂರಿ ಜವರಯ್ಯನ ದನಿ ತೂರಿಬಂದಂಗಾತು.

ಮುತ್ತುಕಂಡೇನವ್ವಾ ತಂಗಿ ನಾನೊಂದ
ಮೂಗಿನಲ್ಲಿರುವುದೇ ನತ್ತೊಂದ
ಒಂದು ವರ್ಣದ ಮುತ್ತು ಓಂ ನಾಮದೊಳಗಿತ್ತು
ಎರಡು ವರ್ಣದ ಮುತ್ತು ಎಡಬಲದೊಳಿತ್ತು
ಮೂರು ವರ್ಣದ ಮುತ್ತು ಮೂಡಲ ಸಾಮಿಗೆ ಗೊತ್ತು
ನಾಕೂ ವರ್ಣದ ಮುತ್ತು ನಾಗೇಶನಲ್ಲಿತ್ತು
ಐದು ವರ್ಣದ ಮುತ್ತು ಐಕ್ಯಸ್ಥಾನದೊಳಿತ್ತು

❑



## ನನ್ನ ನಾಯಿ (ಓದು ಪಠ್ಯ)

– ಪು.ತಿ.ನ.

ಹೆರರ ನೋವಿಗೆ ಅಯ್ಯೊ ಎಂದು
ಮರುಗು ಸುಯ್ಯಲನಿಡಲು ಒಲವೆ?
ಹಿರಿಯ ಸುಖದಿರವೆನ್ನದೆನ್ನುವ
ಅರಿವು ಒಲಿದವಗಿರುವುದೆ?

ಜನುಮದೊಂದಿಗೆ ಜೊತೆಯ ಕೂಡಿ
ಕೊನೆಯವರೆಗೂ ಬೆನ್ನ ಬಿಡದೆ
ಜನುಮದುನ್ನತಿ ಕುಲದ ಹೆಮ್ಮೆಯ
ಕಟ್ಟಕಳೆವುದೆ ಕರುಣೆಯು?

ಕೊಳದ ಕರೆ ಬಳಿ ಅಂದು ಮರುಗಿದೆ
ಸುಳಿದ ನೋವಿನ ಅಳುವ ಕೇಳಿ,
ಬೆಳೆದ ಇರುಳೊಳು ದನಿಯನರಸಿ
ಮನದೊಳಳುಕುತ ನಡೆದೆನು.

ಮುಗಿಲ ಬೆಳ್ಳಿಯ ಪೊರೆಯ ಹೊದೆದು
ಸೊಗಸುಕನಸನು ಕಾಣುವಂದದಿ
ನಗುವ ಚಂದ್ರನ ಬೆಳಕಿನೊಳಗೆ
ಕಂಡೆ ತಬ್ಬಲಿ ಮರಿಯನು.

ತಾಯಿ ಸತ್ತರು ಮೊಲೆಯ ಬಿಡದಾ
ನಾಯ ಮರಿಯ ಗೋಳ ಕಂಡೂ
ಮೈಯ ಮುಟ್ಟಲು ತಡೆದುದಂದು
ಜಾತಿ ಹೆಚ್ಚಿನ ಹೆಮ್ಮೆಯು.

ಕೊರೆವ ಚಳಿಯೊಳು ದಿಕ್ಕುಗಾಣದ
ಮರಿಯ ತೊರೆಯಲು ಮನವು ಬಹುದೆ!
ಕೊರಲೊಳಿಟ್ಟೆನು ಬಳ್ಳಿ ಕುಣಿಕೆಯ
ಮನೆಗೆ ನಡಸಿದೆ ಮೆಲ್ಲನೆ.

ಅಂದು ಮಕ್ಕಳ ಹರುಷ ಮೀರಿತು
ಮುಂದೆ ಕುಣಿದರು ಕೈಯ ತಟ್ಟಿ
ಕಂದನಂದದಿ ಅಂದು ಮೊದಲು
ಮರಿಯ ಸಾಕಿದೆವೆಲ್ಲರು.

ಹಾಲು ಅನ್ನವನುಣಿಸಿ ನಲಿದೆವು
ಮೇಲುತಿಂಡಿಗಳೆಲ್ಲವಿತ್ತೆವು
ಮೈಲಿಗೆಯ ಭಯದಿಂದ ಮೈಯನು
ಮುಟ್ಟಗೊಡಿಸೆವು ಆದರೂ.

ಮರಿಯು ನಮ್ಮ ಬಿಂಕವರಿತು
ಹೊರಗೆ ನಿಲುವುದು ಹೊಸಿಲ ದಾಟದು!
ಹಿರಿಯತನದ ಹೆಮ್ಮೆಗಡಲು
ಹರಿಯಿತೆಮ್ಮಯ ಮಧ್ಯದಿ.

ಆರು ತಿಂಗಳ ಕಳೆದೆವಿಂತು
ಊರೆ ಮೆಚ್ಚಿದ ಮರಿಯನೊಂದು
ಇರುಳೊಳೊಯ್ದನು ಕಳ್ಳನದನು
ಮನೆಯ ಮಕ್ಕಳ ಮುದ್ದನು.

ಎದ್ದು ಹುಡುಗರು ನಾಯ ಕಾಣದೆ
ಬಿದ್ದು ಬೀಳುತಲೋಡಿಬಂದು
'ಕದ್ದರೇನೋ? ಮರಿಯ ಕಾಣೆವು'
ಎಂದು ಕಂಬನಿಗರೆದರು.

ಕೇರಿ ಕೇರಿಗೆ ಜನರನಟ್ಟಿದೆ
ಊರ ಊರನು ತಿರುಗಿ ಕೇಳಿದೆ
ಆರ ಕಂಡರು 'ಮರಿಯ ಕಾಣಿರ'
ಎಂದು ಹುಚ್ಚನ ತೆರೆದೊಳು.

ಮೂರು ದಿನಗಳು ಹುಡುಕಿ ಕೊನೆಗೆ
ಊರ ಮುಂದಿನ ಮನೆಯ ಹೊರಗೆ
ಏರುಬಿಸಿಲೊಳು ಕುರುಬನೆಡೆಯೊಳು
ಕಂಡೆ ಮಲಗಿದ ಕುನ್ನಿಯ.



ಹರುಷ ಮೀರಿತು ಬಾಲವಾಡಿಸಿ
ಗುರುತ ಹಿಡಿಯುತ ನೆಗೆಯೆ ನಾಯಿ
ಕುರುಬಗೌಡನ ಗದರಿ ಕೇಳಿದೆ
'ಕದ್ದೆಯೇತಕೊ ಮರಿಯನು?'

ನಡುಗಿ ಕೈಗಳ ಮುಗಿದು ನಿಂತು
ನುಡಿದನೀ ಪರಿ ಕುರುಬಗೌಡನು
'ಒಡೆಯ, ಮರಿಯನು ಕದಿಯಲಿಲ್ಲವು
ಹಿಂದೆ ಬಂದಿತು ಕರೆಯದೆ.

ಅಂದು ಊರೊಳಗಿರುಳ ತಂಗಿ
ಮುಂದೆ ಪಯಣವ ಬೆಳೆಸಲೆಂದು
ಮಂದಿ ಮಲಗಿದ ಹೊತ್ತಿನಲ್ಲಿ
ನಿಮ್ಮ ಜಗಲಿಗೆ ಬಂದೆನು.

ಮರಿಯು ಬಗುಳುತ ಅಡ್ಡಗಟ್ಟಲು
ತೆರೆದು ಬುತ್ತಿಯ ರೊಟ್ಟಿಯಿಟ್ಟೆನು
ಹರುಷದಿಂದಲಿ ತಲೆಯ ತಟ್ಟಿ
ಮೈಯ ತಡಹಿದೆ ನಾಯಿಯ!

ಚಳಿಗೆ ನಡುಗಲು ಮರುಕದಿಂದ
ಕೆಳಗೆ ಕಂಬಳಿ ಹಾಸಿ ಜೊತೆಯೊಳು
ಚೆಲುವು ಮರಿಗೂ ತಾಣವಿತ್ತೆನು
ಒಲುಮೆ ಬೆಸೆಯಿತು ಇಬ್ಬರ.

ಮೂಡ ಬೆಳಗಲು ಹೊರಟೆನಂದು
ಓಡಿ ಹಿಂದೆಯೆ ಬರಲು ಮರಿಯು
ಕೂಡಲಪ್ಪುತ ಮುತ್ತನಿಟ್ಟು
ಕರೆದು ತಂದೆನು ಊರಿಗೆ.

ಬಂಧುಬಳಗಗಳಿಲ್ಲವೆನಗೆ
ಕಂದನೀ ಮರಿ – ಕಳೆಯಲಾರೆ'
ಎಂದ ಗೌಡನ ಕಣ್ಣು ಹನಿತುದು
ಮರಿಯ ಹಗ್ಗವ ಹಿಡಿಯಲು.

ಹಗ್ಗವೇಳೆದೆನು: ಕುನ್ನಿ ಬಾರದು
ಸಗ್ಗದೆನ್ನಯ ಸವಿಯ ನುಡಿಗೆ.
ಹಗ್ಗ ಸಡಿಲಿಸಿ ಬಿಟ್ಟೆನದನು
ಕುರುಬ ತಬ್ಬಿದ ಸೊಣಗನ!

ವರುಷ ನೂರರ ಕರುಣೆ ಬಿಗಿವುದೆ
ಕುರುಬನಿರುಳೊಳು ಬಿಗಿದ ಕಟ್ಟ!
ಮರಿಯ ನಡತೆಗೆ ಕೋಪಗೊಳ್ವುದೆ?
ಕರುಣೆ ಒಲುಮೆಗೆ ಸಾಟಿಯೆ?

ಒಲಿದರಿರವಿನ ಬಗೆಗಳೆರಡೆ?
ಒಲುಮೆಗಡ್ಡಲೆ ಕುಲದ ಹೆಮ್ಮೆ?
ಒಲುಮೆಬೆಸುಗೆಯ ಸುಖದ ಸವಿಯನು
ತಿಳಿಯದೇ ಬಡಜಂತುವು!

ಕಣ್ಣ ನೀರೊಳು ತೊಳೆದೆನಂದು
ಜನ್ಮದುನ್ನತಿ ಹೆಮ್ಮೆ ಕೊಳೆಯ
ನನ್ನ ಒಲುಮೆಗೆ ಅಡ್ಡ ಬಂದ
ಕರುಣೆ ಹಾಯದ ಬಿಂಕವ.

❑



# II. ಶಿಕ್ಷಣ

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ.
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ ಮಹಾಪ್ರಸಾದವೆಂದೆನಯ್ಯಾ,
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

ಶಿಕ್ಷಣವನ್ನು ಕುರಿತು ಮಹಾನುಭಾವಿ ಅಲ್ಲಮಪ್ರಭುದೇವರು ಈ ಮೇಲಿನ ವಚನದಲ್ಲಿ ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯವು ಉತ್ತಮೋತ್ತವಾಗಿದೆಯೆಂದು ಮಾರ್ಮಿಕವಾಗಿ ಹೇಳಿದ್ದಾರೆ. ಕಾಲ ಬದಲಾದಂತೆ ಶಿಕ್ಷಣದಲ್ಲಿ ಬೋಧನೆ, ಅಧ್ಯಯನ ಕ್ರಮಗಳು ಬದಲಾಗಿವೆ. ಗುರುಕುಲ ಪದ್ಧತಿಯಿಂದ ಇಲ್ಲಿಯವರೆಗೂ ಶಿಕ್ಷಣದಲ್ಲಿ ಹಲವಾರು ಸುಧಾರಣೆಗಳನ್ನು ತರಲಾಗಿದೆ. ಬ್ರಿಟೀಷರ ಆಡಳಿತದಲ್ಲಿ ಜಾರಿಗೆ ಬಂದ ಮೆಕಾಲೆ ಶಿಕ್ಷಣ ಪದ್ಧತಿಯು ಕ್ರಾಂತಿಕಾರಕವಾದ ಸುಧಾರಣೆಯನ್ನು ತಂದಿದೆ. ಸರ್ವರಿಗೂ ಶಿಕ್ಷಣವನ್ನು ನೀಡಬೇಕೆಂದು ಸರ್ಕಾರವು ಧನವನ್ನು ವಿನಿಯೋಗಪಡಿಸಿದೆ. ಸ್ವಾತಂತ್ರ್ಯಾನಂತರದಲ್ಲಿ ಸಾಕ್ಷರತಾ ಪ್ರಮಾಣವೂ ಹೆಚ್ಚಾಗಿದೆ. ಮಾನವಿಕ, ವಿಜ್ಞಾನ – ತಂತ್ರಜ್ಞಾನದಲ್ಲಿ ದೇಶದಲ್ಲಿ ಸಹಸ್ರಾರು ವಿಶ್ವವಿದ್ಯಾಲಯಗಳು ತಲೆಎತ್ತಿವೆ.

ವಿದ್ಯಾರ್ಥಿಯ ಸಮಗ್ರ ವಿಕಸನವು ಶಿಕ್ಷಣದ ಗುರಿಯಾಗಿದೆ. ಆದರಿಂದು ಉದ್ಯೋಗವನ್ನು ಪಡೆಯುವುದಷ್ಟೇ ಶಿಕ್ಷಣದ ಗುರಿಯೆಂದು ಭಾವಿಸಲಾಗಿದೆ. ಬದುಕಿಗೆ ಉದ್ಯೋಗ ಮುಖ್ಯವಾದರೂ ಇದೊಂದೇ ಅಂತಿಮವಲ್ಲ. ಉತ್ತಮವಾದ ವಜ್ರಸದೃಶವಾದ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವುದು, ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು ಮತ್ತು ಸದ್ಬಳಕೆ ಮಾಡುವುದು ಶಿಕ್ಷಣದ ಜವಾಬ್ದಾರಿಯಾಗಿದೆ. ಶಾಲಾಮುಖೇನ ಪಡೆದುದಷ್ಟೇ ಶಿಕ್ಷಣವಲ್ಲ, ಬದುಕಿನ ಅನಂತ ವಿಸ್ತರಣೆಯೆಲ್ಲವೂ ಶಿಕ್ಷಣವೇ ಆಗಿದೆ. “ವರ್ಣ ಮಾತ್ರಂ ಕಲಿಸಿದಾತಂ ಗುರು” ಎಂಬಂತೆ ನಾಲ್ಕು ಗೋಡೆಯ ಮಧ್ಯೆಯಲ್ಲದೆ ಅದರಾಚೆಗೂ ಅರಿವನ್ನು ವಿಸ್ತರಿಸಿದವರೆಲ್ಲರೂ ಗುರುವೇ. ಇತ್ತೀಚೆಗೆ ಗೂಗಲ್ ಗುರು ಎಂಬ ಪದವನ್ನು ನಾವು ಕೇಳುತ್ತಿದ್ದೇವೆ. ಸಾಕ್ಷರರು ಮತ್ತು ನಿರಕ್ಷರಕುಕ್ಷಿಗಳ ನಡುವೆ ಕಂದರ ಹೆಚ್ಚಾಗಿ ತಾರತಮ್ಯವೇರ್ಪಡುತ್ತಿರುವುದು ಸರ್ವದಾ ಸರಿಯಲ್ಲ. ಅಕ್ಷರಜ್ಞಾನವು ಮಾನವೀಯತೆಯನ್ನು ಒಳಗುಮಾಡಬೇಕು. ಮನಸ್ಸಿನ ಅಜ್ಞಾನ ಕಳೆದು ಅರಿವಿನ ಬೆಳಕು ವಿಸ್ತರಣೆಯಾಗಬೇಕು. ಮಹಾತ್ಮ ಗಾಂಧೀಜಿಯವರು ಹೇಳಿದ ಸಪ್ತಪಾತಕಗಳಿಂದ ದೂರವಾಗಿ ಅರಿವಿನ, ಆನಂದದ ಬೆಳಕು ನಂದಾದೀವಿಗೆಯಾದಾಗ ಶಿಕ್ಷಣಕ್ಕೆ ಮಹತ್ತ್ವ ಬರುತ್ತದೆ. ಈ ನಿಟ್ಟಿನಲ್ಲಿ ಸಮಗ್ರ ವ್ಯಕ್ತಿತ್ವ ವಿಕಸನದ ಶಿಕ್ಷಣ ಎಲ್ಲರಿಗೂ ದೊರೆಯುವಂತಾಗಲಿ.

# ಯಾವುದು ವಿಮೋಚನೆಯನ್ನು ತಂದುಕೊಡುತ್ತದೋ ಅದೇ ಶಿಕ್ಷಣ

– ಓಶೋ

(ಕನ್ನಡಕ್ಕೆ : ಬಿ.ಎಸ್. ಜಯಪ್ರಕಾಶ್ ನಾರಾಯಣ)

ಸಾ ವಿದ್ಯಾ ಯಾ ವಿಮುಕ್ತಯೇ! ಅಂದರೆ, ಯಾವುದು ನಿಮಗೆ ನಿಮ್ಮ ಸಂಕೋಲೆಗಳಿಂದ ವಿಮೋಚನೆಯನ್ನು ದೊರಕಿಸಿ ಕೊಡುತ್ತದೋ ಅದೇ ನಿಜವಾದ ವಿದ್ಯೆ.

ಇಂದಿನ ಈ ಬೆಳಗಿನಲ್ಲಿ ನಾನು ಈ ವಿಚಾರವನ್ನು ಕುರಿತು ನಿಮ್ಮೊಂದಿಗೆ ಕೆಲವು ಮಾತುಗಳನ್ನಾಡಲು ನಾನು ಇಷ್ಟಪಡುತ್ತೇನೆ. 'ಸಾ ವಿದ್ಯಾ ಯಾ ವಿಮುಕ್ತಯೇ' ಎನ್ನುವ ಆರ್ಯೋಕ್ತಿಯು ನಿಜಕ್ಕೂ ಒಂದು ಅದ್ಭುತವಾದ ಮಾತು. ಶಿಕ್ಷಣ ಅಥವಾ ವಿದ್ಯೆಯನ್ನು ಕುರಿತು ಇದಕ್ಕಿಂತ ಹೆಚ್ಚು ಸ್ವೋಪಜ್ಞವಾದ ವ್ಯಾಖ್ಯಾನ ಮತ್ತೊಂದಿಲ್ಲ. ಇದು ವಿದ್ಯೆಯನ್ನು ಕುರಿತ ವ್ಯಾಖ್ಯಾನವೂ ಹೌದು; ಹಾಗೆಯೇ ಶಿಕ್ಷಣದ ಮಾನದಂಡವನ್ನು ಕುರಿತ ಅತ್ಯುತ್ತಮ ಭಾಷ್ಯವೂ ಅಹುದು. ಆದರೆ, ಪರಿಸ್ಥಿತಿಯ ಅಥವಾ ಸಂದರ್ಭದ ಇನ್ನೊಂದು ಮಗ್ಗುಲು ನಿಮಗೆ ಗೊತ್ತಿಲ್ಲದೆ ಇರಬಹುದು. ನಿಜ ಹೇಳಬೇಕೆಂದರೆ, ನಾವ್ಯಾರೂ ವಿಮೋಚನೆಯನ್ನು ಪಡೆದುಕೊಂಡಿಲ್ಲ. ನಾವೆಲ್ಲರೂ ಇದುವರೆಗೆ ಏನೇನನ್ನು ಕಲಿತಿದ್ದೇವೋ ಅದ್ಯಾವುದೂ ನಿಜವಾದ ಜ್ಞಾನವಲ್ಲ; ಅವೆಲ್ಲ ಹುಸಿ ತಿಳಿವಳಿಕೆಗಳು. ನಿಜವಾದ ಅರ್ಥದ ವಿಮೋಚನೆ ಅಥವಾ ಬಿಡುಗಡೆ ಅಥವಾ ಬಂಧಮುಕ್ತಿ ಎಂದರೇನೆಂದು ನಮಗೆ ತಿಳಿದಿಲ್ಲ. ಆದ್ದರಿಂದ ನಮಗೆ ವಿದ್ಯೆಯನ್ನು ಕಲಿಸುವ ಶಾಲೆಗಳು ಮೊದಲಿಗೆ ಅಶಾಲೆಗಳಾಗಬೇಕು. ಅಂದರೆ, ಅವು ಈಗಿರುವ ಸಾಂಸ್ಥಿಕ, ಅರ್ಥಹೀನ ಮತ್ತು ವಿನಾಶಕಾರಿಯಾದ ಚಹರೆಗಳನ್ನು ಕಳೆದುಕೊಳ್ಳಬೇಕು. ಏಕೆಂದರೆ, ಯಾವುದು ನಮ್ಮ ಜೀವನದಲ್ಲಿ ಬಿಡುಗಡೆಯ ಆನಂದಕ್ಕೆ ದಾರಿ ಮಾಡಿಕೊಡುತ್ತದೋ ಅದೇ ನಿಜವಾದ ಶಿಕ್ಷಣವಾಗಿದೆ. ಹೀಗಾಗಿ, ಈಗ ಎಲ್ಲೆಲ್ಲೂ ತಲೆಯೆತ್ತಿರುವ ಶಾಲೆಗಳು ಅನಗತ್ಯವಾಗಿವೆ.

ನಾವು ಶಾಲೆಕಾಲೇಜುಗಳಿಗೆ ಹೋಗಿ ಹತ್ತಾರು ಸಂಗತಿಗಳನ್ನು ಕಲಿಯುತ್ತೇವೆ. ಆದರೆ ಅದು ನಮಗೆ ಆನಂದವನ್ನೇ ಕೊಡುತ್ತಿಲ್ಲವೆಂದರೆ ಅದನ್ನೇನೆಂದು ಕರೆಯಬೇಕು? ಇಡೀ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಜ್ಞಾನವು ದಿನದಿಂದ ದಿನಕ್ಕೆ ಹೆಚ್ಚುತ್ತಿರುವಂತೆ ಭಾಸವಾಗುತ್ತಿದೆ; ಮೂಲೆಮೂಲೆಗಳಲ್ಲೂ ಶಾಲಾಕಾಲೇಜುಗಳು, ವಿಶ್ವವಿದ್ಯಾಲಯಗಳು ಪ್ರತ್ಯಕ್ಷವಾಗುತ್ತಿವೆ. ಆದರೆ, ಇವುಗಳಿಗೆ ಹೋಗಿ ಕಲಿಯುತ್ತಿರುವ ಮನುಷ್ಯ ಮಾತ್ರ ಇನ್ನೂ ಬಿಡುಗಡೆಯನ್ನು ಕಂಡಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಮನುಷ್ಯನು ದಿನದಿಂದ ದಿನಕ್ಕೆ ಮೊದಲಿಗಿಂತಲೂ ಹೆಚ್ಚುಹೆಚ್ಚು ಬಂಧಿತನಾಗುತ್ತಿದ್ದಾನೆ; ಸಂಕೋಲೆಗಳಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಿದ್ದಾನೆ; ತನಗೆ ಇಷ್ಟವಿಲ್ಲದ ಪರಿಸ್ಥಿತಿಗಳಿಗೆ ಒಗ್ಗಿಕೊಳ್ಳುತ್ತಿದ್ದಾನೆ; ಕ್ಷಣಕ್ಷಣಕ್ಕೂ ಅವನು ಅಧೋಮುಖಿಯಾಗುತ್ತಿದ್ದಾನೆ.



ಅಂದಮೇಲೆ, ಶಿಕ್ಷಣದ ಹೆಸರಿನಲ್ಲಿ ನಾವೆಲ್ಲರೂ ಸೇರಿಕೊಂಡು ಏನೋ ಮೂಲಭೂತವಾದ ತಪ್ಪನ್ನು ಮಾಡುತ್ತಿರಬೇಕಲ್ಲವೇ? ಹಾಗಾದರೆ, ದಿನದಿಂದ ದಿನಕ್ಕೆ ವ್ಯಾಪಕವಾಗುತ್ತಿರುವಂತೆ ಕಾಣುತ್ತಿರುವ ಜ್ಞಾನವು ಹುಸಿಜ್ಞಾನವೇ? ಹೌದು, ಇದೆಲ್ಲವೂ ಹುಸಿಜ್ಞಾನ ಎಂದು ನಾನು ನಿಮಗೆ ಹೇಳಬಯಸುತ್ತೇನೆ. ಈ ಬಗ್ಗೆ ಯಾವ ಅನುಮಾನವೂ ಇಲ್ಲ. ಜ್ಞಾನದ ಹೆಸರನ್ನು ಹೇಳುತ್ತಲೇ ನಾವು ಇಡೀ ಜಗತ್ತಿನಲ್ಲಿ ಹುಸಿಜ್ಞಾನವನ್ನು ಹರಡುತ್ತಿದ್ದೇವೆ ಎನ್ನುವುದು ನನ್ನ ಖಚಿತ ಅಭಿಪ್ರಾಯವಾಗಿದೆ. ಏಕೆಂದರೆ, ನಾವು ಇದುವರೆಗೂ ಪಡೆದುಕೊಂಡು ಬಂದಿರುವ ಜ್ಞಾನದಿಂದ ನಮ್ಮ ಆತ್ಮಗಳು ನಿಜವಾದ ಅರ್ಥದ ಯಾವ ಬಿಡುಗಡೆಯನ್ನೂ ಪಡೆದುಕೊಂಡಿಲ್ಲ. ಬದಲಿಗೆ ಇದು ಮನುಷ್ಯನನ್ನು ಹಿಂದೆಂದಿಗಿಂತ ಹೆಚ್ಚು ಬಂಧಿತನನ್ನಾಗಿ ಮಾಡಿದ್ದು, ಗುಲಾಮರನ್ನಾಗಿ ಮಾಡಿಹಾಕಿದೆ. ನಮಗೆ ನಿಜವಾದ ವಿದ್ಯೆಯು ಸಿಕ್ಕಿದ್ದೇ ನಿಜವಾಗಿದ್ದರೆ ನಮ್ಮೆಲ್ಲರ ಪ್ರಜ್ಞೆಯು ಗಗನಗಾಮಿಯಾಗಿ ಔನ್ನತ್ಯದ ಶಿಖರವನ್ನೇರಬೇಕಾಗಿತ್ತು. ಆದರೆ, ಅದು ದಿನದಿಂದ ದಿನಕ್ಕೆ ಪಾತಾಳಮುಖಿಯಾಗುತ್ತಿದೆ. ಹಾಗೆಯೇ, ನಮ್ಮ ಬದುಕು ದಿವ್ಯತ್ವದ ಕಡೆಗೆ ಹೋಗಬೇಕಾಗಿತ್ತು; ವಾಸ್ತವವಾಗಿ ಅದು ಹೆಚ್ಚುಹೆಚ್ಚು ಹಿಮ್ಮುಖವಾಗುತ್ತಿದ್ದು ಮೃಗೀಯವಾಗುತ್ತಿದೆ.

ಮನುಷ್ಯರು ಇಂತಹ ಶಿಕ್ಷಣವನ್ನು ಪಡೆಯುತ್ತಿರುವಾಗ ಅವರನ್ನು ಶಿಕ್ಷಿತರು ಎಂದು ಕರೆಯಲಾದೀತೇ? ದುರಂತವೆಂದರೆ, ನಾವು ಮನುಷ್ಯನನ್ನು ದಿಕ್ಕೆಡಿಸುವ ಇಂತಹ ಹುಸಿ ಶಿಕ್ಷಣವನ್ನೇ ಎಲ್ಲೆಡೆಯೂ ಪಸರಿಸಲು ಒಂದೇ ಸಮನೆ ಶ್ರಮಿಸುತ್ತಿದ್ದೇವೆ. ಸಜ್ಜನರೆಂದು ಕರೆಸಿಕೊಂಡಿರುವವರಂತೂ ಶಾಲೆ, ಕಾಲೇಜು ಮತ್ತು ಹಾಸ್ಟೆಲ್ಲುಗಳ ಸಂಖ್ಯೆಯನ್ನು ಹೆಚ್ಚಿಸಲು ದೊಡ್ಡ ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾರೆ. ಹೀಗೆ ಮಾಡಿದರೆ ಸಾಕು, ಸುತ್ತಲಿನ ಜನರೆಲ್ಲ ವಿದ್ಯಾವಂತರಾಗಿ ಬಿಡುತ್ತಾರೆ ಎನ್ನುವುದು ಈ ಸಭ್ಯರ ನಂಬಿಕೆಯಾಗಿದೆ. ಆದರೆ, ಮನುಕುಲದ ಕಳೆದ ಎರಡು ಸಾವಿರ ವರ್ಷಗಳ ಅನುಭವವು ಬೇರೆ ಕತೆಯನ್ನೇ ಹೇಳುತ್ತಿದೆ.

ನಮ್ಮಲ್ಲಿ ಒಂದು ಕಡೆ ಜ್ಞಾನವು ಹಿಗ್ಗುತ್ತಿದೆ; ಇನ್ನೊಂದೆಡೆ, ಈ ಶಿಕ್ಷಣವನ್ನು ಪಡೆದುಕೊಂಡು ಬರುತ್ತಿರುವ ವ್ಯಕ್ತಿಗಳ ಸ್ಥಿತಿಗತಿ ಕಳವಳಕಾರಿಯಾಗಿದೆ. ಒಂದೆಡೆ, ಶಿಕ್ಷಣದ ವ್ಯಾಪ್ತಿ ದೊಡ್ಡದಾಗುತ್ತಿದೆ; ಆದರೆ, ಜೀವನದ ಗುಣಮಟ್ಟ ಕುಸಿಯುತ್ತಿದೆ. ಇತ್ತ ಮನುಷ್ಯನ ಬೌದ್ಧಿಕ ಮಟ್ಟ ಹೆಚ್ಚುತ್ತಿದೆ; ಅತ್ತ ಮನುಷ್ಯನ ಆತ್ಮವು ಪತನಗೊಳ್ಳುತ್ತಿದೆ. ಅಂದರೆ, ಮೂಲಭೂತವಾಗಿ ಏನೋ ಎಡವಟ್ಟಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಇದರ ಅರ್ಥವೇನೆಂದರೆ, ಎರಡು ಸಾವಿರ ವರ್ಷಗಳಿಂದಲೂ ನಾವು ಸಾಗಿಕೊಂಡು ಬಂದಿರುವ ದಿಕ್ಕೇ ಸರಿಯಾಗಿಲ್ಲ. ಅಂದರೆ, ಆರಂಭದಲ್ಲೇ ಈ ಅನಾಹುತ ಘಟಿಸಿಬಿಟ್ಟಿದೆ. ಹೀಗಾಗಿ, ನಾವು ಯಾವ ದಿಕ್ಕಿನಲ್ಲಿ ಮುಂದಡಿ ಇಟ್ಟರೂ ನಮಗೆ ನಿಜವಾದ ಆನಂದ ಮಾತ್ರ ಸಿಕ್ಕುತ್ತಿಲ್ಲ.

ಜಗತ್ತಿನ ಇತಿಹಾಸದಲ್ಲಿ ಹಿಂದೆಂದೂ ಇಲ್ಲದಿದ್ದಷ್ಟು ಶೈಕ್ಷಣಿಕ ವ್ಯವಸ್ಥೆ, ಕಲಿಕೆಯ ಕ್ರಮಗಳು ಮತ್ತು ವಿಶ್ವವಿದ್ಯಾಲಯಗಳು ಇಂದು ತಲೆಯೆತ್ತಿವೆ, ನಿಜ. ಆದರೆ, ನಮ್ಮೆದುರಿಗಿನ ಕಠೋರ ವಾಸ್ತವವೇನೆಂದರೆ ಮನುಕುಲವು ಕೂಡ ಹಿಂದೆಂದೂ ಇಲ್ಲದಂತಹ ಸಂಕೋಲೆಗಳಲ್ಲಿ ಬಂಧಿತವಾಗಿದ್ದು, ನೋವಿನಿಂದ ವಿಲವಿಲನೆ ಒದ್ದಾಡುತ್ತಿದೆ; ಶಾಂತಿಯನ್ನು ಕಳೆದುಕೊಂಡಿದೆ. ಪ್ರಸ್ತುತ ನಮ್ಮಲ್ಲಿರುವ ಶಿಕ್ಷಣ ವ್ಯವಸ್ಥೆಯು ಮನುಷ್ಯನ ಬದುಕನ್ನು ಹಾಳು ಮಾಡಿದೆ. ನಾವು ಅಪಾರ ಭರವಸೆ ಮತ್ತು ಸದುದ್ದೇಶದೊಂದಿಗೆ ನಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದೇವೆ. ನಮ್ಮ ಮಕ್ಕಳ ಬೆಳವಣಿಗೆಯ ಬಗ್ಗೆ ನಾವೆಲ್ಲರೂ ದೊಡ್ಡದೊಡ್ಡ ಕನಸುಗಳು ಮತ್ತು ಮಹದಾಸೆಗಳನ್ನು ಹೊತ್ತಿರುತ್ತೇವೆ. ಆದರೆ, ಶಾಲಾಕಾಲೇಜುಗಳಿಗೆ, ಯೂನಿವರ್ಸಿಟಿಗಳಿಗೆ ಹೋಗಿ ವಿದ್ಯೆಯನ್ನು ಕಲಿಯುವ ಮಕ್ಕಳು ಕೊನೆಗೆ ಪತನವಾಗುತ್ತಿದ್ದಾರೆ. ಇವೆಲ್ಲ ನಮ್ಮ ಕಣ್ಣೆದುರೇ ನಡೆಯುತ್ತಿದೆ. ಇಷ್ಟಾದರೂ ನಾವು ಅದೇ ಬಗೆಯ ಶಿಕ್ಷಣವನ್ನು ಇನ್ನಷ್ಟು ಹೆಚ್ಚು ಮಾಡುತ್ತಿದ್ದೇವೆ; ಅದದೇ ಹಳಸಲು ಮಾದರಿಯ ಶಾಲಾಕಾಲೇಜುಗಳನ್ನು ಮತ್ತು ಹಾಸ್ಟೆಲ್ಲುಗಳನ್ನು ಕಟ್ಟುತ್ತ ಹೋಗುತ್ತಿದ್ದೇವೆ. ಈ ಜಗತ್ತಿನಲ್ಲಿ ಮನುಷ್ಯರಿಗಿಂತ ಹೆಚ್ಚಿನ ಗಾವಿಲರಿರಬಹುದು ಎನ್ನುವುದನ್ನು ಊಹಿಸಿಕೊಳ್ಳಲು ಕೂಡ ನನಗೆ ಸಾಧ್ಯವಿಲ್ಲ. ಮನುಷ್ಯನು ತನ್ನ ಹಿಂದಿನ ಅನುಭವಗಳಿಂದ ಒಂದೇಒಂದು ಪಾಠವನ್ನೂ ಕಲಿತಿಲ್ಲ ಎನ್ನುವುದೇ ನಿಜವಾದ ದುರಂತ.

ನನಗಿಲ್ಲಿ ಬುದ್ಧನಿಗೆ ಸಂಬಂಧಿಸಿದ ಒಂದು ಸಣ್ಣ ಘಟನೆ ನೆನಪಾಗುತ್ತಿದೆ. ಅದೇನೆಂದರೆ, ಬುದ್ಧ ಒಂದು ದಿನ ಒಂದು ಪಟ್ಟಣಕ್ಕೆ ಬಂದ. ಅಲ್ಲಿ ಸುದಾಸನೆಂಬ ಒಬ್ಬ ಚಮ್ಮಾರನಿದ್ದ; ಅವನೋ ಕಡುಬಡವ. ಈ ಸುದಾಸ ಅವತ್ತು ಬೆಳಿಗ್ಗೆ ಮಾಮೂಲಿನಂತೆ ಎದ್ದು, ತನ್ನ ಗುಡಿಸಲಿನ ಹಿಂಭಾಗದಲ್ಲಿದ್ದ ಕೊಳಕ್ಕೆ ಹೋದ. ಅಲ್ಲಿ ನೋಡಿದರೆ, ಒಂದು ತಾವರೆ ಹೂವು ದೊಡ್ಡದಾಗಿ ಅರಳಿತ್ತು. ಆದರೆ, ಅದು ನಿಜಕ್ಕೂ ತಾವರೆ ಹೂವಿನ ಋತುವಾಗಿರಲಿಲ್ಲ. ಅಂದರೆ, ಆ ತಾವರೆ ಹೂವು ಅಕಾಲಿಕವಾಗಿ –ಕಾಲವಲ್ಲದ ಕಾಲದಲ್ಲಿ– ಅರಳಿತ್ತು. ಇದನ್ನು ಕಂಡ ಸುದಾಸನಿಗೆ "ಆಹಾ, ಈ ಹೂವು ಅಕಾಲಿಕವಾಗಿ ಅರಳಿದೆ. ಇದನ್ನು ಕಿತ್ತುಕೊಂಡು ನಾನು ಸಂತೆಗೆ ಹೋದರೆ ಯಾರಾದರೂ ಇದನ್ನು ಒಂದು ರೂಪಾಯಿ ಕೊಟ್ಟು ಖರೀದಿಸಬಹುದು," ಅನಿಸಿತು. ಹೀಗೆಂದುಕೊಂಡವನೇ ಅವನು ಆ ಹೂವನ್ನು ಕಿತ್ತುಕೊಂಡು, "ನನಗೇನಾದರೂ ಇವತ್ತು ಒಂದು ರೂಪಾಯಿ ಸಿಕ್ಕಿದರೆ ನಿಜಕ್ಕೂ ನಾನು ಪುಣ್ಯವಂತ," ಎಂದುಕೊಂಡು ಸಂತೆಯತ್ತ ಹೆಜ್ಜೆ ಹಾಕತೊಡಗಿದ.

ಅವನು ಹೀಗೆ ಹೋಗುತ್ತಿದ್ದಾಗ, ದಾರಿಯ ಮಧ್ಯೆ ಆ ಪೇಟೆಯ ಅತ್ಯಂತ ದೊಡ್ಡ ಶ್ರೀಮಂತನ ರಥ ಅಲ್ಲೇ ಹಾದು ಹೋಗುತ್ತಿರುವುದು ಕಣ್ಣಿಗೆ ಬಿತ್ತು. ರಥದೊಳಗಿದ್ದ ಶ್ರೀಮಂತನಿಗೂ ಸುದಾಸನ ಕೈಯಲ್ಲಿದ್ದ ತಾವರೆ ಹೂವು ಕಾಣಿಸಿತು. ಕೂಡಲೇ ಅವನು 'ಏನೋ ಸುದಾಸ, ಎಷ್ಟಕ್ಕೆ ಕೊಡ್ತೀಯೋ ಈ ಹೂವನ್ನ?' ಎಂದ. ಆದರೆ



ಸುದಾಸ ತನ್ನ ಮನಸ್ಸಿನಲ್ಲಿದ್ದ ಒಂದು ರೂಪಾಯಿಯ ಬೆಲೆಯನ್ನು ಅವನಿಗೆ ಹೇಳಲಿಲ್ಲ ಬದಲಿಗೆ 'ಧಣಿಗಳೇ, ಇದೊಂದು ಅಪರೂಪದ ತಾವರೆ ಹೂವು. ಏಕೆಂದರೆ, ಕಾಲವಲ್ಲದ ಕಾಲದಲ್ಲಿ ಇದು ಅರಳಿದೆ. ಆದ್ದರಿಂದ ನಿಮಗೆ ಎಷ್ಟು ಕೊಡಬೇಕೆನಿಸುತ್ತದೋ ಅಷ್ಟು ಕೊಡಿ, ನಾನೇನೂ ಇದಕ್ಕೆ ಬೆಲೆ ಕಟ್ಟುವುದಿಲ್ಲ,' ಎಂದ. ಕೂಡಲೇ ಆ ಶ್ರೀಮಂತನು 'ಸರಿ, ನಾನು ಇದಕ್ಕೆ ಐದುನೂರು ಚಿನ್ನದ ನಾಣ್ಯಗಳನ್ನು ಕೊಡಲಿದ್ದೇನೆ. ಬೇರೆ ಯಾರಿಗೂ ಇದನ್ನು ನೀನು ಮಾರಬೇಡ,' ಎಂದ.

ಶ್ರೀಮಂತನು ಈ ಮಾತುಗಳನ್ನಾಡುತ್ತಿರುವಾಗ, ಅಲ್ಲಿಯ ರಾಜನ ದಂಡನಾಯಕನು ಅದೇ ಮಾರ್ಗವಾಗಿ ಕುದುರೆ ಸವಾರಿ ಹೋಗುತ್ತಿದ್ದ. ಕುದುರೆಯನ್ನು ನಿಲ್ಲಿಸಿದ ಅವನು, 'ಹೇ ಸುದಾಸ, ನಾನು ಆ ಶ್ರೀಮಂತನಿಗಿಂತ ಹತ್ತು ಪಟ್ಟು ಹೆಚ್ಚು ಕೊಡ್ತೀನಿ. ಈ ಹೂವು ಮಾತ್ರ ನನಗೇ ಬೇಕು, ಗೊತ್ತಾಯ್ತ?' ಎಂದ.

ಆದ ಸುದಾಸನು 'ನಿಮಗೇನಾದರೂ ಹುಚ್ಚುಗಿಚ್ಚು ಹಿಡಿದಿದೆಯ?' ಎಂದ. ಏಕೆಂದರೆ, ಶ್ರೀಮಂತನು ಯಃಕಶ್ಚಿತ್ ಒಂದು ಹೂವಿಗೆ ಐನೂರು ಚಿನ್ನದ ನಾಣ್ಯ ಕೊಡುತ್ತೀನಿ ಎಂದರೆ, ಈ ದಂಡನಾಯಕ ಅದಕ್ಕಿಂತ ಹತ್ತು ಪಟ್ಟು ಹೆಚ್ಚು ದುಡ್ಡು ಕೊಡುತ್ತೀನೆ ಎನ್ನುತ್ತಿದ್ದ. ಇಷ್ಟರ ಮಧ್ಯೆ, ಅದೇ ಹಾದಿಯಲ್ಲಿ ರಾಜನ ರಥ ಬಂತು. ಅವನು ರಥವನ್ನು ನಿಲ್ಲಿಸಿ, 'ನಾನು ಈ ಹೂವನ್ನು ಖರೀದಿಸುತ್ತಿದ್ದೇನೆ. ಇದಕ್ಕೆ ನಾನು ನಮ್ಮ ದಂಡನಾಯಕನು ಕೊಡಲು ಮನಸ್ಸು ಮಾಡಿರುವುದಕ್ಕಿಂತ ಇನ್ನೂ ಹತ್ತು ಪಟ್ಟು ಹೆಚ್ಚು ದುಡ್ಡನ್ನು ಕೊಡಲಿದ್ದೇನೆ,' ಎಂದ.

ಈ ಮಾತನ್ನು ಕೇಳಿ ಸುದಾಸ ಅಚ್ಚರಿಗೊಂಡು, 'ನಿಜಕ್ಕೂ ಇವರಿಗೆಲ್ಲ ಏನಾಗಿದೆ!' ಎಂದುಕೊಂಡ. ಬಳಿಕ ಅವನು 'ನೋಡಿ, ನಾನು ಈ ಹೂವಿಗೆ ಕೇವಲ ಒಂದೇಒಂದು ರೂಪಾಯಿಯನ್ನೂ ನಿರೀಕ್ಷಿಸಿರಲಿಲ್ಲ. ಆದರೆ ನೀವೆಲ್ಲ ಏಕೆ ಇಷ್ಟೊಂದು ಭಾರೀ ದುಡ್ಡು ಕೊಡಲು ಪೈಪೋಟಿ ನಡೆಸುತ್ತಿದ್ದೀರ? ಇದಕ್ಕೆಲ್ಲ ಏನು ಕಾರಣ?' ಎಂದ.'

ಆಗ ರಾಜನು 'ಸುದಾಸ, ನಿನಗೆ ಒಂದು ಸಂಗತಿ ಗೊತ್ತಿಲ್ಲ ಎನಿಸುತ್ತದೆ. ಅದೇನೆಂದರೆ, ಬುದ್ಧನು ಇಂದು ನಮ್ಮ ಪುರಪ್ರವೇಶ ಮಾಡಿದ್ದು, ನಾವೆಲ್ಲರೂ ಆತನನ್ನು ಸ್ವಾಗತಿಸಲು ಹೋಗುತ್ತಿದ್ದೇವೆ. ಅಂತಹ ಮಹಾಮಹಿಮನಿಗೆ ಅಕಾಲಿಕವಾಗಿ ಅರಳಿರುವ ಈ ಹೂವನ್ನು ಕೊಡಬೇಕೆಂಬುದು ನನ್ನ ಆಸೆ. ಏಕೆಂದರೆ, ಇವತ್ತು ತನಗೆ ಯಾರಾದರೊಬ್ಬರು ಇಂತಹ ಅಪರೂಪದ ತಾವರೆ ಹೂವನ್ನು ಕೈಗಿಡಲಿದ್ದಾರೆಂಬ ಊಹೆಯೂ ಬುದ್ಧನಿಗಿಲ್ಲ. ಇಂತಹ ಅಪರೂಪದ ಅವಕಾಶವನ್ನು ಕಳೆದುಕೊಳ್ಳಲು ಯಾರು ಇಷ್ಟಪಡುತ್ತಾರೆ ಹೇಳು?' ಎಂದ.

ಆಗ ಸುದಾಸನು 'ಹಾಗಾದರೆ ಈ ಹೂವನ್ನು ಮಾರುವ ಪ್ರಶ್ನೆಯೇ ಇಲ್ಲ. ನಾನೇ ಬುದ್ಧನಿರುವಲ್ಲಿಗೆ ಹೋಗಿ, ಅವನ ಕೈಗೆ ಈ ಹೂವನ್ನು ಕೊಡುತ್ತೇನೆ,' ಎಂದ.

ಆಗ ರಾಜನು ಸುದಾಸನನ್ನು ಸಮಾಧಾನಪಡಿಸಲು ಶತಪ್ರಯತ್ನ ಪಟ್ಟ. ಕೊನೆಗೆ 'ಸುದಾಸ, ನಿನಗೇನಾದರೂ ಮರುಳು ಹಿಡಿದಿದೆಯ?' ಎಂದು ಗದರಿದ. ಇದುವರೆಗೂ ಸುದಾಸನು ತನ್ನ ಎದುರಿರುವ ಶ್ರೀಮಂತ, ದಂಡನಾಯಕ ಮತ್ತು ರಾಜನಿಗೆ ಹೀಗೆನ್ನುತ್ತಿದ್ದ. ಆದರೆ ಈಗ ಆ ಮೂವರೇ ಇವನಿಗೆ 'ಸುದಾಸ, ಹುಚ್ಚನಂತೆ ಆಡಬೇಡ. ಈ ಹೂವನ್ನು ನೀನು ನಮಗೆ ಮಾರುವುದರಿಂದ ನಿನ್ನ ಹಿಂದಿನ ಮತ್ತು ಮುಂಬರುವ ತಲೆಮಾರುಗಳ ಬಡತನವೆಲ್ಲ ನಿರ್ಮೂಲವಾಗಿ ಹೋಗುತ್ತದೆ,' ಎನ್ನುತ್ತಿದ್ದರು.

ಇದಕ್ಕೆ ಸುದಾಸ, 'ಇಲ್ಲ ಇಲ್ಲ, ನಾನು ಈ ಹೂವನ್ನು ಮಾರುವುದಿಲ್ಲ. ಏಕೆಂದರೆ, ನನ್ನ ಜೀವಮಾನದ ಬಡತನವೆಲ್ಲ ಈಗ ಮಾಯವಾಗಿ ಹೋಗಿದೆ. ಬುದ್ಧನಿಗೆ ನಾನೇ ಕೈಯಾರೆ ಈ ಹೂವನ್ನು ಕೊಡ್ತೀನಿ,' ಎಂದ.

ಹೀಗೆಂದವನೇ, ಸುದಾಸನು ಬುದ್ಧನು ಉಳಿದುಕೊಂಡಿದ್ದ ಆ ಪಟ್ಟಣದ ಒಂದು ಅಂಚಿನ ಕಡೆಗೆ ಹೊರಟ. ಸುದಾಸನು ಆ ಜಾಗವನ್ನು ತಲುಪುವ ಸಾಕಷ್ಟು ಮೊದಲೇ ಆ ಮೂವರು –ಶ್ರೀಮಂತ, ದಂಡನಾಯಕ ಮತ್ತು ರಾಜ– ಬುದ್ಧನಿರುವ ತಾಣವನ್ನು ತಲುಪಿ, ಅಂದು ನಡೆದ ಈ ಅಸಾಧಾರಣ ಘಟನೆಯನ್ನು ಬುದ್ಧನಿಗೆ ಅರುಹಿ "ಬುದ್ಧ, ನಾವು ಎಷ್ಟೇ ಬೆಲೆ ಹೇಳಿದರೂ ಆ ಬಡ ಚಮ್ಮಾರ ತಾವರೆ ಹೂವನ್ನು ನಮಗೆ ಕೊಡಲಿಲ್ಲ. ಬದಲಿಗೆ ಆತನೇ ಸ್ವತಃ ಆ ಹೂವನ್ನು ನಿಮ್ಮ ಪಾದಕಮಲಗಳಿಗೆ ಅರ್ಪಿಸಲು ಬರುತ್ತಿದ್ದಾನೆ,' ಎಂದರು.

ನಡೆದುಕೊಂಡ ಬಂದ ಸುದಾಸ, ತನ್ನಲ್ಲಿದ್ದ ಆ ತಾವರೆ ಹೂವನ್ನು ಬುದ್ಧನ ಚರಣಕಮಲಗಳಿಗೆ ಅರ್ಪಿಸಿದ. ಆಗ ಬುದ್ಧನು 'ಅಯ್ಯಾ, ಮರುಳ ಸುದಾಸನೇ, ನೀನೇಕೆ ಈ ಹೂವನ್ನು ಮಾರಲಿಲ್ಲ? ಹಾಗೇನಾದರೂ ಮಾಡಿದ್ದರೆ ನಿನ್ನ ತಲೆತಲಾಂತರದ ಬಡತನವೆಲ್ಲ ಕಳೆದು ಹೋಗುತ್ತಿತ್ತಲ್ಲ?' ಎಂದ.

ಇದಕ್ಕೆ ಸುದಾಸನು 'ಬುದ್ಧ, ದುಡ್ಡು ಯಾವತ್ತಿಗೂ ಪ್ರೀತಿಗಿಂತ ದೊಡ್ಡ ವಸ್ತುವಾಗಲು ಸಾಧ್ಯವಿಲ್ಲ. ಹಾಗೆಯೇ, ಆತ್ಮವನ್ನು ನಾಲ್ಕು ಕಾಸಿಗೆ ಮಾರಿಕೊಳ್ಳುವುದು ಸಾಧ್ಯವಿಲ್ಲ. ಅದು ಎಲ್ಲಿಯವರೆಗೂ ಕೇವಲ ಒಂದು ಹೂವಾಗಿತ್ತೋ ಅಲ್ಲಿಯವರೆಗೂ ಅದನ್ನು ನಾನು ಮಾರಬೇಕು ಎಂದುಕೊಂಡಿದ್ದೆ. ಆದರೆ, ನಿನ್ನ ಪಾದಪದ್ಮಗಳು ನನ್ನ ಕಣ್ಣಮುಂದೆ ಬಂದ ತಕ್ಷಣವೇ ನಾನು ಈ ಹೂವನ್ನು ಮಾರುವ ಆಲೋಚನೆಯನ್ನು ಕೈಬಿಟ್ಟೆ. ಬದಲಿಗೆ, ಏನೇ ಆದರೂ ನಾನೇ ಈ ಹೂವನ್ನು ಕೈಯಾರೆ ನಿನಗೆ ಅರ್ಪಿಸಬೇಕೆಂದು ನಿರ್ಧರಿಸಿದೆ. ಬಡವರು ಕೂಡ ಇನ್ನೊಬ್ಬರನ್ನು ಪ್ರೀತಿಸಲು, ಗೌರವಿಸಲು ಸಾಧ್ಯವಿದೆ. ಬಡವರು ಕೂಡ ನಂಬಿಕೆಗೆ ಅರ್ಹರು. ಅವರಿಗೂ ಆತ್ಮವಿದೆ. ಆದ್ದರಿಂದ ದಯವಿಟ್ಟು ನನ್ನ ಈ ಕಾಣಿಕೆಯನ್ನು ಒಪ್ಪಿಕೊ,' ಎಂದ.

ನಂತರ ಬುದ್ಧನು ತನ್ನ ಶಿಷ್ಯರಿಗೆ 'ನೋಡಿ, ಸುದಾಸನು ನಿಮ್ಮಂತೆ ಅಕ್ಷರಸ್ಥನಲ್ಲದೆ ಇರಬಹುದು. ಆದರೆ, ನಿಜವಾದ ಅರ್ಥದಲ್ಲಿ ಅವನು ವಿದ್ಯಾವಂತ; ಶಿಕ್ಷಿತ. ಅವನಿಗೆ ಓದಲು, ಬರೆಯಲು ಬರದೆ ಇರಬಹುದು. ಆದರೂ ಅವನು ನಿಜವಾದ ವಿದ್ಯಾವಂತ,' ಎಂದ.



ಆಗ ಮೇಲೆದ್ದ ಶಿಷ್ಯನೊಬ್ಬ 'ನಿಜವಾದ ವಿದ್ಯಾವಂತ' ಎಂದರೇನು ಎಂದ.

ಅದಕ್ಕೆ ಬುದ್ಧನು 'ಯಾರು ಬದುಕಿನಲ್ಲಿ ಉನ್ನತ ಮೌಲ್ಯಗಳನ್ನು ಅರಿತಿರುತ್ತಾರೋ, ಯಾರು ಕೀಳು ಮೌಲ್ಯಗಳನ್ನು ತ್ಯಜಿಸುತ್ತಾರೋ ಅವರೇ ನಿಜವಾದ ವಿದ್ಯಾವಂತರು. ನೋಡಿ, ಸುದಾಸನು ಈ ತಾವರೆ ಹೂವನ್ನು ಮಾರಿದ್ದರೆ ಅವನಿಗೆ ಸಿಕ್ಕಾಬಟ್ಟೆ ದುಡ್ಡು ಸಿಕ್ಕುತ್ತಿತ್ತು. ಆದರೆ, ಪ್ರೀತಿಯ ಬೆಲೆಯನ್ನು ತಿಳಿದಿದ್ದ ಸುದಾಸನು ದುಡ್ಡನ್ನು ಒಲ್ಲೆ ಎಂದು ದೂರ ಮಾಡಿದ,' ಎಂದು ವಿವರಿಸಿದ.

ಇದೊಂದು ಕತೆ. ಆದರೆ, ಈ ಕತೆಯಲ್ಲಿ ಒಂದು ದೊಡ್ಡ ಸಂದೇಶವೇ ಅಡಗಿದೆ. ಈ ದೃಷ್ಟಿಯಿಂದ ನೋಡಿದರೆ ಇಂದಿನ ಜನರನ್ನು ನಾವು 'ನಿಜವಾದ ವಿದ್ಯಾವಂತರು ಎಂದು ಕರೆಯಬಹುದೇ? ಖಂಡಿತವಾಗಿಯೂ ಇಲ್ಲ. ಏಕೆಂದರೆ, ಇಂದಿನವರು ದುಡ್ಡಿಗಾಗಿ ಪ್ರೀತಿಯನ್ನೇ ತಿರಸ್ಕರಿಸಿದ್ದಾರಲ್ಲವೇ? ಇವತ್ತಿನ ಶಿಕ್ಷಣವು ಉನ್ನತ ಮೌಲ್ಯಗಳನ್ನೆಲ್ಲ ಗಾಳಿಗೆ ತೂರಿ, ಕೀಳು ಮೌಲ್ಯಗಳನ್ನೇ ವೈಭವೀಕರಿಸುತ್ತಿರುವಾಗ ಇವತ್ತಿನ ಜನರನ್ನು ವಿದ್ಯಾವಂತರು ಎಂದು ಕರೆಯಲು ಸಾಧ್ಯವೇ? ಪರಮೋಚ್ಚ ಸಂಗತಿಯನ್ನು ಒಂದು ಕ್ಷುಲ್ಲಕ ಸಂಗತಿಗಾಗಿ ಮರೆಯಲು, ದುಡ್ಡಿಗಾಗಿ ಆತ್ಮವನ್ನೇ ಮಾರಿಕೊಳ್ಳಲು ಮತ್ತು ದುಡ್ಡಿಗಿಂತ ದೊಡ್ಡದು ಯಾವುದೂ ಇಲ್ಲ ಎಂದುಕೊಳ್ಳಲು ಸಿದ್ಧವಾಗಿರುವ ಇಂದಿನ ತಲೆಮಾರಿನವರನ್ನು ನಿಜವಾಗಿಯೂ ಕಲಿತವರು ಎನ್ನಲಾದೀತೇ? ಖಂಡಿತವಾಗಿಯೂ ಸಾಧ್ಯವಿಲ್ಲ. ಏಕೆಂದರೆ, ಇವರಿಗೆಲ್ಲ ಬದುಕಿನಲ್ಲಿ ಯಾವುದೋ ಒಂದು ಅಧಿಕಾರ, ಒಂದು ಅಂತಸ್ತನ್ನು ತಲುಪುವುದೇ ಆತ್ಯಂತಿಕ ಎನಿಸಿಬಿಟ್ಟಿದೆ. ಇವರೆಲ್ಲರ ಬದುಕು ಮತ್ತು ಮನಸ್ಸಿನಲ್ಲೆಲ್ಲ ಅರ್ಥಹೀನ ಸಂಗತಿಗಳಿಗೆ ಪ್ರಾಶಸ್ತ್ಯವಿದೆಯೇ ವಿನಾ ಅರ್ಥಪೂರ್ಣ ಸಂಗತಿಗಳಿಗಲ್ಲ. ಬಹಳ ಘನವಾದ ಸಂಗತಿಗಳನ್ನು ಇವರೆಲ್ಲ ಜುಜುಬಿ ಎನ್ನುವಂತೆ ಪರಿಭಾವಿಸಿದ್ದಾರೆ.

ಇಂತಹ ಕಲಿಕೆಯು ನಮಗೆ ಅಗತ್ಯವಾದ ಬಿಡುಗಡೆಯನ್ನು ತಂದುಕೊಡುತ್ತದೆಯೇ? ಇಲ್ಲ, ಖಂಡಿತವಾಗಿಯೂ ಅಂತಹ ಬಿಡುಗಡೆ ಅಸಂಭವವೇ ಬಿಡಿ. ನಾವೆಲ್ಲರೂ ನಮ್ಮ ಮಕ್ಕಳನ್ನು ಎಂಜಿನಿಯರು, ಡಾಕ್ಟರು, ಗಣಿತಜ್ಞರು ಮತ್ತು ವಿಜ್ಞಾನಿಗಳನ್ನಾಗಿ ಮಾಡುತ್ತಿದ್ದೇವೆ. ಆದರೆ, ಇದು ನಿಜವಾದ ಶಿಕ್ಷಣವಲ್ಲ; ರಚನಾತ್ಮಕವಾದ ವಿದ್ಯೆಯಲ್ಲ. ಇದು ಹೊಟ್ಟೆಪಾಡಿನ ದಾರಿ ಕಂಡುಕೊಳ್ಳಲು ಇರುವ ಒಂದು ಹತಾರ ಮತ್ತು ಉಪಾಯವಾಗಿದೆ ಅಷ್ಟೆ; ಇದೇನಿದ್ದರೂ ಕೈತುಂಬಾ ನಾಲ್ಕು ಕಾಸು ಸಂಪಾದಿಸಲು ಇರುವ ಒಂದು ವ್ಯವಸ್ಥೆಯಷ್ಟೆ. ನಮ್ಮಲ್ಲಿರುವ ಅದೆಷ್ಟೋ ತಂದೆ–ತಾಯಿಗಳು ಹೊಟ್ಟೆ–ಬಟ್ಟೆ ಕಟ್ಟಿ, ತಮ್ಮ ಮಕ್ಕಳನ್ನು ಏನೇನನ್ನೋ ಓದಿಸಲು ಯೂರೋಪು–ಅಮೆರಿಕಕ್ಕೆಲ್ಲ ಕಳಿಸುತ್ತಿದ್ದಾರೆ. ಹೆಚ್ಚಿನ ಜನರಂತೂ ತಮ್ಮ ಮಕ್ಕಳನ್ನು ಹೀಗೆ ಯೂರೋಪು–

ಅಮೆರಿಕಕ್ಕೆ ಕಳಿಸುವುದಕ್ಕಿಂತ ಮಜಬೂತಾದ ಸಂಗತಿ ಇನ್ನೊಂದಿಲ್ಲ ಎಂದುಕೊಂಡಿದ್ದಾರೆ. ಆದರೆ, ನಾವು ಈ ಮೂಲಕ ಅವರಿಗೆ ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಸಂಪಾದಿಸುವುದನ್ನು ಕಲಿಸುತ್ತಿದ್ದೇವೆಯೇ ವಿನಾ ಅದಕ್ಕಿಂತ ಬೇರೇನನ್ನೂ ನಾವು ಅವರಿಗೆ ಕಲಿಸುತ್ತಿಲ್ಲ. ವಾಸ್ತವವಾಗಿ, ನಾವು ನಮ್ಮ ಮಕ್ಕಳನ್ನು ಶಿಕ್ಷಣದೊಂದಿಗೆ ಬೆಸೆಯುತ್ತಲೇ ಇಲ್ಲ. ನಿಜ ಹೇಳಬೇಕೆಂದರೆ, ನಮ್ಮನಮ್ಮ ಬದುಕಿನಲ್ಲಿ ನಿಜವಾದ ಮತ್ತು ಉನ್ನತವಾದ ಮೌಲ್ಯಗಳಿಗೆ ಯಾವುದು ಕಾರಣವಾಗುತ್ತದೋ ಅದೇ ನಿಜವಾದ ಶಿಕ್ಷಣ.

ಬದುಕಿನಲ್ಲಿ ನಿಜವಾದ ಮತ್ತು ಉನ್ನತವಾದ ಮೌಲ್ಯಗಳು ಕಾಣಿಸಿಕೊಳ್ಳುವ ಘಳಿಗೆ ಎಂದರೇನರ್ಥ? ನಮ್ಮೆಲ್ಲರ ಬಾಳಿನಲ್ಲೂ ಇಂಥ ಮರುಹುಟ್ಟು ಎನ್ನುವುದೊಂದಿದ್ದರೆ ಮಾತ್ರ ಒಬ್ಬ ಮನುಷ್ಯ ನಿಜವಾದ ಬಿಡುಗಡೆಯನ್ನು ಪಡೆಯಬಲ್ಲ; ಬಂಧಮುಕ್ತನಾಗಬಲ್ಲ; ಸಂಕೋಲೆಯ ಶೃಂಖಲೆಗಳನ್ನು ಕಿತ್ತೆಸೆಯಬಲ್ಲ. ಅಷ್ಟೇಕೆ, ಅವನು ಸಂಪೂರ್ಣವಾದ ಆನಂದಾತಿಶಯವನ್ನು ಅನುಭವಿಸಬಲ್ಲ. ನಾವು ಎಷ್ಟೆಷ್ಟು ಉನ್ನತ ಮೌಲ್ಯಗಳ ಕಡೆಗೆ ಮುಂದಡಿ ಇಡುತ್ತ ಹೋಗುತ್ತೇವೋ ಅಷ್ಟಷ್ಟು ಮಟ್ಟಿಗೆ ಅರ್ಥಹೀನ ಬಂಧನಗಳಿಂದ ಕಳಚಿಕೊಳ್ಳುತ್ತಿರುತ್ತೇವೆ. ಹಾಗಾದರೆ, ಇಂತಹ ಬಂಧನಗಳು, ಇಂತಹ ಅಡೆತಡೆಗಳು ಯಾವುವು? ಅವೇ ಕೀಳುಮಟ್ಟದ ಮೌಲ್ಯಗಳು!

ಬಿಡುಗಡೆ ಎಂದರೆ ಏನರ್ಥ? ಈ ಪ್ರಶ್ನೆ ಇಲ್ಲಿ ಅತ್ಯಂತ ಸಹಜ. ಬಿಡುಗಡೆ ಎಂದರೆ ಪ್ರತೀಕ್ಷಣವೂ ಊರ್ಧ್ವಮುಖಿಯಾಗಿ, ಆಕಾಶಗಾಮಿಯಾಗಿ ಎತ್ತರೆತ್ತರಕ್ಕೆ ಏರುವ, ತನ್ನನ್ನು ತಾನೇ ಪ್ರತಿದಿನ ಪರಿವರ್ತಿಸಿಕೊಳ್ಳುವ ಒಂದು ಮಹಾಯಾನ. ನಾವು ನಮ್ಮೆಲ್ಲರ ಬದುಕಿನಲ್ಲಿ ಅತ್ಯಂತ ದೊಡ್ಡ ಎತ್ತರಕ್ಕೆ ಹೋಗುವುದೇ ನಿಜವಾದ ಕಲಿಕೆ; ದಿಟವಾದ ಜ್ಞಾನ. ಹಾಗಾದರೆ, ನಿಜಕ್ಕೂ ನಾವು ನಮ್ಮ ಶಾಲಾಕಾಲೇಜುಗಳಲ್ಲಿ ಮಕ್ಕಳು ಹೀಗೆ ಪರಿವರ್ತನೆಗೆ ತೆರೆದುಕೊಳ್ಳುವಂತೆ ಪಾಠ–ಪ್ರವಚನಗಳನ್ನು ಮಾಡುತ್ತಿದ್ದೇವೆಯೇ? ಇದಕ್ಕೆ 'ಇಲ್ಲ'ವೆಂದೇ ಹೇಳಬೇಕು. ಏಕೆಂದರೆ, ನಮ್ಮ ಶಿಕ್ಷಣ ಕ್ರಮದಲ್ಲಿ ಮಕ್ಕಳಿಗೆ ಸ್ವಾರ್ಥ, ಶೋಷಣೆ, ಆತ್ಮರತಿಗಳನ್ನು ಕಲಿಸುತ್ತಿದ್ದೇವೆ. ಇಷ್ಟೇ ಅಲ್ಲ, ಹೇಗಾದರೂ ಸರಿಯೇ –ಯಾವ ಹೇಯ ಮಾರ್ಗವನ್ನು ತುಳಿದಾದರೂ– ತಮ್ಮತಮ್ಮ ಆಸೆ–ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದು ಹೇಗೆಂಬುದನ್ನು ನಾವು ಮುಗ್ಧ ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆ. ಇಂತಹ ಅನಾಹುತಕಾರಿ ಕೆಲಸಗಳನ್ನು ಮಾಡುತ್ತಿರುವ ನಾವು, ಇಷ್ಟಾದರೂ ನಮ್ಮ ಮಕ್ಕಳಿಗೆ ದಿಟವಾದ ಜ್ಞಾನವನ್ನೇ ದಾಟಿಸುತ್ತಿದ್ದೇವೆ ಎಂದುಕೊಂಡಿದ್ದೇವೆ. ಇದಕ್ಕಿಂತ ಅರ್ಥರಹಿತವಾದ ಚಿಂತನೆ ಇನ್ನೊಂದಿಲ್ಲ.

ನಾನಿಲ್ಲಿ, ಪುರಾತನ ಕಾಲದ ಗುರುಗಳೊಬ್ಬರ ಶಾಲೆಯಲ್ಲಿ ನಡೆದ ಘಟನೆಯನ್ನು ಹೇಳಬೇಕು. ಅದೇನೆಂದರೆ, ಒಂದು ಸಲ ಅಲ್ಲಿ ಕಲಿಯುತ್ತಿದ್ದ ಶಿಷ್ಯರ ಪೈಕಿ ಮೂವರು ಮಾತ್ರ ಪರೀಕ್ಷೆಯಲ್ಲಿ ಪಾಸಾಗಿದ್ದಾರೆಂದು ಘೋಷಿಸಲಾಯಿತು. ಇಷ್ಟಾದರೂ ಆ



ಗುರುಗಳು ಮಾತ್ರ ಪದೇಪದೇ, 'ಶಿಷ್ಯರೇ, ನೀವಿನ್ನೂ ಅಂತಿಮ ಪರೀಕ್ಷೆಯನ್ನು ಎದುರಿಸಬೇಕಾಗಿದೆ. ನಿಮ್ಮ ನಿಜವಾದ ಯೋಗ್ಯತೆ ಗೊತ್ತಾಗುವುದೇ ಅಲ್ಲಿ,' ಎಂದು ಎಚ್ಚರಿಸುತ್ತಲೇ ಇದ್ದರು. ಇಷ್ಟರ ಮಧ್ಯೆ ಶೈಕ್ಷಣಿಕ ವರ್ಷದ ಕೊನೆಯ ದಿನ ಬಂದು, ಅವತ್ತು ಆ ಮೂವರಿಗೂ ಪದವಿ ಪ್ರಮಾಣಪತ್ರವನ್ನು ಪ್ರದಾನ ಮಾಡಲಾಯಿತು. ಇದಾದಮೇಲೆ ಆ ಶಿಷ್ಯರು, ಪ್ರಾಯಶಃ ಗುರುಗಳು ಅಂತಿಮ ಪರೀಕ್ಷೆಯನ್ನು ಮರೆತಿರಬಹುದೆಂದುಕೊಂಡು ಜಾಣಮೌನದಲ್ಲಿದ್ದುಕೊಂಡು, ಊರಿಗೆ ವಾಪಸ್ ಹೋಗಲು ತಮ್ಮ ಗಂಟುಮೂಟೆ ಕಟ್ಟುತ್ತಿದ್ದರು. ಇಷ್ಟಾದಮೇಲೆ, ಆಶೀರ್ವಾದವನ್ನು ಪಡೆದುಕೊಂಡು ಹೊರಡೋಣ ಎಂದುಕೊಂಡು ಗುರುಗಳ ಮನೆಗೆ ಹೋದರು.

ಗುರುಗಳು ಸಿಕ್ಕಿ, ಅವರ ಆಶೀರ್ವಾದವನ್ನು ಪಡೆದುಕೊಂಡ ವಿದ್ಯಾರ್ಥಿಗಳು ತಮ್ಮ ಊರಿನತ್ತ ಹೊರಟರು. ಅಷ್ಟು ಹೊತ್ತಿಗಾಗಲೇ ಸಾಯಂಕಾಲವಾಗಿತ್ತು. ಹೀಗಾಗಿ, ಕತ್ತಲು ಕವಿಯುವುದರೊಳಗೆ ಈ ಮೂರೂ ಮಂದಿ ಮುಂದಿನ ಹಳ್ಳಿಯನ್ನು ತಲುಪಬೇಕಾಗಿತ್ತು. ಕಾಡುಗಲ್ಲುಗಳಿಂದ ಕೂಡಿದ್ದ ಆ ರಸ್ತೆಯಲ್ಲಿ ಅವರು ಕಾಡನ್ನು ಹಾದೂ ಸಾಗಬೇಕಾಗಿತ್ತು. ಇನ್ನೊಂದೆಡೆ, ಕತ್ತಲೆ ಕವಿಯುತ್ತಿತ್ತಲ್ಲದೆ ಕಾಡುಪ್ರಾಣಿಗಳೂ ಕಾಣಿಸತೊಡಗಿದವು. ಹೀಗೆ ಸಾಗುತ್ತಿದ್ದ ಅವರಿಗೆ ಮುಳ್ಳಿನ ರಾಶಿ ಬಿದ್ದಿದ್ದ ಒಂದು ಸಣ್ಣ ದಾರಿ ಎದುರಾಯಿತು.

ಕೂಡಲೇ ಮೂವರ ಪೈಕಿ ಒಬ್ಬಾತ, ಆ ಮುಳ್ಳುಕಂಟಿಯನ್ನು ಛಂಗನೆ ಹಾರಿ, ನೆಗೆದ. ಅಲ್ಲೇ ಪಕ್ಕದಲ್ಲಿ ನಿಂತಿದ್ದ ಎರಡನೆಯವನು ಮುಳ್ಳನ್ನು ಹಾಗೆಯೇ ಬಿಟ್ಟು, ನಾಲ್ಕು ಮಾರು ಆಚೆಗೆ ಹೋಗಿ, ಮುಂದಿನ ದಾರಿ ಹಿಡಿದ. ಮೂರನೆಯವನು ಮಾತ್ರ ತನ್ನ ಸಾಮಾನು ಸರಂಜಾಮುಗಳನ್ನು ಕೆಳಕ್ಕಿಟ್ಟು, ನಿಧಾನವಾಗಿ ಆ ಮುಳ್ಳನ್ನು ಬಿಡಿಸಿ, ಎತ್ತಿಕೊಂಡು ಹೋಗಿ ಪಕ್ಕಕ್ಕೆ ಹಾಕಿದ.

ಇದನ್ನು ನೋಡಿದ ಮೊದಲ ಇಬ್ಬರು 'ಹೇ, ನಿನಗೇನಾದರೂ ಹುಚ್ಚು ಹಿಡಿದಿದೆಯ? ಈಗಾಗಲೇ ಕತ್ತಲಾಗುತ್ತಿದೆ. ನಾವೆಲ್ಲರೂ ಆದಷ್ಟೂ ಬೇಗ ಮುಂದಿನ ಹಳ್ಳಿಯನ್ನು ಸೇರಿಕೊಳ್ಳಬೇಕಾಗಿದೆ. ನಮಗೀಗ ಈ ಮುಳ್ಳನ್ನೆಲ್ಲ ನಿಧಾನವಾಗಿ ಸರಿಸಿ, ದೂರಕ್ಕೆ ಎಸೆಯುವಷ್ಟು ಪುರಸೊತ್ತಿಲ್ಲ. ಬೇಗ ಬಾ,' ಎಂದರು.

ಇದಕ್ಕೆ ಆ ಮೂರನೇ ಶಿಷ್ಯನು 'ನೋಡಿ, ಹಗಲಾಗಿದ್ದರೆ ಈ ಮುಳ್ಳಿನ ರಾಶಿಯಿಂದ ಬೇರೆಯವರಿಗೇನೂ ತೊಂದರೆಯಾಗುತ್ತಿರಲಿಲ್ಲ. ಏಕೆಂದರೆ, ಆಗ ಇದು ಎಲ್ಲರ ಕಣ್ಣಿಗೂ ಕಾಣುತ್ತಿತ್ತು, ಜನರು ಹುಷಾರಾಗಿ ಹೋಗುತ್ತಿದ್ದರು. ಆದರೆ, ನಾವೀಗ ಈ ಜಾಗವನ್ನು ದಾಟಿ ಹೋದ ಒಂದೆರಡು ಘಳಿಗೆಗಳಲ್ಲಿ ಕತ್ತಲು ಕವಿಯಲಿದೆ. ಆಗ ಯಾರಾದರೂ ಅಕಸ್ಮಾತ್ತಾಗಿ ಬಂದರೆ ಇಲ್ಲಿ ಮುಳ್ಳಿರುವುದು ಗೊತ್ತಾಗುವುದಿಲ್ಲ. ಇದು ಗೊತ್ತಿದ್ದೂ ನಾವು ಈ ಮುಳ್ಳನ್ನು ತೆಗೆದುಹಾಕದೆ ಹೋದರೆ ಅಲ್ಲಿಗೆ ನಾವು ಕಲಿತಿದ್ದೆಲ್ಲ ಅರ್ಥಹೀನ. ನಾನು ಈ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ, ಆಮೇಲೆ ಮಾತ್ರವೇ ಬರುತ್ತೇನೆ. ನೀವು ಬೇಕಾದರೆ ನಿಮ್ಮ ಪಾಡಿಗೆ ಹೋಗಬಹುದು,' ಎಂದ.

ಇಷ್ಟರ ಮಧ್ಯೆ, ಅಲ್ಲೇ ಪಕ್ಕದಲ್ಲಿದ್ದ ಪೊದೆಯ ಹಿಂದೆ ಅವಿತು ಕೂತಿದ್ದ ಆ ಶಿಷ್ಯರ ಗುರುಗಳು ಥಂಗನೆ ನೆಗೆದು ಬಂದರು. ನಿಜವೆಂದರೆ, ಆ ಹಾದಿಯಲ್ಲಿ ಮುಳ್ಳನ್ನು ಹಾಗೆ ಚೆಲ್ಲಿದ್ದೇ ಈ ಗುರುಗಳು! ಏಕೆಂದರೆ, ಇದು ಆ ಶಿಷ್ಯರಿಗೆ ಒಡ್ಡಿದ್ದ ಅಂತಿಮ ಪರೀಕ್ಷೆಯಾಗಿತ್ತು! ಮುಳ್ಳನ್ನು ತೆಗೆಯದೆ ಇದ್ದ ಇಬ್ಬರು ಶಿಷ್ಯರನ್ನು ಕರೆದ ಗುರುಗಳು 'ನೋಡಿ, ನೀವಿಬ್ಬರೂ ಪುನಃ ಶಾಲೆಗೆ ಹೋಗಬೇಕು. ಏಕೆಂದರೆ ನೀವಿಬ್ಬರೂ ಈ ಸತ್ತ್ವಪರೀಕ್ಷೆಯಲ್ಲಿ ಸೋತಿದ್ದೀರಿ,' ಎಂದು ಅಪ್ಪಣೆ ಮಾಡಿದರು. ಅಂದರೆ, ಈ ಅಗ್ನಿಪರೀಕ್ಷೆಯಲ್ಲಿ ಮೂರನೇ ವಿದ್ಯಾರ್ಥಿ ಮಾತ್ರ ಗೆದ್ದಿದ್ದ.

ಬದುಕಿನಲ್ಲಿ ಎದುರಾಗುವ ಕಲ್ಲು–ಮುಳ್ಳುಗಳನ್ನು ಹೇಗೆ ನಿವಾರಿಸಿಕೊಳ್ಳಬೇಕು, ಅವನ್ನು ಪಕ್ಕಕ್ಕೆ ಸರಿಸುವುದು ಹೇಗೆನ್ನುವುದನ್ನು ತಿಳಿದುಕೊಂಡಿರುವ ವ್ಯಕ್ತಿ ಮಾತ್ರ ನಿಜವಾದ ವಿದ್ಯಾವಂತ. ಆತನನ್ನು ಮಾತ್ರ ಜ್ಞಾನಿ ಎನ್ನಬಹುದು. ಇವತ್ತು ದಾರಿಯಲ್ಲಿ ಬಿದ್ದಿರುವ ಮುಳ್ಳಿನ ರಾಶಿಯನ್ನು ತೆಗೆದು ಹಾಕುವವನು ಮಾತ್ರ ನಾಳೆಯ ದಿನ ಇನ್ನೊಬ್ಬರ ಹಾದಿಯಲ್ಲಿ ಹೂವನ್ನು ಚೆಲ್ಲಬಲ್ಲ. ಆದರೆ, ದಾರಿಯಲ್ಲಿ ಮುಳ್ಳನ್ನು ಕಂಡೂ ಸುಮ್ಮನೆ ಹೋಗುವವನು ಒಂದಿಲ್ಲೊಂದು ದಿನ ಇತರರ ಹಾದಿಯಲ್ಲಿ ಮುಳ್ಳನ್ನು ಹಾಕಿ, ತೊಂದರೆ ಕೊಡಬಲ್ಲ.

ಬದುಕಿನ ಅಂತಿಮ ಪರೀಕ್ಷೆಯು ಯಾವಾಗಲೂ ಪ್ರೀತಿಗೆ ಸಂಬಂಧಿಸಿದ್ದು. ಪ್ರೀತಿ ಇದೆಯಲ್ಲ, ಅದೇ ಪರಮೋಚ್ಚ ಮೌಲ್ಯ. ಇದಕ್ಕೆ ಸಾಟಿಯಾದುದು ಇನ್ನೊಂದಿಲ್ಲ. ಬದುಕಿನ ತುತ್ತತುದಿಯಲ್ಲಿ ಇರುವ ಘನವಾದ ಸಂಗತಿಗಳೆಲ್ಲವೂ ಪ್ರೀತಿಯ ಫಲಗಳೇ ಆಗಿವೆ. ಒಟ್ಟಿನಲ್ಲಿ, ಬದುಕೆಂಬ ಪರ್ವತದ ಗೌರೀಶಂಕರ ಶಿಖರವೆಂದರೆ ಅದು ಪ್ರೀತಿಯಲ್ಲದೆ ಇನ್ನೇನೂ ಅಲ್ಲ.

ನಮ್ಮ ಶಿಕ್ಷಣ ವ್ಯವಸ್ಥೆಯು ಮಕ್ಕಳಿಗೆ ಪ್ರೀತಿಯನ್ನು ಬೋಧಿಸುತ್ತಿದೆಯೇ? ಅದು ಪ್ರೀತಿಯಂಥ ಪರಮೋಚ್ಚ ಸಂಗತಿಯನ್ನು ಮಕ್ಕಳಿಗೆ ಕಲಿಸುವುದಿರಲಿ, ಅದಕ್ಕೆ ಪ್ರೀತಿಯೆನ್ನುವ ಮೌಲಿಕ ಸಂಗತಿಯೊಂದು ಅಸ್ತಿತ್ವದಲ್ಲಿದೆ ಎನ್ನುವುದರ ಅರಿವೂ ಇಲ್ಲ. ಅದು ನಮ್ಮ ಮಕ್ಕಳಿಗೆಲ್ಲ ಅಹಂಕಾರವನ್ನು ಹೇಳಿಕೊಡುತ್ತಿದೆ. ಗರ್ವ ಮತ್ತು ಪ್ರೀತಿ ಎರಡೂ ತದ್ವಿರುದ್ಧವಾದ ಮೌಲ್ಯಗಳಾಗಿವೆ. ಎಲ್ಲಿ ಅಹಂಕಾರವಿರುತ್ತದೋ ಅಲ್ಲಿ ಪ್ರೀತಿ ಇರುವುದಿಲ್ಲ; ಎಲ್ಲಿ ಪ್ರೀತಿ ಇರುತ್ತದೋ ಅಲ್ಲಿ ಪೊಳ್ಳು ಅಹಂಗೆ ಆಸ್ಪದವಿರುವುದಿಲ್ಲ. ಈಗಿನ ಶಿಕ್ಷಣವು ಮಕ್ಕಳಿಗೆ ಅಹಂಕಾರವನ್ನು ಬೆಳೆಸಿಕೊಳ್ಳುವುದು ಹೇಗೆ ಎನ್ನುವ ಪಾಠ ಮಾಡುತ್ತಿದ್ದು, ಬಾಲ್ಯದಿಂದಲೇ ನಾವು ನಮ್ಮ ಮಕ್ಕಳ ಅಹಂಕಾರವನ್ನು ಹರಿತಗೊಳಿಸಲು ಬೇಕಾದ ಎಲ್ಲ ಸಿದ್ಧತೆಗಳನ್ನೂ ಮಾಡುತ್ತೇವೆ.

ಒಂದು ಮಗುವು ಶಾಲೆಗೆ ಸೇರಿದೊಡನೆಯೇ ನಾವು ಅದಕ್ಕೆ 'ನೋಡು ಮಗೂ, ನೀನು ಇಡೀ ಕ್ಲಾಸಿಗೇ ಪ್ರಥಮ ಸ್ಥಾನ ಸಂಪಾದಿಸಬೇಕು,' ಎನ್ನುತ್ತೇವೆ. ಶಾಲೆಯಲ್ಲೂ ಅಷ್ಟೇ, ಎಲ್ಲರಿಗಿಂತ ಹೆಚ್ಚು ಅಂಕಗಳನ್ನು ಗಳಿಸಿದ ಮಗುವಿನ ಬೆನ್ನು ತಟ್ಟುತ್ತೇವೆ; ಬಹುಮಾನ ಕೊಡುತ್ತೇವೆ. ಉಳಿದ ಮಕ್ಕಳಿಗೆ –ಅದರಲ್ಲೂ ತುಂಬಾ ಕಡಿಮೆ ಅಂಕ



ತೆಗೆದ ಮಗುವಿಗೆ– ನಾವು ತಾರೀಫು ಮಾಡುವುದೂ ಇಲ್ಲ; ಬಹುಮಾನವನ್ನೂ ಕೊಡುವುದಿಲ್ಲ. ಬದಲಿಗೆ, ಆ ಮಗುವನ್ನು ಉದಾಸೀನ ಮಾಡುತ್ತೇವೆ. ಉದಾಹರಣೆಗೆ, ಒಂದು ತರಗತಿಯಲ್ಲಿ ಮುವ್ವತ್ತು ವಿದ್ಯಾರ್ಥಿಗಳು ಇದ್ದಾರೆ ಎಂದುಕೊಳ್ಳೋಣ. ಈ ಪೈಕಿ ಕೇವಲ ಒಬ್ಬ ಮಾತ್ರ ಮೊದಲಿಗನಾಗಬಹುದು. ಈ ಒಬ್ಬ ಹುಡುಗನ ಸಂತೋಷವು ಉಳಿದ ಇಪ್ಪತ್ತೊಂಬತ್ತು ಮಕ್ಕಳ ನೋವು, ಹತಾಶೆ ಮತ್ತು ಸಂಕಟಗಳನ್ನು ನೆಚ್ಚಿಕೊಂಡಿರುತ್ತದೆ. ನಾವು ಈಗ ಕೊಡುತ್ತಿರುವ ಶಿಕ್ಷಣ ಇಂಥದ್ದು.

ಇಡೀ ತರಗತಿಗೆ ಪ್ರಥಮ ಸ್ಥಾನ ಸಂಪಾದಿಸುವ ಹುಡುಗನ ಸಂತೋಷ ತನ್ನ ಸಾಧನೆಗಾಗಿ ಇರುವುದಿಲ್ಲ. ಬದಲಿಗೆ ಅವನು, 'ಆಹಾ... ನಾನು ಉಳಿದವರನ್ನೆಲ್ಲ ಹಿಂದಿಕ್ಕಿ ಬಿಟ್ಟೆ!' ಎನ್ನುವ ಭಾವನೆಯನ್ನು ಆಧರಿಸಿರುತ್ತದೆ. ಇದು ಹಿಂಸೆಯಲ್ಲದೆ ಬೇರೇನಲ್ಲ. ಈ ಹಿಂಸೆಗೆ ಇರುವುದು ಒಂದೇ ಅರ್ಥ. ಅದೇನೆಂದರೆ, ಉಳಿದವರ ನೋವನ್ನು ಕಂಡು ತನಗೆ ಸಂತೋಷವಾಗಬೇಕೆನ್ನುವ ಮನೋಭಾವ. ಕೇವಲ ಸ್ಫಟಿಕಶುದ್ಧವಾದ ನೀರನ್ನು ಕುಡಿಯುವುದರಿಂದಲೋ, ರಾತ್ರಿ ಹೊತ್ತು ಊಟವನ್ನು ಮಾಡದೆ ಇರುವುದರಿಂದಲೋ ಈ ಹಿಂಸಾ ಮನೋಭಾವದಿಂದ ಹೊರಬರಲು ಸಾಧ್ಯವಿಲ್ಲ. ಇದು ನಮ್ಮಿಂದ ಬೇರೆಯದೇ ಆದ ಮೌಲ್ಯಗಳನ್ನು, ನಂಬಿಕೆಗಳನ್ನು, ಗ್ರಹಿಕೆಗಳನ್ನು ನಿರೀಕ್ಷಿಸುತ್ತದೆ.

ಉಳಿದ ಮಕ್ಕಳ ನೋವು–ಸಂಕಟಗಳನ್ನು ಕಂಡು ಖುಷಿಪಡುವುದನ್ನು ಬಿಟ್ಟು ಉಳಿದ ಯಾವ ಘನವಾದ ಸಂಗತಿಗಳನ್ನು ನಮ್ಮ ಮಕ್ಕಳಿಗೆ ನಾವು ಬೋಧಿಸುತ್ತಿದ್ದೇವೆ? ಒಂದು ತರಗತಿಯಲ್ಲಿ ಕೇವಲ ಒಬ್ಬೇಒಬ್ಬ ಹುಡುಗನಿದ್ದಾನೆ ಎಂದುಕೊಳ್ಳೋಣ. ಆಗ ಸಹಜವಾಗಿಯೇ ಎಲ್ಲದರಲ್ಲೂ ಅವನು ಪ್ರಥಮ ಸ್ಥಾನವನ್ನು ಸಂಪಾದಿಸುತ್ತಾನೆ. ಆದರೆ, ಇದರಿಂದ ಅವನಿಗೆ ಸಂತೋಷವಾಗುವುದಿಲ್ಲ. ಮುವ್ವತ್ತು ವಿದ್ಯಾರ್ಥಿಗಳಿದ್ದು, ಆ ಪೈಕಿ ಇಪ್ಪತ್ತೊಂಬತ್ತು ವಿದ್ಯಾರ್ಥಿಗಳನ್ನು ಹಿಂದಿಕ್ಕಿದರೇನೇ ಈ ಹುಡುಗನಿಗೆ ಖುಷಿ! ಇನ್ನು ಆ ಶಾಲೆಯಲ್ಲಿ ಮೂರು ಸಾವಿರ ವಿದ್ಯಾರ್ಥಿಗಳಿದ್ದು ತಾನು ಮೊದಲಿಗನಾದರಂತೂ ಅವನ ಖುಷಿ ಇಮ್ಮಡಿಗೊಳ್ಳುತ್ತದೆ. ಹಾಗೆಯೇ, ಅಲ್ಲೇನಾದರೂ ಮೂರು ಲಕ್ಷ ವಿದ್ಯಾರ್ಥಿಗಳಿದ್ದಾಗ ಈ ಸಾಧನೆಯೇನಾದರೂ ಸಾಧ್ಯವಾದರೆ ಈ ಹುಡುಗನನ್ನು ಹಿಡಿಯುವವರೇ ಇರುವುದಿಲ್ಲ. ದೇಶದ ವ್ಯವಸ್ಥೆಯೂ ಹೀಗೆಯೇ ತೀರಾ ಅಧ್ವಾನವಾಗಿದೆ. ಏಕೆಂದರೆ, ದೇಶವಾಸಿಗಳನ್ನೆಲ್ಲಾ ಹಿಂದಿಕ್ಕಿ ರಾಷ್ಟ್ರಪತಿಯೋ, ಪ್ರಧಾನಮಂತ್ರಿಯೋ ಆಗಿಬಿಟ್ಟರೆ ಅಂಥವನ ಪಾಲಿಗೆ ಸ್ವರ್ಗ ಇನ್ನು ಮೂರೇ ಗೇಣು! ಹೀಗಾಗಿಯೇ, ರಾಜಕೀಯವೆಂದರೆ ಹಿಂಸೆಯೆಂದೇ ಅರ್ಥ. ಏಕೆಂದರೆ, ಇದು ಎಲ್ಲರೂ ಮೊದಲಿಗರಾಗಿ ಹೊರಹೊಮ್ಮಬೇಕೆಂಬ ಗುರಿಯುಳ್ಳ ಒಂದು ಹುಚ್ಚು ಓಟವಾಗಿದೆ.

ಧರ್ಮ ಮತ್ತು ಜ್ಞಾನ ಎರಡೂ ಒಂದೊಂದು ದಾರಿಗಳಾಗಿವೆ. ಯೇಸುಕ್ರಿಸ್ತ ಒಂದು ಕಡೆ 'ಯಾರು ನನ್ನ ಬಳಿಗೆ ಕಟ್ಟಕಡೆಯಲ್ಲಿ ಬರುತ್ತಾರೋ ಅವರೇ ನಿಜವಾಗಿಯೂ ನನ್ನ ಕೃಪೆಗೆ ಪಾತ್ರರಾಗುತ್ತಾರೆ,' ಎಂದಿದ್ದಾನೆ. ಇಂತಹ ಮಾತುಗಳ ಅರ್ಥವನ್ನು

ಯಾರೂ ಸರಿಯಾಗಿ ಗ್ರಹಿಸುವುದಿಲ್ಲ. ನಿಜಕ್ಕೂ ಯೇಸುಕ್ರಿಸ್ತನೇ ಸರಿಯಿಲ್ಲವೋ ಅಥವಾ ಶಾಲೆ, ಬೋಧನೆ ಮತ್ತು ಶಿಕ್ಷಕರು ಎಂದು ಜಪಿಸುತ್ತಿರುವ ನಮಗೆ ಹುಚ್ಚು ಹಿಡಿದಿದೆಯೋ? ಏಕೆಂದರೆ, ಕ್ರಿಸ್ತನು ಹೇಳಿದ್ದಕ್ಕೆ ವಿರುದ್ಧವಾದುದನ್ನು ನಾವು ಹೇಳುತ್ತಿದ್ದೇವೆ. ಅಂದರೆ, ಯಾರು ಪ್ರಥಮ ಸ್ಥಾನವನ್ನು ಬಾಚಿಕೊಳ್ಳುತ್ತಾರೋ ಅವರು ದೇವರ ವರಪುತ್ರರು ಎನ್ನುವುದು ನಮ್ಮ ಬೋಧನೆಯಾಗಿದೆ.

ಈ ರೀತಿಯ ಹುಚ್ಚುಓಟವು ಯಾರೊಬ್ಬರಿಗೂ ಬದುಕಿನಲ್ಲಿ ಅತ್ಯಗತ್ಯವಾದ ಬಿಡುಗಡೆಯನ್ನು ತಂದುಕೊಡುವುದಿಲ್ಲ. ಇದಕ್ಕೆ ಕಾರಣಗಳಿಲ್ಲದಿಲ್ಲ. ಮೊದಲನೆಯದಾಗಿ, ಇಂತಹ ದಾಖಲೆಗಳ ಅಮಲಿಗೆ ಬಿದ್ದವರು ಸದಾ ಸಂಘರ್ಷದ ಅವಸ್ಥೆಯಲ್ಲಿದ್ದು, ಆತಂಕಕ್ಕೆ ಒಳಗಾಗುತ್ತಾರೆ. ಇಂತಹ ಮಂದಿ ಯಾವಾಗಲೂ ಉಳಿದವರೊಂದಿಗೆ ಜಿದ್ದಿಗೆ ಬೀಳುತ್ತಾರೆ; ಎಲ್ಲರೊಂದಿಗೂ ವೈರತ್ವವನ್ನು ಬೆಳೆಸಿಕೊಳ್ಳುತ್ತಾರೆ. ಯಾರು ಶತ್ರುತ್ವವನ್ನು ಬೆಳೆಸಿಕೊಳ್ಳುತ್ತಾರೋ ಅಂಥವರು ಅದರಿಂದ ಹೊರಬರುವುದು ಸಾಧ್ಯವೇ ಇಲ್ಲ. ನಿಜ ಹೇಳಬೇಕೆಂದರೆ, ಯಾರು ಎಲ್ಲರೊಂದಿಗೂ ಸ್ನೇಹಿತನಾಗಿ ಇರಬಲ್ಲನೋ ಅಂಥವನು ಮಾತ್ರ ಬಿಡುಗಡೆಯನ್ನು ಅನುಭವಿಸಬಲ್ಲ. ಇಂತಹ ಅರ್ಥಹೀನ ಸಂಗತಿಗಳಿಂದ ಇವರೆಲ್ಲ ಬಂಧಿತರಾಗುತ್ತಾರೆ. ಅಂದಹಾಗೆ, ಯಾರು ಇತರರೊಂದಿಗೆ ಹುಚ್ಚುಸ್ಪರ್ಧೆಗೆ ಹೋಗದೆ ನಿರುಮ್ಮಳನಾಗಿರುತ್ತಾನೋ ಅವನು ಮಾತ್ರ ಎಲ್ಲರಿಗೂ ಮಿತ್ರನಾಗಬಲ್ಲ.

ಹಾಗಾದರೆ, ನಿಜಕ್ಕೂ ಸ್ನೇಹವೆಂದರೇನು? 'ನಾನು ಯಾರೊಂದಿಗೂ ಸ್ಪರ್ಧೆಯ ಜಿದ್ದಿಗೆ ಬಿದ್ದಿಲ್ಲ,' ಎನ್ನುವ ಭಾವವೇ ನಿಜವಾದ ಸ್ನೇಹಭಾವ. ವೈರತ್ವವಿಲ್ಲದ ಜೀವನವೆಂದರೂ ಇದೇ ಆಗಿದೆ. 'ನಮ್ಮಿಬ್ಬರಲ್ಲಿ ಯಾರಾದರೂ ಗೆಲ್ಲೋಣ, ಆದರೆ ಇಬ್ಬರೂ ಗೆಲ್ಲುವುದು ಸಾಧ್ಯವಿಲ್ಲ,' ಎನ್ನುವುದನ್ನು ಅರಿತುಕೊಳ್ಳುವುದೇ ನಮ್ಮ ಮುಂದಿರುವ ಅತ್ಯುತ್ತಮ ಮಾರ್ಗವಾಗಿದೆ.

ನಾವು ನಮ್ಮ ಮಕ್ಕಳಿಗೆ ಉಳಿದ ಮಕ್ಕಳೊಂದಿಗೆ ಜಿದ್ದಾಜಿದ್ದಿಗೆ ಬೀಳುವುದನ್ನು ಬೋಧಿಸುತ್ತಿದ್ದೇವೆ. ಅಂದರೆ, ತೀರಾ ಎಳವೆಯಿಂದಲೇ ಮಕ್ಕಳ ಮನಸ್ಸಿಗೆ ಸ್ಪರ್ಧೆ, ಹಿಂಸೆ ಮತ್ತು ಮಹತ್ವಾಕಾಂಕ್ಷೆಗಳ ವಿಷವನ್ನು ಉಣಿಸುತ್ತಿದ್ದೇವೆ. ಇಷ್ಟೆಲ್ಲ ಅಪಾಯಗಳನ್ನು ಮಾಡಿದ ಮೇಲೆ ನಾವು ನಮ್ಮಲ್ಲಿ ಅತ್ಯುತ್ತಮ ಶಾಲೆಗಳಿವೆ ಎಂದು ಭಾವಿಸಿಕೊಳ್ಳುತ್ತೇವೆ. ಇಲ್ಲ, ಇವು ನಿಜಕ್ಕೂ ಶಾಲೆಗಳಲ್ಲ. ವಾಸ್ತವವಾಗಿ ಇವು ಕಲಿಕೆಗೆ ದೊಡ್ಡ ಶತ್ರುಗಳು. ಇಂತಹ ಸಾಂಸ್ಥಿಕ ವ್ಯವಸ್ಥೆಯು ಮನುಷ್ಯನ ಮನಸ್ಸನ್ನು ಹಾಳು ಮಾಡಿ, ಅವನನ್ನು ಬುದ್ಧಿವಿಕಲ್ಪನನ್ನಾಗಿ ಮಾಡುತ್ತಿವೆ. ಶಾಲೆಗಳಲ್ಲಿ ನಾವು ಮಕ್ಕಳಿಗೆ ಕೀಳರಿಮೆಯನ್ನು ಬೋಧಿಸುತ್ತಿದ್ದು, ಅವನು ಆಯುಷ್ಯಪೂರ್ತಿ ಹುಚ್ಚನಂತೆ ಓಡುತ್ತಲೇ ಇರುವಂತೆ ಮಾಡುತ್ತಿದ್ದೇವೆ. ಇಂತಹ ಅಮಲಿನ ಓಟ ದುಡ್ಡಿಗಾಗಿಯೋ, ಅಧಿಕಾರಕ್ಕಾಗಿಯೋ ಇರಬಹುದು. ಆದರೆ, ಅವೆರಡರ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಇಷ್ಟಾದರೂ ನಾವು ಅಂತಹ ಹುಚ್ಚುಓಟವನ್ನೇ ಹೇಳಿಕೊಡುತ್ತೇವೆ. ಇದು ಒಂದು ಬಗೆಯಲ್ಲಿ



ಸ್ಪರ್ಧೆಯ ಜ್ವರ. ಆದರೆ ಇದು ಅಂತಿಂಥ ಜ್ವರವಲ್ಲ. ಸಾಮಾನ್ಯವಾಗಿ ಒಂದು ಸಲ ಈ ಜ್ವರ ತಗುಲಿತೆಂದರೆ ಇನ್ನು ಸಾಯುವವರೆಗೂ ಬಿಡುವುದಿಲ್ಲ. ಅಂದಂತೆ, ಕುದಿಯುವ ಜ್ವರದಿಂದ ಬಳಲುತ್ತಿರುವವನು ಎಂದಾದರೂ ಆರೋಗ್ಯದಿಂದ ನಳನಳಿಸುವುದು ಸಾಧ್ಯವೇ?

ನಾನು ಕೇಳಿರುವ ಒಂದು ಕತೆಯನ್ನು ಇಲ್ಲಿ ಹೇಳಬೇಕು. ಅರ್ಥಹೀನವಾದ ಹುಚ್ಚುಸ್ಪರ್ಧೆ ಎಷ್ಟೊಂದು ಅನಾಹುತಕಾರಿ ಎನ್ನುವುದನ್ನು ಸಾರಿ ಹೇಳುವ ಕತೆ ಇದು. ಅದೇನೆಂದರೆ, ಕಾಶಿಯಲ್ಲಿದ್ದ ಒಂದು ನಾಯಿಗೆ ದೆಹಲಿಗೆ ಹೋಗಬೇಕೆನ್ನುವ ಆಸೆ ಹುಟ್ಟಿತು. ನಮ್ಮ ಸಾವಿರಾರು ರಾಜಕಾರಣಿಗಳು ದಿನವೂ ಅಧಿಕಾರದ ಹುಚ್ಚಿನಿಂದ ದೆಹಲಿಗೆ ದೌಡಾಯಿಸುತ್ತಿರುವಾಗ ಒಂದು ನಾಯಿಗೂ ದೆಹಲಿಗೆ ಹೋಗಬೇಕೆನ್ನುವ ಆಸೆ ಬಂದಿದ್ದರಲ್ಲಿ ತಪ್ಪೇನಿಲ್ಲ. ವಾಸ್ತವವಾಗಿ, ಹಿಂದೆಲ್ಲ ನಮ್ಮಲ್ಲಿ ಜನರು ದೆಹಲಿಯಿಂದ ಪುಣ್ಯಸ್ಥಳವಾದ ಕಾಶಿಗೆ ಬರುತ್ತಿದ್ದರು. ಈಗ ಇದು ತಿರುಗಮುರುಗ ಆಗಿದೆ. ಇರಲಿ, ಕಾಶಿಯ ನಾಯಿಗಳೆಲ್ಲ ತಮ್ಮ ಪ್ರತಿನಿಧಿಯನ್ನು ದೆಹಲಿಗೆ ಕಳಿಸಲು ತೀರ್ಮಾನಿಸಿ, ಈ ಸಮಾಚಾರವನ್ನು ದೆಹಲಿಯ ತಮ್ಮ ಮಿತ್ರರಿಗೆ ತಿಳಿಸಿ 'ಪ್ರಾಯಶಃ ನಮ್ಮ ನಾಯಕ ದೆಹಲಿಗೆ ಬರುವುದು ಒಂದು ತಿಂಗಳಾಗಬಹುದು. ಬಂದಾಗ, ನೀವೆಲ್ಲರೂ ಅಲ್ಲಿನ ಪ್ರವಾಸಿ ಮಂದಿರದ ಬಳಿಯೇ ನಮ್ಮ ನಾಯಕನನ್ನು ಬರಮಾಡಿಕೊಳ್ಳಬೇಕು,' ಎಂದು ಹೇಳಿದವು.

ಕಾಶಿಯ ನಾಯಿಗಳು ತಮ್ಮ ಸಂತಾನದ ನಾಯಕನನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲು ಕಾಯತೊಡಗಿದವು. ಇಷ್ಟಕ್ಕೂ ಈ ನಾಯಿಗಳಿಗೆ ದೆಹಲಿಗೆ ಬಂದಿಳಿಯುತ್ತಿದ್ದ ನಾಯಕರಿಗೆಲ್ಲ ಸ್ವಾಗತ ಕೋರುವುದು ಅಭ್ಯಾಸವಾಗಿ ಹೋಗಿತ್ತು. ಇನ್ನು ಈಗಂತೂ ತಮ್ಮ ತಳಿಯ ನಾಯಕನೊಬ್ಬನೇ ಬರುತ್ತಿದ್ದುದರಿಂದ ಅವು ವೈಭವದ ಸ್ವಾಗತ ಸಮಾರಂಭಕ್ಕೇ ಅಣಿಯಾಗಲು ತೊಡಗಿದವು. ಆದರೆ, ಒಂದು ತಿಂಗಳಲ್ಲಿ ದೆಹಲಿಯನ್ನು ತಲುಪಬೇಕಾಗಿದ್ದ ಕಾಶಿಯ ಆ ನಾಯಿಯು ಕೇವಲ ಏಳೇ ದಿನಗಳಲ್ಲಿ ದೆಹಲಿಯನ್ನು ತಲುಪಿಬಿಟ್ಟಿತು! ನಿಜ, ದೆಹಲಿಯ ನಾಯಿಗಳು ನೂರಾರು ನಾಯಕರು ದಿನವೂ ಅಲ್ಲಿಗೆ ಬಂದಿಳಿಯುವುದನ್ನು ನೋಡುತ್ತಿದ್ದವು. ಆದರೆ ಯಾರೊಬ್ಬರೂ ಹೀಗೆ ಏಳೇಏಳು ದಿನಗಳಲ್ಲಿ, ಮಿಂಚಿನ ವೇಗದಲ್ಲಿ ದೆಹಲಿಯನ್ನು ತಲುಪಿರಲಿಲ್ಲ. ಸಾಮಾನ್ಯವಾಗಿ ಹೆಚ್ಚಿನವರು ತಮ್ಮ ಸಾವು ಸಮೀಪದಲ್ಲಿದೆ ಎನ್ನುವಾಗ ದೆಹಲಿಯನ್ನು ತಲುಪುತ್ತಾರೆ. ಹೀಗಾಗಿಯೇ, ದೆಹಲಿಯು ಇಂತಹ ಮಹತ್ವಾಕಾಂಕ್ಷಿಗಳ ಪಾಲಿನ ಸ್ಮಶಾನವಾಗಿದೆ.

ಕಾಶಿಯ ತಮ್ಮ ಸಂಗಾತಿಯು ಹೀಗೆ ಮಿಂಚಿನ ವೇಗದಲ್ಲಿ ಬಂದುದನ್ನು ಕಂಡ ದೆಹಲಿಯ ನಾಯಿಗಳು 'ಅಲ್ಲಯ್ಯ, ಅದ್ಹೇಗೆ ನೀನು ಹೀಗೆ ಮಿಂಚಿನ ವೇಗದಲ್ಲಿ ಇಲ್ಲಿಗೆ ಬಂದೆ?' ಎಂದು ವಿಚಾರಿಸಿದವು.

ಆಗ ಆ ಕಾಶಿಯ ನಾಯಿಯು 'ದಯವಿಟ್ಟು ಅದನ್ನೆಲ್ಲ ಕೇಳಬೇಡಿ. ನಮ್ಮ ಕುಲಬಾಂಧವರೇ ಇದಕ್ಕೆ ಕಾರಣ! ನಾನು ಕಾಶಿಯಿಂದ ಬೀಳ್ಕೊಂಡ ಕೂಡಲೇ

ಒಂದೊಂದು ಊರಿನ ನಾಯಿಗಳೂ ಆಯಾ ಊರಿನ ಗಡಿಯವರೆಗೂ ನನ್ನನ್ನು ಅಟ್ಟಿಸಿಕೊಂಡು ಬರಲು ಶುರು ಮಾಡಿದವು. ಹೀಗಾಗಿ ನನಗೆ ಎಲ್ಲೂ ವಿಶ್ರಾಂತಿಯೇ ಸಿಗಲಿಲ್ಲ. ಹೀಗೆ ಒಂದೇ ಸಮನೆ ಓಡೋಡುತ್ತ ನಾನು ದೆಹಲಿಗೆ ಬಂದು ಬಿದ್ದೆ,' ಎಂದಿತು. ಈ ಕತೆಯನ್ನು ಹೇಳುತ್ತಲೇ ಕುಸಿದು ಬಿದ್ದ ಕಾಶಿಯ ಆ ನಾಯಿ, ಅಲ್ಲೇ ಸತ್ತು ಹೋಯಿತು. ಇದರಲ್ಲೊಂದು ತಥ್ಯವಿದೆ. ಅದೇನೆಂದರೆ, ಯಾರು ಅಧಿಕಾರ, ದುಡ್ಡು, ಅಂತಸ್ತು, ಪ್ರತಿಷ್ಠೆ ಇತ್ಯಾದಿಗಳ ಆಸೆ ಇಟ್ಟುಕೊಂಡು ಒಂದೇ ಸಮನೆ ಅವುಗಳ ಹಿಂದೆ ಬೀಳುತ್ತಾರೋ ಅವರು ದುರಂತ ಅಂತ್ಯ ಕಾಣುತ್ತಾರೆ. ನಾವು ನಮ್ಮ ಮಕ್ಕಳನ್ನು ಕೂಡ ಹೀಗೆಯೇ ಕಾಶಿಯ ನಾಯಿಯಂತೆ ಮಾಡುತ್ತಿದ್ದೇವೆ. ಬಾಲ್ಯದಲ್ಲಿ ತಂದೆ–ತಾಯಿಗಳು, ಮದುವೆಯಾದ ಮೇಲೆ ಹೆಂಡತಿ, ವೃದ್ಧಾಪ್ಯದಲ್ಲಿ ಮಕ್ಕಳು ನಮ್ಮನ್ನು ಬೆನ್ನು ಬಿಡದ ಬೇತಾಳದಂತೆ ಅಟ್ಟಿಸಿಕೊಂಡು ಬರುತ್ತಿದ್ದಾರೆ. ನೀನು ಹುಚ್ಚನಂತೆ ಓಡದಿದ್ದರೆ ನಿನ್ನ ಬದುಕಿಗೊಂದು ಅರ್ಥವೇ ಇಲ್ಲ ಎಂದು ಅವರನ್ನು ದಾರಿ ತಪ್ಪಿಸಿ, ಸರ್ವನಾಶ ಮಾಡುತ್ತಿದ್ದೇವೆ. ಇಂತಹ ಒಂದು ಎಂದೆಂದಿಗೂ ಇಳಿಯದ ಅಮಲನ್ನು ನಾವು ಮಕ್ಕಳ ಮನಸ್ಸಿನಲ್ಲಿ ಸೃಷ್ಟಿಸುತ್ತಿದ್ದೇವೆ. ಇದು ಅಂತಿಂಥ ಜ್ವರವಲ್ಲ, ಬದಲಿಗೆ ಮಹತ್ತ್ವಾಕಾಂಕ್ಷೆಯ ಜ್ವರ! ಈ ಜ್ವರವನ್ನು ತಗುಲಿಸಿಕೊಂಡ ಮಗುವು ಸಾಯುವವರೆಗೂ ಹುಚ್ಚುಕುದುರೆಯಂತೆ ಓಡುತ್ತಲೇ ಇರಬೇಕಾಗುತ್ತದೆ. ಇದನ್ನೇ ನಾವು 'ಬದುಕಿಗೆ ಬೇಕಾದ ವೇಗ' ಎಂದು ಕರೆಯುತ್ತೇವೆ. ಆದರೆ, ಇಂತಹ ವೇಗದಿಂದ ಬದುಕಿನಲ್ಲಿ ನಮಗೆ ಅತ್ಯಗತ್ಯವಾಗಿ ಬೇಕಾದ ವಿಮೋಚನೆ ಸಿಕ್ಕುತ್ತದೆಯೇ? ಖಂಡಿತವಾಗಿಯೂ ಇಲ್ಲ. ಇಂತಹ ಓಟವು ಮಗುವನ್ನು ಸಾವಿನ ಶೋಕಲೋಕಕ್ಕೆ ಕರೆದುಕೊಂಡು ಹೋಗುತ್ತದೆಯೇ ವಿನಾ ವಿಮೋಚನೆಯ ಭಾಗ್ಯಲೋಕಕ್ಕೆ ಕರೆದೊಯ್ಯುವುದಿಲ್ಲ. ನಮ್ಮ ಪೈಕಿ ಹೆಚ್ಚಿನವರು ಇಂತಹ ಹುಚ್ಚುಓಟಕ್ಕೆ ಇಳಿದು, ಅಲ್ಲೇ ಅಸುನೀಗುತ್ತಿದ್ದೇವೆ, ಆದರೆ, ನಿಜವಾದ ಬಿಡುಗಡೆಯ ದಾರಿ ಬೇರೆಯೇ ಆಗಿದೆ.

ಯಾವ ಶಿಕ್ಷಣವು ಮಗುವಿನಲ್ಲಿ ಅರ್ಥಹೀನವಾದ ಮಹತ್ತ್ವಾಕಾಂಕ್ಷೆಗಳನ್ನು ಹುಟ್ಟಿಸುವುದಿಲ್ಲವೋ ಅಂತಹ ವಿದ್ಯಾಭ್ಯಾಸದ ಕ್ರಮವು ಮಾತ್ರ ನಮಗೆ ಬಿಡುಗಡೆಯನ್ನು ಕರುಣಿಸಬಲ್ಲದು. ಆದರೆ ನಾವು ವಿವೇಕವಿಲ್ಲದ ಜನ. ಏಕೆಂದರೆ, ಮನುಷ್ಯನಿಗೆ ಮಹತ್ತ್ವಾಕಾಂಕ್ಷೆಯೇ ಇಲ್ಲವೆಂದರೆ ಬದುಕಿಗೆ ಅರ್ಥವೇ ಇಲ್ಲ ಎಂದು ನಾವು ಅಂದುಕೊಂಡು ಬಿಟ್ಟಿದ್ದೇವೆ.

ನಾವು ಎಲ್ಲಕ್ಕಿಂತ ಮೊದಲು ಒಂದು ಅಂಶವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಅದೇನೆಂದರೆ, ಉಳಿದವರನ್ನೆಲ್ಲ ಹಿಂದಿಕ್ಕಿ ಮೊದಲಿಗನಾಗಿ ಹೊರಹೊಮ್ಮುವುದಕ್ಕೆ ಬದುಕಿನಲ್ಲಿ ಕಿಲುಬು ಕಾಸಿನ ಬೆಲೆಯೂ ಇಲ್ಲ. ಎರಡನೆಯದು, ಬದುಕಿನಲ್ಲಿ ವಿಕಸನಗೊಳ್ಳಲು ಬೇರೆಬೇರೆ ಮಾರ್ಗಗಳೂ ಇವೆ. ಸುತ್ತಮುತ್ತ ಇರುವವರು ಮತ್ತು ಓರಗೆಯವರನ್ನೆಲ್ಲ ಹಿಂದಿಕ್ಕಿ, ಹುಚ್ಚುಓಟಕ್ಕೆ ಬೀಳುವುದು ಒಂದು ದಾರಿ; ಆದರೆ, ನನ್ನೊಳಗಿನ ಇತಿಮಿತಿಗಳನ್ನು ಮೀರಬೇಕೆಂಬ ಹಂಬಲದೊಂದಿಗೆ



ಮುಂದುವರಿಯುವುದು ಇನ್ನೊಂದು ದಾರಿ. ನಾನು ನಿನ್ನೆ ಎಲ್ಲಿ ನಿಂತಿದ್ದೇನೋ ಇಂದೂ ಅಲ್ಲೇ ನಿಲ್ಲಬಾರದು ಎನ್ನುವ ಸಂಕಲ್ಪ ನಮ್ಮದಾಗಬೇಕು. ಇದು ನಾವು ನಮ್ಮೊಂದಿಗೇ ಸ್ಪರ್ಧಿಗಿಳಿಯುವ ಪರಿ. ನಿನ್ನೆ ಸೂರ್ಯ ಮುಳುಗಿದಾಗ ನಾನು ಎಲ್ಲಿದ್ದೆನೋ ಅಲ್ಲೇ ನಿಂತುಕೊಳ್ಳಬಾರದು. ಮರುದಿನ ಸೂರ್ಯೋದಯವಾಗುವ ಹೊತ್ತಿಗೆ ನಾನು ಒಂದಿಷ್ಟು ದೂರವನ್ನು ಕ್ರಮಿಸಬೇಕು; ನನ್ನ ಇತಿಮಿತಿಗಳನ್ನು ನಾನು ಮೀರಬೇಕು.

ಇಂತಹ ಶಿಕ್ಷಣ ಮಾತ್ರ ನಮಗೆ ಅರ್ಥಪೂರ್ಣ ವಿಮೋಚನೆಯನ್ನು ತಂದುಕೊಡುತ್ತದೆ. ಇದು ನಿಮ್ಮನ್ನು ನೀವೇ ಮೀರುವುದು ಹೇಗೆನ್ನುವುದನ್ನು ಹೇಳಿಕೊಡುತ್ತದೆ. ಇದಲ್ಲದೆ, ಉಳಿದವರೊಂದಿಗೆ ನೀನು ಸ್ಪರ್ಧೆಯ ಜಿದ್ದಿಗೆ ಬೀಳಬೇಕೆನ್ನುವ ಶಿಕ್ಷಣ ಕ್ರಮವು ಎಂದೂ ನಿಮ್ಮನ್ನು ಸಂಕೋಲೆಗಳಿಂದ ಹೊರತಾರದು.

ನಾವು ಒಂದು ಸತ್ಯವನ್ನು ಅರ್ಥ ಮಾಡಿಕೊಳ್ಳುವುದು ತುಂಬಾ ಮುಖ್ಯ. ಅದೇನೆಂದರೆ, ಇತರರನ್ನು ಹಿಂದಿಕ್ಕಿ ತಾನು ಮಾತ್ರ ಎಲ್ಲರಿಗಿಂತ ಮುಂದಿರಬೇಕು ಎಂದುಕೊಳ್ಳುವವರಿಗೆ ಆ ಅಮಲು ಜೀವಮಾನವಿಡೀ ಇಳಿಯುವುದಿಲ್ಲ. ಹುಚ್ಚು ಹಿಡಿದವರಂತೆ ಒಂದೇ ಸಮನೆ ಓಡಲು ತೊಡಗುವ ಇಂಥವರು ಕೊನೆಗೆ ಯಾವ ಗಮ್ಯವನ್ನೂ ತಲುಪುವುದಿಲ್ಲ. ಏಕೆಂದರೆ, ಯಾರೋ ಒಬ್ಬರು ಅವರಿಗಿಂತ ಮುಂದಿರುತ್ತಾರೆ. ಹೀಗೆ ಎಲ್ಲರನ್ನೂ ಹಿಂದಿಕ್ಕುತ್ತೇನೆಂಬುದು ಮರುಳುತನವಾಗಿದೆ. ಇದನ್ನೆಲ್ಲ ಬಿಟ್ಟು, ತನ್ನನ್ನು ತಾನು ಹೊಸ ಗಾಳಿಗೆ ಒಡ್ಡಿಕೊಳ್ಳುವವನು ಒಂದಿಲ್ಲೊಂದು ದಿನ ಖಂಡಿತವಾಗಿಯೂ ತನ್ನ ಗುರಿಯನ್ನು ತಲುಪಿಯೇ ತೀರುತ್ತಾನೆ. ಅಂಥವನು ತಲುಪುವ ಈ ತಾಣ ಹೇಗಿರುತ್ತದೆಂದರೆ, ಅದರಾಚೆಗೆ ಬದಲಾವಣೆಗೆ ಒಡ್ಡಿಕೊಳ್ಳುವಂಥದ್ದು ಏನೂ ಇರುವುದಿಲ್ಲ. ಕೃಷ್ಣ, ಬುದ್ಧ, ಮಹಾವೀರ ಮತ್ತು ಯೇಸುಕ್ರಿಸ್ತ ಇವರೆಲ್ಲರೂ ಇಂತಹ ಆತ್ಯಂತಿಕ ತಾಣವನ್ನು ತಲುಪಿರುವ ಮಹಾಮಹಿಮರಾಗಿದ್ದಾರೆ. ಈ ಪರಮೋಚ್ಚ ತಾಣದಲ್ಲಿ ಆಗುವುದೇ ದೈವತ್ವದ ಅನುಭವ; ಅದೇ ನಿಜವಾದ ಬಿಡುಗಡೆ. ಇದರಿಂದ ಆಚೆಗೆ ನಾವು ಕ್ರಮಿಸಲು ಇನ್ನೇನೂ ಇರುವುದಿಲ್ಲ.

ಮನುಷ್ಯನ ಪಾಲಿನ ಈ ಅಂತಿಮ ಗುರಿ ಯಾವುದು? ಬಿಡುಗಡೆ ಅಥವಾ ಮೋಕ್ಷವೇ ಈ ಅಂತಿಮ ಗುರಿ. ಒಬ್ಬ ವ್ಯಕ್ತಿಯು ತನ್ನನ್ನು ತಾನು ಸಂಪೂರ್ಣವಾಗಿ ಮೀರಿಬಿಟ್ಟರೆ ಅದರಾಚೆಗೆ ಮೀರುವಂಥದ್ದು ಏನೂ ಇರುವುದಿಲ್ಲ. ಅಂತಹ ಸ್ಥಿತಿಗೆ ತಲುಪಿದಾಗ ನಮಗೆ ಮೋಕ್ಷ ಪ್ರಾಪ್ತಿಯಾಗುತ್ತದೆ. ಆದರೆ, ಅವರಿವರನ್ನು ಹಿಂದಿಕ್ಕಬೇಕೆಂಬ ವ್ಯಸನಕ್ಕೆ ಒಳಗಾದವರಿಗೆ ಮೋಕ್ಷಪ್ರಾಪ್ತಿ ಸಾಧ್ಯವಿಲ್ಲ. ಏಕೆಂದರೆ, ಇಂಥವರು ಎಂದಿಗೂ ತಮ್ಮನ್ನು ತಾವು ಮೀರುವ ಪ್ರಯತ್ನವನ್ನೇ ಮಾಡುವುದಿಲ್ಲ. ಹೀಗೇಕಾಗುತ್ತದೆಂದರೆ, ನಾವು ಹಿಂದಿಕ್ಕಿ ಮುಂದಕ್ಕೆ ನುಗ್ಗಬೇಕಾದ ಹುಚ್ಚು ರೇಸಿನಲ್ಲಿ ಇರುವ 'ಇತರರ' ಸಂಖ್ಯೆಗೆ ಮಿತಿಯಿಲ್ಲ. ವಾಸ್ತವವಾಗಿ, ನಮ್ಮ ಸುತ್ತಮುತ್ತ ಇರುವವರನ್ನೆಲ್ಲ ಹಿಂದಿಕ್ಕುವುದು ಸುಲಭವೂ ಅಲ್ಲ; ಸಾಧ್ಯವೂ ಇಲ್ಲ. ಇಲ್ಲಿಯವರೆಗೂ ಜಗತ್ತಿನಲ್ಲಿ ಯಾರೊಬ್ಬರಿಗೂ ಇದು ಸಾಧ್ಯವಾಗಿಲ್ಲ. ನಮ್ಮ ಜೀವನ ಹೇಗಿದೆಯೆಂದರೆ,

ಅದರೊಳಗೆ ಕೆಲವು ನಿಗೂಢವಾದ ಸಂಗತಿಗಳಿವೆ. ಹೀಗಾಗಿಯೇ, ಮಿಕ್ಕವರನ್ನೆಲ್ಲ ಹಿಂದಿಕ್ಕುವ ಸಾಹಸ ಯಾರಿಂದಲೂ ಆಗಿಲ್ಲ. ಇಂತಹದ್ದೊಂದು ಸಾಧನೆಯನ್ನು ಮಾಡಿದ್ದೇನೆಂದು ಹೇಳಿಕೊಳ್ಳುವ ಯಾರ ಬಗ್ಗೆಯಾದರೂ ನೀವು ಕೇಳಿದ್ದೀರ? ನೆಪೋಲಿಯನ್ ಬೋನಪಾರ್ಟೆಯಾಗಲಿ, ಸಿಕಂದರ್ ಆಗಲಿ, ಸಿಕಂದರ್ ಲೋಧಿಯಾಗಲಿ, ಜವಾಹರಲಾಲ್ ನೆಹರು ಆಗಲಿ, ಹೀಗೆ ಹೇಳಿಕೊಳ್ಳುವ ಧೈರ್ಯವನ್ನು ಎಂದೂ ತೋರಿಸಿಲ್ಲ.

ಪಿಯರ್ ಎನ್ನುವ ವಿಜ್ಞಾನಿಯೊಬ್ಬನಿದ್ದ. ಇವನು ಜೀರುಂಬೆಗಳ ಜೀವನಕ್ರಮವನ್ನು ಕುರಿತು ಅಧ್ಯಯನ ನಡೆಸಿದ. ಈ ಜೀರುಂಬೆಗಳ ಸ್ವಭಾವವೇನೆಂದರೆ, ಒಂದು ಗುಂಪಿನಲ್ಲಿರುವ ಈ ದುಂಬಿಗಳೆಲ್ಲ ತಮ್ಮ ನಾಯಕನನ್ನು ದಣಿವರಿಯದೆ ಅನುಕರಿಸುತ್ತವೆ. ಎಲ್ಲಿಯವರೆಗೆ, ಯಜಮಾನ ದುಂಬಿಯು ತೆವಳುತ್ತಲೇ ಇರುತ್ತದೋ ಅಲ್ಲಿಯವರೆಗೂ ಉಳಿದ ದುಂಬಿಗಳು ಕೂಡ ತೆವಳುತ್ತಲೇ ಇರುತ್ತವೆ. ವಿಚಿತ್ರವೆಂದರೆ, ಉಳಿದವರನ್ನು ಕುರುಡಾಗಿ ಅನುಕರಿಸುವಂತಹ ದೌರ್ಬಲ್ಯ ಕೆಲವು ದುಂಬಿಗಳ ಜಾತಿಯಲ್ಲೂ ಇದೆ.

ಪಿಯರ್ ತನ್ನ ಅಧ್ಯಯನದಲ್ಲಿ ಏನು ಮಾಡಿದನೆಂದರೆ, ಒಂದು ತಟ್ಟೆಯನ್ನು ತೆಗೆದುಕೊಂಡು ಅದರ ಮೇಲೆ ಹತ್ತು-ಹದಿನೈದು ಜೀರುಂಬೆಗಳನ್ನು ಬಿಟ್ಟ. ಕೂಡಲೇ ಗುಂಪಿನ ಜೀರುಂಬೆಗಳೆಲ್ಲವೂ ತಮ್ಮ ನಾಯಕನ ಸುತ್ತ ಗಿರಕಿ ಹೊಡೆಯಲು ಶುರು ಮಾಡಿದವು. ಆದರೆ, ಆ ತಟ್ಟೆಯು ದುಂಡಗೆ ಇದ್ದುದರಿಂದ ದಾರಿಗೆ ಕೊನೆಯೆಂಬುದೇ ಇರಲಿಲ್ಲ. ಹೀಗಾಗಿ, ಆ ಜೀರುಂಬೆಗಳು ಒಂದೇ ಸಮನೆ ಸುತ್ತತೊಡಗಿದವು. ಇದು ಕೊನೆಗೆ ಏನಾಯಿತೆಂದರೆ, ತಮ್ಮ ನಾಯಕ ಸುತ್ತುತ್ತಲೇ ಇದ್ದಾನೆಂದು ಉಳಿದ ಜೀರುಂಬೆಗಳು, ತನ್ನ ಅಧೀನದಲ್ಲಿರುವ ಜೀರುಂಬೆಗಳು ಸುತ್ತುತ್ತಲೇ ಇವೆಯೆಂದು ಯಜಮಾನ ದುಂಬಿ ಎರಡೂ ಇದನ್ನು ನಿಲ್ಲಿಸಲೇ ಇಲ್ಲ. ಮನುಷ್ಯ ಜಗತ್ತಿನಲ್ಲೂ ಇದು ಹೀಗೆಯೇ ಆಗುತ್ತಿದೆ. ಅಲೆಕ್ಸಾಂಡರ್ ಮತ್ತು ನೆಪೋಲಿಯನ್‌ನಂಥವರು ಇಲ್ಲಿ ಮುಖ್ಯ ಜೀರುಂಬೆ ಇದ್ದಂತೆ. ಇಲ್ಲಿ ಏನಾಗುತ್ತಿದೆ ಎಂದರೆ, ನಾಯಕನಾದವನು ನಿಂತು ಬಿಟ್ಟರೆ ಉಳಿದವರು ಅವನನ್ನು ವಿಫಲಗೊಂಡ ನಾಯಕನೆನ್ನುತ್ತಾರೆ; ಹಾಗೆಯೇ, ಅನುಯಾಯಿಗಳು ನಿಂತುಬಿಟ್ಟರೆ ನಾಯಕನಾದವನು ಅವರನ್ನೆಲ್ಲ ಹೇಡಿಗಳೆಂದು ಜರಿಯುತ್ತಾನೆ! ಇಂತಹ ಮನೋಭಾವದ ಪರಿಣಾಮವಾಗಿ ಆ ಜೀರುಂಬೆಗಳು ಕೊನೆಗೆ ಅತಿಯಾದ ದಣಿವಾಗಿ ಒಂದರ ಹಿಂದೆ ಒಂದರಂತೆ ಸತ್ತು ಬೀಳತೊಡಗಿದವು. ಅಂದರೆ, ಈ ಜೀರುಂಬೆಗಳಿಗೆ ಇಂತಹ ಕೊನೆಯಿಲ್ಲದ ಪ್ರಯಾಣಕ್ಕೆ ಯಾವ ಅರ್ಥವೂ ಇಲ್ಲ, ನಾವಿಲ್ಲಿ ಸುಮ್ಮನೆ ವರ್ತುಲಾಕಾರದ ತಟ್ಟೆಯೊಳಗೆ ಗೊತ್ತುಗುರಿ ಇಲ್ಲದೆ ಗಿರಕಿ ಹೊಡೆಯುತ್ತಿದ್ದೇವೆ ಎನ್ನುವ ಸತ್ಯವೇ ಅರ್ಥವಾಗಲಿಲ್ಲ.

ನಾವು ಎಚ್ಚರಿಕೆಯಿಂದ ಗಮನಿಸಿದರೆ, ಬದುಕಿನ ಮಹಾಯಾನದಲ್ಲಿ ಕಟ್ಟಕಡೆಯ ತಾಣವನ್ನು ತಲುಪಿದವರು ಯಾರೂ ಇಲ್ಲ. ಮೇಲೆ ಹೇಳಿದ ಜೀರುಂಬೆಗಳ ಕತೆಯಲ್ಲೊಂದು ಸತ್ಯ ಅಡಗಿದೆ. ಅದೇನೆಂದರೆ, ನಮ್ಮೆಲ್ಲರ ಬದುಕು ಕೂಡ ಒಂದು ವರ್ತುಲಾಕಾರದ ಗಿರಕಿಯೇ ಆಗಿದೆ. ಇಲ್ಲಿ ಯಾರೋ ಒಬ್ಬರು ಯಾವಾಗಲೂ



ನಮಗಿಂತ ಮುಂದಿರುತ್ತಾರೆ; ಇನ್ಯಾರೋ ಒಂದಿಷ್ಟು ಮಂದಿ ಹಿಂದೆ ಬರುತ್ತಿರುತ್ತಾರೆ. ಯಾರೇ ಆಗಲಿ, ಎಲ್ಲರಿಗಿಂತ ಮುಂದಿರುವುದಾಗಲಿ, ಎಲ್ಲರಿಗಿಂತ ಹಿಂದುಳಿಯುವುದಾಗಲಿ ಸಾಧ್ಯವಿಲ್ಲ. ಈ ಪಯಣವು ಯಾರೋ ಒಬ್ಬರು ಕುಸಿದು ಬಿದ್ದು, ಕೊನೆಯುಸಿರೆಳೆಯುವವರೆಗೂ ಮುಂದುವರಿದೇ ಇರುತ್ತದೆ. ಕೇವಲ ಜೀರುಂಬೆಗಳಲ್ಲ, ಮನುಷ್ಯರು ಕೂಡ ಅತಿಯಾದ ಬಳಲಿಕೆಯಿಂದ ಪ್ರಾಣ ತೆರುತ್ತಾರೆ. ಹೀಗಾದಾಗ, ನಮ್ಮ ಹಿಂದಿರುವವರು ನಮ್ಮನ್ನು ದಾಟಿಕೊಂಡು, ಮುಂದಕ್ಕೆ ಹೋಗುತ್ತಾರೆ. ಆದರೆ ಈ ಪೈಕಿ ಯಾರೊಬ್ಬರೂ ಕುಸಿದು ಬಿದ್ದವನನ್ನು ಕಣ್ಣೆತ್ತಿಯೂ ನೋಡುವುದಿಲ್ಲ; ಅವರಿಗೆ, ತಾವು ಕೂಡ ಹೀಗೆಯೇ ಕೊನೆಯುಸಿರೆಳೆಯುವತ್ತ ಸಾಗುತ್ತಿದ್ದೇವೆ ಎನ್ನುವುದನ್ನು ತಿಳಿದುಕೊಳ್ಳುವ ವ್ಯವಧಾನವೂ ಯಾರಿಗೂ ಇಲ್ಲ. ಜಗತ್ತಿನ ಚರಿತ್ರೆಯಲ್ಲಿ ಇವತ್ತಿನವರೆಗೂ ಸ್ಪರ್ಧೆಯ ಜಿದ್ದಿಗೆ ಬಿದ್ದು ಗೆದ್ದವರಿಲ್ಲ; ಮುಂದೆಯೂ ಇಂಥವರು ಬರುವುದು ಸಾಧ್ಯವಿಲ್ಲ. ಇಂತಹ ಸ್ಪರ್ಧೆಗೆ ಕೊನೆಯೆಂಬುದೇ ಇಲ್ಲ. ಏಕೆಂದರೆ, ಇದೊಂದು ರೀತಿಯಲ್ಲಿ ವರ್ತುಲಾಕಾರದ ಪಯಣವೇ ಆಗಿದೆ.

ಆದರೆ, ಇನ್ನೊಂದು ಬಗೆಯ ಪಯಣ ನಮಗೆ ಸಾಧ್ಯವಿದೆ. ಅದ್ಯಾವುದೆಂದರೆ, ನಮ್ಮನ್ನು ನಾವು ಮೀರುವಂತಹ ಪಯಣ. ಈ ಮೂಲಕ ಬದುಕಿನ ಔನ್ನತ್ಯವನ್ನು ಸಾಧಿಸಲು ಮತ್ತು ನಮ್ಮ ಮೇಲ್ಸ್ತರದ ವ್ಯಕ್ತಿತ್ವವನ್ನು ಮೆಟ್ಟಿ ಬೆಳೆಯಲು ಸಾಧ್ಯವಿದೆ. ಇಂತಹ ಪಯಣದಲ್ಲಿ ಜಗತ್ತಿನ ಯಾರೊಬ್ಬರೊಂದಿಗೂ ಸಾಧ್ಯವಿರುವುದಿಲ್ಲ. ಇನ್ನೊಬ್ಬರೊಂದಿಗೆ ಯಾವ ಕಾರಣಕ್ಕೂ ಹುಚ್ಚುಸ್ಪರ್ಧೆಗೆ ಬೀಳಬಾರದು, ಬದಲಿಗೆ ನಿಮ್ಮನ್ನು ನೀವು ಮೀರುವ ತುಡಿತವನ್ನು ಬೆಳೆಸಿಕೊಳ್ಳಬೇಕು ಎಂದು ಯಾವುದು ನಿಮಗೆ ಹೇಳಿಕೊಡುತ್ತದೋ ಅದನ್ನು ಮಾತ್ರವೇ ನಾನು ನಿಜವಾದ ಶಿಕ್ಷಣವೆನ್ನುತ್ತೇನೆ. ಯಾವತ್ತು ಒಬ್ಬ ಮನುಷ್ಯ ತನ್ನನ್ನು ತಾನು ಮೀರುವ ಸಾಧನೆಗೆ ತೊಡಗಿಸಿಕೊಳ್ಳುತ್ತಾನೋ ಅಂದು ಮಾತ್ರವೇ ಅವನ ಪಾಲಿನ ಸಂತೋಷದ ನಿಜವಾದ ಬಾಗಿಲು ತೆರೆದುಕೊಳ್ಳುತ್ತದೆ. ಇದು ಆ ಮನುಷ್ಯನಿಗೆ ಆ ಕ್ಷಣದವರೆಗೂ ಗೊತ್ತಿರುವುದಿಲ್ಲ. ಇನ್ನೊಂದೆಡೆ, ಇನ್ನೊಬ್ಬರೊಂದಿಗೆ ಸ್ಪರ್ಧೆಗೆ ಬೀಳುವವನು ಹೊಸ ಬಗೆಯ ಸಂಕಷ್ಟ, ನೋವು, ಆತಂಕ ಮತ್ತು ದಣಿವಿಗೆ ಸಿಲುಕಿ ಹಾಕಿಕೊಳ್ಳುತ್ತಾನೆ.

ಒಂದು ಸಂಗತಿಯನ್ನು ನೀವು ಮರೆಯಬೇಡಿ. ಅದೇನೆಂದರೆ, ಇತರರನ್ನು ಹಿಂದಿಕ್ಕುವುದೆಂದರೆ ನೀವು ಅವರಿಗೆ ನೋವು ಕೊಟ್ಟಂತೆಯೇ ಸರಿ. ಯಾರು ಪರರಿಗೆ ನೋವನ್ನುಂಟು ಮಾಡುತ್ತಾರೋ ಅಂಥವರು ಜೀವನದಲ್ಲಿ ಆನಂದವನ್ನು ಕಾಣಲಾರರು. ಏಕೆಂದರೆ, ನಾವು ಇತರರಿಗೆ ಏನನ್ನು ಕೊಡುತ್ತೇವೋ ಅದೇ ನಮಗೂ ಸಿಕ್ಕುತ್ತದೆ. ಬದುಕಿಗೆ ನಾವು ಏನನ್ನು ಕೊಡುತ್ತೇವೋ ಅದರ ಪ್ರತಿಧ್ವನಿಯ ತರಂಗಗಳೇ ನಮಗೆ ಕೇಳಿಸುವ ಈ ಬದುಕು ನಿಜಕ್ಕೂ ಅಚ್ಚರಿಗಳ ಒಡಲು.

ನಾನೊಮ್ಮೆ ಒಂದು ಬೆಟ್ಟಕ್ಕೆ ಹೋಗಿದ್ದೆ. ಅಲ್ಲಿನ ಒಂದು ಜಾಗದಲ್ಲಿ ನಿಂತುಕೊಂಡು ಕೂಗಿದರೆ ಪ್ರತಿಧ್ವನಿಯ ತರಂಗಗಳು ಏಳುತ್ತಿದ್ದವು. ಒಂದು ಸಲ ಕೂಗಿದರೆ ಸಾಕು, ಏಳು ಬಾರಿ ಅದು ಅಲ್ಲಿ ಪ್ರತಿಧ್ವನಿಸುತ್ತಿತ್ತು. ನನ್ನ ಗೆಳೆಯನೊಬ್ಬ ಏನು ಮಾಡಿದನೆಂದರೆ,

ಒಂದು ಸಲ ನಾಯಿಯಂತೆ 'ಬೌ...ಬೌ, ಬೌಬೌಬೌ.....' ಎಂದು ಕೂಗಿಕೊಂಡ. ಕೂಡಲೇ ಆ ಪರ್ವತದಲ್ಲಿ ಅದೆಷ್ಟೋ ನಾಯಿಗಳು ಬೊಗಳುತ್ತಿರುವಂತೆ ಅನುಭವವಾಗತೊಡಗಿತು. ಇದರಿಂದ ನಿಜಕ್ಕೂ ನೆಮ್ಮದಿ ಹಾಳಾಯಿತು. ಆಗ ನಾನು ನನ್ನ ಸ್ನೇಹಿತನಿಗೆ 'ಅಲ್ಲಯ್ಯ, ಹೀಗೆ ನಾಯಿಯಂತೆ ಬೊಗಳಿ ನೆಮ್ಮದಿಯನ್ನು ಹಾಳು ಮಾಡುವ ಬದಲು ನೀನು ಒಂದು ಹಾಡನ್ನು ಹಾಡಬಹುದಾಗಿತ್ತು. ಅಕಸ್ಮಾತ್ ಹಾಡಲು ಬರದಿದ್ದರೆ ಕೋಗಿಲೆಯಂತೆ ಕುಹೂಕುಹೂ ಎಂದಾದರೂ ಧ್ವನಿ ಹೊರಡಿಬಹುದಿತ್ತಲ್ಲ?' ಎಂದೆ. ಇದರ ಅರ್ಥವೇನೆಂದರೆ, ನಾವು ನಾಯಿಯಂತೆ ಬೊಗಳುವುದು ಅನಗತ್ಯ. ನಾನು ಇಷ್ಟು ಹೇಳಿದ ಮೇಲೆ ಆತ ಕೋಗಿಲೆಯಂತೆ ಕುಹೂಕುಹೂ ಎಂಬ ಕೂಜನವನ್ನು ಹೊರಡಿಸಿದ. ಆಗ ಕೂಡಲೇ ಆ ಬೆಟ್ಟದ ತುಂಬೆಲ್ಲ ಹಿತಕರವಾದ ಪ್ರತಿಧ್ವನಿ ಕೇಳತೊಡಗಿತು.

ಇಷ್ಟಾದಮೇಲೆ ನಾನು ಆ ಗೆಳೆಯನಿಗೆ 'ನೋಡಯ್ಯ, ಜೀವನವೆಂದರೆ ಇಷ್ಟೇ; ಅದೊಂದು ಪ್ರತಿಧ್ವನಿಯಂತೆ. ನಾವು ಬೈಗಳವನ್ನು ಆಡಿದರೆ ಅದು ಅದನ್ನೇ ಪ್ರತಿಧ್ವನಿಸುತ್ತದೆ. ಅದನ್ನು ಬಿಟ್ಟು ದನಿಯೆತ್ತಿ ಹಾಡಿದರೆ ಅದರ ಮಾಧುರ್ಯವೇ ಕೇಳಿಸುತ್ತದೆ. ಇವೆಲ್ಲವನ್ನೂ ಬಿಟ್ಟು ಮುಳ್ಳನ್ನು ಚೆಲ್ಲಾಡಿದರೆ ಬದುಕಿನುದಕ್ಕೂ ನಮಗೆ ಅದೇ ಹಾದಿ ಎದುರಾಗುತ್ತದೆ. ಹೂವನ್ನು ಕೊಟ್ಟರೆ ಅದೂ ಹೂವನ್ನೇ ಕೊಡುತ್ತದೆ,' ಎಂದೆ.

ಹೌದು, ಬದುಕು ಪ್ರತಿಧ್ವನಿಗಳ ಒಂದು ಅದ್ಭುತ ತಾಣ. ನಾವು ಏನನ್ನು ಮಾಡುತ್ತೇವೋ ಅದೇ ಅನುರಣಿಸುತ್ತದೆ. ಇನ್ನೊಬ್ಬರಿಗೆ ತೊಂದರೆ ಕೊಡುವುದು ಹೇಗೆ, ಅವರನ್ನು ಸೋಲಿಸುವುದು ಹೇಗೆಂದು ಬೋಧಿಸುತ್ತಿದ್ದರೆ ಅಥವಾ ಇನ್ನೊಬ್ಬರಿಗೆ ದುಃಖವನ್ನು ಉಂಟುಮಾಡುವುದು ಹೇಗೆಂದು ಯೋಚಿಸುತ್ತಿದ್ದರೆ ನಮಗೆ ಸಿಗುವ ಫಲಗಳೂ ಅವೇ ಆಗಿರುತ್ತವೆ. ಇಂತಹ ಕೆಲಸಗಳನ್ನು ಮಾಡಿ, ಅದಕ್ಕೆ ತಕ್ಕ ಫಲವನ್ನು ಪಡೆಯುತ್ತಿದ್ದರೆ, ಇದರಿಂದ ನಾವು ಎಂದಾದರೂ ಮೋಕ್ಷದ ಹತ್ತಿರಕ್ಕೆ ಹೋಗುವುದಾದರೂ ಸಾಧ್ಯವೇ? ಇದರಿಂದ ನಮಗೇನಿದ್ದರೂ ಸಿಗುವುದು ನರಕಪ್ರಾಪ್ತಿ, ಅಸಂತೋಷ, ನೋವು ಮತ್ತು ಇನ್ನಿತರ ಸಂಕೋಲೆಗಳಷ್ಟೆ. ನಾವು ಇನ್ನೊಬ್ಬರ ಹಾದಿಯಲ್ಲಿ ಕಲ್ಲುಮುಳ್ಳುಗಳನ್ನೆಸೆಯುವುದು ಉಪಟಳ; ಬದಲಿಗೆ, ಹೂವನ್ನು ಎರಚುವುದು ಉಪಕಾರ. ಈ ಪೈಕಿ ಕಲ್ಲುಮುಳ್ಳುಗಳನ್ನೆಸೆದ ಕೆಲಸವು ನಮಗೆ ನಾಳೆ ನೋವು–ಸಂಕಟಗಳನ್ನು ತಂದಿತ್ತರೆ, ಹೂವನ್ನು ಎರಚುವಂಥ ಹಿತಕರವಾದ ಕೆಲಸ ನೆಮ್ಮದಿ ಮತ್ತು ಸಂತೃಪ್ತಿಯನ್ನು ತರುತ್ತದೆ.

ರಷ್ಯಾದ ಬಹುದೊಡ್ಡ ತತ್ತ್ವಜ್ಞಾನಿಯಾಗಿದ್ದ ಮೇಡಂ ಬ್ಲಾವೋಟ್ಸ್ಕಿ ಇಡೀ ಜಗತ್ತನ್ನೆಲ್ಲ ಸುತ್ತಿದ್ದಳು. ಆಕೆ ತಾನು ಹೋದಲ್ಲೆಲ್ಲ ಒಂದು ಕೈಚೀಲ ಭರ್ತಿ ಹೂವಿನ ಬೀಜಗಳನ್ನು ತೆಗೆದುಕೊಂಡು ಹೋಗುತ್ತಿದ್ದಳಲ್ಲದೆ, ದಾರಿಯ ಇಕ್ಕೆಲ್ಲಗಳಲ್ಲೂ ಅದನ್ನು ಎರಚುತ್ತಿದ್ದಳು. ಇದನ್ನು ನೋಡಿದ ಜನ 'ಅರೆ, ಹೀಗೇಕೆ ಮಾಡುತ್ತೀರಿ?' ಎಂದು ಕೇಳಿದರು. ಅದಕ್ಕೆ



ಬ್ಲಾವೋಟ್ಸ್ಕಿ 'ಮಹಾಜನಗಳೇ, ಇನ್ನೇನು ಮಳೆಗಾಲ ಬರಲಿದೆ. ಆಗ ಇಲ್ಲೆಲ್ಲ ಹೂವಿನ ಗಿಡಗಳು ಚಿಗುರುತ್ತವೆ. ಮುಂದೊಂದು ದಿನ ಅವು ಹೂವು ಬಿಡುತ್ತದೆ. ಆಗ ನಿಜಕ್ಕೂ ನೋಡಲು ಅದು ತುಂಬಾ ಚೆನ್ನಾಗಿರುತ್ತದೆ,' ಎನ್ನುತ್ತಿದ್ದಳು.

ಆದರೆ, ಜನರಿಗೆ ಇದರ ಮಹತ್ತ್ವ ಅರ್ಥವಾಗಲಿಲ್ಲ. ಹೀಗಾಗಿ ಅವರು ಪುನಃ 'ಅದು ಸರಿ, ಹೂವು ಅರಳುವುದರಿಂದ ನಿಮಗೇನು ಪ್ರಯೋಜನ? ನೀವೇನೂ ಪುನಃ ಇಲ್ಲಿಗೆ ಬರುವುದಿಲ್ಲವಲ್ಲ?' ಎಂದರು. ಆಗ ಬ್ಲಾವೋಟ್ಸ್ಕಿ, 'ನೋಡಿ ಜನಗಳೇ, ನಾನು ಹೋದೆಡೆಯಲ್ಲೆಲ್ಲ ಸಾವಿರಾರು ಹೂವಿನ ಗಿಡಗಳನ್ನು ಕಂಡು ಹಿಗ್ಗುತ್ತೇನೆ. ಅವೇನೂ ನಾನು ಹಾಕಿರುವ ಗಿಡಗಳಲ್ಲ. ಯಾರೋ ಪುಣ್ಯಾತ್ಮರು ಹಾಕಿರುವ ಗಿಡಗಳು ಅವು. ಅವರ ಋಣ ನನ್ನ ಮೇಲಿದೆ. ಹೀಗೆ ಹೂವಿನ ಬೀಜವನ್ನು ಎರಚುವ ಮೂಲಕ ನಾನು ಅವರ ಋಣವನ್ನು ತೀರಿಸುತ್ತಿದ್ದೇನೆ ಅಷ್ಟೆ. ಕೆಲವೇ ದಿನಗಳಲ್ಲಿ ಇಲ್ಲೆಲ್ಲ ಹೂವಿನ ಗಿಡಗಳು ನಳನಳಿಸಲಿವೆ. ಅವುಗಳನ್ನು ಕಂಡು ಇಲ್ಲಿ ಹಾದು ಹೋಗುವ ಜನರು ಖುಷಿಪಡುತ್ತಾರೆ. ಆಗ ನಾನು ಇದೇ ಹಾದಿಯಲ್ಲಿ ಪ್ರಯಾಣ ಮಾಡದೇ ಇರಬಹುದು. ಆದರೆ, ಹೂವಿನ ಗಿಡಗಳನ್ನು ಕಣ್ತುಂಬಿಕೊಳ್ಳುವ ಜನರಿಗೆ ಆಗುವ ಸಂತೋಷಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಮುಂದಿನ ಉಜ್ವಲ ಭವಿಷ್ಯವನ್ನು ಕಲ್ಪಿಸಿಕೊಂಡೇ ನಾನು ಖುಷಿ ಪಡಬಲ್ಲೆ,' ಎಂದಳು.

ನೀವು ಇಂದು ಮಾಡುವ ಒಂದು ಒಳ್ಳೆಯ ಕೆಲಸದಿಂದ ಇನ್ನೊಬ್ಬರಿಗಾಗುವ ಖುಷಿ ಎಂತಹುದು ಎಂದು ನೀವು ಎಂದಾದರೂ ಊಹಿಸಿಕೊಂಡಿದ್ದೀರ? ನಿಮ್ಮಿಂದಾಗಿ ಇನ್ನೊಬ್ಬರಿಗೆ ಸಂತೋಷವಾಗುತ್ತದೆ, ಇನ್ನೊಬ್ಬರ ಹೃದಯ ಹಿಗ್ಗುತ್ತದೆ ಎನ್ನುವುದನ್ನು ನೀವು ಕಲ್ಪಿಸಿಕೊಂಡರೆ ಸಾಕು, ಬದುಕು ಸಾರ್ಥಕವಾದಂತೆ.

ಅಂತಿಮವಾಗಿ ನಿಮಗೆ ಬೇಕಾದ ಬಿಡುಗಡೆಯನ್ನು ಅಥವಾ ಮೋಕ್ಷವನ್ನು ಕರುಣಿಸುವುದೆಂದರೆ ಅದು ವಿದ್ಯೆಯೇ! ಯಾವುದು ಮನುಷ್ಯನನ್ನು ಆತ್ಮದ ಹತ್ತಿರಕ್ಕೆ, ಸತ್ಯದ ಹತ್ತಿರಕ್ಕೆ ಕೊಂಡೊಯ್ಯುತ್ತದೋ ಅದೇ ನಿಜವಾದ ವಿದ್ಯೆ. ಈ ನಿಟ್ಟಿನಲ್ಲಿ ನಿಮಗೆ ಸಹಾಯ ಮಾಡುವವರ್ಯಾರು? ಖಂಡಿತವಾಗಿಯೂ ಈ ಹಾದಿಯಲ್ಲಿ ಅವರಿವರು ಸಹಾಯ ಮಾಡಲಾರರು. ಬದಲಿಗೆ, ಅನುದಿನವೂ ನಿಮ್ಮ ಅಂತರಂಗವನ್ನು ನೀವು ಪುಟಕ್ಕಿಟ್ಟ ಚಿನ್ನದಂತೆ ಅಗ್ನಿದಿವ್ಯಕ್ಕೆ ಒಡ್ಡಿಕೊಳ್ಳಬೇಕು. ಹೀಗೆ ಮಾಡಿಕೊಳ್ಳುವ ಮೂಲಕ ನಿಮ್ಮ ಒಳಗಿರುವ ಕಲ್ಮಷವೆಲ್ಲ ತೊಳೆದು ಹೋಗುವಂತೆ ಮಾಡಬೇಕು. ಆಗಮಾತ್ರ ಅಪರಂಜಿ ಚಿನ್ನ ಉಳಿಯುತ್ತದೆ. ಯಾರೇ ಆಗಲಿ, ನಿರಂತರವಾಗಿ ತಮ್ಮ ಸುತ್ತಲೇ ಇರುವ ಕೀಳು ಅಭಿರುಚಿಯನ್ನು ಮೆಟ್ಟಿ ನಿಂತು ಆಕಾಶೋನ್ನತವಾಗಿ ಬೆಳೆಯಬೇಕು. ಯಾವ ಶಿಕ್ಷಣ ವ್ಯವಸ್ಥೆಯು ಇದನ್ನೆಲ್ಲ ಹೇಳಿಕೊಡುತ್ತದೋ ಅದೇ ನಮಗೆ ಅಗತ್ಯವಾದ ಬಂಧವಿಮೋಚನೆಯನ್ನೂ ದಕ್ಕಿಸಿ ಕೊಡುತ್ತದೆ.

ನಾನು ಇಂದು ನಿಮಗೆ ಕೆಲವು ಸಂಗತಿಗಳನ್ನು ಹೇಳಿದ್ದೇನೆ. ಕೊನೆಯದಾಗಿ, ಇನ್ನು ಒಂದೇ ಒಂದು ಸಂಗತಿಯನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಅದೇನೆಂದರೆ, ಈ ಜಗತ್ತಿನಲ್ಲಿ ನೋವು, ಸಂಕಷ್ಟ, ಕತ್ತಲು, ದ್ವೇಷ ಮತ್ತು ಹಿಂಸೆಗಳೇ

ತಾಂಡವವಾಡುತ್ತಿರುವುದಕ್ಕೆ ನಾವೆಲ್ಲರೂ ಹುಸಿಜ್ಞಾನವನ್ನೇ ದಿಟವಾದ ಜ್ಞಾನವೆಂದು ತಿಳಿದುಕೊಂಡಿರುವುದೇ ಕಾರಣ. ದೈನೇಸಿಯಾಗಿರುವ ಮನುಷ್ಯನ ಜೀವನದಲ್ಲಿ ಹೊಸ ಗಾಳಿ–ಬೆಳಕು ಬರಬೇಕಾದರೆ ನಾವು ಹುಸಿಜ್ಞಾನ ಮತ್ತು ದಿಟಜ್ಞಾನಗಳ ನಡುವೆ ಸ್ಪಷ್ಟವಾದ ಗೆರೆಯನ್ನು ಎಳೆಯಲೇಬೇಕು. ಹೇಗಾದರೂ ಸರಿ, ಹೊಟ್ಟೆ ಹೊರೆದುಕೊಂಡರೆ ಸಾಕು ಎನ್ನುವುದನ್ನು ಹೇಳಿಕೊಡುವ ವಿದ್ಯೆಯು ಸಂಪೂರ್ಣ ಹುಸಿ. ಯಾವುದು ಯಃಕಶ್ಚಿತ್ ಜೀವನೋಪಾಯವನ್ನು ಬಿಟ್ಟು ಜೀವನದ ಬಗ್ಗೆಯೇ ನಿಮಗೆ ಘನವಾದ ಸಂಗತಿಗಳನ್ನು ದಾಟಿಸುತ್ತದೊ ಆದೆ ದಿಟವಾದ ಜ್ಞಾನ.

ಒಟ್ಟನಲ್ಲಿ ನಮ್ಮಲ್ಲಿ ಮಿಥ್ಯಜ್ಞಾನದ ಶಾಲೆಗಳೂ ಇರಬೇಕು, ಸತ್ಯಜ್ಞಾನದ ಶಾಲೆಗಳೂ ಇರಬೇಕು. ಮೊದಲನೆಯ ಬಗೆಯ ಶಾಲೆಗಳು ಕೇವಲ ಮೂರು ಹೊತ್ತಿನ ಊಟವನ್ನು ಸಂಪಾದಿಸುವುದು ಹೇಗೆಂದು ಹೇಳಿಕೊಡುತ್ತವೆ. ಏಕೆಂದರೆ, ಹೊಟ್ಟೆಗಿಲ್ಲದೆ ಯಾರೂ ಬದುಕುಳಿಯುವುದು ಸಾಧ್ಯವಿಲ್ಲ. ಆದರೆ, ಊಟ–ತಿಂಡಿಗಳಿಂದಷ್ಟೇ ಯಾರೂ ನೆಮ್ಮದಿಯಿಂದ ಬದುಕಲಾರರು. ಆದರೆ ನಾವು ಇಲ್ಲಿಯವರೆಗೂ ಹುಸಿ ಶಾಲೆಗಳನ್ನೇ ದಿಟವಾದ ಶಾಲೆಗಳೆಂದು ಭ್ರಮಿಸಿದ್ದೇವೆ. ಇಷ್ಟೇ ಅಲ್ಲ, ಇಂತಹ ಅನಾಹುತಕಾರಿ ಶಾಲೆಗಳಿಗೆ ನಾವು ಮಹಾಮಹಿಮರ ವ್ಯಕ್ತಿಗಳ ಹೆಸರನ್ನಿಟ್ಟಿದ್ದೇವೆ. ಉದಾಹರಣೆಗೆ, 'ಮಹಾವೀರ ವಿದ್ಯಾಲಯ' ಎಂಬ ಒಂದು ಶಾಲೆ ಇದೆ ಎಂದಿಟ್ಟುಕೊಳ್ಳಿ. ವಾಸ್ತವವಾಗಿ, ನಮ್ಮ ಜಗತ್ತಿನಲ್ಲಿರುವ ಯಾವೊಂದು ಶಾಲೆಗೂ ಮಹಾವೀರನ ಹೆಸರನ್ನು ಇಟ್ಟುಕೊಳ್ಳುವ ಯೋಗ್ಯತೆ ಇಲ್ಲ. ಮಹಾವೀರನಂತಹ ಯುಗಪುರುಷನ ಹೆಸರನ್ನು ಇಟ್ಟುಕೊಳ್ಳಲು ಇನ್ನೂ ಸಾಕಷ್ಟು ಸಮಯ ಬೇಕು. ಈಗಂತೂ ಇರುವುದೆಲ್ಲ ಕೇವಲ ಸಾಮಾನ್ಯವಾದ ಶಾಲೆಗಳು. ಇಲ್ಲಿ ಮಹಾವೀರನ ವಿಚಾರಗಳನ್ನು ಪ್ರತಿನಿಧಿಸುವ ಒಂದೇ ಒಂದು ಶಾಲೆಯೂ ಇಲ್ಲ. ಆದರೆ, ನಾವೆಲ್ಲರೂ ತ್ರಿಕರಣಪೂರ್ವಕವಾಗಿ ಶ್ರಮಿಸಿದರೆ, ಅಂತಹ ಒಂದು ಶಾಲೆಯು ಮೈದಾಳುವಂತೆ ಮಾಡಬಹುದು.

ಆ ಪರಮಾತ್ಮನಲ್ಲೂ ನಿಮ್ಮಲ್ಲೂ ನನ್ನ ಪ್ರಾರ್ಥನೆ ಇಷ್ಟೆ. ಮುಂದೊಂದು ದಿನ ಮಹಾವೀರ, ಬುದ್ಧ, ಯೇಸುಕ್ರಿಸ್ತ ಮುಂತಾದ ಮಹಾತ್ಮರ ಹೆಸರಿನಲ್ಲಿ ಶಾಲೆಗಳು ಬರಲಿ. ಅವರೆಲ್ಲರೂ ನಿಜಕ್ಕೂ ಬಹುದೊಡ್ಡ ಸಾಧಕರು. ಅವರೆಲ್ಲರಿಗೂ ಬದುಕೆಂದರೇನೆಂದು ಗೊತ್ತಿತ್ತು; ಅವರೆಲ್ಲರೂ ಬಹುದೊಡ್ಡ ಬದುಕನ್ನು ಕಂಡವರು; ಇವರೆಲ್ಲರೂ ಮೋಕ್ಷಾನುಭವಿಗಳು.

ಇಲ್ಲಿಯವರೆಗೆ ನನ್ನ ಮಾತುಗಳನ್ನು ಪ್ರೀತಿಯಿಂದಲೂ ಮೌನದಿಂದಲೂ ಕೇಳಿಸಿಕೊಂಡಿದ್ದಕ್ಕೆ ನಿಮ್ಮೆಲ್ಲರಿಗೂ ನಾನು ಕೃತಜ್ಞ, ನಿಮ್ಮೆಲ್ಲರೊಳಗೂ ನೆಲೆಸಿರುವ ಭಗವಂತನಿಗೂ ನಿಮಗೂ ನನ್ನ ಪ್ರಣಾಮಗಳು.

(1968ರ ಸೆಪ್ಟೆಂಬರ್ 23ರಂದು ಬೊಂಬಾಯಿಯ ಬಿರ್ಲಾ ಕ್ರೀಡಾ ಕೇಂದ್ರದಲ್ಲಿ ನೀಡಿದ ಉಪನ್ಯಾಸ)

❑



# ಹಾರುವ ಓತಿ

– ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಬೆಳಿಗ್ಗೆ ಮಂದಣ್ಣ ಹಲ್ಲು ಚಿಲಿಯುತ್ತಾ ಬಂದ. ಕಾಫಿ ಕುಡಿಯುತ್ತಾ "ಕರ್ವಾಲೋ ಸಾಹೇಬ್ರತ್ರ ಹೋಗಿಬರೋಣ ಕಣೋ" ಎಂದೆ. "ಅವರಿಗ್ಯಾಕ್ ಸಾರ್ ಈ ಸಣ್ಣ ಇಚಾರನೆಲ್ಲ ತಲೆಗೆ ತುಂಬೋದು" ಎಂದ ಮಂದಣ್ಣ.

"ಲೋ ಮಂದಣ್ಣ, ಗೊನ್‌ಸಾಲ್‌ವೆನ್ಸ್ ಹತ್ರ ನಮ್ಮನ್ನ ಕಳಿಸ್ಕೋರು ಯಾರೋ? ಸಾವಿರ ರೂಪಾಯಿಗೆ ಕಡಿಮೆ ಅವರು ಕೇಸನ್ನ ಕೈನಿಂದ ಮುಟ್ಟಲ್ಲಿಲ್ಲಂತೆ ಗೊತ್ತೋ" ಎಂದೆ. ಅಷ್ಟೊಂದು ಹಣ ಕೊಡಬೇಕಾಗುತ್ತೆಂದು ಕೂಡಲೇ "ನಾನೆಲ್ಲಿಂದ ತರಲಿ ಸಾರ್ ಅಷ್ಟೊಂದು ದುಡ್ಡು? ನನ್ಮದುವೇಗೇ ಲಕ್ಷ್ಮಣನ ಹತ್ರ ಐನೂರು ರೂಪಾಯಿ ಸಾಲಾ ಮಾಡ್ಕೊಂಡು ಸಾಯ್ತಿದ್ದೀನಿ ಒಂದು ವರ್ಷ ನೀವೇಳಿದಂಗೆ ರಾಗಿ ಮುದ್ದೆ ತಿನ್ಕೊಂಡು ಜೇಲಾಗೆ ಇದ್ದು ಬರ್ತಿದ್ದೆ ಸಾರ್" ಎಂದ ಗಾಬರಿಯಲ್ಲಿ.

"ಏನಾದ್ರೂ ಸಾಯಿ, ಹೋಗಿ ಕರ್ವಾಲೋ ಸಾಹೇಬ್ರಕಾಲಿಗ್ಬಿದ್ಬಿಡು. ಅದಕ್ಕೋ ಈಗ ಸಾಹೇಬರನ್ನ ನೋಡೋಕೆ ಹೋಗ್ತಿರೋದು" ಎಂದು ಕೇಳಿದ.

ಮಂದಣ್ಣ ಕಾಫಿ ಕುಡಿದ ನಂತರ ಒಂದು ನಿಮಿಷಕ್ಕೆ ಬಂದೆ ಎಂದು ಹೇಳಿ ಪ್ಯಾರನೊಡನೆ ತೋಟದ ಕಡೆ ಓಡಿದ. ತಾವಿಟ್ಟ ಜೇನು ಪೆಟ್ಟಿಗೆಗೆ ಯಾವುದಾದರೂ ಜೇನುಗಳು ಬಂದಿವೆಯೋ ನೋಡಲು. ಜೊತೆಗೆ ಇವರಿಬ್ಬರೂ ತಾವಿಟ್ಟ ಜಾಗಗಳಿಗೇ ಮೊದಲು ಬರುತ್ತವೆಂದು ಶರತ್ತು ಬೇರೆ ಕಟ್ಟಿದ್ದರು. ಅವರು ಕಾಡಿನ ಕಡೆಗೆ ಹೋಗುತ್ತಿದ್ದುದನ್ನು ನೋಡಿ ಕಟ್ಟಿಹಾಕಿದ್ದ ಕಿವಿ ಒಂದೇ ಸಮ ಸರಪಳಿ ಎಳೆಯುತ್ತಾ ಜಗ್ಗಾಡಿ ಗಲಾಟೆ ಮಾಡಿತು. ಇನ್ನೆಲ್ಲಿ ಕುತ್ತಿಗೆ ಮೂಳೆ ಮುರಿದುಕೊಳ್ಳುತ್ತದೋ ಎಂದು ಗಾಬರಿಯಿಂದ ನಾನು ಬೇಗನೆ ಅದರ ಸರಪಳಿ ಕಳಚಿದೆ. ಬಾಣದಂತೆ ಅವರು ಹೋದ ದಾರಿಯಲ್ಲಿ ಕಾಡಿನ ಕಡೆಗೆ ಓಡಿತು.

ನಾನೂ ಪ್ರಭಾಕರನೂ ಮನೆಯಲ್ಲೇ ಕುಳಿತು ಹರಟುತ್ತಾ ಕಾದೆವು. ಕರ್ವಾಲೋ ಹೇಗೆ ತನಗೆ ಪರಿಚಯವಾದರು ಎಂದು ಹಳೆಯದನ್ನೆಲ್ಲಾ ಪ್ರಭಾಕರ ನೆನೆಸಿಕೊಂಡ. ಕರ್ವಾಲೋ ಯಾವುದೋ ವಿದೇಶದ ಯೂನಿವರ್ಸಿಟಿಗೆ ಡಾಕ್ಟರೇಟ್ ಪ್ರಬಂಧ ಒಂದನ್ನು ಒಪ್ಪಿಸಿದ್ದರಂತೆ. ಅದಕ್ಕೆ ಬೇಕಾದ ಫೋಟೋಗಳು, ನಕ್ಷೆಗಳು ಎಲ್ಲವನ್ನೂ ಪ್ರಭಾಕರ ಮಾಡಿಕೊಟ್ಟನಂತೆ. ಪ್ರಭಾಕರನ ಫೋಟೋಗ್ರಫಿ ಜ್ಞಾನ ಹಾಗೂ ಉಪಕರಣಗಳು ಸಾಲದೆ ಹೊಸ ಹೊಸ ಫೋಟೋಗ್ರಫಿ ವಿಧಾನಗಳು ಮತ್ತು ಉಪಕರಣಗಳನ್ನೆಲ್ಲಾ ಕರ್ವಾಲೋ ತಿಳಿಸಿ ವಿದೇಶದಿಂದ ತರಿಸಿಕೊಟ್ಟರಂತೆ. "ಗ್ರಾಫಿಕ್ ಫೋಟೋಗ್ರಫಿ ಅಂತ ಹೊಸ ರೀತಿಯ ಕೆಲಸಾನೆ ಕಲಿಸಿಕೊಟ್ರು ಸಾರ್, ಈಗಿಂದೀಗಲೇ ನಾನೇನಾದರೂ ಬಟ್ಟೆ ಗಿರಣಿಯ ಉದ್ಯಮಕ್ಕೆ ಹೋದರೆ ನನಗೆ ತಿಳಿದಿರೋ ಗ್ರಾಫಿಕ್ ವಿದ್ಯೆಯಿಂದ

ನೂರಾರು ರೂಪಾಯಿ ದುಡೀಬಲ್ಲೆ ಸಾರ್. ಆದರೆ ಕರ್ವಾಲೋರನ್ನ ಬಿಟ್ಟು – ಹೋಗೋಕ್ಕೆ ಮನಸ್ಸೇ ಬರೋಲ್ಲ ಸಾರ್. ಅವರ ಜೊತೆ ಇದ್ದರೆ ದಿನ ದಿನಕ್ಕೂ ನಮ್ಮ ಬುದ್ಧಿ ಬೆಳೀತಾ ಹೋಗುತ್ತೆ ಸಾರ್" ಎಂದ.

"ಪ್ರತಿದಿನ ದೇಶ ವಿದೇಶಗಳಿಂದ ಫೋಟೋಗಳು ನೆಗೆಟಿವ್‌ಗಳು ಸ್ಪೆಸಿಮನ್‌ಗಳು ನೂರಾರು ಬರ್ತಿರ್ತವೆ ಸಾರ್. ಅವುಗಳನ್ನೆಲ್ಲಾ ಕರ್ವಾಲೋ ಗುರುತಿಸಿ ಜಾತಿ ವಿಂಗಡಣೆಮಾಡಿ ತಿಳಿಸ್ತಾ ಇರ್ತಾರೆ ಸಾರ್. ಕರ್ವಾಲೋ ಸಾಹೇಬರೆಂದರೆ ಭಾರೀ ದೊಡ್ಡ ತಿಳುವಳಿಕಸ್ಥ ಸಾರ್. ಅವರು ಒಂದು ಮಾತು ಬರೆದರೆ ನಾಳೇನೇ ಹೊರದೇಶಗಳಿಂದೆಲ್ಲಾ ಬೇಕಾದ್ದು ಬರುತ್ತೆ" ಎಂದು ಪ್ರಭಾಕರ ತನ್ನ ಅರಿವಿಗೆ ನಿಲುಕಿದಷ್ಟನ್ನು ಕರ್ವಾಲೋ ಬಗ್ಗೆ ಹೇಳಿದ.

ಸುಮಾರು ಒಂಭತ್ತು ಘಂಟೆಯಾಯ್ತು. ಮಂದಣ್ಣ ಮಾತ್ರ ಬರಲೇ ಇಲ್ಲ. ಬೇಜವಾಬ್ದಾರಿ ಅದ್ವಿತೀಯ ವ್ಯಕ್ತಿಯಾಗಿದ್ದ. ಕಾಡಿನ ಕಡೆಗೆ ಮುಖ ಮಾಡಿ ಗಟ್ಟಿಯಾಗಿ ಹಲವಾರು ಬಾರಿ "ಲೋ ಮಂದಣ್ಣ" ಎಂದು ಕೂಗಿದೆ. ಸಮೀಪದಲ್ಲೇ ಎಲ್ಲಾದರೂ ಇದ್ದರೆ ಬರಲಿ ಎಂದು. ಮಂದಣ್ಣ ಓ ಕೊಳ್ಳಲೂ ಇಲ್ಲ ಬರಲೂ ಇಲ್ಲ. ಹೋಗಿಯಾದರೂ ಕರೆಯೋಣವೆಂದರೆ ಎಲ್ಲಿಗೆಂದು ಹೋಗಿ ಕರೆಯುವುದು? ಯಾವ ಕಗ್ಗಾಡಿನಲ್ಲಿ ಎಲ್ಲಿಟ್ಟಿದ್ದಾನೋ ಪೆಟ್ಟಿಗೆಗಳನ್ನು. ಕೋಪದಿಂದ ಬಯ್ಯುತ್ತಾ ಹಲ್ಲು ಕಡಿಯುತ್ತಾ ಕಾಯತೊಡಗಿದೆವು.

ಕೊಂಚ ಹೊತ್ತಾದನಂತರ ಪ್ಯಾರ ಶಿಳ್ಳೆ ಹೊಡೆಯುತ್ತಾ ನೆಗೆಯುತ್ತಾ ಕಿವಿಯೊಡನೆ ಮನೆಕಡೆ ಓಡೋಡಿ ಬಂದ. "ಏನೋ, ಎಲ್ಲೋ ಮಂದಣ್ಣ?" ಅಸಹನೆಯಿಂದ ಕೇಳಿದೆ.

"ಬಾಳೇನಾರು ತಗೊಂಬಾಂದ" ಎಂದ.

"ಯಾಕೋ ಬಾಳೇನಾರು?

"ನಾನೂ ಮಂದಣ್ಣಾರು ಬಾಜಿ ಕಟ್ಟಿದ್ವಿ. ನಾನು ಎರಡು ಕಡೆ ಪೆಟ್ಟಿಗೆ ಇಟ್ಟಿದ್ದೆ. ಅವರು ನಾಲ್ಕುಕಡೆ ಇಟ್ಟಿದ್ದರು. ನನ್ನದಕ್ಕೇ ಮೊದಲು ಬರ್ತದೆ ಅಂತ ಶರತ್ತು ಇಟ್ಟಿದ್ದೆ. ಹಂಗೇ ಆಯ್ತು" ಎಂದ ಗೆದ್ದ ಗೆಲುವಿನಲ್ಲಿ.

"ಸರಿ ಈಗ್ಯಾಕೆ ಬರ್ಲಿಲ್ವಲ್ಲೋ?" ಎಂದೆ.

"ಜೇನು ಸೊಟ್ಟಾಪಟ್ಟಾ ಹಲ್ಲೆ ಕಟ್ಟಿದ್ದಾವೆ. ಕುಯ್ದು ಫ್ರೇಮಿಗೆ ಸರಿಯಾಗಿ ಕಟ್ಟೋಣ. ಬಾಳೇನಾರು ತಗೊಂಡು ಬಾಂದರು" ಎಂದ.

"ನಿನ್ನ ಹಲ್ಮುರೀತೀನಿ ಹಜಾಮ. ನಾವಿಲ್ಲಿ ಕಾಯ್ಕೊಂಡು ಸಾಯ್ತಿದ್ದೀವಿ. ನೀವು ಅಲ್ಲಿ ಶರತ್ತು ಕಟ್ಟಿಕೊಂಡು ಆಟಾಡ್ತಿದ್ದಿರೇನೋ. ಒಳ್ಳೆ ಮಾತ್ನಲ್ಲಿ ಈ ಕೂಡ್ಲೆ ಬರಕ್ಕೆ ಹೇಳ್ತಿಯೋ ಇಲ್ಲಾ ನಿಮ್ಮ ಜೇನುಪೆಟ್ಟಿಗೆ ಎಲ್ಲಾ ತೆಗೆದು ಎಸೀಲೋ" ಎಂದು ಅಬ್ಬರಿಸಿ ಕೂಗಿದೆ.



ಪ್ಯಾರ ಇಂಗು ತಿಂದ ಮಂಗನ ಮುಸುಡಿ ಮಾಡಿಕೊಂಡು ಬಂದ ವೇಗದಲ್ಲೇ ಮತ್ತೆ ಕಾಡಿನ ಕಡೆಗೆ ಓಡಿದ. ಅವನಿಗಿಂತ ವೇಗವಾಗಿ ಕಿವಿ ಓಡಿತು. ಪ್ಯಾರ ಕಾಡೊಳಗೆ ಮರೆಯಾಗುತ್ತಿದ್ದಂತೆಯೇ ಬಲಗಡೆ ದೊಡ್ಡ ರಸ್ತೆಯಲ್ಲಿ ಯಾರೋ ಬರುತ್ತಾ ಇರುವುದು ಕಂಡಿತು. ಆ ನಡಿಗೆಯ ಶೈಲಿಯಲ್ಲೇ ಸ್ಪಷ್ಟವಾಗಿ ಕಾಣುತ್ತಿತ್ತು. ಆ ವ್ಯಕ್ತಿ ಇನ್ನಾರೂ ಅಲ್ಲ ಪ್ರೊಫೆಸರ್ ಕರ್ವಾಲೋ ಎಂದು.

"ಪ್ರಭಾಕರ, ಇದೇನಯ್ಯ, ಗ್ರಾಚಾರ! ಕರ್ವಾಲೋ ಬರ್ತಿರೋ ಹಂಗಿದೆಯಲ್ಲೋ ಮಾರಾಯ!" ಎಂದವನೆ ಅಲ್ಲಿ ಇಟ್ಟಿದ್ದ ಖಾಲಿ ಲೋಟ ತಟ್ಟೆಗಳನ್ನೆಲ್ಲಾ ಸರಸರ ಒಳಗೆ ತೆಗೆದುಕೊಂಡುಹೋಗಿ ಇಟ್ಟೆ. ಪ್ರಭಾಕರ ಕುರ್ಚಿ ಮೇಲೆಲ್ಲಾ ಹರಡಿಕೊಂಡಿದ್ದ ಪಂಚೆ ಟವಲ್ಲುಗಳನ್ನು ಬೇಗಬೇಗ ಮಡಿಚಿ ಕೊಟ್ಟ. ಆ ವೇಳೆಗೆ ಕರ್ವಾಲೋ ಮನೆಗೆ ಹತ್ತಿರಾಗಿದ್ದರು. "ಓಹೋ, ಏನು ಪ್ರಭಾಕರನೂ ಇಲ್ಲೇ ಇರೋ ಹಾಗಿದೆ? ಫೈನ್ ಫೈನ್ ಒಳ್ಳೇದಾಯ್ತು. ನನಗೆ ನಿನ್ನೆ ರಾತ್ರಿ ಎಲ್ಲಾ ನಿದ್ದೇನೇ ಬರ್ಲಿಲ್ಲ. ಅರ್ಜೆಂಟಾಗಿ ನಿಮ್ಮೆಲ್ಲಾ ನೋಡೋಣಾಂತ ಬೆಳಿಗ್ಗೆ ನಾನೇ ಹೊರಟು ಬಂದುಬಿಟ್ಟೆ" ಎಂದರು.

"ಬನ್ನೀಸಾರ್ ಬನ್ನಿ, ಏನು ಕೇಸಿನ ವಿಷಯಕ್ಕೇ? ನೀವೊಂದು ಅರ್ಧಗಂಟೆ ತಡೆದಿದ್ರೆ ನಾವೇ ಬರ್ತಿದ್ದೆವಲ್ಲಾ ಸಾರ್ ಇದಕ್ಕೆಲ್ಲಾ ನಿದ್ದೆ ಯಾಕೆ ಕೆಡಿಸಿಕೋ ಬೇಕು? ಮಂದಣ್ಣಾನೇ ಆ ವಿಷಯ ಮನಸ್ಸಿಗೆ ಹಚ್ಚಿಕೊಂಡಿಲ್ಲ. ಇನ್ನು ನೀವ್ಯಾಕೆ ಯೋಚಿಸ್ತೀರಿ?"

"ನೋ ನೋ ನೋ ಕೇಸಿನದಲ್ಲ. ಬೇರೆ ವಿಷಯ ಭಾಳ ಇದೆ; ಹೇಳೋದು. ಮೊದಲು ಕೇಸಿನದು ಏನಾಯ್ತು ಹೇಳಿ. ಆಮೇಲೆ ಮಿಕ್ಕದ್ದು ವಿವರವಾಗಿ ತಿಳಿಸ್ತೀನಿ" ಎಂದರು.

"ಗೊನ್ಸಾಲ್‌ವೆಸ್‌ಗೆ ಕೇಸು ಹ್ಯಾಂಡೋವರ್ ಮಾಡಿದೆವು ಸಾರ್. ನಿಮ್ಮ ಕಾಗದ ಇಲ್ದಿದ್ರೆ ಅವರು ನಮ್ಮನ್ನ ಕಛೇರಿ ಒಳಗೆ ಸೇರಿಸ್ತಾನೇ ಇರಲಿಲ್ಲಾಂತ ಕಾಣ್ತದೆ ಸಾರ್. ಆಮೇಲೆ ಎಲ್ಲಾ ಕೇಳಿಕೊಂಡರು ಸಾರ್. ಮತ್ತೆ ನೋಡಿ ನನ್ನನ್ನು ಅಂತ ಹೇಳಿದ್ದಾರೆ. ನಿನ್ನೆ ಕೋರ್ಟಿಗೆ ಹಾಜರಾಗಿ ಕೇಸ್ ಅಡ್‌ಜರ್ನ್‌ಮೆಂಟ್ ತಗೊಂಡಿದ್ದೀವಿ. ಬಹುಶಃ ಕೇಸು ನಿಲ್ಲೋದಿಲ್ಲಾಂತ ಕಾಣ್ತದೆ ಸಾರ್ ನೋಡೋಣ!" ಎಂದೆ.

"ನೋಡೋಣ! ಏನು ನೋಡೋಣ? ನಾವು ಕೇಸು ಗೆಲ್ಲಲೇಬೇಕು ಬೇರೆ ಮಾರ್ಗವೇ ಇಲ್ಲ."

"ಹಾಗಲ್ಲಾಸಾರ್, ಈ ಮಂದಣ್ಣ ಆ ಕೊಳೆ ಇಟ್ಟ ಮಡಕೆ ತನ್ನದೇ ಅಂತ ಹೇಳಿಕೆ ಕೊಟ್ಟುಬಿಟ್ಟಿದ್ದಾನೆ ಸಾರ್. ಅದೇ ಈಗ ದೊಡ್ಡ ತಲೆನೋವು. ಅವನು ಬೀಮನ್ ಕೆಲಸ ಕಲ್ತಿದ್ದ ಅನ್ನೋದಕ್ಕೆ ಒಂದು ದಾಖಲೇನೂ ಇಲ್ಲ. ನೀವು ಎಂಟಮಾಲಜಿ ಆಗಿರೋದ್ರಿಂದ ಏನಾದರೂ ಸಹಾಯ ಮಾಡೋದಕ್ಕೆ ಆಗ್ತದೋ ಅಂತ ಸಿರಿಲ್ ಗೊನ್‌ಸಾಲ್‌ವೆಸ್ ಯೋಚನೆ ಮಾಡ್ತಿದ್ದರು" ಎಂದೆ.

"ಪೂರ್ ಫೆಲೋ, ನಾನೂ ಬರ್ತೀನಿ ಕೋರ್ಟಿಗೆ, ಅದರಲ್ಲೇನಿದೆ? ಐ ವಿಲ್ ಎಕ್ಸ್‌ಪ್ಲೇನ್, ನಾನೇ ಕಲಿಸುತ್ತಿದ್ದೆ ಅಂತ" ಎಂದರು ಕರ್ವಾಲೋ.

“ಅಲ್ಲಾ ಈ ವಿಷಯಕ್ಕೆಲ್ಲಾ ನಿಮ್ಮನ್ನ ಎಳಿಯೋದು ಸರಿಯೇ ಅಂತ!” ಎಂದ ಪ್ರಭಾಕರ.

“ನಾನ್ಸೆನ್ಸ್, ನನ್ನ ಹತ್ತಿರ ಶಿಷ್ಯವೃತ್ತಿ ಮಾಡಿ ನೀನು ತರಬೇತಾಗಿರೋದು ಇಷ್ಟೇನೋ ಪ್ರಭಾಕರ. ನಾನು ಪ್ರೊಫೆಸರು. ಮಂದಣ್ಣ ಹಳ್ಳಿಗಮಾರ, ಇವೆಲ್ಲಾ ಹೆಬುಬ್ಬೆ ನೀನು ನಿಜಾಂತ ತಿಳಿದರೆ ಏನಪ್ಪಾ ಕಲಿತಂತೆ ಆಯ್ತು? ಇದರಲ್ಲೇ ನಿನ್ನ ಆಯಸ್ಸು ಮುಗಿದು ಹೋಗುತ್ತೆ. ಸತ್ಯದ ಕಿಂಚಿತ್ ದರ್ಶನಾನೂ ಆಗೋಲ್ಲ ನಿನಗೆ. ಈ ಮಾಯೇನೆಲ್ಲಾ ಮೀರಬೇಕು ನಾವು. ಆಗಲೇ ನಿಮಗೆ ಬೇರೆ ಬೇರೆ ಜಗತ್ತು, ಪ್ರಪಂಚ ಕಾಣ್ತದೆ” ಎಂದರು.

ನನಗೆ ನಿನ್ನೆ ರಾತ್ರಿಯಿಂದ ಮನಸ್ಸೇ ಬೇರೆ ತರ ಆಗಿತ್ತು. ಕರ್ವಾಲೋ ಹೇಳಿದ್ದು ಅತ್ಯಂತ ಸರಳ ಸತ್ಯವಾಗಿ ಕಂಡಿತು ನನಗೆ.

“ಈಗ ನನ್ನ ವಿಷಯಕ್ಕೆ ಬರೋಣ. ಬಹುಶಃ ನೀವೆಲ್ಲಾ ನನ್ನನ್ನು, ನನ್ನ ವರ್ತನೆಯನ್ನು, ಹುಚ್ಚಂತ ತಿಳಿದಿರಬಹುದು”ಎಂದರು. ನಾನು ಇನ್ನೂ ಏನೇನೋ ಕೇಸಿನ ವಿಷಯ ಹೇಳಬೇಕೆಂದಿದ್ದೆ. ಆದರೆ ಕರ್ವಾಲೋ ಯಾವುದೋ ಮಹತ್ವದ ವಿಷಯ ಹೇಳ ಹೊರಟ್ಟಿದ್ದಾರೆಂಬ ಕುತೂಹಲದಲ್ಲಿ ಅದನ್ನು ಅಲ್ಲಿಗೇ ತಡೆ ಹಿಡಿದೆ.

ಕರ್ವಾಲೋ ಹೇಳಿದುರ “ನೋಡಿ ಪ್ರಭಾಕರ್, ಈಗ ನಾನು ಹೇಳೋ ವಿಷಯದ ತಲೆಬುಡ ಅರ್ಥವಾಗಲಾರದು. ಆದ್ದರಿಂದ ನಿಮಗೆ ನಿಧಾನಕ್ಕೆ ವಿವರವಾಗಿ ತಿಳಿಸುತ್ತಾ ಬರುತ್ತೇನೆ. ಏಕೆಂದರೆ ವಿಶ್ವದಲ್ಲಿ ಜೀವೋತ್ಪತ್ತಿ, ಮಾನವನ ಉಗಮ, ಚರಿತ್ರ ಪೂರ್ವಯುಗಗಳು, ಇವನ್ನೆಲ್ಲಾ ಇದಕ್ಕೆ ಪೂರ್ವಭಾವಿಯಾಗಿ ತಿಳಿದಿರಬೇಕು” ಎಂದು ಹೇಳಿ ಅನಂತರ ನನ್ನ ಕಡೆ ತಿರುಗಿ “ನೋಡಿ, ನಿಮಗೆ ನಾನು ಸಂಕ್ಷಿಪ್ತವಾಗಿ ಹೇಳಿದರೆ ಸಾಕಂತ ಕಾಣ್ತದೆ. ಎಂ.ಎ.ಯಲ್ಲಿ ನಿಮ್ಮ ವಿಷಯ ಫಿಲಾಸಫಿ ಮತ್ತು ಸೋಶಿಯಾಲಜಿ ತಾನೆ?” ಎಂದರು.

“ಅಯ್ಯೋ ನಾನೂ ಪ್ರಭಾಕರನಷ್ಟೇ ಅಜ್ಞ ಸಾರ್ ಈ ವಿಷಯದಲ್ಲಿ” ಎಂದೆ. “ನೊ ನೊ, ನಿಮ್ಮ ಆ ಫಾರ್ಮಾಲಿಟಿ ನಮ್ರತೆ ಎಲ್ಲಾ ಬೇಡ. ತುಂಗಾ ಕೊಳ್ಳದಲ್ಲಿ ಚರಿತ್ರಪೂರ್ವ ನಾಗರಿಕತೆಯ ಸಂಶೋಧನೆ ಬಗ್ಗೆ ನೀವು ಭಾಗವಹಿಸಿದ್ದು. ನಿಮ್ಮ ಲೇಖನ ಎಲ್ಲಾ ನೋಡಿದ್ದೇನೆ ನಾನು.”

“ಅಯ್ಯೋ ಅದೊಂದು ದೊಡ್ಡ ಟ್ರಾಜಿಡಿ ಸಾರ್. ನಮ್ಮ ಎಕ್ಸ್‌ಪೆಡಿಶನ್ ಕೊನೆಗೆ ದುರಂತವಾಗೋಯ್ತು. ಸರ್ವೇಯರ್ ನಾರಾಯಣನ್ನ ಕರಡಿ ಕೊಂದು ಹಾಕಿದ ಮೇಲೆ ನಾವು ಬೇಸರ ಬಂದು ಬಿಟ್ಟುಬಿಟ್ಟೆವು” ಎಂದೆ.

“ಗೊತ್ತು ಗೊತ್ತು. ಅದರ ಮೇಲೆ ನೀವೊಂದು ಒಳ್ಳೇ ಪುಸ್ತಕ ಬರೆಯಬಹುದು” ಎಂದರು.

ನನಗೆ ನನ್ನ ವಿಶ್ವವಿದ್ಯಾಲಯದ ವಿದ್ಯಾರ್ಥಿ ಜೀವನ ನೆನಪಿಗೆ ಬರತೊಡಗಿತ್ತು. ಸ್ಕೂಲು ಹುಡುಗರ ಥರ ಕರ್ವಾಲೋರ ಪಾಠ ಕೇಳಲು ಕುಳಿತೆ.



“ನೋಡಿ, ನಾನು ಕೆಲವು ವಾರಗಳ ಹಿಂದೆ ನೀವು ಬಂದಾಗ ರಜ ಹಾಕಿ ನಾರ್ವೆಗೆ ಮಂದಣ್ಣನ ಜೊತೆ ಹೋಗಿದ್ದೆನೆಲ್ಲಾ. ಆಗ ಎರಡು ಪ್ರಾಣಿಗಳನ್ನು ನೋಡಬೇಕಂತ ಹೋಗಿದ್ದೆ. ಒಂದು ಈ ಗ್ಲೋವರ್ಮ್. ನಿಮಗೆ ತೋರಿಸಿದೆನಲ್ಲ ಅದು. ಅದರ ಮೇಲೆ ಸದ್ಯದಲ್ಲೆ ಸ್ಮಿತ್ ಸೋನಿಯನ್ ಇನ್ಸ್ಟಿಟ್ಯೂಟಿನವರು ಒಂದು ಭಾರಿ ರಿಸರ್ಚ್ ಆರಂಭಿಸಲಿದ್ದಾರೆ. ಅದರ ಬೆಳಕಿನ ಮೂಲ ಯಾವುದು ನಾವೂ ಸಹ ಅದರಂಥ ದೀಪಗಳನ್ನು ಸೃಷ್ಟಿ ಮಾಡಬಹುದೆ ಎಂದು. ಇನ್ನೊಂದು ನೋಡಲೇಬೇಕೆಂದುಕೊಂಡು ಹೋಗಿದ್ದು ಫ್ಲೈಯಿಂಗ್ ಲಿಸರ್ಡ ಅಂತ. ಹಾರುವ ಓತಿ ಅನ್ನಬಹುದು. ನಮ್ಮ ಮಂದಣ್ಣನೇ ಈ ವಿಷಯಾನ ನನಗೆ ತಿಳಿಸಿದ್ದು. ನಾರ್ವೆ ಬಳಿಯ ಕಾಡಿನಲ್ಲಿ ಇದನ್ನು ನೋಡಿದ್ದೇನೆ ಎಂದು ಹೇಳಿದ” ಎಂದು ಹೇಳಿ, ಕರ್ವಾಲೋ ತಮ್ಮ ಚರ್ಮದ ಚೀಲದೊಳಗಿನಿಂದ ಸುಮಾರು ಕಾಗದ ಪುಸ್ತಕ ಇತ್ಯಾದಿಗಳನ್ನು ಹೊರಕ್ಕೆಳೆದುಕೊಂಡು ಒಂದು ರೇಖಾಚಿತ್ರವನ್ನು ಹುಡುಕಿ ತೆಗೆದರು. “ಇದನ್ನು ನಾನು, ಮಂದಣ್ಣ ಹಾರಾಡುವ ಓತಿಯನ್ನು ವಿವರಿಸಿದಾಗ ಅವನು ಹೇಳಿದಂತೆಯೇ ಬರೆದುಕೊಂಡದ್ದು. ಸಾಧಾರಣವಾದ ಕಣ್ಣಿಗೆ ಇದು ಬೇಲೀ ಮೇಲಿನ ಓತೀಕ್ಯಾತಕ್ಕಿಂತ ಭಿನ್ನವಾಗಿ ಕಾಣೋದಿಲ್ಲ. ಆದರೆ ಸಾಮಾನ್ಯ ಓತೀಕ್ಯಾತಕ್ಕೂ ಇದಕ್ಕೂ ಹಲವಾರು ಮೂಲಭೂತ ವ್ಯತ್ಯಾಸಗಳಿದ್ದಾವೆ” ಎಂದರು.

“ಸರಿ ಸಾರ್, ಈ ಚಿತ್ರ ನೀವು ಬರೆದಿದ್ದೋ, ಮಂದಣ್ಣ ಬರೆದಿದ್ದೋ ಹೇಳಿ” ಎಂದೆ.

“ನಾನೇ, ನಾನೇ ಬರೆದಿದ್ದು. ಆದರೆ ಈ ವ್ಯತ್ಯಾಸಗಳು ಯಾವುವೂ ನನಗೆ ಗೊತ್ತಿರಲಿಲ್ಲ. ನೀವು ನನಗೆ ಗೊತ್ತಿದ್ದರಿಂದ ನಾನೇ ಬರೆದೆ ಅಂತ ಊಹಿಸ ಬಹುದಲ್ಲವೆ! ತಪ್ಪು ತಪ್ಪು. ನಿಮ್ಮ ಸಂಶಯ ತಪ್ಪು. ನನಗೆ ಈ ಯಾವ ವಿವರಾನೂ ಗೊತ್ತಿರಲಿಲ್ಲ. ಮಂದಣ್ಣ ಈ ಓತಿಯ ವಿಷಯ ಹೇಳಿದಾಗ ನಾನು ಸುಮ್ಮನೆ ಅವನು ಹೇಳಿದಂತೆ ಬರೆದುಕೊಂಡೆ ಅಷ್ಟೇ.”

“ಸಾರ್, ಅವನು ಏನು ಹೇಳಿದನೋ, ನೀವೇನು ಬರೆದುಕೊಂಡಿರೋ, ಅವನು ನೋಡಿದ್ದೇನೋ? ನೀವು ಬರೀವಾಗ ಅದೇನು ರೂಪ ಪಡೆಯಿತೋ?”

“ಇಲ್ಲ, ಇಲ್ಲ. ಈ ಒಂದು ವಿಷಯದಲ್ಲಿ ಮಂದಣ್ಣನ್ನ ಮೀರಿಸುವವರು ಯಾರೂ ಇಲ್ಲ. ಅಷ್ಟೊಂದು ಚೆನ್ನಾಗಿ ಗ್ರಹಿಸ್ತಾನೆ. ಅವನೊಬ್ಬ ಹುಟ್ಟಾ ನ್ಯಾಚುರಲಿಸ್ಟ್. ಹೆಚ್ಚೂ ಕಡಿಮೆ ಈವರೆಗೂ ಅವನು ಹೇಳಿರೋದು ಒಂದೊಂದೂ ಕೂಡ ಅದರ ವಿವರಗಳಲ್ಲಿ ಸಹ ಸುಳ್ಳಾಗಿಲ್ಲ. ಅಷ್ಟೊಂದು ಸೂಕ್ಷ್ಮವಾಗಿ ಗ್ರಹಿಸ್ತಾನೆ. ಅದ್ಭುತ ಪ್ರಕೃತಿ ಶಾಸ್ತ್ರಜ್ಞ ಅವನು. ಅಂಥೋನು ನನ್ನ ಹತ್ತಿರ ಬಂದು ಪ್ಯೂನ್ ಕೆಲಸ ಕೊಡೀಂದರೆ ನನಗೆ ಸಿಟ್ಟು ಬರೋದಿಲ್ಲವೆ, ರ್‍ಯಾಸ್ಕಲ್.”

“ಅವನಿಗೆ ಮದುವೆ ಆದಮೇಲೆ ಕೆಲಸದ ವಿಷಯ ಚಕಾರಾನೂ ಎತ್ತಿಲ್ಲಾ ಸಾರ್. ಸುಮ್ಮನೆ ಮೇರೇಜಿನ ಸಲುವಾಗಿ ಹಾಗೆಲ್ಲಾ ಗೋಳಾಡಿಕೊಂಡು ತಿರುಗಿದಾಂತ ಕಾಣ್ತದೆ.

ಲಕ್ಷಣ ಮೊನ್ನೆ ಬೀಮ್ಯಾನ್ ಕೆಲಸಕ್ಕೆ ಅಪ್ಲಿಕೇಶನ್ ಕೊಡೋ ಅಂದರೆ ಈಗೇನು ಅವಸರಾ ಅಂತ ಹೇಳಿದನಂತೆ" ಎಂದ ಪ್ರಭಾಕರ.

"ನೋಡಿ ನೋಡಿ, ಮುಖ್ಯ ವಿಷಯ ಬಿಟ್ಟು ಅಡ್ಡಹಾದಿ ತುಳೀಬೇಡಿ. ಕೆಲಸಕ್ಕೆ ಬಾರದ ಹರಟೇಲೇ ಮುದುಕರಾಗ್ತೀವಿ. ಕಾಲ ಸರೀತಾ ಇದೆ" ಎಂದು ಕರ್ವಾಲೋ ಎಚ್ಚರಿಸಿದರು.

ಅಷ್ಟರಲ್ಲಿ ಪ್ಯಾರನೂ ಮಂದಣ್ಣನೂ ಏದುಸಿರುಬಿಡುತ್ತಾ ಓಡೋಡಿ ಬಂದರು.

"ಏನಯ್ಯ ನೀನು? ಜವಾಬ್ದಾರಿ ಇಲ್ಲದ ಮನುಷ್ಯ. ಎಷ್ಟು ಹೊತ್ತುಕಾಯೋದೋ ನಿನಗೆ?" ಎಂದು ಮಂದಣ್ಣನಿಗೆ ಬಯ್ದೆ.

"ಇಲ್ಲಾ ಸಾರ್, ಒಂದು ಪೆಟ್ಟಿಗೆಗೆ ಜೇನುಗಳು ಬಂದು ಹುಚ್ಚಾಪಟ್ಟೆ ಹಲ್ಲೆ ಕಟ್ಟಿಟ್ಟಿದ್ದಾವೆ. ಅವನ್ನ ಈಗಲೇ ಸರಿಮಾಡಿ ಕಟ್ಬೇಕು. ಇಲ್ದಿದ್ರೆ ಆಮೇಲೆ ಹದ್ದುಬಸ್ತಿಗೆ ಬರೋದೇ ಇಲ್ಲ ಅವು" ಎಂದ.

ಆಮೇಲೆ ಅವನ ಗುರು ಕರ್ವಾಲೋ ಸಾಹೇಬರನ್ನು ನೋಡಿ ಚಕಿತನಾಗಿ. "ಓ ಸಾಹೇಬ್ರು ಬಂದ್ಬಿಟ್ಟಿದ್ದಾರೆ. ನಾವು ಹೊರಡೋದು ತಡಾ ಆಗಿದ್ದು ಒಳ್ಳೇದೇ ಆಯ್ತು" ಎಂದ.

"ಇರಲಿ ಕುಳಿತುಕೋ" ಎಂದೆ. ಅವನು ವಿನಯವನ್ನು ಪ್ರದರ್ಶಿಸಲು ನಿಂತೇ ಇದ್ದ. ಅಷ್ಟರಲ್ಲಿ ಒಳಗಿನಿಂದ ನನ್ನ ಹೆಂಡತಿ ಬಂದಳು. ಕರ್ವಾಲೋರವರನ್ನು ನೋಡಿ ಚಕಿತಳಾಗಿ "ನಮಸ್ಕಾರಾ ಸಾರ್" ಎಂದಳು.

ಕರ್ವಾಲೋ ಮತ್ತೆ ರೇಖಾಚಿತ್ರ ಹಿಡಿದು ಆರಂಭಿಸಿದರು. "ನೋಡಿ. ಈ ಓತಿಗೂ ನಮ್ಮ ಸಾಧಾರಣ ಓತಿಗೂ ಬಹಳ ವ್ಯತ್ಯಾಸ ಇದೆ. ಒಳಗೆ ಶರೀರ ರಚನೆಯಲ್ಲಿ ಕೂಡ ಇದು ಬೇರೆ ರೀತಿಯೇ ಇದೆ. ಇದರ ಅತಿ ಹತ್ತಿರದ ಸಂಬಂಧಿ ಅಂದರೆ ಟುವಟಾರ ಅಂತ ಇನ್ನೊಂದು ಓತಿ, ನ್ಯೂಜಿಲೆಂಡಿನಲ್ಲಿದೆ. ಅದಕ್ಕೂ ಇದಕ್ಕೂ ಇರೋ ಮೂಲಭೂತ ವ್ಯತ್ಯಾಸ ಅಂದರೆ ಆ ಪ್ರಾಣಿ ನೆಲದಮೇಲೇ ಉಳಿದುಕೊಂಡು ಆಹಾರ ಸಂಪಾದನೆ ಮಾಡಿತು. ಆದ್ದರಿಂದ ಅದಕ್ಕೆ ರೆಕ್ಕೆ ರೂಪಗೊಳ್ಳಲಿಲ್ಲ. ಇಲ್ಲಿ ನೋಡಿ ಅವುಗಳ ಚಿತ್ರ" ಎಂದು ಇನ್ನೆರಡು ಚಿತ್ರಗಳನ್ನು ನಮ್ಮ ಮುಂದೆ ಹಿಡಿದರು. ಓತೀಕ್ಯಾತದಂಥ ಎರಡು ಪ್ರಾಣಿಗಳು ಅದರಲ್ಲಿದ್ದವು.

"ಆದರೆ ಈ ನಮ್ಮ ಓತಿಗೆ ಬಾವಲಿಯಂಥ ಎರಡು ತೆಳ್ಳನೆ ರೆಕ್ಕೆಗಳಿದ್ದಾವೆ. ಅದರ ಸಹಾಯದಿಂದ ಅದು ಮರದಿಂದ ಮರಕ್ಕೆ ಗಾಳಿಯಲ್ಲಿ ತೇಲಿ ಹಾರ ಬಲ್ಲುದು. ಆದರೆ ಹಕ್ಕಿಯಂತೆ ರೆಕ್ಕೆ ಬಡಿದುಕೊಂಡು ಹಾರಲಾರವು. ಮಂದಣ್ಣ ಬಹಳ ಸ್ಪಷ್ಟವಾಗಿ ಅದರ ವಿವರಣೆ ಕೊಟ್ಟಿದ್ದಾನೆ. ಸರಸರ ಮರಹತ್ತಿ ಸಾಕಷ್ಟು ಎತ್ತರಕ್ಕೆ ಏರಿದೊಡನೆಯೇ ಅಲ್ಲಿಂದ ಇನ್ನೊಂದು ದೂರದ ಮರಕ್ಕೆ ತೇಲಿಕೊಂಡು ಹಾರುತ್ತವಂತೆ. ಒಂದು ವಿಷಯ ಮಾತ್ರ ನಿಮಗೆ ಇಲ್ಲಿ ಪ್ರಾಮಾಣಿಕವಾಗಿ ಹೇಳಬೇಕಾಗಿದೆ. ಈ ಚಿತ್ರದಲ್ಲಿ ಬರೆದಿರೋ ರೆಕ್ಕೆಯ ಕಲ್ಪನೆ ನನ್ನದು. ಇಷ್ಟೆಲ್ಲಾ ವಿವರಗಳನ್ನು ತಿಳಿಸಿದ ಮಂದಣ್ಣ



ರೆಕ್ಕೆ ಬಗ್ಗೆ ಏನೊಂದೂ ಹೇಳಲಾರದವನಾಗಿದ್ದಾನೆ. ಏಕೆಂದರೆ ಅವನು ಹಾರಿದಾಗ ಮಾತ್ರ ರೆಕ್ಕೆ ಕಂಡನಷ್ಟೇ ಹೊರತು ಕುಳಿತ ಕೂಡಲೇ ಏನೂ ಗೊತ್ತಾಗುತ್ತಿರಲಿಲ್ಲವಂತೆ. ಆದ್ದರಿಂದ ಬಾವಲಿಯಂತೆ ಇರುವ ರೆಕ್ಕೆಯೋ ಹಕ್ಕಿಯಂತಿರುವ ರೆಕ್ಕೆಗಳೋ ಅಥವಾ ನಮ್ಮ ಹಾರುವ ಅಳಿಲುಗಳಿಗಿರುವಂಥ ರೆಕ್ಕೆಗಳೋ ಏನೂ ಹೇಳಲಿಲ್ಲ.

"ಈ ಪ್ರಾಣಿ ಜಾತಿಗಳು ಹುಟ್ಟಿದ್ದು ಬಹಳ ವರುಷಗಳ ಹಿಂದೆ. ಎಷ್ಟು ವರುಷ ಹಿಂದೆ ಅಂತ ಹೇಳಲು ಸಾಧ್ಯವೇ ಆಗೋಲ್ಲ–ಅಷ್ಟೊಂದು ವರುಷಗಳ ಹಿಂದೆ. ಇವು ಎಂದರೆ ಈ ಜಾತಿಯ ಓತಿಗಳು ಚರಿತ್ರಪೂರ್ವ ಪ್ರಾಚೀನ ಯುಗಗಳಿಗೆ ಸೇರಿದವು. ಇವೇ ದೊಡ್ಡ ದೊಡ್ಡ ಬೃಹದಾಕಾರದ ಪ್ರಾಣಿಗಳಾಗಿ ಬೆಳೆದು ಇಡೀ ಭೂಮಂಡಲವನ್ನೆಲ್ಲಾ ವ್ಯಾಪಿಸಿಬಿಟ್ಟಿದ್ದವು. ಆದರೆ ಇವುಗಳ ಮೆದುಳನ್ನು ಮೀರಿ ಇವುಗಳ ಮೈ ಬೆಳೆದು ಬಿಡ್ತು. ಭೌಗೋಲಿಕ ವ್ಯತ್ಯಾಸಗಳಿಗೆ ಹೊಂದಿಕೊಂಡು ಬದುಕಲು ಇವಕ್ಕೆ ಸಾಧ್ಯ ಆಗಲಿಲ್ಲ. ಯಾವುವೋ ಆಗೋಚರ ಕಾರಣಗಳಿಂದಾಗಿ ಇವೆಲ್ಲ ಸರ್ವನಾಶಹೊಂದಿ ನಾಮಾವಶೇಷವಾಗಿ ಹೋದವು. ಆದರೂ ಒಂದೋ ಎರಡೋ ಪ್ರಾಣಿಗಳು ಭೂಮಿ ಮೇಲೆ ಹಾಗೂ ಇನ್ನೊಂದೆರಡು ನೀರಿನಲ್ಲಿ ಹೇಗೋ ಹೊಂದಿಕೊಂಡು ಉಳಿದುಬಿಟ್ಟವು. ಆದ್ದರಿಂದ ಕೋಟಿಗಟ್ಟಲೆ ವರುಷದ ಹಿಂದಿನ ಗುಟ್ಟನ್ನೆಲ್ಲಾ ಹೊಟ್ಟೆಯೊಳಗೆ ಇಟ್ಟುಕೊಂಡ ಅಪೂರ್ವ ಜೀವಿಗಳಾಗಿವೆ."

"ಇನ್ನು ಈ ಹಾರುವ ಓತಿ ಇದೆಯಲ್ಲಾ, ಇದು ನಿಶ್ಶೇಷವಾಗಿದೆ ಅಂತ ಇದುವರೆಗೂ ಇರುವ ನಂಬಿಕೆ. ಇದರ ಒಂದು ಮಿಂಚು ನೋಟ ಸಿಕ್ಕರೂ ಸಾಕೆಂದು ಜಗತ್ತಿನಾದ್ಯಂತ ವಿಜ್ಞಾನಿಗಳು ತಮ್ಮ ಕಾಲ, ಜೀವನ, ಹಣ ಎಲ್ಲವನ್ನೂ ಮುಡುಪಾಗಿಟ್ಟುಕೊಂಡು ಹಂಬಲಿಸಿದ್ದಾರೆ. ಆದರೆ ಸಾಧ್ಯವಾಗಿಲ್ಲ. ನಿರ್ವಂಶವಾಗಿವೆ ಎಂದೇ ಅಧಿಕೃತವಾಗಿ ತೀರ್ಮಾನಿಸಲಾಗಿದೆ."

"ಈಗ್ಗೆ ಸಾವಿರದೆಂಟುನೂರಹದಿನೇಳರಲ್ಲಿ ಎಂದರೆ ಒಂದು ಶತಮಾನಕ್ಕೂ ಹಿಂದೆ ಒಬ್ಬ ಪಾದ್ರಿ ಆಫ್ರಿಕಾದ ಅರಣ್ಯಗಳಲ್ಲಿ ಇವನ್ನು ಕಂಡಿದ್ದನೆಂಬ ದಾಖಲೆ ಇದೆ. ಬ್ರಿಟಿಷ್ ಜಿಯಾಲಾಜಿಕಲ್ ಮ್ಯೂಜಿಯಂನಲ್ಲಿ ಒಂದು ಜೀರ್ಣವಾಗಿ ಹೋಗಿರುವ ಚರ್ಮವನ್ನು ಇದರದ್ದೆಂದು ಇಟ್ಟಿದ್ದಾರೆ. ನಮ್ಮ ಕೊಹಿನೂರು ವಜ್ರಕ್ಕಿಂತ ಹೆಚ್ಚಾಗಿ ಇದನ್ನು ಜೋಪಾನಮಾಡಿದ್ದಾರೆ. ನಾನೂ ಪ್ರೊಫೆಸರ್ ಜೆಕೋಸ್ಕಿ ಅಂತ ಒಬ್ಬರು ರುಮೇನಿಯಾದ ಪ್ರೊಫೆಸರರೂ ಸರಕಾರದ ವಿಶೇಷ ಅನುಮತಿ ಪಡೆದು ಇದನ್ನು ಸಂದರ್ಶಿಸಿದ್ದೆವು. ಆಮೇಲಿಂದ ಇದರ ಬಗ್ಗೆ ಯಾರಿಗೂ ಇನ್ನೇನೂ ದೊರೆತಿಲ್ಲ" ಎಂದರು.

ನಾವು ಮೊದಮೊದಲು ಯಾವುದೋ ಒಂದು ಸ್ಪೆಸಿಮನ್ ಬಗ್ಗೆ ತಾನೇ ಎಂದು ಸಾಧಾರಣ ಕುತೂಹಲದಿಂದಲೇ ಕೇಳಲಾರಂಭಿಸಿದ್ದೆವು. ಆದರೆ ಕರ್ವಾಲೋ ಮುಂದುವರೆದು ವಿವರಿಸುತ್ತಾ ಬಂದಂತೆ ವಾತಾವರಣದಲ್ಲಿ ಕಾವೇರತೊಡಗಿತು. ಉಸಿರೆಳೆಯದೆ ಕೇಳಿಕೊಳ್ಳುತ್ತಾ ಬಂದೆವು.

"ಮಂದಣ್ಣನ ಬಾಯಿಂದ ಈ ವಿಷಯ ಕೇಳುತ್ತಿದ್ದಂತೆಯೇ ನನಗೆ ರಕ್ತವೆಲ್ಲಾ ತಣ್ಣಗಾಗತೊಡಗಿತು. ಇಡಿಯು ಜಗತ್ತೇ ಬೆಚ್ಚಿಬೀಳುವಂಥ ಸಮಾಚಾರ ಹೇಳುತ್ತಿದ್ದೇನೆನ್ನುವುದರ ಅರಿವೇ ಅವನಿಗೆ ಇರಲಿಲ್ಲ. ನಾನು ಅದಕ್ಕೇ ಅವನೂರಿಗೆ ಒಮ್ಮೆ ಹೋಗಿ ಕಣ್ಣಾರೆ ಕಂಡುಬಿಡೋಣ, ಅನಂತರ ಹೊರ ಪ್ರಪಂಚಕ್ಕೆ ಈ ಸಂಗತಿ ತಿಳಿಸೋಣ. ಅಂತ ಹೋಗಿದ್ದೆ. ಆದರೆ ಮಳೆ ದೆಸೆಯಿಂದ ಇದನ್ನು ನೋಡಲಾಗಲಿಲ್ಲ. ಹಾಗಾಗಿ ಇಲ್ಲಿಯವರೆಗೂ ಕಾಯಬೇಕಾಯ್ತು. ಈ ಬಗ್ಗೆ ಜೆಕೋಸ್ಕಿ ಹತ್ತಿರ ಹಾಗೂ ಅಮೆರಿಕಾದ ಹಲ ಜೀವಶಾಸ್ತ್ರಜ್ಞರ ಹತ್ತಿರ ಇದರ ವಿಚಾರ ವಿನಿಮಯ ಮಾಡಿದೆ. ಆದರೆ ಇದರ ಇರವನ್ನು ತಿಳಿಸಿಲ್ಲ. ವಿನಿಮಯದ ಫಲವಾಗಿ ಇದು ಚರಿತ್ರಪೂರ್ವ ಯುಗದಿಂದ ಬಂದ ಕಾಲದ ರಾಯಭಾರಿ ಎಂಬುದು ಖಚಿತವಾಯ್ತು!" ಎಂದರು.

ನನಗೆ ಆಶ್ಚರ್ಯ ಆನಂದ ಗಾಬರಿ ಎಲ್ಲ ಆಗ ತೊಡಗಿತು. ನನ್ನ ಹೆಂಡತಿಯೂ ಅಲ್ಲೇ ಈ ವಿಷಯ ಕೇಳಿಕೊಳ್ಳುತ್ತ ಕುಳಿತಿದ್ದಳು. ಅವಳೂ ವಿಶ್ವವಿದ್ಯಾಲಯದ ಎಂ.ಎ. ಪದವೀಧರೆಯಾದ್ದರಿಂದ ಈ ವಿಷಯ ಹೆಚ್ಚು ಕಡಿಮೆ ಅರ್ಥವಾಗಿತ್ತು.

ಈ ಪ್ರಾಣಿ ಹೆಚ್ಚು ಎಷ್ಟು ಹಿಂದಿನದಿರಬಹುದು ಸಾರ್?" ಎಂದಳು.

"ಅದನ್ನು ಹೇಳೋದಕ್ಕೆ ಈವರೆಗೂ ಸಾಧ್ಯವಾಗಿಲ್ಲಾಮ್ಮ" ಎಂದು ಕರ್ವಾಲೋ ಮುಂದುವರಿಸಿದರು, "ಶಿಲಾ ಪದರಗಳಲ್ಲಿ ಇದರ ಪಳೆಯುಳಿಕೆಗಳು ಸಿಕ್ಕಿವೆ. ಜ್ವಾಲಾಮುಖಿಯ ಬೂದಿಯ ಪದರಗಳಲ್ಲಿ ಇದರ ಅಚ್ಚುಗಳು ಬಿದ್ದಿವೆ. ಆದರೆ ಇದರ ಕಾಲವನ್ನು ಪತ್ತೆಹಚ್ಚುವ ಮನುಷ್ಯನ ಎಲ್ಲಾ ವಿಧಾನ ಉಪಕರಣಗಳೂ ಸೋತುಹೋಗಿವೆ. ರೇಡಿಯೋ ಕಾರ್ಬನ್‌ಡೇಟಿಂಗ್ ಅಂತ, ಪೊಟಾಸಿಯಂ ಅರ್ಗಾನ್‌ಡೇಟಿಂಗ್ ಅಂತ ಹೊಸಹೊಸ ಕಾಲಮಾಪನ ವಿಧಾನಗಳನ್ನು ಕಂಡುಹಿಡಿದರು. ಆದರೆ ಅವು ಯಾವುದರಿಂದಲೂ ಸಾಧ್ಯವಾಗಿಲ್ಲ. ಜೆಕೋಸ್ಕಿ ಈಚೆಗೆ ಬರೆದ ಕಾಗದದಲ್ಲಿ ಸ್ಥೂಲವಾಗಿ ಒಂದು ಕಾಲದ ಪರಿಮಾಣ ಹೇಳಿದ್ದಾರೆ. ಆ ಸಂಖ್ಯೆಗೆ ಏನೆಂದು ಕರೀತೀರೋ ಕರೀರಿ. ಅವರು ಆರರ ಮುಂದೆ ಒಂಭತ್ತು ಸೊನ್ನೆಗಳನ್ನು ಹಾಕಿದ್ದಾರೆ. ಇದೂ ಸ್ಥೂಲವಾಗಿ. ಆ ಪ್ರಾಣಿ ಇದಕ್ಕಿಂತಲೂ ಹಿಂದಿನದಿರಬಹುದು!" ಎಂದರು.

ಈ ಸಂಖ್ಯೆಗಳು, ಇದರ ಪುರಾತನ ಚರಿತ್ರೆ, ಇದರ ಪ್ರಾಮುಖ್ಯ, ಇದನ್ನೆಲ್ಲಾ ಕೇಳುತ್ತಾ ನಮಗೆಲ್ಲಾ ಮಂಕು ಹಿಡಿದಂತಾಗಿತ್ತು.

"ಛೇ, ಆಗ ನೀವು ನಾರ್ವೇಗೆ ಹೋಗಿದ್ದಿರಲ್ಲಾ ಸಾರ್. ನನಗೊಂದು ಮಾತು ತಿಳಿಸಿದ್ದರೆ ನಾನೂ ಬರ್‍ತಿದ್ನಲ್ಲಾ ಸಾರ್. ಅದ್ಯಾವ ಗೊಂಡಾರಣ್ಯದಲ್ಲಿದ್ರೂ ಬಿಡದೆ ಪತ್ತೆ ಮಾಡಿಬಡಬಹುದಿತ್ತು" ಎಂದೆ.

"ನಾನು ಬೇಕೆಂದೇ ಇದನ್ನು ಈವರೆಗೂ ಯಾರಿಗೂ ತಿಳಿಸಲಿಲ್ಲ. ಮೊದಲನೆಯದಾಗಿ ನನಗೆ ಜೆಕೋಸ್ಕಿಯಿಂದ ಸರಿಯಾದ ಕನ್‌ಫರ್‌ಮೇಶನ್ನಿಗೆ ಕಾಯ್ತಿದ್ದೆ. ಏಕೆಂದರೆ ಇದು ಇಡೀ ಪ್ರಪಂಚಕ್ಕೇ ದಿಗ್ಭ್ರಮೆ ಹಿಡಿಸುವ ಸುದ್ದಿಯಾಗುತ್ತದೆ. ಯಾವ ಯಾವ ವೈಜ್ಞಾನಿಕ ಸಿದ್ಧಾಂತಗಳು ಇದರಿಂದ ತಲೆಕೆಳಗಾಗುತ್ತವೆಯೋ! ಇನ್ನು



ಯಾವಯಾವ ಕೋಲಾಹಲ ಕಾದಿದೆಯೋ ಹೇಳಬಲ್ಲವರಾರು! ಎರಡನೆಯದು ಇನ್ನು ಯಾವ ಯಾವ ದೇಶವಿದೇಶಗಳು ಏಜೆಂಟರುಗಳು ಗುಪ್ತಚಾರರು ಇದರಿಂದ ಕಾರ್ಯಪ್ರವೃತ್ತರಾಗುತ್ತಾರೋ ಎಂಬ ಭಯ. ಹೀಗಾಗಿ ಎಲ್ಲರಿಗೂ ತಿಳಿಸದೆ ಮಂದಣ್ಣನಿಗೂ ಸಹ ಇದರ ಮಹತ್ವದ ಬಗ್ಗೆ ಚಕಾರವನ್ನೂ ಎತ್ತದೆ ಇದ್ದೆ" ಎಂದರು.

ಯಾರು ಯಾರಿಗೆ ಎಷ್ಟೆಷ್ಟು ಅರ್ಥವಾಯ್ತೋ ಗೊತ್ತಿಲ್ಲ. ಕರ್ವಾಲೋ ಭೌಗೋಳಿಕ ಯುಗಗಳು. ಜೀವ ವಿಕಾಸ, ಪ್ರಳಯಗಳು ಹಿಮಯುಗ ಇತ್ಯಾದಿಗಳ ಮೇಲೆಲ್ಲಾ ಬಹಳ ಹೊತ್ತು ಮಾತಾಡಿದರು. ನಮಗೆ ಇವನ್ನೆಲ್ಲಾ ಬುದ್ಧಿಗತ ಮಾಡಿಸಬೇಕೆಂದು ಬಹು ಪ್ರಯಾಸದಿಂದ ಅತ್ಯಂತ ಸರಳಗೊಳಿಸಿ ಹೇಳುತ್ತಿದ್ದುದು ಗೊತ್ತಾಗುತ್ತಿದ್ದಿತು.

ನಾವು ಅವಾಕ್ಕಾಗಿ ಕುಳಿತು ಕೇಳಿದೆವು. ಕಾಲ ದೇಶಗಳನ್ನು ಮೀರುವ ದಿವ್ಯ ಜ್ಞಾನದ ಮಿಂಚುನೋಟಗಳಂತೆ ಕರ್ವಾಲೋರವರ ಯೋಚನೆಗಳು ಬಂದು ನಮ್ಮ ಅಂತಃಕರಣಗಳನ್ನು ತಾಕಿದವು. ನನ್ನ ಹೆಂಡತಿ ಕಾಫಿಗೆ ನೀರಿಡಬೇಕೆಂದಿದ್ದವಳು ಎದ್ದು ಹೋದರೆ ಇನ್ನಾವ ಮಹತ್ ಸಂಗತಿ ತಪ್ಪಿ ಹೋಗುತ್ತೋ ಎಂದು ಅಲ್ಲೇ ಕುಳಿತಿದ್ದಳು. ಎಲ್ಲರೂ ಮೌನವಾಗಿ ನಮ್ಮ ಅರಿವಿಗೆ, ಸಂಸ್ಕಾರಕ್ಕೆ ತಿಳಿದಷ್ಟನ್ನು ಗ್ರಹಿಸಿದೆವು. ನನ್ನ ನಾಲ್ಕುವರುಷದ ಮಗಳು, ಕೊನೆಗೆ ಚತುಷ್ಪಾದಿಯಾದ ಕಿವಿ ಕೂಡ ಸುಮ್ಮನೆ ಆಲಿಸಿದರು.

ಕರ್ವಾಲೋ ಎಲ್ಲ ಹೇಳಿ ಮುಗಿಸಿದ ನಂತರ "ಸರಿ ಸಾರ್, ಈ ಮಂದಣ್ಣ ನೋಡಿದ ಪ್ರಾಣಿ ಇದೆಯೋ ಇಲ್ಲವೋ ಒಮ್ಮೆ, ಬೇರೆ ಯಾರಾದರೂ ಏನಾದರೂ ಮಾಡೋದರೊಳಗೆ, ನೋಡೇ ಬಿಡಬೇಕು" ಎಂದ ಪ್ರಭಾಕರ.

"ಎಲ್ಲೀಗಯ್ಯ ಹೋಗ್ತಿ. ಇನ್ನು ಮೂರು ದಿನಕ್ಕೆ ಕೇಸಿನ ಹಿಯರಿಂಗು, ಕರ್ವಾಲೋ ಸಾಹೇಬರು ಹೇಳಿದ ಲೋಕಕ್ಕೆ ಹೋಗೋದಕ್ಕೆ ಮೊದಲು ಪ್ಯಾಸ್‌ಪೋರ್ಟು ತಗೋಬೇಕಲ್ಲ ಇಲ್ಲಿ" ಎಂದೆ.

ಕರ್ವಾಲೋ "ಹೋಗೋಣ ತಡಿರಿ. ಅದಕ್ಕೇನು ಅವಸರ ಪಡಬೇಡಿ. ಮಿಲಿಯಾಂತರ ವರುಷ ಬದುಕಿಬಂದಿರೋದು ಈಗೇನು ನಾಮಾವಶೇಷವಾಗೋಲ್ಲ. ಈ ಸಾರಿ ಸರಿಯಾದ ಸಿದ್ಧತೆ ಮಾಡಿಕೋಬೇಕು ನಾವು" ಎಂದರು.

ನನಗೆ ಇದ್ದಕ್ಕಿದ್ದಂತೆ ಮಂದಣ್ಣನ ಕೇಸು, ಪೊಲೀಸರ ಕಿರುಕುಳ, ಚಿಕ್ಕಮಗಳೂರಿನ ಅಲೆದಾಟ ಎಲ್ಲಾ ತಟಕ್ಕನೆ ಜ್ಞಾಪಕಕ್ಕೆ ಬಂದು, ಯಾವುದೋ ಇನ್ನೊಂದು ಲೋಕದ ಸರಹದ್ದಿನೊಳಕ್ಕೇ ಇಳಿದಂತಾಯ್ತು. ಆದಷ್ಟು ಬೇಗ ಮಂದಣ್ಣನ ಕೇಸು ಮುಗಿದು ನಮಗೆ ಈ ಪ್ರಪಂಚದಿಂದ ರಹದಾರಿ ಸಿಕ್ಕರೆ ಸಾಕೆನ್ನಿಸಿತು. ಯಾವುದೋ ಒಂದು ವಿವರಿಸಲಾಗದ ಕಸಿವಿಸಿ ಹೃದಯದಲ್ಲಿ ಎದ್ದಿತು. ಕರ್ವಾಲೋ ಏಕೆ ಮಂದಣ್ಣನ ಬಗ್ಗೆ ಇಷ್ಟೊಂದು ಕಾಳಜಿ ವಹಿಸಿದರು. ಏಕೆ ಅವನನ್ನು ಜೇಲಿಗೆ ಹೋಗೋದರಿಂದ ತಪ್ಪಿಸಲೇಬೇಕೆಂದು ಹೆಣಗಾಡಿದರು ಎಂಬುದು ಈಗ ನನಗೆ ಅರ್ಥವಾಯ್ತು. ಆದರೆ ಇದನ್ನು ಯಾರಿಗೂ ತಿಳಿಸದೆ ರಹಸ್ಯವಾಗಿಟ್ಟುದು ಅನವಶ್ಯಕ ಎಂದೆನ್ನಿಸಿತು. ಏಕೆಂದರೆ

ಹೇಳಿದರೂ ಅದನ್ನು ತಿಳಿದುಕೊಳ್ಳುವಂಥವರು ಯಾರಿದ್ದರು ಅಲ್ಲಿ? ತಿಳಿದವರಿಗೇನೋ ಕರ್ವಾಲೋ ತಿಳಿಸಿದ ಈ ಹಾರಾಡುವ ಓತಿ ಕೊಹಿನೂರು ವಜ್ರಕ್ಕಿಂತ ಎಷ್ಟೆಷ್ಟೋ ಪಾಲು ಅನರ್ಘ್ಯವಿರಬಹುದು. ಆದರೆ ಮಿಕ್ಕವರಿಗೆ? ಇದೊಂದು ಹುಚ್ಚಿನ ಮುನ್ಸೂಚನೆಯಾಗಿ ಮಾತ್ರ ಕಾಣುತ್ತದೆ. ಆರರ ಮುಂದೆ ಒಂಭತ್ತು ಸೊನ್ನೆ ಹಾಕಿ ಅಷ್ಟು ಹಿಂದಿನ ಪ್ರಾಣಿಯೊಂದನ್ನು ಹುಡುಕಲಿಕ್ಕಾಗಿ ನಾವು ಹೆಣಗುತ್ತಿದ್ದೇವೆ ಎಂದು ಪೋಲೀಸರಿಗೆ ತಿಳಿಸಿದರೆ ಪಾಪ ಎಂದು ನಮ್ಮ ಬಗ್ಗೆ ಕನಿಕರ ಸೂಚಿಸಿಯಾರು ಮಾತ್ರ!

ಅಷ್ಟರಲ್ಲಿ ಕರ್ವಾಲೋ "ನಿಮಗೆ ಇನ್ನೊಂದು ಒಳ್ಳೇ ಸಂಗತಿ ತಿಳಿಸುವುದಿದೆಯಪ್ಪಾ" ಎಂದು ಅನೇಕ ಕಾಗದ ಪತ್ರಗಳನ್ನು ನಮ್ಮೆದುರು ಇಟ್ಟು, "ನೋಡಿ ನನ್ನ ಪತ್ರ ವಿನಿಮಯದಿಂದಲೇ ಈ ಬಗ್ಗೆ ಏನೋ ಸುಳುವು ತಿಳಿದುಕೊಂಡು ಕೆಲವು ಜಾಗತಿಕ ಸಂಸ್ಥೆಗಳು ಧನಸಹಾಯ ಮಂಜೂರು ಮಾಡಲು ಮುಂದಾಗಿವೆ. ಸ್ಮಿತ್‌ಸೋನಿಯನ್ ಸಂಸ್ಥೆ, ಜಿಯಾಗ್ರಾಫಿಕಲ್ ಸೊಸೈಟಿ, ಬ್ರಿಟಿಷ್ ಜಿಯಾಲಾಜಿಕಲ್ ಇನ್‌ಸ್ಟಿಟ್ಯೂಟ್, ಇವೆಲ್ಲಾ ಕ್ರಮವಾಗಿ ಮೂರು ಸಾವಿರ ಎರಡು ಸಾವಿರ, ಒಂದು ಸಾವಿರ, ಸ್ಟರ್ಲಿಂಗ್ ಪೌಂಡುಗಳಷ್ಟು ಹಣ ಕೊಡಲು ಮುಂದಾಗಿವೆ. ಸದ್ಯಕ್ಕೆ ನಾನು ಇದರ ಬಗ್ಗೆ ಏನೂ ನಿರ್ಧಾರ ತಗೊಂಡಿಲ್ಲ. ಹೇಗಿದೆ!" ಎಂದರು.

"ಓಹೋಹೋ ಸುಮಾರು ಹಣವಾಯ್ತಲ್ಲಾ ಸಾರ್" ಎಂದೆ ನಾನು. ಬೇರಾರಿಗೂ ಪೌಂಡುಗಳೆಂದರೆ ದುಡ್ಡು ಎಂದು ಗೊತ್ತಾಗಲಿಲ್ಲ. "ಪ್ರಭಾಕರ, ಎಷ್ಟು ಗೊತ್ತಾ, ನಮ್ಮ ವಿನಿಮಯ ಲೆಕ್ಕದಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿ ಕಣೋ" ಎಂದೆ.

"ಏನು?" ಎಂದು ಮಂದಣ್ಣ ಕುಳಿತಲ್ಲಿಂದಲೇ ಕುಮಟಿ ಬಿದ್ದ. ಅವನಿಗೆ ನಮ್ಮ ಕೆಲಸದ ಗುರುತ್ವ ಈಗ ತಲೆಗೆ ಹೋಯ್ತೆಂದು ಕಾಣುತ್ತದೆ.

"ಹೌದೋ? ಸರೀಗೆ ಲೆಕ್ಕಾ ಹಾಕಿಯಪ್ಪಾ. ಸುಮ್ಮನೆ ಕನ್ನಡಿ ಗಂಟು ತೋರಿಸಬೇಡಿ!" ಎಂದ ಪ್ರಭಾಕರ.

"ಛೇ ಛೇ! ಎಷ್ಟೊಂದು ಹಣ!" ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡಳು ಹೆಂಡತಿ. ಕಿವಿ ಮಾತ್ರ ಏನೂ ಅರ್ಥವಾಗದೆ ಒಂದು ಸಾರಿ ಆಕಳಿಸಿ ಸುರುಳಿ ಸುತ್ತಿಕೊಂಡು ಮಲಗಿ ಕಣ್ಣು ಮುಚ್ಚಿಕೊಂಡು ನಿದ್ದೆ ಬಂದಂತೆ ನಟಿಸುತ್ತಾ ನಿಟ್ಟುಸಿರುಬಿಟ್ಟಿತು.

"ಈ ಓತಿಗೆ ಈ ಎಲ್ಲಾ ಸಂಸ್ಥೆಗಳೂ ಈಗಾಗಲೇ ಖರ್ಚು ಮಾಡಿರೋ ಹಣದೆದುರು ಇದೆಲ್ಲಾ ಏನೂ ಇಲ್ಲ ತಿಳಿದುಕೊಳ್ಳಿ" ಎಂದರು ಕರ್ವಾಲೋ.

ನಾನು ಇವರೆಲ್ಲರ ಕೋರಿಕೆ ಮೇಲೆ ಇನ್ನೊಮ್ಮೆ ಲೆಕ್ಕ ಹಾಕಿ ನನ್ನ ಗಣಿತ ಸರಿಯೆಂದು ಖಚಿತಪಡಿಸಿಕೊಂಡೆ.

❑



# ಮಗನಿಗೊಂದು ಪತ್ರ

**– ಡಾ. ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ**

ಬಾ ಮಗೂ ಅಲ್ಲೇ ನಿಲ್ಲದೆ ಮತ್ತೆ ಹಿಂದಕ್ಕೆ,
ನಿನ್ನದೇ ನೆಲಕ್ಕೆ, ನಿನ್ನದೇ ಜಲಕ್ಕೆ,
ನಿನ್ನ ಒಳಹೊರಗನ್ನು ಸೃಷ್ಟಿಸಿಕೊಟ್ಟ ಸತ್ವಕ್ಕೆ,
ಹಿಂದು ಮುಂದುಗಳ ತಕ್ಕ ಛಂದದಲ್ಲಿಟ್ಟು ನಿನ್ನ
ನಿಜಾರ್ಥಕ್ಕೆ ಸಲ್ಲಿಸುವ ಪುಷ್ಪವತಿ ಬಂಧಕ್ಕೆ,
ನಿನ್ನ ಬೆನ್ನಿಗೆ ನಿಂತ ಪುರಾಣ ಇತಿಹಾಸಗಳ
ಬಿಸಿಯುಸಿರು ಬಡಿಯುವೀ ವರ್ತಮಾನಕ್ಕೆ
ಭೂರ್ಜಪತ್ರಕ್ಕೆ ಮಾತು ಬರುವ ಮುಂಚೆಯೇ ಬೋಧಿ
ತಿಳಿವ ಹರಿಸಿದ್ದ ಈ ಜ್ಞಾನಧಾಮಕ್ಕೆ
ಬಾ ಮಗೂ ಹಿಂದಕ್ಕೆ.

ದೂರ ಹಾರುವುದು ಸಹಜವೆ, ಸರಿಯೆ, ಮತ್ತೆ
ಗೂಡು ಸೇರುವ ಹಕ್ಕಿಗದು ತೀರ ಉಚಿತವೇ.
ಇನ್ನಷ್ಟು ಮತ್ತಷ್ಟು ಏರಬೇಕೆಂಬಾಸೆ
ರೆಕ್ಕೆಬಲವಿರುವಾಗ ಉಕ್ಕುಕ್ಕಿ ಬರುವುದೇ.
ನೀರಿನೊಳಗಿನ ಮೀನು ತನ್ನ ನೆಲೆಯಲ್ಲಿ ತಾನು
ತಪ್ಪದೇ ಇರಬೇಕು.
ಸಾಹಸಕ್ಕಾಗಿ ಸಂಪಾತಿ ಹಾರಿದರು ಸಹ
ಅನ್ಯಶಕ್ತಿಯ ಪರಿಧಿಯೊಳಗೆ ನುಗ್ಗುವುದಿಲ್ಲ,
ಹಿಗ್ಗುವುದು ತಪ್ಪಲ್ಲ, ಫಟ್ಟೆನ್ನುವಷ್ಟಲ್ಲ ಬಲೂನು
ಬಗ್ಗುವುದು ಬೆತ್ತ ಮುರಿಯದಂತೆ ತನ್ನ ಕಮಾನು

ನೆಲದ ಅಂತರವೆ ಪ್ರಗತಿಯ ಮಾನವೇನಲ್ಲ,
ಹೊಸಚಲನೆ ಪೂರ್ಣ ಉನ್ನತಿಯ ಮಾಪಕವಲ್ಲ,
ಒಂದೇ ಸಮನೆ ದುಂಡುಸುತ್ತಿ ಚಾಚಿದ ಕೈಗೆ
ಯಾವ ಅಂಕೆಯೂ ಸಿಗದ ಭ್ರಮಣದಲಿ ಹುರುಳಿಲ್ಲ.

ಗಾಳಿಯಲ್ಲೇರಿ, ನೀರಲ್ಲೀಜಿ, ತಿದಿಯುಗಿದು
ಅರ್ಥಪ್ರಾಪ್ತಿಗೆ ಕುದಿವ ಮಿಡುಕಾಟ ಗೆಲುವೇನು?
ಹಿಂದನ್ನು ಸುಟ್ಟು ಮುಂದನ್ನು ಅಳಿಸುವ ಸ್ವಂತ –

ಸುಖದರಸು ಚತುರಂಗ ಬಲಕ್ಕೆ ಪತಿಯೇನು?
ತನ್ನಲ್ಲೆ ಮುಗಿವ ಚಲನೆಗೆ ಏನು ಬೆಲೆಯಿದೆ?
ಮುಗಿಲು ಮಳೆಯಾಗದೇ ನೆಲಕ್ಕೆ ಶುಭವೆಲ್ಲಿದೆ?

ಝಗಝಗಿಸಿ ಹೊಳೆದು ಥಟ್ಟನೆ ಸೆಳೆದು ತೆಕ್ಕೆಯಲಿ
ಬಿಗಿದಪ್ಪಿ ಸಂಭ್ರಾಂತಗೊಳಿಸಿ ದಿಕ್ಕೆಡಿಸೀತು
ಯಂತ್ರಮೋಹಿನಿಯ ಕುತಂತ್ರ, ನಿಜಮೂಲವನೆ
ಮರೆಸೀತು, ಉರಿಸೀತು ಅಂತಶ್ಚಲನೆಗಳನ್ನೆ,
ಉಳಿಸೀತು ಉಪ್ಪರಿಗೆ ಸುಖದ ಗೀಳೊಂದನ್ನೆ.
ಬರಿ ಗೀಳು ಬಾಳ ಬೆಳೆಸೀತೆಂತು ಹೇಳು?
ತನ್ನನ್ನೆ ಮಾರಿಕೊಳ್ಳುವ ಮೋಹಕ್ಕೆಳಸುವ
ಎಲ್ಲ ಏಳಿಗೆ ಬರೀ ಕೂಳಿಗೆ ನಡೆದ ಜೂಜಾಟ
ಕಟ್ಟದೆ ಬೆಳೆಯದೇ ಬೆಟ್ಟದ ತುದಿಯ ಆಸಾಮಿ
ದೂರದಿಂದಷ್ಟೆ ಕಂಡಂಥ ತೋಟದ ನೋಟ.
ನಿನ್ನ ಪೌರುಷದ ದೋರ್ದಂಡಕ್ಕೆ ನಾರಿಯನ್ನು
ಬಿಗಿದು ಕಳಿಸಿದ್ದೇವೆ. ಲಕ್ಷ್ಮಣವ್ರತಕ್ಕೆ ನಿಂತು
ಅವನ ನಿಜಗಳ ಕಾದುಕೊಟ್ಟ ಅಚ್ಯುತರಕ್ಷೆ
ಊರ್ಮಿಳೆ. ಹಾಗೆಯೇ ಈ ನಿನ್ನ ಶರ್ಮಿಳೆ.
ಪರದೇಶದುರಿಬಾಣಲೆಗೆ ಬಿದ್ದ ಸಖನನ್ನು
ನೆನಪ ನೆರಳಾಗಿ ಸಂತೈಸಿದ್ದೇನು ಕಡಮೆಯೇ?
ವರ್ಷಗಳೆ ನಿನಗೆ ತಪಿಸಿದ್ದು ಸಾಮಾನ್ಯವೇ?
ಪತಿಯ ಒಳಗಿನ ಸತ್ವ ಪುಟಗೊಳಿಸಿ ಹೊರತರಲು
ಜೊತೆ ಬರುತ್ತಿದ್ದಾಳೆ ಸಪ್ತಪದಿ ತುಳಿದು
ಈಗ ಕಡಲಾಚೆಗೂ ನಿನ್ನ ಕೈಹಿಡಿದು.

ನಿನ್ನ ಜೀವಿತದ ಭವನಕ್ಕೆ ಹೆಬ್ಬಾಗಿಲು;
ಶುಭಗಳಿಗೆ ತೆರೆದು ಅಶುಭಕ್ಕೆ ಕದಮುಚ್ಚಿ
ಅಂತರಂಗವ ನಿತ್ಯ ರಕ್ಷಿಸುವ ಕಾವಲು
ಉರಿಯುವ ಸಮಿಧೆಯಾಗಿ, ಉರಿಸುವ ಆಜ್ಯವಾಗಿ
ಬರುತ್ತಿದ್ದಾಳೆ ತನ್ನ ತವರನ್ನೆ ತೊರೆದು
ನಿನ್ನೆಲ್ಲ ಕೃತಿಯ ಮಾರ್ಗಣ ಚಿಮ್ಮಿ ಬರಲು
ಬಿಲ್ಲದಂಡೆಗೆ ಸೆಳೆದು ಬಿಗಿದ ಹೆದೆಯಂತೆ,
ತಾನೆ ಬಿಡಿಯಾಗಿಯೂ ಅರ್ಧನಾರೀಶ್ವರನ
ಮೈಯಲ್ಲಿ ಕೂಡಿ ಇಡಿಯಾದ ಪ್ರಭೆಯಂತೆ.



ನಿಮ್ಮ ಪ್ರಭೆ ಕಡೆದ ಹೊಸ ಕಿರಣ ಸಲ್ಲಲಿ ತಾನು
ಸಲ್ಲಬೇಕಾದ ಕಡೆಗೆ, ನಿಜಾರ್ಥದೆಡೆಗೆ.
ತನ್ನದೇ ನೆಲ ನೀರು ಗಾಳಿ ಗೊಬ್ಬರ ಬೆಳಕು ಬೇಕು ಬಿತ್ತಕ್ಕೆ,
ತುಡಿವ ಚಿತ್ತಕ್ಕೆ.
ಹುಸಿಮಣ್ಣಿನಲ್ಲಿ ಅಂತಸ್ಥ ಸೂಕ್ಷ್ಮಗಳೆಷ್ಟೊ ಅರಳದಿರಬಹುದು
ತನ್ನ ಸತ್ವದ ಪರಿಧಿ ತುದಿತನಕ ಬಿತ್ತ ಕೈ ಚಾಚದಿರಬಹುದು.
ಪದ್ಯ ಮಧ್ಯದ ಮಾತು ಪರಿಶಿಷ್ಟವೆನಿಸಿ ಲಕ್ಷ್ಯಗೆಡದಿರಲಿ
ಬಿತ್ತ ಬಿತ್ತದ ಜಿಗಿತ ಪೂರ್ಣ ಪಯಣಕ್ಕೆ ಅಗತ್ಯ ನೆನಪಿರಲಿ.
ಖಂಡಖಂಡಾಂತರವನಲೆವ ಸಹಸ್ರಮೈಲಿಯ ಹೊರಚಲನೆಯಲ್ಲ
ಷಟ್ಚಕ್ರ ಭೇದಿಸಿ ಸಹಸ್ರಾರಕ್ಕೇರುವ ಮೂರು ಗೇಣು ಮುಖ್ಯ
ವಿಶ್ವ ಸುತ್ತಿದ ಜಾಣ ಷಣ್ಮುಖನಿಗಿಂತಲೂ ವಿಶ್ವಾತ್ಮ ಗ್ರಾಹಿ
ಗಣಪತಿಯೆ ಮುಖ್ಯ.

ಏನೋ ದುಃಸ್ವಪ್ನ ಮೊನ್ನೆ. ಅಜಗರದಂಥ ನಗರ, ಅಂಕುಡೊಂಕಾಗಿ
ಕೆಡೆದುಬಿದ್ದಿದೆ ಆಯತಪ್ಪಿ ಕುಡಿದವರಂತೆ ನಟ್ಟಿರುಳಿನಲ್ಲಿ.
ಯಾರೋ ಸಂಭ್ರಾಂತ ಯುವಕ, ನಮ್ಮಂತೆ ಚಹರೆ
ಭಾರಿಸೌಧದ ಮೇಲುನೆತ್ತಿಯಲ್ಲಿ
ಸುತ್ತುತ್ತಾನೆ ಅತ್ತ ಇತ್ತ ಮಿಡುಕಾಡುತ್ತ ಒಂದೇ ಸಮನೆ
ಚೀರುತ್ತಾನೆ. ಏನೋ ಹತ್ತಿಕ್ಕಲಾಗದ ನೋವು, ಕರುಳ ಬಾಧೆ.
ನಿಗಿನಿಗಿ ಕೆಂಡ ಕಣ್ಣು, ಆಕಾಶಕ್ಕೆತ್ತಿದ ತೋಳು, ಸಿಟ್ಟು ದುಃಖ
ಸೂಟು ತೊಟ್ಟಿದ್ದರೂ ಬೆತ್ತಲೆ ಇದ್ದವನಂತೆ ಚಳಿಗೆ ನಡುಗುತ್ತಾನೆ;
ತಲೆತಲಾಂತರದ ಆಸ್ತಿ ಕಳೆದುಕೊಂಡವನಂತೆ ಮಾತಿನುರಿಕಾರಿ
ಈಚೆ ದಡದಲ್ಲಿ ನಿಂತ ನಮ್ಮಿಬ್ಬರನ್ನೂ ಕೂಗಿ ಶಪಿಸುತ್ತಾನೆ.

ತನ್ನ ಹಿನ್ನೆಲೆಯಲ್ಲಿ ಹಬ್ಬುತ್ತಿರುವ ಮೂಲಶ್ರುತಿಗೆ ವ್ಯಕ್ತಿ
ಪಡಿಮಿಡಿಯಬೇಕು; ರಾಗದ ಸಾಧ್ಯಚಲನೆಗಳ
ಏಕಾಗ್ರಚಿತ್ತದ ಕಲ್ಪಕತೆಯಲ್ಲಿ ಸಾಗಿ
ಶೋಧಿಸಿ ಬೆಳೆಸಬೇಕು. ಕಾಣದ ಕತ್ತಲಲ್ಲಿ
ಬೇರಿಳಿಸಿ ಮರ ಕೆಳಗೆ ಹುಗಿದ ಅಜ್ಞಾತಗಳ ಬಗೆಯುತ್ತ ಹೋದಂತೆ,
ದಕ್ಕಿದ ಸಾರವನ್ನೆಲ್ಲ ಮತ್ತೆ ಮೇಲಕ್ಕೆ ಕಳಿಸಿ
ಮಿಡಿಕಾಯಿ ಹಣ್ಣಾಗಿ ಬಿತ್ತಗಳ ಪಡೆದಂತೆ
ತನ್ನ ಮೈಯನ್ನೆ ವೀಣೆ ಮಾಡಿ ತಂತಿಯ ಮೀಟಿ ನಾದವೆಬ್ಬಿಸಬೇಕು.

ಮೀಟು ಚಿಮ್ಮಿದ ನಾದ ಸುತ್ತಲೂ ತನ್ನ ಮಾಧುರ್ಯ ಹಬ್ಬಿಸಬೇಕು.
ಟಿಸಿಲು ದಾರಿಗಳ ತೆರೆಯುತ್ತ ಸಾಗುವ ಮಹಾಪಥವೇ ಪರಂಪರೆ
ಮಿಡಿಯ ಹಿಂದಿರುವ ಮರ; ಅಡಿಯಲ್ಲಿ ಮಂತ್ರೋಕ್ತ ನಿಂತ ಶ್ರೀಚಕ್ರ,
ಶಂಕರನ ಮಂತ್ರಸಂಕಲ್ಪಕ್ಕೆ ಒಲಿದಿಳಿದ ಯಂತ್ರರೂಪದ ದಿವ್ಯ ಶಕ್ತಿ.
ಪೀಠದ ಮೇಲೆ ಕಡೆದಿಟ್ಟ ಮೂರ್ತಿ ಬರೀ ಪೂಜಾಲಂಕಾರಕ್ಕೆ;
ಲೋಹದ್ದೋ ಶಿಲೆಯದೋ ಕಂತ್ರಿಮಾವಿನ ಮರದ ಕಾಂಡದಲಿ ಕಡೆದದ್ದೊ
ಎಷ್ಟು ಚೆಲುವಿರಲಿ, ಎಂಥ ಕಲೆ ಇರಲಿ
ಸಂತ ಋಷಿ ಚಕ್ರವರ್ತಿಗಳೆ ತಲೆಬಾಗಲಿ
ಮೂಲಬಲ ತೇಜಸ್ಸು ಅಡಿಗಿರಿವ ಶಕ್ತಿ ಸ್ಫೂರ್ತಿಬಂಧ;
ವಿದ್ಯುತ್ತು ಹರಿದು ಗಾಜಿನ ಖಾಲಿ ಬುರುಡೆಯೂ
ಮನೆತುಂಬ ಬೆಳಕು ತುಳುಕುವ ಪ್ರಭಾಬಿಂಬ.

❑



# ಮಹಿಳಾ ವಿಮೋಚನೆ ಮತ್ತು ಶಿಕ್ಷಣ (ಓದು ಪಠ್ಯ)

– ಡಾ. ವಿಜಯಾ ದಬ್ಬೆ

ಮನುಷ್ಯ ಮನುಷ್ಯನ ನಡುವೆ ಇರಬೇಕಾದ ಸಮಾನತೆಯನ್ನು ಸಮರ್ಥಿಸಲು, ಸಮಾತೆಯನ್ನು ಸ್ಥಾಪಿಸಲು ಜಗತ್ತಿನಾದ್ಯಂತ, ಎಷ್ಟೋ ಶತಮಾನಗಳಿಂದ ಅನೇಕ ಚಳವಳಿಗಳು ನಡೆದಿವೆ, ನಡೆಯುತ್ತಿವೆ. ಅಂಥ ಚಳವಳಿಗಳಲ್ಲಿ ಮಹಿಳಾ ಚಳವಳಿಯೂ ಒಂದು. ಅನೇಕ ಬಗೆಯ ಅಸಮಾನತೆಗಳು ನಮ್ಮನ್ನು ಸುತ್ತುವರಿದಿವೆ, ಅಂಥವುಗಳಲ್ಲಿ ಲಿಂಗಾಧಾರಿತ ಅಸಮಾನತೆಯೂ ಒಂದು. ಗಂಡಸಿಗಿಂತ ಹೆಂಗಸು ಕೀಳು, ಕಡಿಮೆ ಎಂಬ ಮನೋಭಾವ ನಮ್ಮ ದೈನಂದಿನ ಜೀವನದ ಹಲವು ಸ್ತರಗಳಲ್ಲಿ ವ್ಯಕ್ತವಾಗುತ್ತಿದೆ. ಈ ದೃಷ್ಟಿಕೋನ ಇವತ್ತಿನದಲ್ಲ. ಅನೇಕ ಶತಮಾನಗಳಿಂದ ಬೇರೂರಿ ನಿಂತ ಈ ಮನೋಭಾವವನ್ನು ಬೇರು ಸಮೇತ ಕಿತ್ತೊಗೆಯುವುದೇ ಸ್ಥೂಲವಾಗಿ ಮಹಿಳಾ ವಿಮೋಚನಾ ಚಳುವಳಿಯ ಉದ್ದೇಶ. ಈ ಉದ್ದೇಶವನ್ನು ಅನೇಕ ದಿಕ್ಕುಗಳಿಂದ, ಅನೇಕ ರೀತಿಗಳಿಂದ ಸಾಧಿಸಬೇಕಾಗಿದೆ. ಅವುಗಳಲ್ಲಿ ಎಲ್ಲಕ್ಕೂ ಮುಖ್ಯವಾದದ್ದು ಶಿಕ್ಷಣ ರಂಗದ ಮೂಲಕ ತರಬೇಕಾಗಿರುವ ಬದಲಾವಣೆ. ಜಾತಿ, ವರ್ಗ, ಲಿಂಗ, ಜನಾಂಗಗಳಂಥ ಯಾವ ಸಂಗತಿಯನ್ನೇ ಆಗಲಿ ನೆಮ್ಮಿ ನಿಂತ ಶ್ರೇಣಿಗಳನ್ನು ಪುಡಿಯಾಗಿಸಿ ಹೊಸ ಸಮಾಜವನ್ನು ಕಟ್ಟುವ ಕೆಲಸ ಅವಸರಕ್ಕೆ ಮುಗಿಯುವಂಥದಲ್ಲ. ಯಾಕೆಂದರೆ ಇಂಥ ಶ್ರೇಣೀಕೃತ ಸಮಾಜ ನಿಂತಿರುವುದೇ ಅಸಮಾನತೆಯ ಮೌಲ್ಯಗಳ ಭದ್ರವಾದ ಬುನಾದಿಯ ಮೇಲೆ. ಇಂಥ ಮೌಲ್ಯಗಳನ್ನು ಗುರಿಯಿಟ್ಟು ಕೆಡಹುವುದು, ವೈಚಾರಿಕವಾಗಿ ಅಮೂಲಾಗ್ರವಾದ ಪರಿವರ್ತನೆ ತರುವುದು, ಹೊಸ ಮೌಲ್ಯಗಳನ್ನು ಅಲ್ಲಿ ತುಂಬುವುದು. ಬಣ್ಣ ರಹಿತವಾದ, ಪ್ರದರ್ಶನ ರಹಿತವಾದ, ಗದ್ದಲವಿಲ್ಲದ, ಪ್ರಯಾಸದ ಆದರೆ ಅಗತ್ಯವಾದ, ಪ್ರಾಥಮಿಕ ಕೆಲಸ. ಇದನ್ನು ಮರೆತ ಅಥವಾ ಅಮುಖ್ಯವೆಂದುಕೊಂಡ ಚಳವಳಿ ಹೆಚ್ಚೆಂದರೆ ಕೊಂಬೆ ಸವರುತ್ತದೆ. ಬಿಡಿ ಪ್ರಕರಣಗಳಿಗೆ ನಾವು ಪ್ರತಿಕ್ರಿಯಿಸಬೇಕು. ತತ್ಕಾಲದ ಸಮಸ್ಯೆಗಳನ್ನು ಪರಿಹಾರಗೊಳಿಸುತ್ತಾ ಆ ಮೂಲಕ ಸಮಾಜವನ್ನು ಬದಲಾವಣೆಯತ್ತ ಒಯ್ಯಬೇಕೆಂಬುದು ಸರಿಯೆ, ಆದರೆ ಎಷ್ಟು ಬಿಡಿ ಪ್ರಕರಣಗಳನ್ನು ನಾವು ತಿದ್ದುತ್ತಾ ಹೋಗಬಹುದು? ಅಥವಾ ಆ ಸಂದರ್ಭದಲ್ಲಿ ಯಾರಾದರೊಬ್ಬರ ಸಹಾಯದ ಅಗತ್ಯವಿದ್ದವರು ಸಹಾಯವನ್ನು ಪಡೆದು ತೃಪ್ತರಾದರೆ, ಈ ಸಮಸ್ಯೆ ಹೇಗೆ ಹುಟ್ಟಿತೆಂಬುದನ್ನು ವಿಚಾರ ಮಾಡದೆ ಹೋದರೆ ಈ ಬಿಡಿ ಪ್ರಕರಣಗಳಿಗೆ ಹಾಕಿದ ಶ್ರಮ ಬಹುತೇಕ ಹೊಳೆಯಲ್ಲಿ ಹುಣಸೆಹಣ್ಣು ಕದಡಿದಂತೆಯೆ ಅಲ್ಲವೆ? ಆದ್ದರಿಂದ ನಿರ್ದಿಷ್ಟ ಬಿಡಿ ಪ್ರಕರಣಗಳಿಗೆ ಪ್ರತಿಕ್ರಿಯಿಸುತ್ತಾ, ಪ್ರತಿಭಟಿಸುತ್ತಾ ನಮ್ಮ ಹೆಚ್ಚಿನ ಗಮನವನ್ನು ನಮ್ಮ ಮೌಲ್ಯಗಳಲ್ಲಿ, ವಿಚಾರಗಳಲ್ಲಿ ಬದಲಾವಣೆ ತರುವುದರತ್ತ ಹರಿಸಬೇಕು. ಆದ್ದರಿಂದಲೇ ಈ ಆಂದೋಲನಗಳು ಔಪಚಾರಿಕ, ಅನೌಪಚಾರಿಕ ಶಿಕ್ಷಣದಲ್ಲಿ ಏನಾಗುತ್ತಿದೆ ಎಂಬುದರ ಮೇಲೆ ಕಣ್ಣಿಡಬೇಕು, ಬೇಕಾದ ಬದಲಾವಣೆಯನ್ನು ತರಲು ಶ್ರಮಿಸಬೇಕು.

ಔಪಚಾರಿಕ ಶಿಕ್ಷಣದ ವಿಷಯವನ್ನೇ ಮೊದಲು ಎತ್ತಿಕೊಳ್ಳೋಣ. ಮುಖ್ಯವಾಗಿ ಆರಿಸಿಕೊಡುವ ಪಠ್ಯಗಳನ್ನೂ ಬೋಧಿಸುವ ಕ್ರಮ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೆಲವು ವಿವರಗಳನ್ನೂ ಇಲ್ಲಿ ನೋಡಬಹುದು. ಪಠ್ಯ ಭಾಗದ ತಯಾರಿಕೆ ತುಂಬ ಎಚ್ಚರಿಕೆಯಿಂದ ಮಾಡಬೇಕಾದ ಕೆಲಸ. ಆಯಾ ವಿಷಯವನ್ನು ಕಲಿಸುವುದರತ್ತ ಮಾತ್ರ ಗಮನ ಹರಿಸಿದರೆ ಸಾಲದು, ವಿಷಯಗಳ ಆಯ್ಕೆ, ಮಂಡನೆಯಲ್ಲಿ ಅದರೊಡನೆ ತೂರಿಬರಬಹುದಾದ ನಮ್ಮ ಸಾಂಸ್ಕೃತಿಕ ಮೌಲ್ಯಗಳತ್ತ ನಮ್ಮ ಗಮನ ಹರಿಯಬೇಕಾಗುತ್ತದೆ. ಒಂದೆರಡು ಚಿಕ್ಕ ನಿದರ್ಶನಗಳಿಗೆ ಬರುವುದಾದರೆ 'ನಮ್ಮ ನುಡಿ' ಮಾಲಿಕೆಯಲ್ಲಿ ಕನ್ನಡ ಪಾಠಾವಳಿ (ಘಟ್ಟ 2) ಯಲ್ಲಿ ಹದಿನೈದು ಪಾಠಗಳಿವೆ. ಇದರಲ್ಲಿ ಆರು ಪಾಠಗಳು ನಿರ್ದಿಷ್ಟ ವ್ಯಕ್ತಿಗಳನ್ನು ಕುರಿತಿವೆ. ಅವುಗಳಲ್ಲಿ ನಾಲ್ಕು ಪುರುಷರನ್ನು ಕುರಿತವು, ಎರಡು ಮಹಿಳೆಯರನ್ನು ಕುರಿತವು. ಸಂಖ್ಯೆಯಷ್ಟೇ ಮುಖ್ಯವಲ್ಲ ಎಂದುಕೊಂಡು ವಿಷಯವನ್ನು ಗಮನಿಸಿದರೆ ಪುರುಷಕೇಂದ್ರಿತ ಪಾಠಗಳ ವಿಷಯ ಆದಿಕವಿ ಪಂಪ, ಪರಮೇಶ್ವರ ಪುಲಕೇಶಿ, ಪುರಂದರದಾಸ, ರಾಷ್ಟ್ರಕವಿ ಕುವೆಂಪು, ಮಹಿಳೆಯರಲ್ಲಿ ಕೋಳೂರು ಕೊಡಗೂಸು, ಕಣ್ಣಗಿ. ಈ ಇಬ್ಬರು ಮಹಿಳೆಯರೂ ಮುಖ್ಯವಾಗಿ ಪೌರಾಣಿಕ, ಸಾಹಿತ್ಯಕ ಪಾತ್ರಗಳು. ಕೋಳೂರು ಕೊಡಗೂಸಿನ ಮುಗ್ಧಭಕ್ತಿ, ಕಣ್ಣಗಿಯ ಪತಿಭಕ್ತಿಯನ್ನು ಈ ಪಾಠಗಳು ಬಿತ್ತರಿಸುತ್ತವೆ, ಪುರುಷರನ್ನು ಕುರಿತ ಪಾಠಗಳು ಅವರ ಪರಾಕ್ರಮ, ಸಾಮಾಜಿಕ, ಸಾಹಿತ್ಯಕ ಸಾಧನೆಗಳನ್ನು ಹೇಳುತ್ತವೆ.

ಮಹಿಳೆಯರ ಬಗೆಗಿನ ಸಾಂಪ್ರದಾಯಿಕ ಮೌಲ್ಯಗಳನ್ನು ಹೊಂದಿದ ಈ ಭಾಗಗಳ ಪ್ರಶ್ನೆಗಳಲ್ಲಿ ಕೂಡ ಈ ಚೌಕಟ್ಟಿನ ಬಗ್ಗೆ ವಿಚಾರ ಮಾಡಲು ಪ್ರೇರೇಪಿಸುವ ಪ್ರಶ್ನೆಗಳಿಲ್ಲ. ಮೂರನೆಯ ಘಟ್ಟದ ಕನ್ನಡ ಪಾಠಾವಳಿಯಲ್ಲಿ ವ್ಯಕ್ತಿಗಳನ್ನು ಕುರಿತಂತೆ ಇರುವ ಎರಡು ಪಾಠಗಳೂ ಪುರುಷರನ್ನು ಕುರಿತವು. ಐದನೆಯ ತರಗತಿಯ 'ಕನ್ನಡ ಭಾರತಿ'ಯಲ್ಲಿ ನಾಲ್ಕು ಮಹಾಪುರುಷರ ಸಾಲಿಗೆ ಚಾಂದ್‌ಬೀಬಿಯೂ ಸೇರಲ್ಪಟ್ಟಿದ್ದು ಸಮಾಧಾನದ ಸಂಗತಿ. ಆಗಾಗ ಇಂಥ ವೀರ ಮಹಿಳೆಯರು ನಮ್ಮ ಪಠ್ಯಗಳೊಳಗೆ ನುಗ್ಗುವುದೂ ಉಂಟು. ಆದರೆ ಇಂಥ ವೀರ ಮಹಿಳೆಯರು ನಮ್ಮಲ್ಲಿ ಯಾಕಿಷ್ಟು ಅಪರೂಪ? ಸಾಮಾನ್ಯ ಮಹಿಳೆಯರ ಇಂಥ ಸಾಮರ್ಥ್ಯದ ಬೆಳವಣಿಗೆ ಮತ್ತು ಅಭಿವ್ಯಕ್ತಿಗೆ ಇರುವ ಅವಕಾಶವೆಷ್ಟು? ಅಥವಾ ಆ ಸಾಮರ್ಥ್ಯಕ್ಕೆ ಸಿಗುವ ಮನ್ನಣೆ ಎಂತಹದು?– ಇಂಥ ಪ್ರಶ್ನೆಗಳ ದಿಕ್ಕಿನಲ್ಲಿ ವಿದ್ಯಾರ್ಥಿಯನ್ನು ಚಿಂತನೆಗೆ ತೊಡಗಿಸುವಂಥದೇನೂ ಇಲ್ಲಿಲ್ಲ. ಇಂಥಹವರನ್ನೆಲ್ಲ ಅಪವಾದಗಳೆಂಬಂತೆ ಪರಿಗಣಿಸಿ ಅವರನ್ನು ಮನಸ್ಸಿನ ಒಂದು ಮೂಲೆಗೆ ತಳ್ಳಿ ನಮ್ಮ ಪರಂಪರಾಗತವಾದ ಯೋಚನೆ ನಿರಾತಂಕವಾಗಿ ಸಾಗಿ ಬರಲು ಈ ಪಾಠ ಯಾವ ಅಡ್ಡಿಯನ್ನೂ ಒಡ್ಡಿಲ್ಲ.

ಸ್ತ್ರೀಯರ ಕರ್ತೃತ್ವ ಶಕ್ತಿಯ ಬಗೆಗೆ ವಿಚಾರ ಮಾಡಲು ಪ್ರೇರೇಪಿಸುವಂಥ ನಿರೂಪಣಾ ಕ್ರಮವಾಗಲೀ ಪ್ರಶ್ನೆಗಳ ಸಂಯೋಜನೆಯಾಗಲೀ ಕಾಣುವುದಿಲ್ಲ. ಹತ್ತನೆಯ ತರಗತಿಯ 'ಕನ್ನಡ ಗಂಗೋತ್ರಿ' ಮೂರರಲ್ಲಿ 'ಕನ್ನಡ ಗರತಿ'ಯ ಬಗ್ಗೆ ಒಂದು ಲೇಖನವೇನೋ ಇದೆ, ಆದರೆ 'ಕೊಟ್ಟ ಹೆಣ್ಣು ಕುಲಕ್ಕೆ ಹೊರತಲ್ಲವೆ? ಮಗಳನ್ನು ಗಂಡನ ಮನೆಗೆ



ಕಳುಹಿಸಲೇ ಬೇಕಷ್ಟೇ?'– ಇದು ಇಲ್ಲಿಯ ವ್ಯಾಖ್ಯಾನದ, ವಿಶ್ಲೇಷಣೆಯ ಧಾಟಿ. ಇನ್ನು ಪ್ರಶ್ನೆಗಳ ರೀತಿಯಾದರೂ ಯಾವುದು? 'ಮಗಳನ್ನು ಒಪ್ಪಿಸುವಾಗ ಯಾರು, ಯಾವ ಬಗೆಯ ವ್ಯಥೆ ಪಡುತ್ತಾರೆ?' ವಸ್ತುಸ್ಥಿತಿಯನ್ನು ರಮ್ಯೀಕರಿಸುವುದರಿಂದಾಚೆಗೆ ಯಾವ ಆಸಕ್ತಿಯೂ ಇಲ್ಲಿ ಇದ್ದಂತಿಲ್ಲ. ನಮ್ಮ ಬದುಕಿನ ಕ್ರಮದಲ್ಲಿ ಪ್ರಶ್ನಿಸುವುದು, ಬದಲಾಯಿಸುವುದು ಏನಾದರೂ ಇದೆಯೆ ಎಂಬ ಅನುಮಾನವನ್ನೂ ಇಂಥ ಪಠ್ಯ ಭಾಗಗಳು ಮೂಡಿಸುವುದಿಲ್ಲ. ಬದುಕನ್ನು ಕುರಿತು ಇರುವ ಹಲವು ದೃಷ್ಟಿಕೋನಗಳನ್ನು ಸಾಹಿತ್ಯದ ನಾನಾ ಬಗೆಯ ಪ್ರಯೋಗಗಳನ್ನೂ ಈ ಪಠ್ಯಭಾಗಗಳು ಪ್ರತಿನಿಧಿಸಬೇಕಾದ ಅಗತ್ಯವಿದೆ. ಹಾಗೆ ಪ್ರಾತಿನಿಧ್ಯ ಕೊಡುವಾಗಲೂ ನಿರ್ದಿಷ್ಟ ಪಠ್ಯಭಾಗ ವಿಚಾರ ಪ್ರಚೋದಕವಾಗಿದೆಯೇ, ಯಾವ ಬಗೆಯ ಚಿಂತನೆ ಈ ಆಯ್ದ ಪಠ್ಯದ ಹಿಂದಿದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಭಾಷಿಕ, ಸಾಹಿತ್ಯಕ ಆಸಕ್ತಿಗಳ ಕಡೆಗೆ ಗಮನಕೊಡುವಂತೆ ಸಾಮಾಜಿಕ ಕಾಳಜಿಯತ್ತಲೂ ನಮ್ಮ ಕಣ್ಣು ತೆರೆದಿರಬೇಕಾಗುತ್ತದೆ. ಲಿಂಗಾಧಾರಿತ ಶ್ರೇಣಿಗಳುಳ್ಳ ಸಮಾಜದ ಧೋರಣೆಗಳು ನಮ್ಮ ಪಠ್ಯಗಳಲ್ಲೂ ಮುಂದುವರಿಯುವುದು ನಿಲ್ಲಬೇಕಾಗಿದೆ. ಸಮಾಜ ವಿಜ್ಞಾನ, ಭಾಷೆ, ಸಾಹಿತ್ಯ, ಇಂಥ ವಿಷಯಗಳನ್ನು ಕಲಿಸುವಾಗಷ್ಟೇ ಅಲ್ಲದೆ ಸಾಮಾನ್ಯ ವಿಷಯಗಳನ್ನು ಕಲಿಸುವಾಗಲೂ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಇಂಥ ಅಸಮಾನತೆಗಳ ಅಸಹಜತೆಯನ್ನು ಅಮಾನವೀಯತೆಯನ್ನೂ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬಹುದು, ಆದರೆ ಇದು ಹೆಚ್ಚಾಗಿ ಉಪಾಧ್ಯಾಯರ ವ್ಯಕ್ತಿತ್ವವನ್ನು ಅವಲಂಬಿಸಿದೆ. ತಮ್ಮದೇ ಆದ ವ್ಯಕ್ತಿತ್ವವನ್ನು ಹೊಂದಿರುವ ಉಪಾಧ್ಯಾಯರ ಸಂಖ್ಯೆ ತಾನೆ ಎಷ್ಟಿದೆ? ನಮ್ಮ ಶಿಕ್ಷಕರು ಮೊದಲು ಬದಲಾಗಬೇಕಾಗಿದೆ. ಎಲ್ಲಕ್ಕಿಂತ ಮೊದಲು ಈ ವೃತ್ತಿಗೆ ಯೋಚಿಸಬಲ್ಲ, ಸಂವೇದನಾಶೀಲ, ಸಾಮಾಜಿಕ ಕಾಳಜಿಯುಳ್ಳ ಪ್ರತಿಭಾವಂತರು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿದೆ.

ನಮ್ಮ ಶಿಕ್ಷಕರು ಈಗಿರುವ ಅಸಮಾನತೆಯ ಬೀಜಗಳನ್ನು ತೊಡೆದು ಹಾಕುವಲ್ಲಿ ವಹಿಸುತ್ತಿರುವ ಪಾತ್ರ ಅಂಥ ಆಶಾದಾಯಕವಾಗಿಲ್ಲ. ಮಹಿಳೆಯರು ಮಾಡಬಹುದೆಂದು ಬಹುಹಿಂದೆಯೇ ಶಿಫಾರಸ್ಸು ಪಡೆದ ವೃತ್ತಿಗಳಲ್ಲಿ ಒಂದಾದ ಶಿಕ್ಷಕ ವೃತ್ತಿಯಲ್ಲಿ ಸಾಕಷ್ಟು ಮಹಿಳೆಯರಿದ್ದರೂ ಮಹಿಳಾ ಸಮಾನತೆಯತ್ತ ದುಡಿಯುವುದರಲ್ಲಿ ಅವರು ವಹಿಸಬಹುದಾಗಿದ್ದ ಬೇಕಾಗಿದ್ದ ಪಾತ್ರವನ್ನು ಅಷ್ಟಾಗಿ ವಹಿಸುತ್ತಿಲ್ಲ. ಇದು ಅರ್ಥ ಮಾಡಿಕೊಳ್ಳಬಹುದಾದ ಸಂಗತಿ. ದೈಹಿಕವಾಗಿ ಮಹಿಳೆಯರಾದವರೆಲ್ಲ ಪುರುಷ ಪ್ರಧಾನ ಸಮಾಜದ ಮೌಲ್ಯಗಳ ಹಿಡಿತದಿಂದ ಮುಕ್ತರಾಗಿದ್ದಾರೆಂದು ನಂಬಲಾಗುವುದಿಲ್ಲ. ಮಹಿಳಾ ಪರವಾದ ಮೌಲ್ಯಗಳನ್ನು ಹೊಂದಿರುವ ಶಿಕ್ಷಕರು ಮಹಿಳೆಯರೇ ಆಗಲಿ ಪುರುಷರೇ ಆಗಲಿ ಅಸಮಾನತೆಯನ್ನು ಬಿತ್ತುವ ಮೌಲ್ಯಗಳನ್ನು ಕಿತ್ತೊಗೆಯಲು ತಮಗೆ ಸಿಕ್ಕುವ ಎಲ್ಲ ಅವಕಾಶಗಳನ್ನೂ ಬಳಸಿಕೊಳ್ಳಬೇಕು.

ಇನ್ನು ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಯ ಸಮಾನತಾ ಮನೋಭಾವವನ್ನು ಬೆಳೆಸುವ ಅವಕಾಶಗಳು ವಿಫಲವಾಗಿವೆ. ಬರಹಗಳು, ಚರ್ಚೆಗಳು, ಆಟ ಪಾಠಗಳು,

ಸಾಂಸ್ಕೃತಿಕ ಚಟುವಟಿಕೆಗಳು, ಎಲ್ಲಕ್ಕಿಂತ ಹೆಚ್ಚಾಗಿ ಉಪಾಧ್ಯಾಯರ ದೈನಂದಿನ ವರ್ತನೆ ಇವೆಲ್ಲವೂ ಬದಲಾವಣೆಗಳನ್ನು ತರಲು ಉಪಕರಣಗಳಾಗಬಲ್ಲವು.

ಉನ್ನತ ಶಿಕ್ಷಣದ ಅವಕಾಶ ಪಡೆಯುವ ಮಹಿಳೆಯರು ಮಹತ್ವಾಕಾಂಕ್ಷಿಗಳಾದಷ್ಟೂ ತಮ್ಮ ಬೌದ್ಧಿಕ ಶ್ರೇಷ್ಠತೆ, ಸಾಮರ್ಥ್ಯವನ್ನು ಸಾಧಿಸಿ ತೋರಿಸಿದಷ್ಟೂ ಲಿಂಗಾಧಾರಿತ ಶ್ರೇಣಿಯನ್ನು ಬೆಂಬಲಿಸುವವರ ಬಾಯಿ ಮುಚ್ಚುತ್ತದೆ. ಮಹಿಳೆಯರ ವೃತ್ತಿ ಜೀವನದ ಏರಿಕೆ, ಹೆಚ್ಚಿನ ಅಧ್ಯಯನ, ಬೌದ್ಧಿಕ ವಿಕ್ರಮದತ್ತ ಕ್ರಮಿಸುವಿಕೆ ಇವೆಲ್ಲವನ್ನೂ ಒಂದೇ ಏಟಿಗೆ ಪುಡಿಯಾಗಿಸಬಲ್ಲ 'ಮದುವೆ' ಎಂಬುದರ ಬಗ್ಗೆ ಸಾವಕಾಶ ಚಿಂತನೆ ಅಗತ್ಯ.

ಸ್ವಾತಂತ್ರ್ಯೋತ್ತರದ ಈ ನಾಲ್ಕು ದಶಕಗಳಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ಪಡೆಯುವ ಮಹಿಳೆಯರ ಸಂಖ್ಯೆ ಶೀಘ್ರಗತಿಯಲ್ಲಿ ಏರುತ್ತಿದೆ. ಅಂಥ ಶಿಕ್ಷಣ ಪಡೆದ ಮಹಿಳೆಯರ ಸಂಖ್ಯೆ ಒಟ್ಟು ಭಾರತದಲ್ಲಿ 46–47ರ ಅವಧಿಯಲ್ಲಿ ಕೇವಲ 3000ವಿದ್ದದ್ದು ಲಕ್ಷವನ್ನು ಯಾವಾಗಲೋ ದಾಟಿದೆ. ಆದರೂ ಒಟ್ಟು ಪ್ರಮಾಣಕ್ಕೆ ಹೋಲಿಸಿದರೆ, ಮುಂದುವರಿದ ರಾಷ್ಟ್ರಗಳ ಸಂಖ್ಯೆಯೊಂದಿಗೆ ತೂಗಿ ನೋಡಿದರೆ ಕಡಿಮೆಯೆಂದೇ ಹೇಳಬೇಕು. ತಾಂತ್ರಿಕ ಶಿಕ್ಷಣದ ಮೇಲಿನ ಪುರುಷ ಸ್ವಾಮ್ಯ ತಗ್ಗಿದೆಯೆನ್ನುವಂತಿಲ್ಲ. ಪ್ರಪಂಚದ ಮೊದಲ ವೈದ್ಯೆಯಾದ ಅಮೆರಿಕದ ಎಲಿಜಬತ್ ಬ್ಲಾಕ್‌ವೆಲ್‌ನ ಭಾಷಣದಿಂದ ಪ್ರೇರಿತಳಾಗಿ ವೈದ್ಯಳಾಗಬೇಕೆಂದು ಬಯಸಿದ ಎಲಿಜಬತ್ ಗ್ಯಾರೆಟ್ ಆಂಡರ್‌ಸನ್ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಶಿಕ್ಷಣ ವ್ಯವಸ್ಥೆಯೊಂದಿಗೆ ಹನ್ನೊಂದು ವರ್ಷ ಸತತ ಹೋರಾಟ ಮಾಡಬೇಕಾಯಿತು. ಈಗಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಹಿಳೆಯರು ಬಯಸಿದ ವಿದ್ಯಾಭ್ಯಾಸಕ್ಕೆ ಅವಕಾಶವನ್ನು ಪಡೆಯಲು ಹಕ್ಕಿದೆ. ಆದರೆ ವಿರೋಧವಿರುವುದು ನಮ್ಮ ದೃಷ್ಟಿಕೋನದಲ್ಲಿ, ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ, ನಮ್ಮ ಜೀವನ ಕ್ರಮದಲ್ಲಿ.

ಹೆಂಗಸಿನ ಕೆಲಸ, ಜವಾಬ್ದಾರಿ, ಸಾಮರ್ಥ್ಯಗಳ ಬಗೆಗಿನ ಪರಂಪರಾಗತವಾದ ನಂಬಿಕೆ, ಅಪನಂಬಿಕೆಗಳಿಂದ ನಮ್ಮ ಶಿಕ್ಷಣ ತಜ್ಞರೂ ಮುಕ್ತರಾಗಿಲ್ಲ. ಹೆಂಗಸಿನ, ಗಂಡಸಿನ ಕೆಲಸಗಳೆಂಬವು ಮನುಷ್ಯನ ಶ್ರಮವಿಭಜನೆಯ ಒಂದು ಕಾಲದ ಒಂದು ಕ್ರಮ. ಹೊರುವ ಹೆರುವ ಕ್ರಿಯೆಗಳಿಗೆ ಹೊರತಾದ ಉಳಿದೆಲ್ಲ ಕೆಲಸಗಳನ್ನು ಗಂಡಸೂ ಮಾಡಬಲ್ಲ. ಗಂಡಸಿನ ಕೆಲಸಗಳನ್ನು ಹೆಂಗಸೂ ಮಾಡಬಲ್ಲಳೆಂಬ ತಿಳಿವಳಿಕೆ. ನಂಬಿಕೆಯ ಅಭಾವ ಪ್ರಬಲವಾಗಿದೆ. ಇದಕ್ಕೊಂದು ಚಿಕ್ಕ ನಿದರ್ಶನವಾಗಿ 1973 ರಲ್ಲಿ ಪ್ರಭುದತ್ತಶರ್ಮರು ಭಾರತೀಯ ಮಹಿಳೆಯರಿಗೆ ಸೂಚಿಸಿದ ಪಠ್ಯ ಕ್ರಮವನ್ನಿಲ್ಲಿ ಗಮನಿಸಬಹುದು. ಸಾಮಾನ್ಯ ಶಿಕ್ಷಣವನ್ನು ಪಡೆಯಲು ಅರ್ಹರೆಂದು ವೃತ್ತಿಪರ ಮಹಿಳೆಯರನ್ನು ಒಂದು ಗುಂಪು ಮಾಡಿ ಉಳಿದ ಮಹಿಳೆಯರನ್ನು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ಆ ಗುಂಪುಗಳು : (1) ವೃತ್ತಿ ಮತ್ತು ಗೃಹಕೃತ್ಯಗಳೆರಡರಲ್ಲೂ ತೊಡಗಿರುವ ಮಹಿಳೆಯರು, (2) ಕೇವಲ ಗೃಹಿಣಿಯಾಗಿರುವವರು. ಶರ್ಮರ ಪ್ರಕಾರ ಈ ಎರಡು ಗುಂಪುಗಳಿಗೆ ಕಲಿಸಬೇಕಾದ ಮಹಿಳಾ ವಿಷಯಗಳು ಎಂದರೆ ತಾಯ್ತನ, ತೋಟಗಾರಿಕೆ ಮೊದಲಾದವು. ಪ್ರಾಯಃ



ಇಲ್ಲಿಯ 'ಮೊದಲಾದವು'ಗಳಲ್ಲಿ ಸೇರುವ ಇತರ ವಿಷಯಗಳೆಂದರೆ ಗೃಹಾಲಂಕರಣ, ಅಡಿಗೆ, ಕಸೂತಿ ಮೊದಲಾದವು. ಇವೆಲ್ಲ ಹೆಂಗಸರಿಗೇ ಮೀಸಲಾಗಿರಬೇಕೆಂಬ ಭ್ರಮೆ ಯಾಕೆಂದು ತಿಳಿಯುವುದಿಲ್ಲ. ಈ ವಿಷಯಗಳಲ್ಲಿ ಆಸಕ್ತಿಯುಳ್ಳ ಯಾರಾದರೂ ಈ ವಿಷಯಗಳನ್ನು ಕಲಿಯಬಹುದು. ಇವೇ ವಿಷಯಗಳು ವ್ಯವಸ್ಥಿತ ವೃತ್ತಿಗಳಾದಾಗ ಹೇಗೆ ಗಂಡಸಿನ ಸ್ವಾಧೀನಕ್ಕೆ ಹೋಗುತ್ತವೆಂಬುದೇ ಯಾರಾದರೂ ಇವುಗಳನ್ನು ಕಲಿಯಬಹುದೆಂಬುದಕ್ಕೆ ನಿದರ್ಶನ. ಆಸಕ್ತಿ, ಸಾಮರ್ಥ್ಯಗಳು ವೈಯಕ್ತಿಕವಾದವು. ಅವಕ್ಕೆ ಗಂಡಸು, ಹೆಂಗಸಿನ ಹಣೆ ಚೀಟಿ ಅನಾವಶ್ಯಕ. 1851 ರಲ್ಲಿ ಅಮೆರಿಕದ ಅಕ್ರೋನ್‌ನಲ್ಲಿ ನಡೆದ ಮಹಿಳಾ ಹಕ್ಕುಗಳನ್ನು ಕುರಿತ ಎರಡನೆಯ ಸಮ್ಮೇಳನದಲ್ಲಿ ಸೋಜೋರ್ನರ್ ಟ್ರೂತ್ ಎಂಬ 'ಗುಲಾಮೀ ಕಪ್ಪು ಮಹಿಳೆ' ಆಡಿದ ಮಾತುಗಳು ಇಲ್ಲಿ ನೆನಪಾಗುತ್ತಿವೆ. ಆಕೆ ಹೇಳಿದಳು : 'ನಾನು ಉತ್ತಿದ್ದೀನಿ, ನಾಟಿ ಮಾಡಿದ್ದೀನಿ, ಕಣಜಗಳನ್ನು ತುಂಬಿದ್ದೀನಿ, ಯಾವ ಗಂಡಸೂ ಇದರಲ್ಲಿ ನನ್ನನ್ನು ಮೀರಿಸಿಲ್ಲ! ನಾನು ಒಬ್ಬ ಹೆಂಗಸಲ್ಲವೇ? ನಾನು ಗಂಡಿಸನಷ್ಟೇ ದುಡಿಯಬಲ್ಲೆ, ತಿನ್ನಲು ಸಿಕ್ಕರೆ ಅವರಷ್ಟೇ ತಿನ್ನಬಲ್ಲೆ ಮತ್ತೆ ಚಡಿಯೇಟನ್ನೂ ಹಾಗೇ ತಿನ್ನಬಲ್ಲೆ! ನಾನು ಒಬ್ಬ ಹೆಂಗಸಲ್ಲವೆ?' ನಮ್ಮ ಕೌಟುಂಬಿಕ, ಶೈಕ್ಷಣಿಕ, ಸಾಮಾಜಿಕ ವ್ಯವಸ್ಥೆಗಳು ಅವಳನ್ನು ಪ್ರೋತ್ಸಾಹಿಸಬೇಕು. ಹೆಂಗಸು, ಗಂಡಸಿನ ಕಾರ್ಯಕ್ಷೇತ್ರಗಳ ನಡುವೆ ಕೃತಕ ಸೀಮಾರೇಖೆಗಳನ್ನು ಎಳೆಯುವುದರಲ್ಲಿ ಯಾವ ಅರ್ಥವೂ ಇಲ್ಲ. ಇಂಥ ಅರ್ಥಹೀನ ನಂಬಿಕೆಗಳು ನಮ್ಮ ಶಿಕ್ಷಣ ಕ್ರಮಕ್ಕೆ ಆಧಾರಗಳಾಗಬಾರದು.

ಶಾಲಾ ಕಾಲೇಜುಗಳ ಮೂಲಕವೇ ಅಪೇಕ್ಷಿತ ಬದಲಾವಣೆಗಳನ್ನೆಲ್ಲ ತರುವಂತಿದ್ದರೆ ಅದು ಒಂದು ರೀತಿಯಲ್ಲಿ ಕಡಿಮೆ ಸಂಕೀರ್ಣ ಸಮಸ್ಯೆಯಾಗುತ್ತಿತ್ತು. ಆದರೆ ವಸ್ತು ಸ್ಥಿತಿ ಹಾಗಿಲ್ಲ. ಶಾಲೆಯ ಹೊರಗಿನ ಜೀವನವೂ ವಿದ್ಯಾರ್ಥಿಯನ್ನು ರೂಪಿಸುವುದರಿಂದ ನಮ್ಮ ಕೌಟುಂಬಿಕ, ಸಾಮಾಜಿಕ ಸನ್ನಿವೇಶಗಳು ಕೊಡುವ ಅನೌಪಚಾರಿಕ ಶಿಕ್ಷಣದಲ್ಲಿ ಸಮಾನತೆಯ ಅಂಶ ಸೇರಿರುವುದು ಅವಶ್ಯಕ. ಕುಟುಂಬದ ನೆಲೆಯಲ್ಲಿ ತನ್ನ ತಂದೆ ತಾಯಿಯ ನಡುವೆ ಪರಸ್ಪರ ಗೌರವ, ಸೌಹಾರ್ದವನ್ನು ಕಂಡ, ಹೆಂಗಸಿನ ಕೆಲಸ, ಗಂಡಸಿನ ಕೆಲಸಗಳೆಂಬ ವಿಭಜನೆ, ತಾರತಮ್ಯಗಳನ್ನು ಕಾಣದ ಮನೆಯಲ್ಲಿ ಬೆಳೆದ ಮಗು ಸಮಾನತೆಯನ್ನು ಸಹಜವಾದ, ಸಂಗತವಾದ ಅಂಶವಾಗಿ ಕಾಣಬಹುದು. ಆದರೆ ವ್ಯಕ್ತಿ ಬೆಳೆಯುವ ಈ ಮೂರು ಕೌಟುಂಬಿಕ, ಶೈಕ್ಷಣಿಕ, ಸಾಮಾಜಿಕ ಘಟಕಗಳೂ ಸಮಾನತೆಗೆ ಪೂರಕವಾಗಿದ್ದಾಗ ಒಂದು ಘಟಕದಲ್ಲಿ ಮಾಡುವ ಪ್ರಯತ್ನವನ್ನು ಉಳಿದವು ಬಲಗೊಳಿಸುತ್ತವೆ; ನಮ್ಮ ಸಮೂಹ ಮಾಧ್ಯಮಗಳು, ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳು ಮಹಿಳಾ ಸಮಾನತೆಯನ್ನು ತೆರೆದ ಮನಸ್ಸಿನಿಂದ, ನಿಜವಾದ ನಿಷ್ಠೆಯಿಂದ ಕಾಣಲು ಸಾಧ್ಯವಾದಾಗ ನಮ್ಮ ಪರಿಸರ ಹೆಚ್ಚು ಆರೋಗ್ಯ ಪೂರ್ಣವಾಗಿರುತ್ತದೆ.

ನಮ್ಮ ಶೈಕ್ಷಣಿಕ ಧೋರಣೆಯನ್ನು ಮಹಿಳಾ ಸಮಾನತೆಯೂ ಸೇರಿದಂತೆ ಎಲ್ಲ ಬಗೆಯ ಸಮಾನತೆಯ ಪರವಾಗಿ ರೂಪಿಸುವತ್ತ ತುರ್ತು ಒಂದೆಡೆಯಿದೆ, ಮತ್ತೊಂದೆಡೆ

ಶಿಕ್ಷಣದಿಂದ ಅನೇಕ ಶತಮಾನಗಳಿಂದ ವಂಚಿತರಾಗಿರುವ ಮಹಿಳೆಯರಿಗೆ ಈಗಲಾದರೂ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳುವ ಅಗತ್ಯವಿದೆ. ಕೆಳವರ್ಗ ಜಾತಿಗಳ ಅಸಂಖ್ಯ ಬಾಲಕಿಯರು ಇಂದಿಗೂ ಶಾಲಾಶಿಕ್ಷಣದಿಂದ ವಂಚಿತರಾಗಿದ್ದಾರೆ. 1981ರ ಜನಗಣತಿಯ ಪ್ರಕಾರ ಕರ್ನಾಟದಲ್ಲಿ ಸಾಕ್ಷರ ಮಹಿಳೆಯರ ಸಂಖ್ಯೆ ಶೇ.72.83 ಮಾತ್ರ, ಶೇ.50ರ ಗಡಿಯನ್ನು ದಾಟಿರುವ ಒಂದೇ ರಾಜ್ಯ ಕೇರಳ. ಅಲ್ಲಿ ಶೇ.64.48 ಮಹಿಳೆಯರು ಸಾಕ್ಷರರು. ಬಿಹಾರ, ಜಮ್ಮು ಮತ್ತು ಕಾಶ್ಮೀರ, ರಾಜಸ್ಥಾನಗಳಂತೂ ಶೇ. 10ನ್ನು ಇನ್ನೂ ತಲುಪಿಲ್ಲ. ಸಾಕ್ಷರರ ಪ್ರಮಾಣ ಗಂಡಸರಲ್ಲೂ ಕಡಿಮೆಯಾದರೂ ಮಹಿಳೆಯರಲ್ಲಿ ಆ ಪ್ರಮಾಣ ಅದಕ್ಕಿಂತಲೂ ಕಡಿಮೆ. ಮಹಿಳೆಯರ ಜೀವನವನ್ನು ಕುರಿತು ನಮ್ಮ ದೃಷ್ಟಿಕೋನ, ಆರ್ಥಿಕ ಒತ್ತಡ ಇವುಗಳೇ ಮುಖ್ಯವಾಗಿ ಮಹಿಳೆಯರ ಶಿಕ್ಷಣಕ್ಕೆ ಕಾಲ್ತೊಡಕಾಗಿವೆ. ಕಳೆದ ಶತಮಾನದಿಂದ ಇಂದಿನವರೆಗೆ ಮಹಿಳಾ ಶಿಕ್ಷಣವನ್ನು ಬೇರೆ ಬೇರೆ ಕಾರಣಗಳಿಂದಾಗಿ ಪ್ರೋತ್ಸಾಹಿಸಲಾಗುತ್ತಿದೆ. ಪ್ರಾರಂಭದ ದಿನಗಳಲ್ಲಿ ಪ್ರಬಲವಾದ ವಿರೋಧವನ್ನು ಸ್ತ್ರೀ ಶಿಕ್ಷಣ ಎದುರಿಸಿತು. ಆದರೆ ಕೆಲವರ ಸತತ ನಿಷ್ಠೆ ಈ ವಿರೋಧವನ್ನು ಲೆಕ್ಕಿಸದೆ ದುಡಿಯಿತು. ಚಾಮರಾಜೇಂದ್ರ ಒಡೆಯರ ದರ್ಬಾರು ಭಕ್ಷಿಗಳಾಗಿದ್ದ ಅಂಬಲ್ ನರಸಿಂಹಯ್ಯಂಗಾರರಂಥವರು ಸ್ತ್ರೀ ವಿದ್ಯಾಭ್ಯಾಸವನ್ನು ತಮ್ಮ ಜೀವಿತ ಕಾಯಕವಾಗಿ ಸ್ವೀಕರಿಸಿದರು. ಕೊನೆಯುಸಿರಿನ ತನಕವೂ ಅವರು ಇದಕ್ಕಾಗಿ ಹೋರಾಡಿದರು. ಸರ್ಕಾರದ ಹಣವಷ್ಟೇ ಅಲ್ಲದೆ ತಮ್ಮ ಸಂಬಳವನ್ನು ಇದಕ್ಕಾಗಿ ವ್ಯಯಿಸಿದರು. ಅನೇಕರ ವಿರೋಧ, ಅಪಹಾಸ್ಯ, ವಿಮರ್ಶೆ, ಉಪಟಳಗಳ ನಡುವೆ ಇಂಥವರು ಸ್ತ್ರೀ ಶಿಕ್ಷಣಕ್ಕಾಗಿ ನಡೆಸಿದ ಹೋರಾಟ ವಿಸ್ಮಯಕಾರಿಯಾದ್ದು. ಮೊದಮೊದಲು ಒಳ್ಳೆಯ ಗೃಹಿಣಿಯಾಗಿರಲು, ಮುಖ್ಯವಾಗಿ ತಾಯಿಯರಾಗಲು ಮಹಿಳೆಯರಿಗೆ ಶಿಕ್ಷಣ ಅಗತ್ಯವೆಂಬ ವಾದ ಕಂಡುಬಂದರೂ ಮುಂದಿನ ದಿನಗಳಲ್ಲಿ ಶಿಕ್ಷಣದ ಆಶಯ ಬದಲಾಗುತ್ತಾ, ವಿಸ್ತಾರವಾಗುತ್ತಾ ಬಂದಿತು. ಯಾವ ಉದ್ದೇಶದಿಂದ ಮಹಿಳೆಯರಿಗೆ ಶಿಕ್ಷಣ ಕೊಡಲು ಪ್ರಾರಂಭಿಸಿದರೋ ಆ ಮೂಲ ಉದ್ದೇಶ, ಆಶಯ, ಮೌಲ್ಯವನ್ನೇ ಪ್ರಶ್ನಿಸಲು, ಪ್ರತಿಭಟಿಸಲು ಶಿಕ್ಷಣ ಸಹಾಯಕವಾಯಿತು. ಇದು ಅನಿವಾರ್ಯವಾದ ಬೆಳವಣಿಗೆ. ಕಳೆದ ಶತಮಾನದಿಂದ ಪಶ್ಚಿಮದಲ್ಲಿ ಪ್ರಾರಂಭವಾದ ಮಹಿಳಾ ಆಂದೋಲನವು ಸಮಾನತಾ ಸಾಧನೆಗೆ ಶಿಕ್ಷಣವೇ ಕೀಲಿಕೈ ಎಂಬುದನ್ನು ಸರಿಯಾಗಿಯೇ ಗುರುತಿಸಿತು. ಹಾಗೂ ಅದಕ್ಕೆ ಆದ್ಯ ಗಮನ ಕೊಟ್ಟಿತು. ಈ ಶತಮಾನದ ಕೊನೆಯ ಹೊತ್ತಿಗೆ ನಮ್ಮಲ್ಲಿ ರೂಪುಗೊಳ್ಳತೊಡಗಿರುವ ಮಹಿಳಾ ಆಂದೋಲನಗಳಲ್ಲೂ ಮಹಿಳೆಯರ ಶಿಕ್ಷಣ ವ್ಯವಸ್ಥೆಯಲ್ಲಿನ ಮಹಿಳಾಪರವಾದ ಧೋರಣೆಗೆ, ಶಿಕ್ಷಿತ ಮಹಿಳೆಯರ ಉದ್ಯೋಗಾವಕಾಶಕ್ಕೆ, ನಮ್ಮ ಕುಟುಂಬ ಹಾಗೂ ಸುತ್ತಲಿನ ಪರಿಸರದಲ್ಲಿ ಸಮಾನತಾ ಪುರಸ್ಕಾರಕ್ಕೆ ಹೋರಾಡಬೇಕಾಗಿದೆ. ಈ ಹೋರಾಟದ ದಾರಿ ದೂರ, ಪ್ರಯಾಸಕರ, ಆದರೆ ಅನಿವಾರ್ಯ.

❑



# III. ಕುಲ

ಕುಲ ಎಂದರೆ ಒಂದು ಸಮೂಹ, ಗುಂಪು ಎಂದರ್ಥ. ವರ್ಣಾಶ್ರಮ ವ್ಯವಸ್ಥೆಯಲ್ಲಿ ಒಂದೊಂದು ವೃತ್ತಿಯಲ್ಲಿ ತೊಡಗಿಕೊಂಡವರ ಒಂದು ಸಮೂಹವನ್ನು 'ಕುಲ' ಎಂದು ಕರೆದರು. ಕಾಲಕ್ರಮೇಣ ಕುಲ ಎಂಬುದು ಹೀನಾರ್ಥ ಪ್ರಾಪ್ತಿಯಾಗಿ ಜಾತಿ ಎಂದೂ ಅದರಲ್ಲಿ ಕೆಳಜಾತಿ– ಮೇಲುಜಾತಿ, ಕೆಲವರು ಶ್ರೇಷ್ಠ ಕೆಲವರು ಕನಿಷ್ಠ ಎಂದು ಮುಂತಾಗಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ರೂಪಿಸಿದರು.

'ಮಾನವ ಕುಲಂ ತಾನೊಂದೆ ವಲಂ' ಎಂಬ ಪಂಪನ ವಾಣಿಯು ನಮ್ಮ ಮುಂದಿದೆ. 'ಮನುಜಮತ ವಿಶ್ವಪಥ', 'ವಿಶ್ವಮಾನವ ಪ್ರಜ್ಞೆ' ಇತ್ಯಾದಿ ಆಶಯಗಳು, ವ್ಯಾಖ್ಯಾನಗಳು ಬರಿ ಪುಸ್ತಕದ ಬದನೆಗಳಾಗಿ ಮಾತ್ರ ಉಳಿದು, 'ಜಾತಿ' ಎಂಬ ಘೋರ ಶಾಪ ಭಾರತಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಪಂಪನಿಂದ ಹಿಡಿದು ಇಂದಿನ ಆಧುನಿಕ ಕವಿಗಳವರೆಗೆ ಎಲ್ಲರೂ ಕುಲವನ್ನು ಹೋಗಲಾಡಿಸುವ ಬಗ್ಗೆ ಸಾಕಷ್ಟು ಶ್ರಮಿಸಿದ್ದಾರೆ, ಹೋರಾಡಿದ್ದಾರೆ. ಬಸವಣ್ಣನವರು ಪ್ರಾಮಾಣಿಕ ಪ್ರಯತ್ನದಿಂದ ಒಂದು ಕ್ರಾಂತಿಯನ್ನೆ ಮಾಡಿದರು. ಆದರೂ ಪರಿಣಾಮ ಶೂನ್ಯವೇ ಸರಿ.

20ನೇ ಶತಮಾನದಲ್ಲಿ ಕೆಲವು ಸಮಾಜಸುಧಾರಕರ ಆಲೋಚನೆಗಳ ಅನುಷ್ಠಾನದಿಂದ ನಮ್ಮ ಯುವಕರಲ್ಲಿ ಒಂದು ಕಾಲಘಟ್ಟದಲ್ಲಿ 'ಆದರ್ಶ' ಮೂಡಿ ಜಾತಿ ನಿರ್ಮೂಲನೆಯ ಒತ್ತಾಸೆ ಮೂಡಿತ್ತೆಂದು ತೋರುತ್ತದೆ. ಉದಾಹರಣೆಗೆ ನಾರಾಯಣ ಗುರು, ಪೆರಿಯಾರ್, ಅಂಬೇಡ್ಕರ್, ಜ್ಯೋತಿ ಬಾಪುಲೆ, ಕುದ್ಮಲ್ ರಂಗರಾವ್ ಮುಂತಾದವರು.

ನಮ್ಮ ಸಮಾಜಕ್ಕೆ ಅವಿದ್ಯಾವಂತರಿಗಿಂತ ವಿದ್ಯಾವಂತರೆ ಹೆಚ್ಚು ಅಪಾಯಕಾರಿ. 21ನೇ ಶತಮಾನದ ದುರಂತವೆಂದರೆ ವಿದ್ಯಾವಂತರಲ್ಲೆ ಜಾತಿಯ ಮೋಹ ಹೆಚ್ಚು ಪ್ರಬಲಗೊಂಡಿರುವಂತಿದೆ. ಉದಾಹರಣೆಗೆ –

ಆಗ– ಕೃಷ್ಣೇಗೌಡ ಎಂಬುದನ್ನು ಕೃಷ್ಣಕುಮಾರ್ ಎಂದು ಬದಲಾಯಿಸಿಕೊಂಡಿದ್ದಿದೆ. ಈಗ ಹೆಸರಿನ ಮುಂದೆ ಗೌಡ, ರೆಡ್ಡಿ, ಕಮ್ಮಾರ್, ಕಂಬಾರ್, ಬಳಿಗಾರ್ ಇತ್ಯಾದಿ ಜಾತಿ ಸೂಚಕಗಳನ್ನು ಹಾಕಿಕೊಳ್ಳುವುದು ಹೆಮ್ಮೆಯ ಸೂಚಕವೇ ಆಗಿದೆ. ತಳಸಮುದಾಯಗಳು ತಮ್ಮ ಕುಲವನ್ನು ತಮ್ಮ ಸಾಂಸ್ಕೃತಿಕ ಹೆಗ್ಗುರುತುಗಳನ್ನಾಗಿ ಪರಿಗಣಿಸುತ್ತಿರುವುದು ವಿಷಾದನೀಯ.

ಇಂದಿಗೂ ಪಟ್ಟಣಗಳಲ್ಲಿ ಮೇಲುನೋಟಕ್ಕೆ ಜಾತೀಯತೆ ಕಾಣಿಸದಿದ್ದರೂ ಆಂತರ್ಯದಲ್ಲಿ ಅದರ ಅಸ್ತಿತ್ವ ಇದ್ದೇ ಇದೆ. ಇನ್ನೂ ಹಳ್ಳಿಗಳಲ್ಲಿ ಅಂತಹ ಜಾತಿನಿರ್ಮೂಲನೆ ಅಥವಾ ಜಾತ್ಯಾತೀತ ಎಂಬ ಪರಿಸ್ಥಿತಿ ನಿರ್ಮಾಣ ಆಗಿಲ್ಲ.

ಸಹಭೋಜನ, ಸಹಜೀವನ ಇತ್ಯಾದಿಗಳಲ್ಲಿ ಸಹಕರಿಸಬಹುದಾದರೂ ಕೊಡು–ಕೊಳ್ಳುವ ವಿಷಯದಲ್ಲಿ ಈ ಅಂತರವನ್ನು ಕಾಪಾಡಿಕೊಳ್ಳುವುದು ಅನಿವಾರ್ಯ ಎಂಬಂತಿದೆ.

ಇತ್ತೀಚೆಗಿನ ಬೆಳವಣಿಗೆ ಎಂದರೆ 'ಮರ್ಯಾದೆ ಹತ್ಯೆ' ಎಂಬ ಹೊಸ ಪರಿಕಲ್ಪನೆ.

# ಭೀಷ್ಮ-ಕರ್ಣ ವಿವಾದ

**– ಪಂಪ**
**ಗದ್ಯಾನುವಾದ : ಡಾ. ಎಲ್. ಬಸವರಾಜು**

ಶ್ರೀವಧೂವಲ್ಲಭನೂ ಅಭಿಮಾನಧನನೂ ಆದ ಹರಿಗ (ಅರ್ಜುನ)ನು ಆ ಕುರುಕ್ಷೇತ್ರದಲ್ಲಿ-ಸ್ವಲ್ಪವೂ ಹಿಂತೆಗೆಯದೆ ಬಂದು ಬೀಡುಬಿಟ್ಟಿದ್ದನ್ನು ಗೂಢಚಾರರು ದುರ್ಯೋಧನನಿಗೆ ಅರಿಕೆ ಮಾಡಿಕೊಳ್ಳುತ್ತಲೇ.

### ದುರ್ಯೋಧನನು ಪಾಂಡವರನ್ನು ಗೇಲಿ ಮಾಡಿದ

ದ್ರೋಣ-ಅಶ್ವತ್ಥಾಮ-ಶಕುನಿ-ಕೃಪ-ಕರ್ಣರನ್ನು ಬರಮಾಡಿಕೊಂಡು (ಅವರಿಗೆ) ದುರ್ಯೋಧನ ಹೇಳಿದ-ಕೇಳಿದಿರೇನು ಪಾಂಡವರ ರೋಷದ ನಿಶ್ಚಯದ ಚಲದ ಬಲದ ಕಲಿತನದ ಅತಿರೇಕವನ್ನು? ಅವರಾಗಲೇ ಕುರುಕ್ಷೇತ್ರದಲ್ಲಿ ಸನ್ನದ್ಧರಾಗಿ ನಮ್ಮೊಡನೆ ಸೆಣಸಿ ಹೋರಾಡಲೆಂದು ಬಂದು ನಿಂತಿದ್ದಾರೆ! ನೋಡಿ ಅವರೇ ನಮಗೇ ದಾಯಾದ ಮಾತ್ಸರ್ಯವನ್ನು ತೋರಿಸಿ ಕೊಡುತ್ತಿದ್ದಾರೆ.

ಅವರ ಆ ಸೈನ್ಯಕ್ಕೆ ಸೈನ್ಯಾಧಿಪತಿ (ಪಾಂಚಾಲದೇಶದ) ಧೃಷ್ಟದ್ಯುಮ್ನನೆಂಬೊಂದು ಹುಲ್ಲೆ, ಆ ಸೈನ್ಯಕ್ಕೆ ಮಹಾವೀರನೆಂದರೆ ಆ ದ್ರುಪದನೆಂಬೊಂದು ಮೊಲ, ಮತ್ಸ್ಯದೇಶದ ವಿರಾಟನಾದರೋ ಒಂದು ಹೆಣ್ಣೊಂಟೆ-ಇಂಥವರೆಲ್ಲಾ ಇರುವ ಆ ಸೈನ್ಯಕ್ಕೆ ಯಜಮಾನ ಯಾರು ಗೊತ್ತಿಲ್ಲವೇನು- ಧರ್ಮರಾಯನೆಂಬೊಂದು ಧರ್ಮದ ಎತ್ತು (=ಗಂಗೆದ್ದು)! ಏನೆಂಥೆಂಥಾ ನಾಯಕರು ಸೇರಿದರು ನನ್ನ ಸೈನ್ಯದ ವಿರುದ್ಧ ಹೋರಾಡಲು?!

### ಆಗ ದ್ರೋಣ ಹೇಳಿದ

ಕುರುಕ್ಷೇತ್ರವನ್ನು ರಣರಂಗವೆಂದು ನೀನು ನಿಶ್ಚಯಿಸಿ ಹೇಳಿದೆ-ಆ ಪ್ರಕಾರ ಅವರು ಅಲ್ಲಿಗೆ ಬಂದಿದ್ದಾರೆ. ಅವರ ಬಾಹುಬಲ-ಚತುರಂಗಬಲ-ಮಿತ್ರಬಲವನ್ನು ಕುರಿತು ಇನ್ನೇನು ಕೇಳುತ್ತೀಯ-ಪಾಂಡವರು ಬಲಸಂಪನ್ನರು, ದೈವಬಲಸಂಪನ್ನರು. ಹುಚ್ಚುಮಾತುಗಳನ್ನಿನ್ನು ಬಿಡು. ಭೀಷ್ಮಾಚಾರ್ಯರು ಹೇಳುವೊಂದು ರೀತಿಯಲ್ಲಿ ನೀನು ಯುದ್ಧ ಮಾಡು ದುರ್ಯೋಧನ !

### ಭೀಷ್ಮರೊಡನೆ ದುರ್ಯೋಧನನ ಮಂತ್ರಾಲೋಚನೆ

ಎನ್ನುತ್ತಲೂ, ಆ ಮಾತನ್ನು ಮನಸ್ಸಿಗೆ ತಂದುಕೊಂಡು-ಹಾಗೇ ಮಾಡುವೆನೆನ್ನುತ್ತ ಅಷ್ಟೂ ಜನರನ್ನು ಕಳಿಸಿಕೊಟ್ಟು, (ಆ) ರಾತ್ರಿವೇಳೆಯಲ್ಲೇ ಹತ್ತೆಂಟು ಕೈದೀವಿಗೆಗಳ ಬೆಳಕಿನಲ್ಲಿ ಕೆಲವೇ ಪರಿಜನರಿಂದ ಸುತ್ತುವರಿದವನಾಗಿ ದುರ್ಯೋಧನನು ಭೀಷ್ಮರ ಅರಮನೆಗೆ ಬಂದು, ವಾಹನದಿಂದ ಇಳಿದು, ಆ ಕುರುವಂಶದ ಅಜ್ಜನಿಗೆ ಎರಗಿ



ಪೊಡಮಡುತ್ತಲೇ ಆ ಅಜ್ಜನು ಅವನಿಗೆ ಆರ್ಶೀವಾದ ಮಾಡಿ-ಮಂಚದ ಮೇಲೆ ಕುಳಿತುಕೋ ಬಾರೆಂದರೆ-ಒಲ್ಲೆ, ಮಹಾಪ್ರಸಾದ, ಇಲ್ಲೇ ಇರುತ್ತೇನೆ ಎಂದು ಮಣಿಖಚಿತವಾದ ಬಂಗಾರದ ಆಸನದಲ್ಲಿ ಕುಳಿತಿದ್ದ ಆ ದುರ್ಯೋಧನನನ್ನು ಭೀಷ್ಮ ನೋಡಿ-ಕಾರ್ಯವೇನಾದರೂ ಇರುವುದಾದರೆ ನಮಗೇ ಹೇಳಿಕಳಿಸದೆ ಇಷ್ಟು ಹೊತ್ತಿನಲ್ಲಿ ಅದಾವ ಮನೆವಾರ್ತೆಗೆ ಬಂದೆ ಎಂದರೆ, ದುರ್ಯೋಧನ ಮುಂದಿನಂತೆಂದನು-

ಪಾಂಡವರು ತೆಪ್ಪಗಿರದೆ ಕೃಷ್ಣನ ಕುಮ್ಮಕ್ಕಿನಿಂದ ನನ್ನ ಮೇಲೆ ಯುದ್ಧವನ್ನು ಸಾರಿದ್ದಾರೆ-ಗಮನವಿಟ್ಟು ಕೇಳಿರಿ-ಆ ಹರಿಕೃಷ್ಣನನ್ನು ನಾನು ಹುರಿಯಿಂದ ಕಟ್ಟಿದಾಗ ನೀವೇ ಬಂದು ಬಿಡಿಸಿದಿರಲ್ಲವೇ!? ಆನೆಗೂ ಪರಮಾಣುವಿಗೂ ಸಂಬಂಧವೇನಿದೆಯೋ ಅದೇ ಸಂಬಂಧ ನಿಮಗೂ ಆ ಅಸುರವೈರಿ ಕೃಷ್ಣನಿಗೂ ಇರುವ ಸಂಬಂಧ! ನಿಮ್ಮೊಡನೆ ಆ ಮಹಾಪರಶುರಾಮನೇ ಆಗಲಿ ಯುದ್ಧಮಾಡಿ ಏನಾದ? ಪಾಂಡವರು ಒಪ್ಪಂದದ ಮೇಲೆ ಕೃಷ್ಣನನ್ನು ವಶಪಡಿಸಿಕೊಂಡರು-ನಾನೋ ಕಿಂಕರಭಾವದಿಂದ ತಮ್ಮ ಪಾದವನ್ನು ಹಿಡಿದೆ, ಹೇಗೂ ನಾನು ಅಜ್ಜನ್ನು ಹಿಡಿದೆ- ಅವರು ಬಂಡಿಯನ್ನು ಹಿಡಿದರು, ನನ್ನದೇ ಗೆಲುವು ಕೊರಳಲ್ಲಿ ಕಟ್ಟಿಕೊಂಡ ದೇವಿ (ದುರ್ಗಿ)ಯಂತೆ*ನಾನು ತೊಟ್ಟಿಲ ಮಗುವಿದ್ದಾಗಿನಿಂದ ಈವರೆಗೂ ಶ್ರೀ (ಲಕ್ಷ್ಮಿ) ನನ್ನ ವಕ್ಷಸ್ಥಲದಲ್ಲಿ ನೆಲಸಿದ್ದಾಳೆ-ಅದು ನಿಮ್ಮ ದಯೆ. ನಾನು ನಿಮ್ಮನ್ನೇ ಬಹಳವಾಗಿ ನೆಚ್ಚಿಕೊಂಡು ಬಲಿಷ್ಠರಾದವರಲ್ಲಿ ಯುದ್ಧವನ್ನು ಸಾರಿದ್ದೇನೆ. ಆದ್ದರಿಂದ ಇನ್ನು ಯುದ್ಧ ವಿಜಯಶ್ರೀ ನಿರಂತರ ನನ್ನ ಜೊತೆಗಿರುವಂತಾಗಲು-ನಿಮ್ಮ ಅಭಿಪ್ರಾಯವನ್ನು ಹೇಳಿರಿ ! ಎಂದು ನುಡಿದ ತನ್ನ ಮೊಮ್ಮಗನ ನಯ-ವಿನಯ ಮಾತಿಗೆ ಕರುಣೆ ತಾಳಿ ಅ ಭೀಷ್ಮಜ್ಜನು ಈ ಮುಂದಿನಂತೆಂದನು – (ನಿನಗೆ) ಧೃತರಾಷ್ಟ್ರನು ಹೇಳಿ ಏನಾಯಿತು? ಹರಿಕೃಷ್ಣನು ಬಲಾತ್ಕರಿಸಿಯೂ ಏನಾಯಿತು? ನಾನೇ ಆಗಲಿ- "ನೀನು ಪಾಂಡವರನ್ನು ನೋಯಿಸಬಾರದೆಂ"ದು ಹೇಳಿದ್ದೆಲ್ಲಾ ಏನಾಯಿತು? ನಿನ್ನ ಒರಟುತನವೇ ಮಿತಿಮೀರಿತು. (ಈಗಲೂ) ಅದೇ ಆಗುವುದಾದರೆ-ಈ ಭೂಮಿಯ ಭಾರ ಇಳಿದೇ ತೀರುವುದು- ನೀನು ಯುದ್ಧಕ್ಕೆ ಸಿದ್ದನಾಗು. ಉಳಿದವರನ್ನಂತೆ ನೀನು ನಮ್ಮನ್ನು ಪ್ರಾರ್ಥಿಸಿಕೊಳ್ಳಲೇಕೆ?

### ಭೀಷ್ಮನ ಧರ್ಮಸಂಕಟ

ಎನ್ನುತ್ತಲೂ, ಮಹಾಪ್ರಸಾದವೆನ್ನುತ್ತ ದುರ್ಯೋಧನ ಹೋದ. ಇತ್ತ ಗಾಂಗೇಯ ಭೀಷ್ಮನು ಸ್ವಗತವಾಗಿ – "ಮಿತಿಮೀರಿದ ಕೋಪದಲ್ಲಿ ಸ್ವಲ್ಪವಾದರೂ ತಾಳದೆ- ನಾರಾಯಣ(ಕೃಷ್ಣ)ನಲ್ಲಿ ಮತ್ತು ಉದಾತ್ತ ನಾರಾಯಣ (ಅರಿಕೇಸರೀ ಅರ್ಜುನ) ನಲ್ಲಿ –ಯಾರೇ ಆಗಲಿ ಹೀಗೆ ಜಗಳ ಕಿತ್ತ ಶೂರರುಂಟೇನು? ದುರ್ಯೋಧನ- ನಡೆಯುವ ಯುದ್ಧಕ್ಕೆ ನನ್ನನ್ನೇ ನಂಬಿಕೊಂಡಿದ್ದಾನೆ, ನನ್ನ ಕೈಯಲ್ಲೇ ಮಾತು ತೆಗೆದುಕೊಂಡಿದ್ದಾನೆ-ನನಗೆ ಎರಡೂ ತಂಡ ಒಂದೇ ಸಮನಲ್ಲವೆ- ನನ್ನ ಮಕ್ಕಳಲ್ಲಿ ಮೊಮ್ಮಕ್ಕಳಲ್ಲಿ ನಾನು ಹೇಗೆ ತಾನೇ ಯುದ್ದ ಮಾಡಲಿ? ಮಕ್ಕಳ ಮತ್ತು ಮೊಮ್ಮಕ್ಕಳ

ರಥಗಳು ಗುಂಪುಗುಂಪಾಗಿ ರಣರಂಗದ (ಲ್ಲಿ) ಎದುರುಬಂದರೆ–ಅವರನ್ನು ರಕ್ಷಿಸದೆ–ಯುದ್ಧವೆಂದು ಆ ಮಕ್ಕಳನ್ನೇ ಕೊಂದರೆ–ಹಾವು ತಾನಿಕ್ಕಿದ ಮೊಟ್ಟೆಯನ್ನು ತಾನೇ ನುಂಗಿದಂತಾಗದೇ! ಯುದ್ಧ ಭೂಮಿಯಲ್ಲಿ ನನ್ನನ್ನು ಎದುರಿಸಬಲ್ಲವರಾದರೂ ನರ–ನಾರಾಯಣರಿಬ್ಬರೇ–ಅವರಲ್ಲಿ ಒಬ್ಬನು ನನ್ನ ಮೊಮ್ಮಗ, ಇನ್ನೊಬ್ಬನು ನನ್ನ ಪರಮಗುರು. ಅವರಿಬ್ಬರನ್ನೂ ರಕ್ಷಿಸಿ, ಉಳಿದೆಲ್ಲ ಶತ್ರುರಾಜಬಲವನ್ನೂ ನಾಶಪಡಿಸುತ್ತೇನೆ.”

**ಭೀಷ್ಮನಿಗೆ ವೀರಪಟ್ಟ ಕಟ್ಟಿದ ದುರ್ಯೋಧನ**

ಎಂದು ತನ್ನಲೇ ಯೋಚಿಸುತ್ತಿರುವಷ್ಟರಲ್ಲಿ – ಅತ್ತ ದುರ್ಯೋಧನನು ಸೂರ್ಯೋದಯವಾಗುತ್ತಲೇ, ಸಾವಿರ ರಾಜರಿಂದ ಸುತ್ತುವರಿದಿದ್ದು, ಭೀಷ್ಮನನ್ನು ಬರಮಾಡಿಕೊಂಡು, ಮಣಿಮಯ ಪೀಠದಲ್ಲಿ ಕುಳ್ಳಿರಿಸಿ–ದೇವಾಸುರ ಯುದ್ಧ (ಸಮಯ) ದಲ್ಲಿ ಷಣ್ಮುಖನಿಗೆ ವೀರಪಟ್ಟವನ್ನು ಕಟ್ಟುವ ಇಂದ್ರನನ್ನೇ ಸರಿಗಟ್ಟಿ ಮೃದಂಗ–ಶಂಖ–ಷಟಹ ಧ್ವನಿ ದಿಗಂತದವರೆಗೆ ತಾಕಲು, ವಾರಾಂಗನೆ (ಸೂಳೆ)ಯರು ಅತ್ತಿಂದಿತ್ತ ಚಾಮರವನ್ನಿಕ್ಕಲು, ಪಂಚರತ್ನಗಳನ್ನು ಬೆರಸಿದ ಹೊಂಗಳಶದ ಪುಣ್ಯಜಲದಲ್ಲಿ ಪ್ರೀತಿಯಿಂದ ಸ್ನಾನಮಾಡಿಸಿ ಭೀಷ್ಮನಿಗೆ ದುರ್ಯೋಧನ ವೀರಪಟ್ಟವನ್ನು ಕಟ್ಟಿದ.

**ಕರ್ಣನು ಭೀಷ್ಮರನ್ನು ಗೇಲಿ ಮಾಡಿದ**

ಅಂತು, ಪರಶುರಾಮನನ್ನು ಅಂಜಿಸಿದ ವೀರನಿಗೆ ವೀರಪಟ್ಟವನ್ನು ಕಟ್ಟಿ ಹಗೆಗಳನ್ನು ತನ್ನ ಮಂಚದ ಕಾಲಿಗೆ ಕಟ್ಟಿದೆನೆಂದು ಬೀಗುವ ದುರ್ಯೋಧನನ ಮಾತನ್ನು ಉಪೇಕ್ಷೆಯಿಂದ ಕೇಳಿಸಿಕೊಂಡು ಅವನಿಗೆ ಕರ್ಣನು ಈ ಮುಂದಿನಂತೆಂದನು.

“ಭಗವತಿ (ದುರ್ಗಾದೇವಿ)ಯ ಯುದ್ಧ (ಪುರಾಣ)ದಂತೆ ಕಥೆಯಾಯ್ತು ಇವರ ಯುದ್ಧ (ಕೂಡ). ನೀನಾದರೋ–ಈ ಭೀಷ್ಮರಿನ್ನೂ ಆಸರದಿಂದ ಹೋರಾಡುವರೆಂದು ಭ್ರಮಿಸಿ ವ್ಯಾಮೋಹದಿಂದ ಅವರಿಗೆ ವೀರಪಟ್ಟವನ್ನು ಕಟ್ಟಿದೆ. ಗುರುಗಳನ್ನೂ ಕುಲವೃದ್ಧರನ್ನೂ ರಣರಂಗಕ್ಕೆಳೆದು ವ್ಯರ್ಥವಾಗಿ ಶತ್ರುಗಳ ಶಿಬಿರದಲ್ಲಿ ನಗೆಪಾಟಲಿಗೀಡು ಮಾಡಿದರೆ ಏನು ಬಂತು (ಹೇಳು) ಸುಯೋಧನಾ? ಕಣ್ಣು ದೃಷ್ಟಿ ಮಂದವಾದ (ಈ) ಮುದುಕನಿಗೆ ಕಟ್ಟಿದ ಪಟ್ಟ ಹುಲ್ಲಿನ ಹಗ್ಗಕ್ಕೆ ಸಮ, ಅವನು ಹಿಡಿದ ಬಿಲ್ಲೋ ದಂಟಿಗೆ ಸಮ–ಹಗೆಗಳ ಬೆನ್ನುಮೂಳೆಯನ್ನು ಮುರಿಯಬೇಕಾದರೆ ನನಗೆ ಪಟ್ಟ ಕಟ್ಟಯ್ಯ! ಆ ಪಾಂಡವರನ್ನು ಚಿಕ್ಕಂದಿನಲ್ಲಿ ಅತಿಶಯವಾದ ಆದರದಿಂದ ಸಾಕಿದ ಅಜ್ಜರಾದುದರಿಂದ ಅವರ ಮೇಲಿವರು ಕಾದಾಡುವುದಿಲ್ಲ, ಇವರ ಮೇಲವರೂ ಕಾದಾಡುವುದಿಲ್ಲ. ಇಂಥವರೊಡನೆ ಒಂದಾಗಿ ಹೇಗೆ ನಂಬುವೆ ಎಲೆ ರಾಜಾ”!

**ದ್ರೋಣಾಚಾರ್ಯರು ಕರ್ಣನನ್ನು ಜಾತಿಹಿಡಿದು ನಿಂದಿಸುವರು**

ಎನ್ನುತ್ತಲೂ, ಆ ಮಾತಿಗೆ ಸಿಡಿದು ದ್ರೋಣಾಚಾರ್ಯರು ಈ ಮುಂದಿನಂತೆಂದನು. “ಎಲೆ ಅಂಗರಾಜ ಕರ್ಣ, ಸಿಂಹದ ಮುಪ್ಪನ್ನು ಕಾಡಾನೆಗಳು ಹೀಗಳೆಯಲಾಗದು–



ಹಾಗೆಯೇ ಈ ಪ್ರಖ್ಯಾತರಾದ ಭೀಷ್ಮರ ಮುಪ್ಪನ್ನೂ ಯಾವ ಚತುರಂಗಬಲವಾಗಲಿ ಹೀಗಳೆಯಲಾಗದು. ನಾಲಗೆ ಕುಲವನ್ನು ಹೇಳಿತು ಎಂಬಂತೆ ನೀನು ಮಿತಿಮೀರಿದ ಮದದಿಂದ ಕುಲಜರನ್ನೂ ಉದಾತ್ತರನ್ನೂ ಈ ಸಭಾಮಧ್ಯದಲ್ಲಿ ದೂಷಿಸುತ್ತಿದ್ದೀಯೆ.”

**ಆ ದ್ರೋಣರನ್ನು ಕರ್ಣನು ಖಂಡಿಸಿದ**

ಎಂದು ನುಡಿದ ದ್ರೋಣನ ಕರ್ಣಕಠೋರವಾದ ಮಾತುಗಳಿಗೆ ಕರ್ಣನು ಕೋಪಿಸಿ

“(ನೀವು) ಕುಲವನ್ನೇ ಏತಕ್ಕೆ ಮಾತಿಗೆ ಮುಂಚೆ ಎತ್ತಿ ಮಾತನಾಡುತ್ತೀರಿ? ನಿಮ್ಮ ಕುಲಗಳೇ ಶತ್ರುಸೈನ್ಯವನ್ನು ಎದುರಿಸಿ ಅಟ್ಟಿಕೊಂಡು ಹೋಗಿ ತಿನ್ನುತ್ತವೇನು? ಕುಲ ಕುಲವಲ್ಲ–ಚಲವೆಂಬುದು ಕುಲ, ಗುಣವೆಂಬುದು ಕುಲ, ಅಭಿಮಾನವೆಂಬುದೊಂದಿದೆಯಲ್ಲಾ ಅದು ಕುಲ, ಶೌರ್ಯವೆಂಬುದು ಕುಲ!(ನೀವು) ನೋಡುತ್ತಿರಿ– ಈ ಯುದ್ಧದಲ್ಲಿ ನಿಮ್ಮ ಕುಲ ನಿಮಗೆ ವ್ಯಾಕುಲವನ್ನು ಉಂಟು ಮಾಡದೇ ಬಿಡದು.

**ಭೀಷ್ಮರು ಬೀಳುವವರೆಗೆ ತಾನು ಯುದ್ಧ ಮಾಡುವುದಿಲ್ಲವೆಂದು ಕರ್ಣನ ಪ್ರತಿಜ್ಞೆ**

“ಭೀಷ್ಮರೇನಾದರೂ ಪಾಂಡವರನ್ನು ಗೆದ್ದರೆ ನಾನು (ಕಾಡಿಗೆ) ತಪಸ್ಸು ಮಾಡಲು ಹೋಗುತ್ತೇನೆ, ಇಲ್ಲ–ಆ ಪಾಂಡವರ ಕೈಯಲ್ಲಿ ಈ ಭೀಷ್ಮರೇ ಹತರಾದರೆ– ಆಗ ಮಾತ್ರ ನಾನು ಶತ್ರುಗಳನ್ನು ಕೊಲ್ಲಲು ಜಿದ್ದಾಜಿದ್ದಿಯಾಗಿ ಹೋರಾಡುತ್ತೇನೆ–ಅಲ್ಲಿಯವರೆಗೆ ನಾನು ಬಿಲ್ಲನ್ನೇ ಹಿಡಿಯುವುದಿಲ್ಲ”.

**ಭೀಷ್ಮರು ಕರ್ಣನಿಗೆ ಆಡಿದ ತೂಕದ ಮಾತು**

ಎಂದು ಕರ್ಣನು ಪ್ರತಿಜ್ಞೆ ಮಾಡುತ್ತಲೇ, ಭೀಷ್ಮ ಹೇಳಿದ – “ಶೌರ್ಯದ ಗರ್ವ, ಯೌವನದ ಸೊಕ್ಕು, ಒಡೆಯನ ಕುಮ್ಮಕ್ಕು, ಮಿಕ್ಕಂತೆ ನಿನ್ನ ತೋಳ್ಬಲದ ಅಹಮ್ಮು–ಕರ್ಣ, ನಿನಗಿರುವಷ್ಟು ನನಗಿದೆಯೇ? “ಭಾರತ” ಎಂಬುದು ಈ ಯುದ್ಧ, (ಅಲ್ಲಿ) ಎದುರಾಳಿಯೋ ಅರ್ಜುನ–ನೀನೇಕೆ ಎಗರಾಡುತ್ತೀಯೆ– ಈ ಮಹಾಯುದ್ಧರಂಗದಲ್ಲಿ ನಿನಗೂ (ಒಂದು) ಸರದಿ ಬರುತ್ತದೆಯಣ್ಣ !”

**ಭೀಷ್ಮರು ಮಾಡಿದ ಮೂರು ಪ್ರತಿಜ್ಞೆ**

ಎಂದು, ಮತ್ತೆಯೂ ಈ ಮುಂದಿನಂತೆ ಹೇಳಿದ –“ಮುದುಕರ ಬಿಲ್ಲಿನ ಬಲವೂ, ಅವರ ಇರಿದು ಹೋರಾಡುವ ಕಲಿತನವೂ–ಎಲೆ ಅಣ್ಣ, ನೀನೆಂದಂತೆಯೇ – ಸುಳ್ಳಲ್ಲ– ತೂಗಿನೋಡಿದಾಗ (ಅವರ ಪರಾಕ್ರಮ) ಬಹಳ ಕಡಿಮೆ ದರ್ಜೆಯದೇ ಹೌದು. (ಆದರೂ ಈ) ಕದನದಲ್ಲಿ ನನ್ನದೊಂದು ಮಾತನ್ನು ನೀವೆಲ್ಲಾ ಕೇಳಿಸಿಕೊಳ್ಳಿರಿ – ಚಕ್ರಾಯುಧವನ್ನು ಹಿಡಿಯುವುದಿಲ್ಲವೆಂಬ ಚಕ್ರಧಾರೀ ಕೃಷ್ಣನನ್ನು– ಈ ಭೂಚಕ್ರವೇ ಭಯಗೊಳ್ಳುವಂತೆ ಕೈಯಲ್ಲಿ ಚಕ್ರಹಿಡಿಯುವ ಹಾಗೆ ನಾನು ಮಾಡುತ್ತೇನೆ.

ಎರಡನೆಯದಾಗಿ–ಅರ್ಜುನನ ರಥವು ಆ ಕುರುಕ್ಷೇತ್ರದ ಪಶ್ಚಿಮ ದಿಕ್ಕಿಗೆ ಎಂಟು ಗಾವುದ ಹಿಂದೂಡಿ ಹೋಗುವಂತೆ ಬಾಣಪ್ರಯೋಗ ಮಾಡುತ್ತೇನೆ ಮತ್ತು ಮೂರನೆಯದಾಗಿ, ಇನ್ನೊಂದು ಮಾತನ್ನು ಕೇಳು–ಆ ಯುದ್ಧದಲ್ಲಿ ನಿತ್ಯವೂ ನಾನು ಹತ್ತು ಸಾವಿರ ರಾಜರನ್ನು ಬಿಡದೆ ನೆಲಕ್ಕುರುಳಿಸುತ್ತೇನೆ.

ಎಂದು ಮಹಾಪ್ರತಿಜ್ಞಾರೂಢನಾದ ಭೀಷ್ಮಾಚಾರ್ಯನ ಅಪಾರ ಶಕ್ತಿಯನ್ನು (ದುರ್ಯೋಧನನು) ಅಪಾರವಾಗಿ ಹೊಗಳಿ, ಅವರನ್ನೆಲ್ಲ ಬೀಡಿಗೆ ಬಿಜಯಮಾಡಿರೆಂದು ಕಳಿಸಿ, ಮಾರನೆಯ ದಿನ ಯುದ್ಧಸನ್ನದ್ಧನಾಗಿ ಪ್ರಯಾಣಭೇರಿಯನ್ನು ಹೊಯ್ಸಿದಾಗ –

❑



# ವಚನಗಳು ಮತ್ತು ಕೀರ್ತನೆಗಳು

**ಅಂಬಿಗರ ಚೌಡಯ್ಯ**

ಕುರಿಕೋಳಿ ಕಿರುಮೀನ ತಿಂಬವರ
ಊರೊಳಗೆ ಇರು ಎಂಬರು.
ಅಮೃತಾನ್ನವ ಕರೆವ ಗೋವ ತಿಂಬವರ
ಊರಿಂದ ಹೊರಗಿರು ಎಂಬರು.
ಆತನು ಹರಿಗೋಲಾಯಿತು.
ಬೊಕ್ಕಣ, ಸಿದಿತೆ, ಬಾರುಕೋಲು, ಪಾದರಕ್ಷೆ
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು.
ಈ ಬುದ್ಧಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾಳಿಗೆಯ ತಕ್ಕೊಂಡು
ಬಾಯ ಕೊಯ್ಯುವನು ಎಂದಾತ ನಮ್ಮ ಅಂಬಿಗರ ಚೌಡಯ್ಯ

**ಬಸವಣ್ಣ**

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ.
ಕೂಡಲಸಂಗಮ ದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ.
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ.
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯಾ
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ
ಎನ್ನನೇತಕ್ಕರಿಯಿರಿ, ಕೂಡಲಸಂಗಮಾ.

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ.
ಜಲ–ಬಿಂದುವಿನ ವ್ಯವಹಾರ ಒಂದೇ
ಆಶೆಯಾಮಿಷ ರೋಷಹರುಷ ವಿಷಯಾದಿಗಳೆಲ್ಲಾ ಒಂದೇ
ಏನನೋದಿ ಏನಕೇಳಿ, ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?

ಸಪ್ತ ಧಾತು ಸಮಂಪಿಂಡಂ ಸಮಯೋನಿ ಸಮದ್ಭವಂ
ಆತ್ಮ ಜೀವಸಮಾಯುಕ್ತಂ ವರ್ಗಾನಾಂಕಿಂ ಪ್ರಯೋಜನಂ ಎಂದುದಾಗಿ
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ.
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಲಿಂಗಸ್ಥಲವನರಿದವನೆ ಕುಲಜನು.

❑



# ಕುಲ ಕುಲ ಕುಲವೆನ್ನುತಿಹರು

– **ಕನಕದಾಸರು**

ಕುಲ ಕುಲ ಕುಲವೆನ್ನುತಿಹರು ॥ಪ॥
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ ॥ಅ॥

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ ॥1॥

ಮೃಗಗಳ ಮೈಯಲಿ ಪುಟ್ಟಿದ ಕತ್ತುರಿಯ
ತೆಗೆದು ಪೂಸುವರು ದ್ವಿಜರೆಲ್ಲರು
ಒಗೆಯಿಂದ ನಾರಾಯಣನ್ಯಾವ ಕುಲ
ಅಗಜವಲ್ಲಭನ್ಯಾತರ ಕುಲದವನು ॥2॥

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿಕೇಶವನು
ಆತನೊಲಿದ ಮೇಲೆ ಯಾತರ ಕುಲವಯ್ಯ ॥3॥

**ಭಾವ** – ವ್ಯಾಸರಾಯರ ಶಿಷ್ಯನಾದ ಮೇಲೆ ಶ್ರೇಷ್ಠಕುಲ ಸಂಜಾತರು ಎಂದು ತಾವೇ ನಂಬಿಕೊಂಡಿದ್ದ ಕೆಲ ಮಡಿವಂತರು ಕನಕದಾಸರನ್ನು ನೀನು ಯಾವ ಕುಲ ಎಂದು ಕೇಳಿ ಕೇಳಿ ಮನನೋಯಿಸುತ್ತಿದ್ದಾಗ, ಕುಲದಲ್ಲಿ ಮೇಲು ಕೀಳು ಎಂದು ನಂಬಿದ್ದ ಕರ್ಮಠ ಕಮಠಾವತಾರಿಗಳಿಗೆ ಕನಕದಾಸರು ಕೊಟ್ಟ ಉತ್ತರವೇ ಕೀರ್ತನೆಯ ರೂಪ ತಾಳಿದೆ.

ಅರ್ಥ – ಬಿಸಜನಾಭ = ವಿಷ್ಣು
ವಸುಧೆ = ಭೂಮಿ
ಭೂಸುರರು = ಬ್ರಹ್ಮಜ್ಞಾನಿಗಳು
ದ್ವಿಜರು = ಬ್ರಾಹ್ಮಣರು
ಒಗೆಯಿಂದ = ಹುಟ್ಟಿನಿಂದ
ಅಗಜವಲ್ಲಭ = ಪಾರ್ವತಿಯ ಗಂಡ (ಶಿವ)

# ಕುಲ ಕುಲವೆಂದು ಹೊಡೆದಾಡದಿರಿ

**– ಕನಕದಾಸರು**

ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರ ॥ಪ॥

ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯ ಮನುಜ

ಜಲವೆ ಸಕಲ ಕುಲಕ್ಕೆ ತಾಯಲ್ಲದೆ
ಜಲದ ಕುಲವನೇನಾದರು ಬಲ್ಲಿರ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ
ನೆಲೆಯನರಿತು ನೀ ನೆನೆ ಕಂಡ್ಯ ಮನುಜ ॥2॥

ಹರಿಯೆ ಸರ್ವೋತ್ತಮ ಹರಿಯೆ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿ ಕಾಗಿನೆಲೆಯಾದಿಕೇಶವರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ ॥3॥

ಭಾವ– ಮೇಲು ಕುಲ ಮತ್ತು ಕೀಳು ಕುಲ ಎಂದು ಭೇದ ಕಲ್ಪಿಸುತ್ತಾ ಹಾರಾಡುತ್ತಿದ್ದ ಮೌಢ್ಯಾಂಧರ ಕಿರುಕುಳವನ್ನು ವೈಯಕ್ತಿಕವಾಗಿ ಸಹಿಸಿ ಸಹಿಸಿ ಸತ್ತು ಸುಣ್ಣವಾದ ಕನಕದಾಸರು ಅಂಥವರ ಕಣ್ಣು ತೆರೆಸಲು ಈ ಕೀರ್ತನೆ ಕಟ್ಟಿದ್ದಾರೆ; ಕುಲಾಂಧ ಬಲಿಗಳನ್ನು ಮೆಟ್ಟಿದ್ದಾರೆ. ಕುಲಜ (ಶ್ರೇಷ್ಠ) ಯಾರು ಎಂಬುದನ್ನು ಅಂತ್ಯದ ಸಾಲಿನಲ್ಲಿ ಸಾರಿದ್ದಾರೆ.

ಅರ್ಥ – ಸಕಲ ಕುಲ = ಎಲ್ಲ ಜೀವರಾಶಿ
ಕುಲಜ = ಶ್ರೇಷ್ಠ

❑



# ಮಹಾಡ್ ಕೆರೆಯ ಪ್ರಸಂಗ

**– ಡಾ. ಬಿ.ಆರ್. ಅಂಬೇಡ್ಕರ್**

ಸ್ವಾಭಿಮಾನವೆಂಬ ಸೂರ್ಯ ಆಕಾಶದಲ್ಲಿ ಮೂಡಿದ್ದ; ದಮನದ ಸಂಕೇತಗಳಂತಿದ್ದ ಮೋಡಗಳು ಚೆದುರಿ ಹೋಗಿದ್ದವು. ನಿಮ್ನವರ್ಗಗಳು ಆತ್ಮಗೌರವದಿಂದ ತಲೆಯೆತ್ತಿ ನಿಂತಿದ್ದರು. ಅಂಬೇಡ್ಕರ್ ಹೊಸದಾದ ಮಹಾನ್ ಕಾರ್ಯಕ್ರಮವೊಂದನ್ನು ರೂಪಿಸಿದ್ದು ಆಗಲೇ.

ಮುಂಬಯಿ ಶಾಸನ ಸಭೆಯ 1923ರಲ್ಲಿ ಒಮ್ಮೆ 1926ರಲ್ಲಿ ಇನ್ನೊಮ್ಮೆ ಪಾಸು ಮಾಡಿದ 'ಬೋಲೆ ನಿರ್ಣಯ' ಕಾಗದದ ಮೇಲೇ ಉಳಿದು, ಅಸ್ಪೃಶ್ಯತೆ ಹಾಗೇ ಮುಂದುವರೆದಿತ್ತು. ಈ ಕುರಿತು ಮಹಾಡ್ ಪುರಸಭೆ ಹೊರಡಿಸಿದ್ದ ಆದೇಶ ಕೂಡ ಕಾರ್ಯಗತವಾಗಿರಲಿಲ್ಲ. ಚೌಡಾರ್ ಕೆರೆಗೆ ಪ್ರವೇಶ ದೊರಕದಿದ್ದುದಕ್ಕೆ ಕಾರಣ, ಸವರ್ಣೀಯ ಹಿಂದೂಗಳ ಪ್ರಬಲ ಪ್ರತಿರೋಧವೇ ಆಗಿತ್ತು.

ಈ ಹಿನ್ನೆಲೆಯಲ್ಲಿ ಕೊಲಾಬಾ ಜಿಲ್ಲಾ ನಿಮ್ನ ವರ್ಗಗಳ ಸಂಘವು ಮಹಾಡ್‌ನಲ್ಲಿ ಮಾರ್ಚ್ 19–20–1927ರಂದು ಸಮಾವೇಶವೊಂದನ್ನು ನಡೆಸಲು ನಿರ್ಧರಿಸಿತು. ಅಂಬೇಡ್ಕರರು ಈ ಸಮಾವೇಶದ ಮುಖ್ಯ ಅತಿಥಿಗಳಾಗಿದ್ದರು. ಸುರೇಂದ್ರನಾಥ್ ಟಿಪ್ನಿಸ್, ಸುಬೇದಾರ್ ಸಾವಡ್ಕರ್, ಅನಂತರಾವ್ ಚಿತ್ರೆ ಮುಂತಾದವರು ಸಮಾವೇಶದ ಸಕಲ ಸಿದ್ಧತೆಗಳನ್ನು ಅಚ್ಚುಕಟ್ಟಾಗಿ ಮಾಡಿದರು. ನಿಮ್ನ ವರ್ಗಗಳ ನಾಯಕರು ಹಾಗೂ ಸಕ್ರಿಯ ಕಾರ್ಯಕರ್ತರು ತಿಂಗಳ ಕಾಲ ಜಿಲ್ಲೆಯಲ್ಲಿ ಮತ್ತು ಸುತ್ತಮುತ್ತ ಪ್ರವಾಸ ಮಾಡಿ, ಸಮಾವೇಶದ ಮಹತ್ವವನ್ನು ನಿಮ್ನ ವರ್ಗಗಳಿಗೆ ಮನಗಾಣಿಸಿಕೊಟ್ಟಿದ್ದರು. ಪರಿಣಾಮವಾಗಿ ಹದಿನೈದರ ಹೈದರು, ಎಪ್ಪತ್ತರ ವೃದ್ಧರು ಮೊದಲುಕೊಂಡು ಸಹಸ್ರಾರು ಜನ ಬುತ್ತಿಗಂಟುಗಳೊಂದಿಗೆ ಮಹಾಡ್‌ಗೆ ಬಂದರು. ಮಹಾರಾಷ್ಟ್ರ–ಗುಜರಾತ್‌ಗಳಿಂದ ಬಂದ ನಿಮ್ನ ವರ್ಗಗಳ ಜನರ ಸಂಖ್ಯೆ ಹತ್ತು ಸಾವಿರವನ್ನು ದಾಟಿತ್ತು.

ಸಮಾವೇಶವು ಯಶಸ್ವಿಯಾಗಿ ನಡೆಯಲು ಎಲ್ಲಾ ಸಿದ್ಧತೆಗಳನ್ನು ಮಾಡಲಾಯಿತು. ಸಮಾವೇಶದ ಸ್ಥಳದಲ್ಲಿ ನೀರಿನ ಕೊರತೆಯಿದ್ದುದರಿಂದ, ಹಿಂದೂ ಸವರ್ಣೀಯರಿಂದ ನೀರು ಖರೀದಿಸಿಟ್ಟು, ಸಮಾವೇಶದ ಪ್ರತಿನಿಧಿಗಳಿಗೆ ಒದಗಿಸಲಾಯಿತು. ಸಮಾವೇಶದ ಅಧ್ಯಕ್ಷ ಸ್ಥಾನದಿಂದ ಅಂಬೇಡ್ಕರ್, ಅರೆಬಟ್ಟೆ ಧರಿಸಿದ, ಹಳ್ಳಿಗಾಡಿನಿಂದ ಬಂದ ನಿಮ್ನ ವರ್ಗಗಳ ಪುರುಷ–ಮಹಿಳೆಯರನ್ನು ಉದ್ದೇಶಿಸಿ, ಅತ್ಯಂತ ಸರಳವಾಗಿ, ಹೃತ್ಪೂರ್ವಕವಾಗಿ ಮಾತನಾಡಿದರು. ಅವರ ದನಿಯಲ್ಲಿ ಹೋರಾಟದ ಕಾವಿತ್ತು. ಅವರ ಮಾತುಗಳು ಬೆಟ್ಟಗುಡ್ಡಗಳಲ್ಲಿ ಮಾರ್ದನಿಗೊಂಡವು.

ಹಳ್ಳಿ–ಪಟ್ಟಣಗಳಿಗೆ ತಲುಪಿದವು. ಸೇನೆ ಸೇರಲು ನಿರ್ಬಂಧ ಹಾಕಿರುವುದನ್ನು

ಪ್ರಸ್ತಾಪಿಸಿದ ಅವರು “ಮಿಲಿಟರಿಯಲ್ಲಿ ಭರ್ತಿಯಾಗುವ ಮೂಲಕ ನಾವು ನಿಮ್ಮ ಜೀವನಮಟ್ಟವನ್ನು ಉತ್ತಮ ಪಡಿಸಿಕೊಂಡಿದ್ದೆವು; ನಮ್ಮ ಧೈರ್ಯ, ಕೆಚ್ಚು, ಪ್ರತಿಭೆಗಳನ್ನು ಸಾಬೀತುಪಡಿಸಿದ್ದೆವು. ಮಿಲಿಟರಿ ಕ್ಯಾಂಪಸ್ ಶಾಲೆಗಳಲ್ಲಿ ಅಸ್ಪೃಶ್ಯರು ಮಿಲಿಟರಿ ಶಾಲೆಗಳ ಮುಖ್ಯಸ್ಥರಾಗಿದ್ದರು. ಮಿಲಿಟರಿ ಕ್ಯಾಂಪಸ್ ಶಾಲೆಗಳಲ್ಲಿ ಅಸ್ಪೃಶ್ಯರ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುತ್ತಿತ್ತು. ಅಸ್ಪೃಶ್ಯರಿಗೆ ಸೇನೆ ಸೇರುವ ಅವಕಾಶಗಳನ್ನು ನಿರಾಕರಿಸಿರುವುದು ದ್ರೋಹವಾಗಿದೆ. ಬ್ರಿಟಿಷರ ಈ ನೀತಿಯನ್ನು ಪ್ರಶ್ನಿಸಲೇಬೇಕಾಗಿದೆ. ನೆಪೋಲಿಯನ್ ಯುದ್ಧದಲ್ಲಿ ಫ್ರೆಂಚ್ ಸೇನೆಯನ್ನು ಎದುರಿಸುವಲ್ಲಿ ಬ್ರಿಟಿಷ್ ಸೇನೆ ನಿರತವಾಗಿದ್ದಾಗ, ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಉರುಳಿ ಬೀಳದಂತೆ ಕಾವಲಿದ್ದುದು ಅಸ್ಪೃಶ್ಯ ಸೈನಿಕರೇ ಎಂಬುದನ್ನು ಬ್ರಿಟಿಷ್ ಆಡಳಿತ ಮರೆಯಬಾರದು” ಎಂದು ಗುಡುಗಿದರು. ಅಂಬೇಡ್ಕರ್ ಮುಂದುವರೆದು. “ಚಿರಕಾಲ ಉಳಿಯುವಂಥ ಪ್ರಗತಿಯನ್ನು ಸಾಧಿಸಬೇಕಾದರೆ ನಾವು ಮೂರು ವಿಧದ ಶುದ್ಧಿಗೆ ನಮ್ಮನ್ನು ಒಳಪಡಿಸಿಕೊಳ್ಳುವುದು ಅವಶ್ಯಕ. ನಮ್ಮ ನಡವಳಿಕೆಯನ್ನು ಬದಲಿಸಿಕೊಳ್ಳಬೇಕು. ನಮ್ಮ ಭಾವನೆಗಳಿಗೆ ಹೊಸದನಿ ನೀಡಬೇಕು ಹಾಗೂ ನಮ್ಮ ವಿಚಾರಗಳನ್ನು ನವೀಕರಿಸಿಕೊಳ್ಳಬೇಕು. ಸತ್ತ ದನಗಳ ಮಾಂಸ, ಎಂಜಲು ಪದಾರ್ಥ ತಿನ್ನುವುದನ್ನು ಬಿಟ್ಟುಬಿಡುವ ಪ್ರಮಾಣವನ್ನು ಈ ಕ್ಷಣವೇ ಮಾಡಿರಿ. ನಮ್ಮಲ್ಲೇ ಇರುವ ಮೇಲು–ಕೀಳು ಭಾವನೆಯನ್ನು ಕಿತ್ತೊಗೆಯುವ ಪ್ರತಿಜ್ಞೆಯನ್ನು ಈಗಲೇ ಮಾಡಿರಿ.”

ಸ್ವಸಹಾಯವನ್ನು ರೂಢಿಸಿಕೊಂಡು, ಅತ್ಮಗೌರವವನ್ನು ಮತ್ತೆ ಪಡೆದುಕೊಂಡು, ಸ್ವ– ಅರಿವನ್ನು ಸಾಧಿಸಿದಾಗಲೇ ನಮ್ಮ ಜೀವನ ಮಟ್ಟ ಹೆಚ್ಚುತ್ತದೆ” ಎಂದು ಕರೆ ನೀಡಿದರು. ಬ್ರಿಟಿಷ್ ಆಡಳಿತ, ಭೂಸೇನೆ, ವಾಯುಸೇನೆ ಹಾಗೂ ಜಲಸೇನೆಗಳಲ್ಲಿ ಸೇರುವ ಹಕ್ಕಿಗಾಗಿ ಅಸ್ಪೃಶ್ಯರು ಹೋರಾಡಬೇಕು ಎಂದು ತಿಳಿಸಿದ ಅವರು, ತುಂಡು ರೊಟ್ಟಿ ಆಸೆಗೆ ತಮ್ಮ ಹಕ್ಕುಗಳನ್ನು ಮಾರಾಟ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದು, ಅವಮಾನಕರ ಪದ್ಧತಿಗಳನ್ನು ಧಿಕ್ಕರಿಸಬೇಕೆಂದು, ವತನ್ ಪದ್ಧತಿಗೆ ತಿಲಾಂಜಲಿ ನೀಡಬೇಕೆಂದು ಹಾಗೂ ಕೃಷಿಗಾಗಿ ಭೂಮಿಯನ್ನು ಪಡೆಯಬೇಕೆಂದು ಒತ್ತಾಯಪಡಿಸಿದರು. ‘ತಮ್ಮ ಜೀವನ ಮಟ್ಟಕ್ಕಿಂತ ತಮ್ಮ ಮಕ್ಕಳ ಜೀವನಮಟ್ಟ ಉತ್ತಮವಾದುದಾಗಿರಬೇಕೆಂದು ಬಯಸದ ತಂದೆ ತಾಯಿಗಳಿಗೂ ಪ್ರಾಣಿಗಳಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ’ ಎಂಬ ಮಾರ್ಮಿಕ ಮಾತುಗಳ ಮೂಲಕ, ಅವರು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಸಮಾವೇಶದ ಕೊನೆಯಲ್ಲಿ 1) ಅಸ್ಪೃಶ್ಯರು ತಮ್ಮ ನಾಗರಿಕ ಹಕ್ಕುಗಳನ್ನು ಪಡೆದುಕೊಳ್ಳಲು ನೆರವಾಗಬೇಕು 2)ಅಸ್ಪೃಶ್ಯರನ್ನು ಕೆಲಸಕ್ಕೆ ಇಟ್ಟುಕೊಳ್ಳಬೇಕು. 3)ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಅನ್ನದಾನ ನೀಡಬೇಕು. 4) ತಮ್ಮ ಸತ್ತ ಪ್ರಾಣಿಗಳನ್ನು ತಾವೇ ಹೂಳಬೇಕು. 5) ಅಂತರಜಾತಿ ವಿವಾಹಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ಹಿಂದೂ ಸವರ್ಣೀಯರಲ್ಲಿ ಮನವಿ ಮಾಡಿಕೊಳ್ಳಲಾಯಿತು.



ಹಾಗೆಯೇ, 1) ಸತ್ತ ಪ್ರಾಣಿಯ ಮಾಂಸವನ್ನು ತಿನ್ನುವುದನ್ನು ವಿಶೇಷ ಕಾನೂನಿನ ಮೇರೆಗೆ ನಿಷೇಧಿಸಬೇಕು. 2) ಮದ್ಯಪಾನ ನಿಷೇಧ ಜಾರಿಗೊಳಿಸಬೇಕು. 3) ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು. 4) ನಿಮ್ನ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ ನೀಡಬೇಕು. 5) ಲೋಕಲ್ ಸಂಸ್ಥೆಗಳಿಗೆ ಮತ್ತು ಪುರಸಭೆಗಳಿಗೆ ತಾಕೀತು ಮಾಡಿ ‘ಬೋಲೆ ನಿರ್ಣಯ’ವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಆದೇಶಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಲಾಯಿತು.

**ಎರಡು**

ಸಮಾವೇಶದ ಮೊದಲ ದಿನ ಮಾತನಾಡಿದ ಕೆಲವು ಹಿಂದೂ ಸವರ್ಣೀಯರು ನಿಮ್ನ ವರ್ಗಗಳ ಹಕ್ಕುಗಳ ಪರವಾಗಿ ನಿಂತರು. ನಿಮ್ನ ವರ್ಗಗಳು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವ ದಿಸೆಯಲ್ಲಿ ನಡೆಸುವ ಹೋರಾಟಕ್ಕೆ ಬೆಂಬಲ ನೀಡುವುದಾಗಿ ಕೂಡ ಅವರು ಘೋಷಿಸಿದರು. ಆ ರಾತ್ರಿ ಸಭೆ ಸೇರಿದ ಕಾರ್ಯಕಾರಿ ಸಮಿತಿ, ಸಮಾವೇಶದ ಎಲ್ಲಾ ಜನರು ಒಂದಾಗಿ ಚೌಡಾರ್ ಕೆರೆಗೆ ಹೋಗಿ ನೀರನ್ನು ಮುಟ್ಟುವ ತಮ್ಮ ಹಕ್ಕನ್ನು ಚಲಾಯಿಸಬೇಕೆಂದು ನಿರ್ಣಯಿಸಿತು.

ಮರುದಿನ, ಸಮಾವೇಶ ಮೊದಲ ಅಧಿವೇಶನದಲ್ಲಿ ಹಿಂದಿನ ರಾತ್ರಿ ಕೈಗೊಂಡಿದ್ದ ನಿರ್ಣಯುವನ್ನು ಮಂಡಿಸಿ, ಇದನ್ನು ಬೆಂಬಲಿಸಿ ಮಾತನಾಡಲು ಹಿಂದೂ ಸವರ್ಣೀಯರ ಇಬ್ಬರು ಪ್ರತಿನಿಧಿಗಳನ್ನು ಆಹ್ವಾನಿಸಲಾಯಿತು. ಅವರು ವೇದಿಕೆಗೆ ಬಂದು, ಅಂತರಜಾತಿಯ ವಿವಾಹವನ್ನು ಪುರಸ್ಕರಿಸುವ ನಿರ್ಣಯವೊಂದನ್ನು ಹೊರತುಪಡಿಸಿ, ಉಳಿದೆಲ್ಲ ನಿರ್ಣಯಗಳಿಗೆ ತಮ್ಮ ಬೆಂಬಲ ಇರುವುದಾಗಿ ಘೋಷಿಸಿದರು.

ಚೌಡಾರ್ ಕೆರೆಯ ನೀರನ್ನು ಮುಟ್ಟುವ ಹಕ್ಕು ಅಸ್ಪೃಶ್ಯರಿಗಿದೆಯೆಂದು ಮೂರು ವರ್ಷಗಳ ಹಿಂದೆಯೇ ಮಹಾಡ್ ಪುರಸಭೆ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಸಮಾವೇಶದ ಸರ್ವ ಸದಸ್ಯರು ಚೌಡಾರ್ ಕೆರೆಯತ್ತ ಸಾಗಿದರು.

ಅದೊಂದು ಅಪೂರ್ವ ಸಂದರ್ಭ. ಆ ಪ್ರಸಂಗವು ಅತ್ಯಂತ ಗಾಢ ಪರಿಣಾಮವನ್ನು ಬೀರುವಂಥದ್ದು. ಗುಲಾಮಗಿರಿ, ಜಾತಿಪದ್ಧತಿ ಮತ್ತು ಪುರೋಹಿತಶಾಹಿಗಳ ವಿರೋಧಿ ಅಂಬೇಡ್ಕರ್ ಅಸ್ಪೃಶ್ಯರಲ್ಲಿ ಕಾಣಿಸಿಕೊಳ್ಳಲಾರಂಭಿಸಿದ ಅಪ್ರತಿಮ ಜಾಗೃತಿಯ ದಿಟ್ಟ ಸಂಕೇತವಾಗಿದ್ದರು. ಯಾವ ಕೆರೆಯ ನೀರನ್ನು ಹಿಂದೂ ಸವರ್ಣೀಯರು, ಮುಸ್ಲಿಮರು, ಕ್ರೈಸ್ತರು, ಅನ್ಯಧರ್ಮೀಯರು, ಪ್ರಾಣಿ–ಪಕ್ಷಿಗಳು ಮುಟ್ಟಬಹುದಾಗಿತ್ತೋ ಆ ಕೆರೆಯ ನೀರನ್ನು ಅಸ್ಪೃಶ್ಯರು ಮುಟ್ಟುವ ಹಾಗಿರಲಿಲ್ಲ. ತಮ್ಮ ದೇವರುಗಳನ್ನೇ ಪೂಜಿಸುತ್ತಿದ್ದರೂ ಹಿಂದೂ ಸವರ್ಣೀಯರಿಗೆ ಅಸ್ಪೃಶ್ಯ ಹಿಂದೂಗಳು ಪರಕೀಯರಾಗಿದ್ದರು. ಶತಮಾನಗಳಿಂದ ಅಸ್ಪೃಶ್ಯ ಹಿಂದುಗಳು ಹಿಂದೂ ಸಮಾಜದ ಭಾಗವಾಗಿದ್ದರೂ ಹಿಂದೂ ಸವರ್ಣೀಯರ ಪಾಲಿಗೆ ಹೊರಗಿನವರಾಗಿದ್ದರು.

ತಲೆಮಾರುಗಳಿಂದ ಅವಮಾನಿಸಲ್ಪಟ್ಟ ಅಸ್ಪೃಶ್ಯರು ತಮ್ಮ ನಾಗರಿಕ ಹಕ್ಕು ಚಲಾಯಿಸಲು ಹೊರಟಿದ್ದ ಆ ಗಳಿಗೆಯಲ್ಲಿ, ಅವರ ಮುಖದ ಮೇಲೆ ಅಪೂರ್ವ ಆತ್ಮಗೌರವ ರಾರಾಜಿಸುತ್ತಿತ್ತು. ಸನಾತನವಾದಿ ಕಟ್ಟುಕಟ್ಟಳೆಗಳ ಮೇಲೆ ದಾಳಿಮಾಡಿ ಅವುಗಳನ್ನು ಧ್ವಂಸ ಮಾಡಲು ಸಾಗುತ್ತಿದ್ದ ಪಡೆಯ ದಿಟ್ಟ ನೇತಾರರಾಗಿ ಅಂಬೇಡ್ಕರ್ ಕಂಗೊಳಿಸುತ್ತಿದ್ದರು. ಶತಮಾನಗಳಿಂದ ದಮನಕ್ಕೊಳಗಾದ ಸಮುದಾಯಗಳಿಗೆ ಹೊಸ ಸ್ಥಾನಮಾನ ಒದಗಿಸುವ ಮೂಲಕ, ಭಾರತದಲ್ಲಿ ಸಾಮಾಜಿಕ ಬದಲಾವಣೆಯನ್ನುಂಟು ಮಾಡಿ, ವಿಶ್ವದ ಅತಿ ಕುರೂಪಿ – ಕುಬ್ಜ ರಾಷ್ಟ್ರವೆನಿಸಿದ್ದ ಭಾರತಕ್ಕೊಂದು ಗೌರವದ ಸ್ಥಾನ ಸಲ್ಲುವ ಅನುಪಮ ಅವಕಾಶವು ಅಂಬೇಡ್ಕರರಿಂದಾಗಿ ಒದಗಿಬಂದಿತ್ತು. ತಮ್ಮ ಮಹಾನ್ ನೇತಾರರನ್ನು ನಾಲ್ಕು ಸಾಲುಗಳಲ್ಲಿ ಹಿಂಬಾಲಿಸಿದ ಆ ಹತ್ತು ಸಾವಿರ ಅಸ್ಪೃಶ್ಯರು, ಅನ್ಯಾಯವನ್ನು ಮೆಟ್ಟಿ ನಿಲ್ಲುವ ಮಾನವಶಕ್ತಿಯ ಅಭೀಪ್ಸೆಯ ಪರಮ ಸಂಕೇತವಾಗಿದ್ದರು. ಇತ್ತೀಚಿನ ಇತಿಹಾಸದಲ್ಲಿ ಸರಿಸಾಟಿಯಿಲ್ಲದ ಸಂದರ್ಭ ಅದಾಗಿತ್ತು.

ಉತ್ಸಾಹಪೂರಿತ, ವರ್ಣರಂಜಿತ ಹಾಗೂ ಗೌರವಾದರಗಳಿಗೆ ಪಾತ್ರವಾಗಿದ್ದ ಆ ಮೆರವಣಿಗೆ ಅಷ್ಟೇ ಪ್ರಯಾಸಕರವೂ, ಅಪಾಯಕರವೂ ಆಗಿತ್ತು. ಏಕೆಂದರೆ ಮೆರವಣಿಗೆಯನ್ನು ಯಶಸ್ವಿಗೊಳಿಸಲು ಆತ್ಮಗೌರವವನ್ನು ಕಾಲಾಂತರದಿಂದ ಹತ್ತಿಕ್ಕಿದವರು ಕಟಿಬದ್ಧರಾಗಿದ್ದರು. ಎರಡೂ ಕಡೆ ಭಾವಾವೇಶ ಮೆರೆಯುತ್ತಿತ್ತು. ಅನ್ಯಾಯದ ಸಾಮಾಜಿಕ–ಧಾರ್ಮಿಕ ವ್ಯವಸ್ಥೆಯನ್ನು ಬಲಾತ್ಕಾರದಿಂದ ಹೇರಿ, ಅದಕ್ಕೆ ಧಾರ್ಮಿಕ ಮಾನ್ಯತೆ ನೀಡಿ ಬಹುಜನ ಸಮುದಾಯವನ್ನು ಸಹಸ್ರಾರು ವರ್ಷಗಳಿಂದ ಹತ್ತಿಕ್ಕಿದ ದಮನಕಾರಿ ವ್ಯವಸ್ಥೆಯ ವಿರುದ್ಧ ಹತ್ತು ಸಹಸ್ರ ಅಸ್ಪೃಶ್ಯರು ಕನಲಿ ನಿಂತು ಬೀದಿಗಿಳಿದಿದ್ದರೆ– ಇತ್ತ ಶತಮಾನಗಳಿಂದ ತಾವು ಕಾಪಾಡಿಕೊಂಡು ಬಂದ ತಮ್ಮ ಹಿತಸಾಧಕ ವ್ಯವಸ್ಥೆಯು ತಮ್ಮ ಕಣ್ಣೆದುರೇ ಕುಸಿದು ಬೀಳಲಿರುವುದನ್ನು ಅಸಹಾಯಕರಾಗಿ ನೋಡುತ್ತ ನಿಲ್ಲಲು ಸಿದ್ಧರಿಲ್ಲದ ಅಸಂಖ್ಯ ಹಿಂದೂ ಸವರ್ಣಿಯರು ಅತ್ತ ಕೈ ಕೈ ಹಿಸುಕಿಕೊಳ್ಳುತ್ತಿದ್ದರು.

ರಾಜಕೀಯ ಉದ್ದೇಶ ಹೊಂದಿದ್ದ ಮೆರವಣಿಗೆಯನ್ನು ಸಂಘಟಿಸುವುದು ಬಹು ಸುಲಭ, ವಿದೇಶಿಯರ ಆಳ್ವಿಕೆ ಇರುವ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಆಂದೋಲನ ನಡೆಸುವುದು ಅಷ್ಟೇನೂ ಕಷ್ಟಕರವಲ್ಲ. ಏಕೆಂದರೆ ಬಹುಸಂಖ್ಯಾತ ದೇಶಿಯರು ಬಹಿರಂಗದಲ್ಲೋ ಅಂತರಂಗದಲ್ಲೋ ಆಂದೋಲನದ ಪರವಾಗೇ ಇರುತ್ತಾರೆ ; ಅವರ ಸಂಪೂರ್ಣ ಸಹಾನುಭೂತಿ ಆಂದೋಲನಕ್ಕಿರುತ್ತದೆ. ಆದರೆ ಸಾಮಾಜಿಕ ಆಂದೋಲನಗಳ ಪರಿಸ್ಥಿತಿ ಹೀಗಿರುವುದಿಲ್ಲ. ಒಂದು ಸಮಾಜದಲ್ಲಿನ ಕಂದಾಚಾರ, ಅಂಧಶ್ರದ್ಧೆ, ಅಮಾನವೀಯ ಆಚರಣೆಗಳು, ಅಸಂಬದ್ಧ ಪದ್ಧತಿ ಇರುವ ಹಾಗೂ ತಾರತಮ್ಯ ನೀತಿಯ ಆಧಾರ ಹೊಂದಿದ ವ್ಯವಸ್ಥೆಯನ್ನು ಬದಲಾಯಿಸಲು ಉದ್ದೇಶಿಸಿದ ಸಾಮಾಜಿಕ ಆಂದೋಲನಕ್ಕೆ, ಅಸಂಖ್ಯ ಸವಾಲುಗಳು ಎದುರಾಗುತ್ತವೆ. ಏಕೆಂದರೆ ಇಂಥ ಸಮಾಜದಲ್ಲಿ ಅಮಾನವೀಯ ನಡವಳಿಕೆಯವರಲ್ಲೆ ಅಧಿಕವಾಗಿರುತ್ತದೆ; ಸಂಪತ್ತಿರುತ್ತದೆ; ಜ್ಞಾನವಿರುತ್ತದೆ; ಶಕ್ತಿಯಿರುತ್ತದೆ.



ಹಳ್ಳಿಗಾಡಿನಲ್ಲಿ, ಕಾಡು –ಮೇಡುಗಳಲ್ಲಿ, ಬೆಟ್ಟ – ಗುಡ್ಡಗಳಲ್ಲಿ, ಬಯಲು – ಕಣಿವೆಗಳಲ್ಲಿ ಮಣ್ಣಿನಲ್ಲಿ ಮಣ್ಣಾಗಿ ಹೋಗಿ, ಹುಲ್ಲಿನಲ್ಲಿ ಹುಲ್ಲಾಗಿ ಹೋಗಿ, ಧಮನಿಗಳಲ್ಲಿ ರಕ್ತವನ್ನು ಶತಮಾನಗಳಿಂದ ಸುರಿಸುತ್ತಾ ದಮನ, ಅನ್ಯಾಯ, ಬಡತನ, ಅಸಮಾನತೆಗೆ ಬಲಿಯಾದ ಜನಸಮುದಾಯಗಳ ಪ್ರತಿನಿಧಿಗಳಾಗಿ ಹತ್ತು ಸಹಸ್ರ ಅಸ್ಪೃಶ್ಯರು ಬೀದಿಗಳಲ್ಲಿ ಸಾಗುತ್ತಿದ್ದರೆ, ಸ್ವಾತಂತ್ರ್ಯವು ಕೊಡುಗೆಯಾಗಿ ಎಂದೂ ಸಿಗುವುದಿಲ್ಲ; ಅದನ್ನು ಹೋರಾಟದ ಮುಖಾಂತರ ಪಡೆದುಕೊಳ್ಳಬೇಕಾಗುತ್ತದೆ ಎಂಬ ವಿಶ್ವಮಾನ್ಯ ಸತ್ಯ ಸ್ವಯಂಸಿದ್ಧವಾಗುತ್ತಿದ್ದ ಹಾಗೆ ತೋರುತ್ತಿತ್ತು. ಸ್ವವಿಮೋಚನೆ ಯಾರೊಬ್ಬರ ಆಶೀರ್ವಾದದಿಂದ ಸಾಧ್ಯವಾಗದೆ, ನಮ್ಮ ಧೃಢ ನಿರ್ಧಾರದ ಹೋರಾಟದಿಂದ ಮಾತ್ರ ಸಾಧ್ಯ ಎಂಬುದನ್ನು ಆ ಸಹಸ್ರಾರು ಜನರು ಸಾಬೀತುಪಡಿಸುವಂತಹ ಹೋರಾಟವಾಗಿತ್ತು. ಅಂಬೇಡ್ಕರ್ ವಿಮೋಚಕನ ಸ್ಥಾನದಲ್ಲಿ ನಿಂತು, ಹಕ್ಕುಗಳಿಗಾಗಿ ಹೋರಾಡಿ ಎಂದು ಸ್ಫೂರ್ತಿ ತುಂಬುತ್ತಿದ್ದಾಗ, ಅನ್ಯಾಯದ ವಿರುದ್ಧ ಸಿಡಿದು ನಿಂತ ಶಕ್ತಿಯೇ ಮನುಷ್ಯ ರೂಪ ತಾಳಿ ಚಲಿಸುತ್ತಿದ್ದಂತಿತ್ತು. ಈ ಹೋರಾಟದಲ್ಲಿ ಅಂಬೇಡ್ಕರರೂ ಒಬ್ಬ ಹೋರಾಟಗಾರರಾಗಿದ್ದರು. ತಾವು ಸಕ್ರಿಯರಾಗಿದ್ದುಕೊಂಡು ಇತರರಿಗೆ ಕಾರ್ಯೋನ್ಮುಖರಾಗಲು ಕರೆ ನೀಡಿದ್ದರು. ಅವರ ಕಾರ್ಯಶಕ್ತಿಯು ಇನ್ನೂ ಹೆಚ್ಚಿನ ತಮ್ಮ ಗುರಿಯಲ್ಲಿ ಅಪಾರ ನಂಬಿಕೆಯಿಡುವಂತೆ ಅವರು ಪ್ರೇರೇಪಿಸುತ್ತಿದ್ದರು. ತಮ್ಮೊಳಗಿಂದಲೇ ಬಂದ ಮಹಾನ್ ನಾಯಕನ ನೇತೃತ್ವದಲ್ಲಿ ಅಸ್ಪೃಶ್ಯರು ಹುಮ್ಮಸ್ಸು, ಭರವಸೆಯಿಂದ, ಛಲಗಾರರಾಗಿ ಹಕ್ಕು ಚಲಾಯಿಸಲು ಮುನ್ನಡೆದಿದ್ದರು.

ಅತ್ಯುತ್ಸಾಹದಿಂದ ತೋರುತ್ತಾ, ಹರ್ಷೋದ್ಗಾರವನ್ನು ವ್ಯಕ್ತಪಡಿಸುತ್ತಾ ಸಾಗಿದ ಮೆರವಣಿಗೆಯು ಶಿಸ್ತಿನಿಂದ ಚೌಡಾರ್ ಕೆರೆ ತಲುಪಿತು. ನೀರು ಮುಟ್ಟಲು, ಪೂಜಾಸ್ಥಾನ, ಗ್ರಂಥಾಲಯ ಪ್ರವೇಶಿಸಲು, ಆಸ್ಪತ್ರೆ ಸೇವೆ ಪಡೆಯಲು ನಿಷೇಧಿಸಲ್ಪಟ್ಟಿದ್ದ ಜನ ಸಮುದಾಯಗಳ ಪ್ರತಿನಿಧಿಗಳಾಗಿ ಹತ್ತು ಸಾವಿರ ಜನ ಕೆರೆಯ ಸುತ್ತ ನಿಂತಿದ್ದರೆ, ಶೋಷಿತ ವರ್ಗಗಳ ಮೇರು ನೇತಾರನ ರೂಪದಲ್ಲಿ ಅಂಬೇಡ್ಕರ್ ಮಾರ್ಗದರ್ಶನ ನೀಡುತ್ತಿದ್ದರು. ಹಿಂದೂ ಸಮಾಜದ ಅಮಾನವೀಯ ನೀತಿ, ಉದ್ಧಟತನ, ದುರುಳುತನಗಳಿಗೆ ಅವರು ಸವಾಲೆಸೆದಿದ್ದರು. ತಮ್ಮದೆ ತಾಯ್ನಾಡಿನವರನ್ನು ಹಂದಿ–ನಾಯಿ–ಬೆಕ್ಕುಗಳಿಗಿಂತ ಕಡೆಯಾಗಿ ಕಂಡ ಹಿಂದೂ ಸವರ್ಣೀಯರ ಕ್ರೌರ್ಯವನ್ನು ಅಂಬೇಡ್ಕರ್ ಮುಂದಾಳತ್ವದಲ್ಲಿ ಸಹಸ್ರಾರು ಅಸ್ಪೃಶ್ಯರು ಸಾರ್ವಜನಿಕವಾಗಿ ಧಿಕ್ಕರಿಸಿದ ಅಪೂರ್ವ ಪ್ರಕರಣ ಅದಾಗಿತ್ತು.

ಮೊದಲು ಅಂಬೇಡ್ಕರ್ ಕೆರೆಯ ನೀರು ಮುಟ್ಟಿದರು. ಅನಂತರ ಸಾವಿರಾರು ಜನ ಮೆರವಣಿಗೆಕಾರರೂ ನೀರು ಮುಟ್ಟಿದರು. ಹಿಂದೂ ಸವರ್ಣೀಯರ ಹೀನ ನಡವಳಿಕೆಯನ್ನು ಹುಮ್ಮಸ್ಸಿನಿಂದ ಅಲ್ಲಿ ಹೊಸಕಿ ಹಾಕಲಾಗಿತ್ತು. ತಮ್ಮ ನಾಗರಿಕ ಹಕ್ಕು ಚಲಾಯಿಸಿದ ಬಳಿಕ, ಮೆರವಣಿಗೆಕಾರರು ಸಮಾವೇಶ ಸ್ಥಳಕ್ಕೆ ಹಿಂತಿರುಗಿದರು. ಶಾಸನ ಸಭೆಯ ನಿರ್ಣಯ, ಕಾಂಗ್ರೆಸ್ ಗೊತ್ತುವಳಿ, ಗಾಂಧಿಯ ಭಾಷಣಗಳೆಲ್ಲ

ನಿರ್ಜೀವವಾಗಿ ಬಿದ್ದಿದ್ದಾಗ, ಅಂಬೇಡ್ಕರ್ ನೇತೃತ್ವದಲ್ಲಿ ನಡೆದ ಅಸ್ಪೃಶ್ಯರ ಮೆರವಣಿಗೆಯು ಮೌನಕ್ರಾಂತಿಯನ್ನು ನಡೆಸಿತ್ತು. ದೇಶದ ಆರುಕೋಟಿ ದಲಿತರ ಬದುಕಿನಲ್ಲಿ ಅನನ್ಯವಾದ ಆಶಾಭಾವನೆಯನ್ನು ಅದು ಬಿತ್ತಿದ್ದರೆ, ಶತಮಾನಗಳಿಂದ ಜಡ್ಡುಗಟ್ಟಿ ಹೋಗಿದ್ದ ಹಿಂದೂ ಸಮಾಜದ ಸನಾತನವಾದಿ ಬಿಳಿಲುಗಳಿಗೆ ಅದು ಬೆಂಕಿಯಿಟ್ಟಿತ್ತು.

ಮಹಾಡ್ ನಗರದ ವೀರಶೈವ ಮಂದಿರವನ್ನು ಅಸ್ಪೃಶ್ಯರು ಪ್ರವೇಶಿಸಲಿದ್ದಾರೆ ಎಂಬ ಗಾಳಿಸುದ್ದಿಯನ್ನು ಹಿಂದೂ ಸವರ್ಣೀಯರು ಹಬ್ಬಿಸಿದರು. ಇದು ನಿರೀಕ್ಷೆಯಂತೆ ಸವರ್ಣೀಯರನ್ನು ಕೆರಳಿಸಿತು. ಅವರು ಸಾರಾಸಾರ ವಿಚಾರ ಮಾಡದೆ ಕೈಗೆ ಸಿಕ್ಕ ಕೋಲು, ಲಾಠಿ ಚಾಕು, ಚೈನು ಹಿಡಿದು ಬೀದಿಗಿಳಿದರು. ಅಸ್ಪೃಶ್ಯರು ಮಂದಿರ ಪ್ರವೇಶಿಸಲಿದ್ದಾರೆಂಬ ಮಾತು ಅವರನ್ನು ಉದ್ರೇಕಗೊಳಿಸಿತ್ತು. ಹಿಂದೂ ಧರ್ಮಕ್ಕೆ ಗಂಡಾಂತರ ಇರುವುದಾಗಿ ಬೊಬ್ಬೆ ಹಾಕಿದಾ ದುಷ್ಕರ್ಮಿಗಳು, ತಮ್ಮ ಆರಾಧ್ಯ ಮೈಲಿಗೆಯಾಗುವುದನ್ನು ತಡೆಗಟ್ಟಲು ಪ್ರತಿಯೊಬ್ಬ ಹಿಂದೂ ಮುಂದಾಗಬೇಕೆಂದು ಕರೆ ನೀಡಿದರು.

ಅಲ್ಲಿ ಸಮೂಹ ನಿರ್ಮಾಣವಾಗಿತ್ತು. ಹಿಂದೂ ಸವರ್ಣೀಯರು ಸಮಚಿತ್ತದಿಂದ ವಿಚಾರ ಮಾಡಲು ಮೈಲಿಗೆಯಾಗಲಿದೆಯೆಂಬ ಭಯವನ್ನು ಬಹು ವ್ಯಾಪಕವಾಗಿ ಅವರು ಪ್ರಸಾರ ಮಾಡಿದರು. ಸತ್ಯಾಸತ್ಯತೆಯನ್ನು ಒರೆಗೆ ಹಚ್ಚುವ ತಾಳ್ಮೆ ಅವರಲ್ಲಿ ಉಳಿದಿರಲಿಲ್ಲ. ಏಕೆಂದರೆ, ಶಾಸನ ಸಭೆಯ ನಿರ್ಣಯ ಎರಡು ಬಾರಿ ಪಾಸಾಗಿ ಬಂದಾಗಲೂ, ಅದನ್ನು ಹತ್ತಿಕ್ಕಿದರೂ, ಅಸ್ಪೃಶ್ಯರು ಸಮಾವೇಶ ನಡೆಸಿ. ಚೌಡಾರ್ ಕೆರೆಯ ನೀರು ಮುಟ್ಟಿದ್ದನ್ನು ಸಹಿಸಿಕೊಳ್ಳುವುದು ಹಿಂದೂ ಸವರ್ಣೀಯರಿಗೆ ಸಾಧ್ಯವಾಗಲಿಲ್ಲ. ಆಗಲೇ, ಬೆಂಕಿಗೆ ಬಿದ್ದ ಹುಳದಂತೆ ಚಡಪಡಿಸುತ್ತಿದ್ದು, ಉದ್ರೇಕಗೊಳ್ಳಲು ನೆಪವೊಂದನ್ನು ಹುಡುಕುತ್ತಿದ್ದರು.

ಅಸ್ಪೃಶ್ಯರ ಸವಾವೇಶವು, ಕೆರೆಯು ನೀರು ಮುಟ್ಟುವುದರೊಂದಿಗೆ ಮುಕ್ತಾಯಗೊಂಡಿತ್ತು. ಮೆರವಣಿಗೆಯಲ್ಲಿ ಸಮಾವೇಶ ಸ್ಥಳಕ್ಕೆ ಹಿಂದಿರುಗುವಾಗಲೇ ಹಲವರು ತಮ್ಮ ತಮ್ಮ ಊರ ದಾರಿ ಹಿಡಿದಿದ್ದರು. ಸ್ಥಳಕ್ಕೆ ಹಿಂತಿರುಗುವವರು ಊರಿಗೆ ಹೋಗುವ ಸಿದ್ಧತೆಯಲ್ಲಿದ್ದರು. ವಿಶಾಲವಾದ ಆ ಸ್ಥಳದಲ್ಲಿ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಅಸ್ಪೃಶ್ಯರು ಕುಳಿತಿದ್ದರು. ಇಂಥ ಹೊತ್ತಿನಲ್ಲಿ ಹಿಂದೂ ಸವರ್ಣೀಯರ ನೂರಾರು ಗುಂಪುಗಳು ಮಾರಕ ಶಸ್ತ್ರಾಸ್ತ್ರಗಳನ್ನು ಹಿಡಿದು ಅಸ್ಪೃಶ್ಯರ ಮೇಲೆ ಹಲ್ಲೆ ನಡೆಸಿದವು. ಹಿಂದೂ ಸವರ್ಣೀಯರ ಗುಂಪು ಕಂಡ ಕಂಡವರನ್ನು ತರಿದು ಹಾಕಿತು; ತಲೆಗಳು ಒಡೆದವು; ಮಾಡಿದ್ದ ಅಡುಗೆಯನ್ನು ಮಣ್ಣಿಗೆಸೆಯಲಾಯಿತು. ಮಹಿಳೆಯರು, ಮಕ್ಕಳು ವೃದ್ಧರು ಎನ್ನದೆ ಎಲ್ಲರನ್ನೂ ಥಳಿಸಲಾಯಿತು.

ಇದೆಲ್ಲಾ ದಿಢೀರನೇ ನಡೆದು ಹೋಗಿತ್ತು. ಅನಿರೀಕ್ಷಿತ ದಾಳಿಯಿಂದ ಅಸ್ಪೃಶ್ಯರೂ ತತ್ತರಿಸಿದರು. ಸಮಾವೇಶದ ಸ್ಥಳದಲ್ಲಿ ಸಂಪೂರ್ಣ ಗೊಂದಲ ಆವರಿಸಿತು. ಹಲ್ಲೆ



ಎದುರಿಸಲಾಗದೆ ಹಲವರು ದಿಕ್ಕುಪಾಲಾಗಿ ಓಡಿದರೆ, ಕೆಲವರು ತಿರುಗಿ ಬಿದ್ದು ಹಿಂದೂ ಸವರ್ಣೀಯರನ್ನೇ ಥಳಿಸಿದರು.

ಇತ್ತ, ತಮ್ಮ ತಮ್ಮ ಊರುಗಳತ್ತ ಸಾಲು ಸಾಲಾಗಿ ಹೊರಟಿದ್ದ ಅಸ್ಪೃಶ್ಯರೂ ಹಿಂದೂ ಸವರ್ಣೀಯರ ಹಲ್ಲೆಗೆ ತುತ್ತಾದರು. ಬೀದಿಗಳಲ್ಲಿ ಊರ ಹೊರಭಾಗಗಳಲ್ಲಿ ಹೊಲಗಳಲ್ಲಿ ಹೊಡೆದಾಟ ನಡೆಯಿತು. ಸಮಾವೇಶ ಮುಗಿದ ಬಳಿಕ ತಮ್ಮ ಬೆಂಬಲಿಗರೊಂದಿಗೆ ಅತಿಥಿ ಗೃಹಕ್ಕೆ ಬಂದ ಅಂಬೇಡ್ಕರ್‌ಗೆ ಈ ಸುದ್ದಿ ತಲುಪಿಸಿದಾಗ, ಅವರು ಕೂಡಲೇ ಮಹಾಡ್‌ನ ಮಾಮಾಲೆದಾರ ಮತ್ತು ಪೋಲೀಸ್ ಇನ್ಸ್‌ಪೆಕ್ಟರನ್ನು ಭೇಟಿ ಮಾಡಲು ಮುಂದಾದರು. ರಸ್ತೆ ರಸ್ತೆಯಲ್ಲಿ ನಡೆದಿದ್ದ ಹಲ್ಲೆಗಳ ಮಧ್ಯೆಯೂ ಅವರು ತಮ್ಮ ಹತ್ತಾರು ಜನ ಅನುಯಾಯಿಗಳೊಂದಿಗೆ ಬೀದಿಯಲ್ಲಿ ಹೋಗುತ್ತಿದ್ದಾಗ, ಈ ಇಬ್ಬರೂ ಅಧಿಕಾರಿಗಳು ಎದುರಿಗೆ ಬಂದು ನಿಮ್ಮ ಜನರನ್ನು ನೀವು ಹತೋಟಿಗೆ ತೆಗೆದುಕೊಳ್ಳಿ ಇಲ್ಲದೇ ಹೋದರೆ ಇಲ್ಲಿ ಹೆಣಗಳ ರಾಶಿಯೇ ಬೀಳುತ್ತದೆ' ಎಂದು ಗೋಗರೆದರು.

ಮಹಾಡ್ ನಗರದ ರಸ್ತೆ – ರಸ್ತೆಗಳನ್ನು ಸುತ್ತಿದ ಅಂಬೇಡ್ಕರ್, ಅಸ್ಪೃಶ್ಯರಿಗೆ ಸಾಂತ್ವನ ಹೇಳಿದರು. ವೀರಶೈವ ಮಂದಿರ ಪ್ರವೇಶಿಸುವ ವಿಚಾರವೇ ತಮಗಿಲ್ಲ ಎಂದು ಹಿಂದೂ ಸವರ್ಣೀಯರಿಗೆ ಸ್ಪಷ್ಟಪಡಿಸಿದರು. ಎಲ್ಲಾ ಕಡೆ ಗಲಭೆ ಕೊಂಚ ಇಳಿಮುಖವಾಯಿತೆನಿಸಿದ ಬಳಿಕ ಅತಿಥಿ ಗೃಹಕ್ಕೆ ಅವರು ಹಿಂದಿರುಗಿದರು. ಆ ಹೊತ್ತಿಗಾಗಲೇ 20–25 ಜನ ಅಸ್ಪೃಶ್ಯರು ಹಲ್ಲೆಗೆ ಗುರಿಯಾಗಿದ್ದರು.

ಆ ರಾತ್ರಿ ಗಲಭೆ ಮರುಕಳಿಸಿತು. ಹಿಂದೂ ಸವರ್ಣೀಯರು ಪಡೆ ಕಟ್ಟಿಕೊಂಡು ಗೂಂಡಾಗಳಂತೆ ತಿರುಗಲಾರಂಭಿಸಿದ್ದರು. ಮಹಾಡ್ ನಗರದ ಅಸ್ಪೃಶ್ಯರ ಕಾಲೋನಿಗಳ ಮೇಲೆ ಹಲ್ಲೆ ನಡೆಯಿತು. ಸಮಾವೇಶ ಸ್ಥಳದಲ್ಲಿ ಇನ್ನೂ ಉಳಿದಿದ್ದ ಗುಂಪುಗಳನ್ನು ಥಳಿಸಲಾಯಿತು. ಪೋಲೀಸರು ಮೂಕ ಪ್ರೇಕ್ಷಕರಾದರು.

ಇಷ್ಟೇ ಅಲ್ಲ, ಹಿಂದೂ ಸವರ್ಣೀಯರು ಮಹಾಡ್ ಸುತ್ತಮುತ್ತಲ ಹಳ್ಳಿಗಳಿಗೆ ಸಂದೇಶ ಕಳಿಸಿ, ಸಮಾವೇಶಕ್ಕೆ ಬಂದಿದ್ದ ಅಸ್ಪೃಶ್ಯರಿಗೆ ಬಹಿಷ್ಕಾರ ಹಾಕಲು, ಅವರಿಗೆ ಯಾವ ಕೆಲಸವನ್ನೂ ನೀಡದಿರಲು ಆದೇಶ ಕಳಿಸಿದರು. ಇದರ ಪರಿಣಾಮವಾಗಿ ಹಳ್ಳಿಗಾಡಿನಲ್ಲೂ ಅಸ್ಪೃಶ್ಯರ ಮೇಲೆ ಹಲ್ಲೆಗಳು ನಡೆದವು. ಹಳ್ಳಿಯಿಂದ ನಗರದತ್ತ ಬರಬಯಸಿದ ಅಸ್ಪೃಶ್ಯರು, ನಗರದಲ್ಲೂ ದಾಳಿ ನಡೆಯುತ್ತಿದೆಯೆಂಬುದನ್ನು ತಿಳಿದು ಗೊಂದಲಕ್ಕೊಳಗಾದರು. ಇತ್ತ ದರಿ ಅತ್ತ ಪುಲಿ ಎಂಬಂತಾಗಿತ್ತು ಅವರ ಪರಿಸ್ಥಿತಿ.

ಅತಿಥಿ ಗೃಹಕ್ಕೆ ಹಿಂದಿರುಗಿದ ಅಂಬೇಡ್ಕರ್‌ಗೆ ಕಂಡಿದ್ದು ಸುಮಾರು ನೂರು ಜನ ಅಸ್ಪೃಶ್ಯರು. ಅವರ ಕಣ್ಣುಗಳು ಕೆಂಪಗಾಗಿದ್ದವು; ದನಿ ನಡುಗುತ್ತಿತ್ತು; ಕೆಲವರ ಕೈಯಲ್ಲಿ ಲಾಠಿಗಳಿದ್ದವು. ಕಾಲುಗಳನ್ನು ಅಪ್ಪಳಿಸುತ್ತಿದ್ದ ಅವರು, ತಮ್ಮ ಜನರ ಮೇಲೆ ಹಲ್ಲೇ ನಡೆಸಿದ ಹಿಂದೂ ಸವರ್ಣೀಯರನ್ನು ಸದೆಬಡಿಯಲು ಸಜ್ಜಾಗಿದ್ದರು. ಅವರಿಗೆ

ಅಂಬೇಡ್ಕರರ ಅನುಮತಿ ಬೇಕಾಗಿತ್ತು. ಆತ್ಮರಕ್ಷಣೆ ಮಾಡಿಕೊಳ್ಳದಿದ್ದರೆ ತಾವು ಸರ್ವನಾಶವಾಗುತ್ತೇವೆ ಎಂಬ ಆತಂಕ ಅವರಲ್ಲಿ ಮೂಡಿತ್ತು.

ಆದರೆ ಅಂಬೇಡ್ಕರರಿಂದ ಅವರಿಗೆ ಸಹನೆಯಿಂದಿರುವ ಸಲಹೆ ಸಿಕ್ಕಿತು. ಶಿಸ್ತು ಮತ್ತು ಶಾಂತಿಯಿಂದ ವರ್ತಿಸುವ ಮೂಲಕವೇ ಸಮರ್ಥವಾಗಿ ಎದುರಿಸಲು ಸಾಧ್ಯ ಎಂಬುದನ್ನು ಅವರು ಮನಗಾಣಿಸಿ ಕೊಡಬಯಸಿದರು. ಅನುಯಾಯಿಗಳ ಆಕ್ರೋಶವನ್ನು ತಣ್ಣಗಾಗಿಸಿ, ವಿಚಾರಶಕ್ತಿಯನ್ನು ಉದ್ದೀಪಿಸಿ ದೀರ್ಘ ಹೋರಾಟವನ್ನು ರೂಪಿಸುವತ್ತ ಅಂಬೇಡ್ಕರ್ ಗಮನ ಸೆಳೆದರು. ತಾಳ್ಮೆಯನ್ನು ಹೇಡಿತನವೆಂದು ಪರಿಗಣಿಸಬಾರದೆಂದು ತಿಳಿ ಹೇಳಿದರು.

ಅಲ್ಲಿ ಅಂದು ನೆರೆದಿದ್ದ ನೂರು ಜನ ಅಸ್ಪೃಶ್ಯರ ಆದೇಶದಂತೆ ಜೀವ ಪಣಕ್ಕಿಟ್ಟು ಹೋರಾಡಲು ಸಾವಿರಾರು ಅಸ್ಪೃಶ್ಯ ಯುವಜನರು ಕಾಲೋನಿಯಲ್ಲಿ, ಸುತ್ತಲ ಹಳ್ಳಿಗಳಲ್ಲಿ ಸಿದ್ಧರಿದ್ದರು. ಅಂಬೇಡ್ಕರ್ ಲೇಶಮಾತ್ರ ಆವೇಶವನ್ನೂ ತೋರಲಿಲ್ಲ. ದೀರ್ಘವಾದ ಹಾಗೂ ಮೇರುಮಟ್ಟದ ಸಾಮಾಜಿಕ ಆಂದೋಲನವೊಂದರ ಪೀಠಿಕೆ ಬರೆಯುತ್ತಿದ್ದ ಮಹಾನಾಯಕ ಅಂಬೇಡ್ಕರ್, ಅಪೂರ್ವ ಸಹನೆಯನ್ನು ಮೆರೆದರು. ಅವರು ಎಳ್ಳಷ್ಟು ವಿಚಲಿತರಾಗಿ ಮಾತನಾಡಿದ್ದರೂ ಅಸ್ಪೃಶ್ಯ ಯುವಜನರು ಬೆಂಕಿಯುಂಡೆಗಳಾಗಿ ಕೆಲಸ ಮಾಡುತ್ತಿದ್ದರು. ಮಹಾಡ್ ರಸ್ತೆಯಲ್ಲಿ ರಕ್ತದ ಕಾಲುವೆ ಹರಿಯುತ್ತಿತ್ತು. ಪೋಲೀಸ್ ವ್ಯವಸ್ಥೆ ತತ್ತರಿಸಿ ಹೋಗಿ, ಹಿಂದೂ ಸವರ್ಣೀಯರ ಹೆಣಗಳು ಉರುಳಿರುತ್ತಿದ್ದವು. ಸಮಾವೇಶಕ್ಕೆಂದು ಬಂದವರಲ್ಲಿ ಇನ್ನೂ ಸಾವಿರಾರು ಅಸ್ಪೃಶ್ಯರು ಮಹಾಡ್‌ನಲ್ಲೇ ಉಳಿದಿದ್ದರು. ಅಂಬೇಡ್ಕರ್ ಒಂದು ಸೂಚನೆ ನೀಡಿದ್ದರೆ ಇವರೆಲ್ಲಾ ಮಹಾಡ್ ನಗರದ ಹಿಂದೂ ಸವರ್ಣೀಯರ ಮೇಲೆ ಬಾರಿ ಆಕ್ರಮಣ ನಡೆಸುತ್ತಿದ್ದರು.

ಆದರೆ ಅಂಬೇಡ್ಕರ್ ಅಣತಿ ಬೇರೆಯಾಗಿತ್ತು. ಅಸ್ಪೃಶ್ಯರು ಸಂಪೂರ್ಣ ಶಾಂತಿಯಿಂದಿರಬೇಕೆಂಬುದು ಅವರ ಆಶಯವಾಗಿತ್ತು. ಮುಂಜಾಗರೂಕತೆ ವಹಿಸಲು, ಒಗ್ಗಟ್ಟಿನಿಂದಿರಲು, ಎಚ್ಚರಿಕೆಯಿಂದ ಪಹರೆ ನಡೆಸಲು ಅಂಬೇಡ್ಕರ್ ಸೂಚಿಸಿದರು. ಹಿಂದೂ ಸವರ್ಣೀಯರ ಆಕ್ರಮಣವನ್ನು ದಿಟ್ಟತನದಿಂದ ಎದುರಿಸಲು ಸಲಹೆ ನೀಡಿದರು. ಕಾನೂನುಬದ್ಧ ಹಕ್ಕುಗಳನ್ನು ಪಡೆದುಕೊಳ್ಳಲು ಅಸ್ಪೃಶ್ಯರು ನಾಗರಿಕ ರೀತಿಯಲ್ಲಿ ಹಾಗೂ ಶಾಂತಿಯುತವಾಗಿ ಹೋರಾಡಬೇಕಿದೆ ಎಂಬುದನ್ನು ಅವರು ತಿಳಿಸಿಕೊಟ್ಟರು. ಇದರಿಂದಾಗಿ ಬಹು ಭೀಕರ ಜಾತಿಗಲಭೆಯನ್ನು ನಿವಾರಿಸಿದಂತಾಯಿತು.

ಆ ರಾತ್ರಿ ಅತಿಥಿಗೃಹವನ್ನು ಬೇರೊಬ್ಬ ಸರ್ಕಾರಿ ಅಧಿಕಾರಿಗೆ ಕಾಯ್ದಿರಿಸಿತ್ತಾದ್ದರಿಂದ ಅಂಬೇಡ್ಕರ್ ತಮ್ಮ ವಾಸ್ತವ್ಯವನ್ನು ಪೋಲೀಸ್ ಅತಿಥಿ ಗೃಹಕ್ಕೆ ಬದಲಾಯಿಸಿದರು. ಸಹಚರ ಅನಂತರಾವ್ ಚಿತ್ರೆ ಅವರೊಂದಿಗಿದ್ದರು. ಮುಂದಿನ ಎರಡು ದಿನಗಳವರೆಗೆ ಮಹಾಡ್ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಸಮಾವೇಶಕ್ಕೆ ಬಂದಿದ್ದ ಎಲ್ಲರೂ ಊರುಗಳಿಗೆ ತೆಳಿದ್ದನ್ನು ಖಾತ್ರಿ ಪಡಿಸಿಕೊಂಡು, ಮಹಾಡ್‌ನ ಅಸ್ಪೃಶ್ಯರಿಗೆ



ಧೈರ್ಯದಿಂದಿರಲು ತಿಳಿಸಿ, ಅಲ್ಲಿನ ಅಸ್ಪೃಶ್ಯ ನಾಗರಿಕರಿಗೆ ಸಹನೆ–ಶಾಂತಿಯಿಂದ ಇರಲು ತಿಳುವಳಿಕೆ ನೀಡಿ ಅಂಬೇಡ್ಕರ್ ಮುಂಬಯಿಗೆ ಮರಳಿದರು.

ಮಹಾಡ್ ಪ್ರಕರಣದಲ್ಲಿ ನಡೆದ ಹಲ್ಲೆಗಳಿಗೆ ಸಂಬಂಧಿಸಿದಂತೆ ಬಂಧಿತರಾಗಿದ್ದ ಒಂಬತ್ತು ಜನ ಹಿಂದೂ ಸವರ್ಣೀಯರ ಮೇಲಿನ ವಿಚಾರಣೆ ಮುಗಿದಾಗ. ನಾಲ್ವರಿಗೆ ಸಾದಾ ಶಿಕ್ಷೆ ಮತ್ತು ದಂಡ ವಿಧಿಸಲಾಗಿತ್ತು. ಉಳಿದ ಐವರು ಗೂಂಡಾಗಿರಿಯಲ್ಲೇ ಕುಖ್ಯಾತಿಗಳಿಸಿದ್ದರೆಂಬುದು ಬಯಲಾಗಿ, ಅವರನ್ನು ಜೂನ್ 1927 ರಿಂದ ನಾಲ್ಕು ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಗಿತ್ತು. ಸ್ಥಳೀಯ ಪೋಲೀಸರು ಈ ಪ್ರಕರಣದ ಕಾಲದಲ್ಲಿ ಹಿಂದೂ ಸವರ್ಣೀಯರ ಪರ ವಹಿಸಿದ್ದು ವಿಚಾರಣೆಯ ಹಂತದಲ್ಲಿ ಸಾಬೀತಾಗಿತ್ತು. ಮಾರ್ಚ್21, 22 ರಂದು ಮಹಾಡ್‌ನಲ್ಲಿ ಉಳಿದಿದ್ದಾಗಲೇ ಅಂಬೇಡ್ಕರ್ ಬ್ರಿಟಿಷ್ ಪೋಲೀಸ್ ಅಧಿಕಾರಿಯೊಂದಿಗೆ ಮಾತನಾಡುತ್ತಾ, ಈ ಅಂಶವನ್ನು ಪ್ರಸ್ತಾಪಿಸಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದರು. ಜಿಲ್ಲಾ ಆಡಳಿತದಲ್ಲಿ, ಪೋಲೀಸ್ ಇಲಾಖೆಯಲ್ಲಿ ಹಿಂದೂಯೇತರರಿಗೂ ಪ್ರಾತಿನಿಧ್ಯ ದೊರಕಿದ್ದರೆ, ಇಂಥ ಪ್ರಕರಣಗಳಲ್ಲಿ ಅಸ್ಪೃಶ್ಯರ ಮೇಲಾಗುವ ದೌರ್ಜನ್ಯದ ಪ್ರಮಾಣವನ್ನು ತಗ್ಗಿಸಬಹುದಾಗಿತ್ತು ಎಂದೂ ಅವರು ಸಲಹೆ ಮಾಡಿದರು.

ಮಹಾಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂದ ತೀರ್ಪು ಅಂಬೇಡ್ಕರರ ಆತಂಕ ಮತ್ತು ಸಲಹೆಯನ್ನು ಬಹುತೇಕವಾಗಿ ಪುರಸ್ಕರಿಸಿತ್ತು.

### ಮೂರು

ಅಸ್ಪೃಶ್ಯರು ಮಹಾಡ್‌ನಲ್ಲಿ ನಡೆಸಿದ ಸಮಾವೇಶಕ್ಕೆ ಭಾರತದ ಆಧುನಿಕ ಚರಿತ್ರೆಯಲ್ಲಿ ವಿಶೇಷ ಮಹತ್ವವಿದೆ. ಈ ಸಮಾವೇಶವು ಅಸ್ಪೃಶ್ಯ ಸಮುದಾಯಗಳ ಮೇಲೆ, ಹಿಂದೂ ಸವರ್ಣೀಯರ ಮೇಲೆ, ಬ್ರಿಟಿಷ್ ಆಡಳಿತದ ಮೇಲೆ ಹಾಗೂ ಕಾಂಗ್ರೆಸ್ ಮೇಲೆ ಅದ್ಭುತ ಪರಿಣಾಮ ಬೀರಿತು. 20ನೇ ಶತಮಾನದಲ್ಲಿ ಅಸ್ಪೃಶ್ಯರು ಬೃಹತ್ ಸಂಖ್ಯೆಯಲ್ಲಿ ಸಾರ್ವಜನಿಕವಾಗಿ ತಮ್ಮ ನಾಗರಿಕ ಹಕ್ಕುಗಳನ್ನು ಪ್ರತಿಪಾದಿಸಿದ ಪ್ರಥಮ ಪ್ರಸಂಗ ಅದಾಗಿತ್ತು. ಬ್ರಿಟಿಷ್ ಆಳ್ವಿಕೆಯಿದ್ದರೂ, ಹಿಂದೂ ಸವರ್ಣೀಯರೇ ಅಧಿಕ ಸಂಖ್ಯೆಯಲ್ಲಿರುವ ಶಾಸನ ಸಭೆ ತಾನೇ ಕೈಗೊಂಡ ನಿರ್ಣಯವನ್ನು ಕಾರ್ಯಗತಗೊಳಿಸದೇ, ಸ್ವಹಿತಾಸಕ್ತಿ ನೀತಿ ಅನುಸರಿಸಬಲ್ಲದೆಂಬುದನ್ನು ಮಹಾಡ್ ಸಮಾವೇಶ ಜಗಜ್ಜಾಹೀರುಗೊಳಿಸಿತ್ತು. ಅಸ್ಪೃಶ್ಯರ ಹಿತವನ್ನು ಗುತ್ತಿಗೆ ಹಿಡಿದವರಂತೆ ವರ್ತಿಸುತ್ತಿದ್ದ ಕಾಂಗ್ರೆಸ್ ಬಣ್ಣ ಬಯಲಾಗಿತ್ತು; ಅಸ್ಪೃಶ್ಯರ ನೇತಾರರಾಗಿ ಅಂಬೇಡ್ಕರ್ ಅಪೂರ್ವ ಪ್ರಭಾವಶಾಲಿ ಎಂಬುದು ಬ್ರಿಟಿಷರಿಗೆ ಮನವರಿಕೆಯಾಗಿತ್ತು.

ಆಧುನಿಕ ಭಾರತದ ಚರಿತ್ರೆಯ ಘಟ್ಟಗಳನ್ನು ಸಮಚಿತ್ತದಿಂದ ದಾಖಲಿಸಬಯಸುವವರು ಹಾಗೂ ಅಧ್ಯಯನ ಮಾಡಬಯಸುವವರು ಮಹಾಡ್ ಸಮಾವೇಶವನ್ನು ಬಂಗಾಲ ವಿಭಜನೆಯೊಂದಿಗೆ ಸೂರತ್‌ನಲ್ಲಿ ನಡೆದ ಕಾಂಗ್ರೆಸ್

ಅಧಿವೇಶನದಲ್ಲಿ ತಿಲಕರು ವಹಿಸಿದ ಪಾತ್ರದೊಂದಿಗೆ ಮುಜಫ್ಫರ್‌ಪುರದಲ್ಲಿ ಬಾಂಬ್ ಸ್ಫೋಟಿಸಿದ ಖುದಿರಾಂ ಬೋಸ್ ಬಂಡಾಯದೊಂದಿಗೆ, ಗಾಂಧಿ ನಡೆಸಿದ ದಾಂಡಿ ಮಾರ್ಚ್‌ನೊಂದಿಗೆ ಹಾಗೂ ಸುಭಾಷ್ ಚಂದ್ರಬೋಸ್ ನಡೆಸಿದ ವಿಮೋಚನಾ ಹೋರಾಟದೊಂದಿಗೆ ಸಮೀಕರಿಸಬೇಕಾಗುತ್ತದೆ.

ಮಹಾಡ್ ಸತ್ಯಾಗ್ರಹವು ದೇಶವು ದಲಿತರಲ್ಲಿ ನವ ಚೈತನ್ಯವನ್ನು ಮೂಡಿಸಿತು. ಮಹಾಡ್ ಮಾದರಿಯಾಗಿ ಹಲವೆಡೆ ಮಂದಿರ ಪ್ರವೇಶ, ಕೆರೆ–ಬಾವಿ ಪ್ರವೇಶ, ಶಾಲೆ–ಆಸ್ಪತ್ರೆ ಪ್ರವೇಶ ಕಾರ್ಯಕ್ರಮಗಳು ನಡೆದವು. ದಲಿತರು ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಲು ಪ್ರಾರಂಭಿಸಿದ್ದಲ್ಲದೆ, ತಮ್ಮ ಸ್ಥಿತಿಗೆ ಹಿಂದೂ ಸಮಾಜ ವ್ಯವಸ್ಥೆ ಮತ್ತು ಹಿಂದೂ ಸವರ್ಣೀಯರ ಪಕ್ಷಪಾತ ನೀತಿ ಕಾರಣವಾಗಿದೆ ಎಂದು ಹೇಳಲಾರಂಭಿಸಿದರು; ತಲೆಯೆತ್ತಿ ನಿಂತು, ಸಂಘಟಿತರಾಗಿ, ಹೆಜ್ಜೆಗಳನ್ನು ದೃಢವಾಗಿ ಊರಿ, ಅವರು ಗಟ್ಟಿಯಾಗಿ ದನಿ ಎತ್ತಿದರು. ಆತ್ಮ ಗೌರವದ ಜ್ಯೋತಿ ಅವರ ಎದೆಗಳಲ್ಲಿ ಹೊತ್ತಿತ್ತು; ಸ್ವ–ಅರಿವು ಅಲ್ಲಿ ಮೊಳಕೆಯೊಡೆದಿತ್ತು. ವಿಮೋಚನೆಯ ಮಹತ್ವವನ್ನು ಅವರು ಮನಗಾಣಿಸಿಕೊಂಡಿದ್ದರು. ಮಹಾಡ್ ಸಮಾವೇಶದಲ್ಲಿ ಅಂಬೇಡ್ಕರ್ ಆಡಿದ್ದ ಮಾತುಗಳೂ ಹಳ್ಳಿ–ನಗರಗಳ ಅಸ್ಪೃಶ್ಯರನ್ನು ತಲುಪಿದವು. ಸಮಾಜದಲ್ಲಿ ಕೀಳು ಎಂದು ಪರಿಗಣಿತವಾದ ಕೆಲಸಗಳನ್ನು ತಾವು ತ್ಯಜಿಸಿರುವುದಾಗಿ ಘೋಷಿಸಿದ ಅಸ್ಪೃಶ್ಯರು ಸ್ವ–ಸಹಾಯ ದಾರಿ ಹಿಡಿದ ಪ್ರಕರಣಗಳು ಪ್ರಚಾರವಾಗುತ್ತಿದ್ದವು. ಸಂಘಟನೆಯ ಅವಶ್ಯಕತೆ ಮತ್ತು ಸಕ್ರಿಯ ಹೋರಾಟದ ಅಗತ್ಯ ಅಸ್ಪೃಶ್ಯರಿಗಾಗಿತ್ತು.

ಮಹಾಡ್ ಸತ್ಯಾಗ್ರಹವು ಹಿಂದೂ ಸಮಾಜದ ಮುಂದೆ ಸ್ವಾಗತಾರ್ಹ ಬದಲಾವಣೆಗಳನ್ನೇ ಮಂಡಿಸಿವೆ ಎಂಬ ಹೇಳಿಕೆಗಳನ್ನು ಉದಾರವಾದಿ ಹಿಂದೂ ಸವರ್ಣೀಯರು ಹೇಳಲಾರಂಭಿಸಿದರು. ಈ ಗುಂಪು, ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆ ಆಚರಣೆಯನ್ನು ಶಾಸನಸಭೆ ನಿಷೇಧಿಸಿರುವುದು ಸ್ವಾಗತಾರ್ಹವೆಂದೂ, ಹಿಂದೂ ಸಮಾಜದಲ್ಲಿನ ಕೊಳಕನ್ನು ತೊಡೆದು ಹಾಕಲು ಹಿಂದೂ ಸವರ್ಣೀಯರು ಮುಂದಾಗಬೇಕೆಂದೂ ಹೇಳಿತು. ಈ ಮಹಾಡ್ ಸತ್ಯಾಗ್ರಹವು ಸಂಪೂರ್ಣವಾಗಿ ಸಮರ್ಥನೀಯವಾಗಿದೆ ಎಂದೂ ತಿಳಿಸಿದ ಉದಾರವಾದಿ ಹಿಂದೂ ಸವರ್ಣೀಯರ ಈ ಗುಂಪು, ಅಸ್ಪೃಶ್ಯರು ತಮಗೆ ನಾಗರಿಕ ಹಕ್ಕುಗಳನ್ನು ಪಡೆದುಕೊಳ್ಳುವ ದಿಕ್ಕಿನಲ್ಲಿ ಕೈಗೊಳ್ಳುವ ಯಾವುದೇ ಪ್ರಯತ್ನಗಳಿಗೆ ಬೆಂಬಲವಾಗಿ ನಿಂತು, ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಿ ಘೋಷಿಸಿತು.

ಹಿಂದೂ ಸವರ್ಣೀಯರು ಮಹಾಡ್‌ನಲ್ಲಿ ನಡೆಸಿದ ಹೇಯ ಹಲ್ಲೆಯ ಹಿನ್ನೆಲೆಯಲ್ಲಿ ಅಸ್ಪೃಶ್ಯರಿಗೆ ಉದಾರವಾದಿ ಹಿಂದೂ ಸವರ್ಣೀಯರಲ್ಲಿ ಈ ಬಗೆಯ ಪರಿವರ್ತನೆಯಾಗುತ್ತಿದ್ದರೆ, ಅತ್ತ ಜಾತಿವಾದಿ ಹಿಂದೂ ಸಮಾಜ ಕೆರಳಿ ಕೆಂಡ ಕಾರಲಾರಂಭಿಸಿತ್ತು. ಸನಾತನವಾದಿ ಹಿಂದೂಗಳು ಸೆಡ್ಡು ಹೊಡೆದು ನಿಂತರು. ಅಸ್ಪೃಶ್ಯರನ್ನು ಇನ್ನೂ ಅಂಚಿಗೆ ತಳ್ಳಿದರು. ಹಳ್ಳಿಗಾಡಿನಲ್ಲಿ ಅಸ್ಪೃಶ್ಯತೆ ಮುಂದುವರೆಯಿತು.



ವಿರೋಧಿ ದನಿ ಎತ್ತಿದ ಅಸ್ಪೃಶ್ಯರಿಗೆ ಕೆಲಸ ನಿರಾಕರಿಸಲಾಯಿತು. ಊರುಗಳಲ್ಲಿ ತಿರುಗಾಡುವುದನ್ನು ನಿಷೇಧಿಸಲಾಯಿತು. ಕೃಷಿ ಕೂಲಿಯಿಂದ ಅಸ್ಪೃಶ್ಯರನ್ನು ಕಿತ್ತು ಹಾಕಲಾಯಿತು. ಹಳ್ಳಿಗಳಲ್ಲಿದ್ದ ಅಂಗಡಿಗಳಲ್ಲಿ ಅಸ್ಪೃಶ್ಯರಿಗೇ ಯಾವ ಪದಾರ್ಥಗಳನ್ನೂ ಮಾರದಿರುವ ನಿರ್ಣಯ ಜಾರಿಗೊಂಡಿತು. ಗಿರಣಿಗಳಲ್ಲಿ ಹಿಟ್ಟು ಬೀಸಿಕೊಡಲೂ ನಿರಾಕರಿಸಲಾಯಿತು. ಗ್ರಾಮಗಳಲ್ಲಿ ಅಸ್ಪೃಶ್ಯರ ಕಾಲೋನಿಗಳು ಅವರಿಗೆ ಅಕ್ಷರಶಃ ಜೈಲುಗಳಾಗಿದ್ದವು.

ಮಹಾಡ್ ಪ್ರಕರಣ ದೇಶದಾದ್ಯಂತ ಪರಿಣಾಮ ಬೀರಿತು. ಚರ್ಚೆ, ವಾದ – ವಿವಾದ ಆರಂಭವಾದವು. ಈ ಪ್ರಶ್ನೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಪತ್ರಿಕೆಗಳು ಎರಡು ಬಣಗಳಲ್ಲಿ ವಿಭಜನೆಯಾದವು. ಕಾನೂನಿನ ನೆರವಿನಿಂದ ಸಮಾಜದಲ್ಲಿ ದಿಢೀರ್ ಬದಲಾವಣೆ ತರಲು ಹೊರಡುವುದು ಅಸಂಬದ್ಧ ಎಂದು ಸನಾತನವಾದಿ ಹಿಂದೂ ಸವರ್ಣೀಯರು ವಾದ ಮಾಡಿದರೆ, ಅವರಲ್ಲೇ ಒಂದು ಗುಂಪು ಕಾನೂನು ಇರುವಾಗ ಅದರ ಉಲ್ಲಂಘನೆ ಸರಿಯಲ್ಲ ಎಂಬ ಮೆದುನೀತಿಯನ್ನು ತಾಳಿತು. ಅಸ್ಪೃಶ್ಯರು ತಮ್ಮ ನಾಗರೀಕ ಹಕ್ಕು ಪಡೆದುಕೊಳ್ಳಲು ಮುಂದಾದದ್ದನ್ನು ಪತ್ರಿಕೆಗಳು ಎತ್ತಿಹಿಡಿದು, ಬ್ರಾಹ್ಮಣರ ಪ್ರಾಬಲ್ಯವನ್ನು ಮೊಟಕುಗೊಳಿಸುವುದು ದೇಶದ ಹಿತದೃಷ್ಟಿಯಿಂದ ಅವಶ್ಯಕವಾಗಿದೆ ಎಂದು ಬರೆದವು. ಉದಾರವಾದಿ ಹಿಂದೂ ಸವರ್ಣೀಯರು ದಲಿತರ ಪರವಾಗಿ ನಿಂತರೆ, ದಿಟ್ಟ ಉದಾರವಾದಿ ಹಿಂದೂ ಸವರ್ಣೀಯರು "ಸನಾತನವಾದಿ ಹಿಂದೂಗಳೆಲ್ಲರನ್ನು ಹಿಮ್ಮೆಟ್ಟಿಸಬೇಕು; ಇಲ್ಲದೇ ಹೋದರೆ ನಮ್ಮ ಸಮಾಜದಲ್ಲಿ ಶತಮಾನಗಳಿಂದ ಆಗಿರುವಂತೆ ಸಮಾನತೆ – ಸ್ವಾತಂತ್ರ್ಯಗಳೇ ಹೊಸಕಿ ಹಾಕಲ್ಪಡುತ್ತವೆ' ಎಂದು ಕಠೋರ ನಿಲುವು ತಾಳಿದರು.

ಆದರೆ, ಇತ್ತ ಮಹಾಡ್‌ನಲ್ಲಿ ಮಾನವೀಯತೆಯ ಮುಖಕ್ಕೆ ಮಸಿ ಬಳಿಯುವ ಕೆಲಸ ನಡೆಯಿತು. ಸನಾತನವಾದಿ ಹಿಂದೂಗಳ ಒಂದು ಸಭೆ ವೀರಶೈವ ಮಂದಿರದಲ್ಲಿ ನಡೆಯಿತು. ಅಸ್ಪೃಶ್ಯರು ಮುಟ್ಟಿದ್ದರಿಂದ ಚೌಡಾರ್ ಕೆರೆಗೆ ಆಗಿರುವ ಮೈಲಿಗೆಯನ್ನು ತೊಡೆದು ಹಾಕಲು ಕೆರೆಯ ನೀರಿಗೆ ಗೋಮೂತ್ರ, ಗೋಮಯ (ಸಗಣಿ) ಮೊಸರು, ಹಾಲು, ತುಪ್ಪ ಮತ್ತು ಪವಿತ್ರ ನೀರನ್ನು ಹಾಕುವ ಯೋಜನೆ ರೂಪುಗೊಂಡಿತು; ಮನುಷ್ಯರು ಬಳಸುವ ನೀರನ್ನು ಗೋಮೂತ್ರ ಬೆರೆಸಿ ಶುದ್ಧಿಗೊಳಿಸುವ ಪ್ರಯತ್ನ ಎಷ್ಟೊಂದು ಅಸಹ್ಯಕರ ಎಂಬುದು ಅವರಾರಿಗೂ ಅರಿವಾದಂತಿರಲಿಲ್ಲ. ಪುರೋಹಿತರ ಮಂತ್ರಘೋಷಗಳ ನಡುವೆ ಚೌಡಾರ್ ಕೆರೆ ಶುದ್ಧಿಗೊಂಡಿತು.

ಕೆರೆ ಶುದ್ಧಿಗಾಗಿ ಸನಾತನವಾದಿ ಸವರ್ಣ ಹಿಂದೂಗಳು ಕೈಗೊಂಡ ಈ ಅವೈಜ್ಞಾನಿಕ, ಅವಿವೇಕಿ ಹಾಗೂ ಅಮಾನವೀಯ ಕ್ರಮದ ಬಗ್ಗೆ ಅಸ್ಪೃಶ್ಯರು ತಕ್ಷಣದ ಪ್ರತಿಕ್ರಿಯೆಯನ್ನೇನೂ ತೋರಲಿಲ್ಲ. ಈ ಕುರಿತು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಅವರು ಕಾದು ನೋಡುತ್ತಿದ್ದಂತಿತ್ತು.

ಮಹಾಡ್ ಮುಸ್ಲಿಮರು ಮತ್ತು ಕ್ರೈಸ್ತರು ಈ ಬಗ್ಗೆ ವಿಶೇಷ ಗಮನ ನೀಡಿರಲಿಲ್ಲ. ಮಹಾಡ್ ಸತ್ಯಾಗ್ರಹಕ್ಕಿಂತ ಮೊದಲು, ಅವರು ಹೇಗೆ ಕೆರೆ ನೀರನ್ನು ಬಳಸುತ್ತಿದ್ದರೋ ಮಹಾಡ್ ಸತ್ಯಾಗ್ರಹದ ಬಳಿಕ ಕೂಡ ಅವರು ಕೆರೆ ನೀರನ್ನು ಹಾಗೆಯೇ ಬಳಸುತ್ತಿದ್ದರು. ಏಕೆಂದರೆ ಯಾವುದೇ ಜಾತಿಧರ್ಮದ ಮನುಷ್ಯರು ಮುಟ್ಟಿದ ಮಾತ್ರಕ್ಕೆ ನೀರು ಅಪವಿತ್ರವಾಗಿ ಬಿಡುತ್ತದೆಂಬ ಹಿಂದೂ ಚಿಂತನೆ ಅವರಿಗೆ ಧಾರ್ಮಿಕವಾಗಿಯೇ ಅಮಾನ್ಯವಾಗಿತ್ತು.

ಈ ಹಿನ್ನೆಲೆಯಲ್ಲಿ ಮಹಾಡ್‌ನಲ್ಲಿ ಆಗ ಸಕ್ರಿಯತೆ ತೋರಿದವರೆಂದರೆ ಉದಾರವಾದಿ ಹಿಂದೂ ಸವರ್ಣೀಯರು. ಇವರ ನೇತೃತ್ವ ವಹಿಸಿದವರು ದಿಟ್ಟ ಉದಾರವಾದಿ ಹಿಂದೂಗಳು. ಧರ್ಮದ ಹೆಸರಲ್ಲಿ ಸನಾತವಾದಿ ಹಿಂದೂ ಸವರ್ಣೀಯರು ಅಸ್ಪೃಶ್ಯರನ್ನು ಮನುಷ್ಯರೆಂದು ಮಾನ್ಯ ಮಾಡಲು ಒಪ್ಪದ ನೀಚತನವನ್ನು ಈ ಗುಂಪು ಮೊದಲಿನಿಂದಲೂ ವಿರೋಧಿಸುತ್ತಾ ಬಂದಿತ್ತು. ಅಸ್ಪೃಶ್ಯರ ನಾಗರಿಕ ಹಕ್ಕುಗಳ ರಕ್ಷಣೆಗೆ ಶಾಸನ ಸಭೆ ನಿರ್ಣಯ ಪಾಸು ಮಾಡಿದ ಬಳಿಕವಂತೂ ಈ ಗುಂಪು ಅತ್ಯಂತ ಸಕ್ರಿಯವಾಗಿತ್ತು. ಅಸ್ಪೃಶ್ಯರು ತಮ್ಮ ಹಕ್ಕುಗಳ ಪ್ರತಿಪಾದನೆಗೆ ನಿಂತಾಗಲೆಲ್ಲ ಅವರನ್ನು ಸಂಪೂರ್ಣವಾಗಿ ಬೆಂಬಲಿಸುತ್ತಿದ್ದ ಈ ಗುಂಪು ಸನಾತನವಾದಿ, ಹಿಂದೂ ಸವರ್ಣೀಯರ ಕುಟಿಲ ನೀತಿಯನ್ನು ಬಯಲಿಗೆಳೆಯಲು ಸದಾ ಮುಂದಿರುತ್ತಿತ್ತು.

ಮಹಾಡ್‌ನಲ್ಲಿ ಕೆರೆನೀರಿನ ಶುದ್ಧೀಕರಣವೆಂಬ ಅಪಹಾಸ್ಯಕರ ಪ್ರಸಂಗ ನಡೆದಾಗ, ಇದನ್ನು ಸಾರಾಸಗಟಾಗಿ ತಿರಸ್ಕರಿಸಿದ ಉದಾರವಾದಿ ಹಿಂದೂ ಸವರ್ಣೀಯ ಗುಂಪಿನ ನಾಯಕನಾಗಿ ಬಾಪುರಾವ್ ಜೋಶಿ ಕಾಣಿಸಿಕೊಂಡರು. ಸನಾತನವಾದಿ ಹಿಂದೂ ಸವರ್ಣೀಯರನ್ನು ಸಂಪೂರ್ಣವಾಗಿ ಖಂಡಿಸಿದ ಅವರು ಧಾರ್ಮಿಕ ಆಚರಣೆಗಳಿಗೆ ಅಪಾರ ಮಹತ್ವ ನೀಡಿ, ಮಾನವೀಯ ನಡವಳಿಕೆಗಳನ್ನು ತಿರಸ್ಕರಿಸುವ ಸನಾತನವಾದಿ ಹಿಂದುಗಳ ಚಿಂತನೆಯನ್ನೇ ಪ್ರಶ್ನಿಸಿದರು. ಶಾಸ್ತ್ರಗಳ ಆಧಾರ ಹಿಂದೂ ಧರ್ಮಕ್ಕೆ ಹೀಗೆ ಇರುವುದಾದರೆ ಅಂಥ ಶಾಸ್ತ್ರಗಳನ್ನು ಮತ್ತು ಆ ಆಧಾರ ಹೊಂದಿರುವ ಹಿಂದೂ ಧರ್ಮವನ್ನು ಧಿಕ್ಕರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

❑



# ಬಾಳೆಯ ಹಣ್ಣು – ಚೋಮನದುಡಿ (ಒಂದು ಪಠ್ಯ)

**– ಡಾ. ಕೆ. ಶಿವರಾಮ ಕಾರಂತ**

ಜಾತ್ರೆ ದಿನ ಸರಿಯಿತೆಂದರೆ ಇನ್ನು ಹದಿನೈದು ಇಪ್ಪತ್ತು ದಿವಸಗಳಲ್ಲಿ ಮಳೆಗಾಲ ಬರುತ್ತದೆಂಬುದು ನಿಶ್ಚಯ. ಮಳೆಗಾಲದ ಮುಗಿಲುಗಳು ಈಗಾಗಲೇ ಕಲೆಯತೊಡಗಿವೆ. ಕಾರ್ಮುಗಿಲುಗಳು, ಬಿರುಗಾಳಿ, ಗಾಳಿಯಿಂದಾಗಿ ಗುಡುಗು, ಮಿಂಚು! ಅವುಗಳ ತೊಡಗುವಿಕೆಯೊಡನೆ ಚೋಮನ ಪ್ರಪಂಚದಲ್ಲಿ ಅವನ್ನು ಪ್ರತಿಬಿಂಬಿಸುವ ಗುಡುಗು, ಮಿಂಚುಗಳು ಆರಂಭಿಸಿವೆ. ಮಗಳು ಮನೆಗೆ ಬಂದು ಒಂದು ತಿಂಗಳಾಯಿತು. ಬಹಳ ಸುಖದಿಂದ ಎಲ್ಲವೂ ಸಾಗಿದೆ. ದಿವಸ ಹೇಗೆ ಸರಿಯಿತೆಂಬುದೇ ತಿಳಿಯಲಿಲ್ಲ. ಜಾತ್ರೆಯೂ ಸರಿಯಿತು. ಸರಿದು ಎಂಟು ದಿನಗಳಾದುವು. ಮುಂದಿನ ಮಳೆಗಾಲದ ಸಿದ್ಧತೆ ಹಳ್ಳಿಯಲ್ಲೆಲ್ಲ ನಡೆಯುತ್ತಿದೆ. ಅವನೀಗ ಅರುವತ್ತರ ಅವಧಿಯನ್ನು ತಬ್ಬಿದ್ದ. ಕೂದಲೆಲ್ಲ ನರೆತಾಯಿತು. ಈ ಒಂದು ವರ್ಷದಲ್ಲಿ, ಮುಖದಲ್ಲಿ ನೆರಿಗಳೂ ಹೆಚ್ಚಿವೆ. ಹಲ್ಲುಗಳು ಅಸ್ಥಿರವಾಗಿವೆ. “ಇನ್ನೆಷ್ಟು ವರ್ಷ ನಾನು ಬದುಕಬಲ್ಲೆ? ಈ ಮಳೆಗಾಲ ಸರಿದರೆ ಮುಂದಿನ ಮಳೆಗಾಲ ನನಗೆ ನೇಗಿಲಿನ ಋಣ ಬಂದೀತೇ? ಈಗ ಬಾರದ್ದು ಇನ್ನೆಂದು ಬಂದೀತು?” ಎಂಬ ಭೀತಿ ತೊಡಗಿದೆ. ಅದರಿಂದಾಗಿ, ಈ ವರ್ಷವಾದರೂ ತಾನು ಬೇಸಾಯಗಾರನಾಗಬೇಕು ಎಂಬ ಹಟ ತೊಟ್ಟಿದ್ದಾನೆ. ತಿರುಗಿ ಧನಿಯರನ್ನು ಹೋಗಿ ಬೇಡುವುದು; ಅವರು ಒಪ್ಪದಿದ್ದರೆ, ಅವರ ಋಣ ಮುಗಿಯಿತೆಂದು ತಿಳಿದು, ಸರಕಾರದವರ ಜಾಗದಲ್ಲಿ ನಿಲ್ಲುವುದು. ಊರ ಹೊರಗಿನ ಆ ದೊಡ್ಡ ಮೈದಾನಿದೆ. ನೀರಿಲ್ಲದಿದ್ದರೂ. ಮಳೆಗಾಲದಲ್ಲಿ ಒಂದು ಬೆಳೆಯನ್ನು ನಿಶ್ಚಿಂತೆಯಿಂದ ಬೆಳೆಯಬಹುದು. ನಾಲ್ಕು ಕಾಳಾದರೂ ಸಿಗಲಿಕ್ಕಿಲ್ಲವೇ? ‘ಸಿಕ್ಕಿದರೆ ಸಿಕ್ಕಿತು. ಇಲ್ಲವಾದರೆ ಇಲ್ಲ ಕೊನೆಗೆ, ತನಗೆ ನೆರವಾಗದ ಪ್ರಪಂಚದ ಮುಂದೆ ಒಂದು ದಿನವಾದರೂ ತಿರುವಿ ನಡೆಯಬಹುದಲ್ಲ?’ ಎಂಬ ನಿರ್ಧಾರ.

ಮಗಳೊಡನೆ ಸುದ್ದಿಯನ್ನು ಎತ್ತದೆ. ಧನಿಯರನ್ನು ನೋಡುತ್ತೇನೆಂದು ಮನೆಯಿಂದಿಳಿದು ಅಂಗಣಕ್ಕೆ ಸರಿದ. ನಿತ್ಯವೂ ಹೊರಬೀಳುವಾಗ ಸೊಂಟಕ್ಕೆ ಕತ್ತಿಯನ್ನು ಸಿಕ್ಕಿಸಿಕೊಂಡು ಹೋಗುತ್ತಿದ್ದವನು ಇಂದು ಬರಿದೆ ಅವಸರದಿಂದ ಹೊರಟು ಹೋದುದನ್ನು ಕಂಡು ಬೆಳ್ಳಿ ನಗುತ್ತ “ಅಪ್ಪಾ, ಎಲ್ಲಿಗೆ ಹೊರಟೆ?” ಎಂದಳು! ಅವನಿಗೆ ಸಿಟ್ಟು ಬಂತು. ಹೊರಡುವ ಗಳಿಗೆಯಲ್ಲಿ “ಎಲ್ಲಿಗೆ?” ಎಂಬ ಅವಲಕ್ಷಣದ ಮಾತು ಕೇಳಿಸಿತೆಂದು. ಆದರೆ ಬೆಳ್ಳಿಯ ಮೋರೆಯನ್ನು ನೋಡುತ್ತ ತುಸು ತಾಳ್ಮೆ ಬಂದು “ಎಲ್ಲಿಗಿಲ್ಲ” ವೆಂದು ಹಿಂದಕ್ಕೆ ಬಂದ. ಹೊರಟ ಮುಹೂರ್ತವೇ ಚೆನ್ನಾಗಿರಲಿಲ್ಲವೆಂದು ತಿಳಿದ. ಅಂತು, ಈ ಬಾರಿ ಹೋಗಿ ಧನಿಯರನ್ನು ಬೇಡಿದರೂ ಸಫಲವಾಗದೆಂಬ ಭೀತಿಯಾಯಿತು. ಎರಡು ಆವೃತ್ತಿಯೂ ನಿರರ್ಥಕವಾದುದು ಮೂರನೆಯ ಆವೃತ್ತಿ

ಬೇರೆಯಾಗುತ್ತದೆಯೇ? 'ಎರಡಾದುದು ಮೂರಾಗುತ್ತದೆ' ಎಂಬ ವಾಡಿಕೆಯ ಮಾತೇ ಇದೆ. ಧೈರ್ಯ ಕುಸಿದು ಚಿಂತೆಗೆ ಪ್ರಾರಂಭವಾಯಿತು. ಅವನ ಸಪ್ಪಗಿನ ಮೋರೆಯನ್ನು ಕಂಡು. ಬೆಳ್ಳಿ ತೀರ ಸಮೀಪ ಬಂದು "ಬೇಸರವಾಯಿತೇ? ನನಗೆ ತಿಳಿದಿರಲಿಲ್ಲ– ನೀನು ಕೆಲಸಕ್ಕೆ ಹೋಗುತ್ತಿದ್ದೀಯೆಂದು; ಕತ್ತಿಯನ್ನು ಮರೆತು ಬಿಟ್ಟಿಯೆಂದು ಹಾಗೆ ಕೇಳಿದೆ. ಇನ್ನೆಂದಿಗೂ ನೀನು ಹೊರಡುವಾಗ 'ಎಲ್ಲಿಗೆಂದು ಕೇಳುವುದಿಲ್ಲ!" ಎಂದಳು.

ಚೋಮ ನಿಟ್ಟುಸಿರೊಂದನ್ನು ತೆಗೆದು "ದೈವ ನನ್ನ ಹಣೆಯಲ್ಲಿ ಹಾಗೆ ಬರೆದಿದ್ದರೆ ಯಾರೇನು ಮಾಡಲು ಬಂದೀತು!" ಎಂದ.

"ಯಾವುದನ್ನು ಹಾಗೆ ಬರೆಯುವುದು?"

"ಯಾವುದನ್ನೆಂದರೆ? ನನ್ನ ಬೇಸಾಯದ ಆಸೆಯನ್ನು."

ಅದೋ! ಅಪ್ಪಾ, ಸುಮ್ಮನೆ ಇಲ್ಲದ ಚಿಂತೆಯನ್ನು ಕಟ್ಟಿಕೊಳ್ಳುತ್ತೀ. ನಾವು ಹೊಲೆಯರಾಗಿ ಹುಟ್ಟಿ, ನಮ್ಮ ಅಂತಸ್ತಿಗೆ ಮೀರಿದ ಆಸೆ ಹಿಡಿದರೆ ಹೇಗೆ? ಅದೃಷ್ಟ ಬೇಡವೇ? ಮುಖ್ಯ ಬೇಕು ಅದೃಷ್ಟ. ದೇವರು ಹಣೆಯಲ್ಲಿ ಬರೆದಿರಬೇಕು. ಗುರುವನೊಬ್ಬನ ಹಣೆಯಲ್ಲಿ ಬರೆದಿರಬೇಕೆಂದು ಕಾಣುತ್ತದೆ. ಅವನು ತನ್ನ ಜಾತಿಯನ್ನು ಬಿಟ್ಟರೂ, ಬೇಸಾಯಗಾರನಾದ. ಅವನೊಬ್ಬನಾದರೂ ನಮ್ಮ ಕುಲದಲ್ಲಿ ಹುಟ್ಟಿದರೂ ಬೇಸಾಯದ ಋಣ ಪಡೆದ". ಗುರುವನ ಹೆಸರು ಚೋಮನಿಗೆ ರೋಮಾಂಚನ ಹುಟ್ಟಿಸಿತು. ಅವನು ತನ್ನ ಮಾತನ್ನು ಕೇಳಿದಿದ್ದ ಚಿಂತೆ ಬೇರೆ; ತಿರುಗಿ ತನ್ನ ಮನೆಗೆ ಮುಖ ತಿರುಗಿಸದಿದ್ದುದೊಂದು ಸಿಟ್ಟು ಬೇರೆ. ತನ್ನ ಕಣ್ಮುಂದೆಯೇ ಅವನು ಬೇಸಾಯಗಾರನಾದನಲ್ಲ ಎಂಬ ಅಸೂಯೆ–ಎಲ್ಲವೂ ಸೇರಿಕೊಂಡವು.

ಇದರಿಂದಾಗಿ, ತಿರುಗಿ ಅವನ ಮನಸ್ಸಿನ ಆಕ್ರೋಶ ಉರಿಯ ತೊಡಗಿತು. 'ಎಲ್ಲವನ್ನು ಇಂದೇ ನಿರ್ಣಯಿಸಿಬಿಡುತ್ತೇನೆ' ಎಂಬ ಆವೇಶದಿಂದ ಹೊರಟ. ನೇರಾಗಿ ಧನಿಯ ಮನೆಗೆ ಹೋಗಿ, ಅಂಗಣದಲ್ಲಿ ನಿತ್ಯ ಕುಳಿತಿರುವ ಸ್ಥಾನದಲ್ಲಿಯೇ ಕುಳಿತ! ಇತ್ತೀಚೆಗೆ ಅವನ ಬರುವಿಕೆ ಹೋಗುವಿಕೆ ತೀರ ನಿಯಮ ತಪ್ಪಿದ್ದರಿಂದ ಬೆಳಿಗ್ಗೆ ಬಂದು ಕುಳಿತಿದ್ದ ಚೋಮನನ್ನು ಕಂಡು ಸಂಕಪ್ಪಯ್ಯನವರಿಗೆ ತುಸು ಆಶ್ಚರ್ಯವಾಯಿತು. 'ಏನು ಚೋಮ, ಬಹಳ ಅಪೂರ್ವದ ಭೇಟನ್ನು ಕೊಟ್ಟೆ" ಎಂದು ಚೇಷ್ಟೆ ಮಾಡಿದರು. ಬಂದ ವೇಳೆ ಎಷ್ಟು ಮಟ್ಟಿಗೆ ಅನುಕೂಲವೋ ಎಂದು ಅವನಿಗೆ ತಿಳಿಯದಾಯಿತು. ಅವನು ಮಾತನಾಡದೆ ಮೌನದಿಂದ ಕುಳಿತುದನ್ನು ಕಂಡು "ಏನನ್ನು ಕೇಳಲಿಕ್ಕೆ ಬಂದೆ? ಅಥವಾ ಮನೆಯ ಕೆಲಸ ಮಾಡಲಿಕ್ಕೆ ಬಂದವನೋ?"

ಚೋಮ ಮೌನ.

"ಹೂಂ, ಮಾತನಾಡು. ಇನ್ನು ನಿನ್ನಿಂದೇನು ಕೆಲಸವಾಗುತ್ತದಂತೆ! ನೀನು ಗಳಿಗೆ ಲೆಕ್ಕ ಮಾಡುವವನು. ಅಂತು ಬಂದು ಹೋಗುತ್ತಾ ಇದ್ದುಬಿಡು. ಸಾಯಂಕಾಲದ ಸಮಯ ಮಾತ್ರ ಬರಬೇಡ. ಸುಮ್ಮನೆ ಹೇಳುವುದು–ಸಾಯಂಕಾಲದ ವೇಳೆ



ಬರಬೇಡೆಂದು. ನಿನಗೆ ಸಾಯಂಕಾಲವೇನು, ಬೆಳಗ್ಗೇನು? ಚೋಮ, ನಿನ್ನ ಮಗಳು ಕೊನೆಗೂ ಸಾಲ ತೀರಿಸಿ ಬಂದಳೋ? ಇಲ್ಲ. ಇನ್ನಷ್ಟು ಹೆಚ್ಚಿಸಿಕೊಂಡು ಬಂದಳೋ?"

"ದೇವರ ದಯೆಯಿಂದ ಎಲ್ಲ ತೀರಿಸಿ ಬಂದಳು"

"ಆಯಿತಲ್ಲ ಒಂದು ವಿಷಯದಲ್ಲಿ ನಿಶ್ಚಿಂತೆ."

"ಅದಾಯಿತು; ಇನ್ನೊಂದು ಮಾತ್ರ... ಧನಿಯರನ್ನು ಕೇಳುವ ಎಂದು ಬಂದೆ. ಮೊದಲು ಅಂದಂತೆ ಅಂದರೆ ಈ ಬಡವನ ಬಾಯಿಗೆ ಮಣ್ಣು! ಏನು ಮಾಡುತ್ತೀರಿ? ನಿಮ್ಮ ಒಕ್ಕಲು, ಆಸೆ ಮಾಡಿ, ಸಾಯಬೇಕೆನ್ನುತ್ತೀರಾ?"

"ಏನು ಸಂಗತಿಯೆಂದು ಹೇಳಬಾರದೇ! ಈ ವಕಾಲತ್ತು ರಂಗುಗಳೆಲ್ಲ ಯಾಕೆ? ಯಾವುದು ? ಗೇಣಿಗೆ ಭೂಮಿ ಕೇಳಲಿಕ್ಕೆ ಬಂದದ್ದೋ? ಮಳೆಗಾಲ ಬಂತು."

"ಅದೇ...."

ಸಂಕಪ್ಪಯ್ಯನವರ ಮುಖ ಆಗ ವಿರಸಗೊಂಡಿತು. "ಚೋಮ, ನಿನಗೆ ಕೊಡಬಾರದೆಂದು ನನ್ನ ಮನಸ್ಸಿನಲ್ಲಿಲ್ಲ. ಊರಿನವರು ಮಾಡದ ಕೆಲಸಕ್ಕೆ ನಾನು ತಯಾರಿಲ್ಲ. ಇನ್ನು ಅಂಥಾದ್ದಾಗಬೇಕಾದರೆ. ನಮ್ಮ ಅಮ್ಮ ಸಾಯಬೇಕು. ಅವಳಿರುವ ತನಕ ನೀನು ಆ ಸುದ್ದಿಗೆ ಬರಬೇಡ!"

ತಾನು ಬೇಸಾಯಗಾರನಾಗಬೇಕೆಂದು, ತನ್ನ ಧನಿಯರ ತಾಯಿಯು ಸಾವನ್ನೆಂದಾದರೂ ಆತ ಬಯಸುವವನೇ! ನಿರಾಶೆಯಿಂದ ಮರಳಿದ. ಆ ದಿನವೆಲ್ಲ ಒಂದು ಕಾಳು ಅನ್ನವನ್ನು ಸಹ ಅವನು ಮುಟ್ಟಲಿಲ್ಲ. ಬೆಳ್ಳಿಯು ಇನ್ನು ಮುಂದೆ ಈ ವ್ಯರ್ಥ ಆಸೆಯನ್ನು ಹಿಡಿದು ಕೊರಗಬೇಡವೆಂದು ಬಲವಾಗಿ ಹೇಳಿದಳು. ಅಪ್ಪರಿಂದ ಮನಸ್ಸಿಗೆ ಸಮಾಧಾನವಾಗುತ್ತದೆಯೇ? ತಳಮಳದಲ್ಲಿ ತಿರುಗಿ ತೇಲಾಡತೊಡಗಿದ.

ಮರುದಿವಸ ಇನ್ನೊಂದು ವಿಚಿತ್ರ ಪ್ರಸಂಗ ನಡೆಯಿತು. ಅವನು ತನ್ನೆರಡು ಮಕ್ಕಳನ್ನು ತುಸು ದೂರದಲ್ಲಿದ್ದ ಒಂದು ತೋಡಿಗೆ ಸ್ನಾನ ಮಾಡಿಸಲು ಒಯ್ದ. ನಿತ್ಯ ತಮ್ಮಂದಿರನ್ನು ಮೀಯಿಸುವ ಕೆಲಸ ಬೆಳ್ಳಿಯದು. ಹಾಗೆ ಮೀಯಿಸುವಂಥ ಪ್ರಾಯ ಮೀರಿದೆ. ಆದರೆ ತಾಯಿ ಸತ್ತ ಮಕ್ಕಳೆಂದು ಬೆಳ್ಳಿಯು ಹೆಚ್ಚಿನ ಅಕ್ಕರೆಯನ್ನು ತೋರಿಸುತ್ತಿದ್ದಳು. ಇಂದು ಮನೆಗೆಲಸ ತುಂಬ ಇದ್ದುದರಿಂದ ತಂದೆಯನ್ನು ಕಳುಹಿಸಿಕೊಟ್ಟಳು. ಚೋಮನ ಹಿಂದೆ ಮಕ್ಕಳಿಬ್ಬರು ಕೂಗುತ್ತ ಕುಣಿಯುತ್ತ ನಡೆದರು. ನೀರಿನ ತೋಡು ಬಂತು. ಚೋಮನು ಮಕ್ಕಳನ್ನು ನಿಲ್ಲಿಸಿ ಬಿಟ್ಟು, ಅವರ ತಲೆಗೆ ನೀರು ಹಾಕಿದ ಎಣ್ಣೆಯ ಜಿಡ್ಡನ್ನು ಉಜ್ಜಲು, ಏನೋ ಸೊಪ್ಪನ್ನು ತರಲು ಹೋದ. ದೊಡ್ಡ ಹಳ್ಳವದು. ಹಳ್ಳದ ಮೇಲಣ ಬದಿಯಲ್ಲಿ ಊರಿನ ಎಷ್ಟೋ ಮೇಲು ಜಾತಿಯವರು ಬಟ್ಟೆ ಒಗೆಯುತ್ತಿದ್ದರು. ಕೆಲವು ಹುಡುಗರು ನೀರಲ್ಲಿ ಆಡುತ್ತಿದ್ದರು. ಕಾಳ, ನೀಲರಿಗೆ ನೀರಿಗಿಳಿಯುವ ಮನಸ್ಸಾಯಿತು. ತಂದೆಯ ಆಗಮನಕ್ಕೆ ಕಾಯದೆ, ನೀರಲ್ಲಿಳಿದು, ನೀರನ್ನು ಬಡಿದು ಚಿಮ್ಮಿಸತೊಡಗಿದರು. ಮಕ್ಕಳ ಪಾಲಿಗೆ ನೀರಾಟವೆಂದರೆ

ಹೆಂಡ ಕುಡಿದಂತೆ. ಉತ್ಸಾಹವೇರಿದಂತೆ ಹೆಚ್ಚೆಚ್ಚು ಮುಂದಕ್ಕೆ ನಡೆದರು. ಈಜಾಡಲು ಕಲಿತವರಾದುದರಿಂದ ಒಬ್ಬರು ಇನ್ನೊಬ್ಬರನ್ನು ಅಟ್ಟುವುದು, ಮುಳುಗುವುದು, ತಪ್ಪಿಸಿಕೊಳ್ಳುವುದು–ಇವುಗಳ ಕೋಲಾಹಲ ನಡೆಯಿತು. ನಿತ್ಯವೂ ಹೀಗೆ ಆಡುತ್ತಿದ್ದವರೇ. ಆದರೆ ಇಂದು ದುರ್ದೈವದಿಂದ ನೀಲ ಕೈಸೋತು ಮುಳುಗಿದ. ಕಾಳನಿಗೆ ಭೀತಿಯಾಗಿ ದಂಡೆಗೆ ಬಂದು ಕೂಗತೊಡಗಿದ! ದೂರದಿಂದ ಚೋಮನಿಗೂ ಕೂಗು ಕೇಳಿಸಿತು. ಆತ ಧಾವಿಸಿ ಬಂದ; ಬರುವಾಗ ಕಾಲು ಎಡವಿ ಬಿದ್ದು ಥಟ್ಟನೆ ಎದ್ದು ಬರಲು ಸಮಯ ಹಿಡಿಯಿತು. ಇತ್ತ ತೋಡಿನ ಮೇಲ್ಭಾಗದಲ್ಲಿದ್ದವರು ಓಡಿ ಬಂದರು. ಒಬ್ಬ ಬ್ರಾಹ್ಮಣ ತರುಣ ಧಾವಿಸಿ, ನೀಲನನ್ನು ಎಳೆದು ತರಲು ಮುಂದುವರಿದ. ಅವನ ಹಿರಿಯರು ಅವನನ್ನು ತಡೆದರು! "ಅವನು ಹೊಲೆಯನಲ್ಲವೆ?" ಎಂದು ಬೆದರಿಸಿದರು. ತರುಣನು ತಳಮಳಿಸಿ ನಿಂತ. ಕಾಲೆಡವಿ ಬಿದ್ದ ಚೋಮ ಎಲ್ಲವನ್ನೂ ಕಂಡ. ಆದರೆ ಸಂಗತಿಯೇನೆಂದು ತಿಳಿಯದಾದ! ನೀಲ ಎಲ್ಲರ ಕಣ್ಣೆದಿರಿನಲ್ಲೇ ಮುಳುಗಿದ. ಕೊನೆಯ ಬಾರಿಗೂ ಮುಳುಗಿಬಿಟ್ಟ. ಚೋಮ ಓಡಿ ಬರುವಾಗ ಎಲ್ಲವೂ ಮುಗಿದಿತ್ತು! ಎಲ್ಲರ ಕಣ್ಣೆದಿರಿಗೇ ಆ ಬಾಲಕನು ನೀರಲ್ಲಿ ಒಂದಾವೃತ್ತಿ ಅದೃಶ್ಯನಾಗಿ ಬಿಟ್ಟ. ಚೋಮನು ಎಲ್ಲವನ್ನೂ ನೋಡಿ ಬೊಬ್ಬಿಡತೊಡಗಿದ. ಸ್ವತಃ ಈಜು ಬಾರದು. ಆಗ ಬ್ರಾಹ್ಮಣ ತರುಣ ನೀರಲ್ಲಿ ಧುಮುಕಿದ. ಇತರರು ಅವನನ್ನು ತಡೆಯಲು ಯತ್ನಿಸಿ ಹತಾಶರಾಗಿ ನಿಂತರು! ನೀಲನ ಶವವೇನೋ ಮೇಲಕ್ಕೆ ಬಂದಿತು. ಪ್ರಾಣವಿರಲಿಲ್ಲ! ಆ ತರುಣ ಮುಖವನ್ನು ತಗ್ಗಿಸಿಕೊಂಡು ಹೊರಟು ಹೋದ! ಚೋಮನ ಬಾಯಿಂದ ಸೊಲ್ಲು ಹೊರಡಲಿಲ್ಲ.

ಚೋಮನಿಗೆ ಹೊಲೆಯನ ಬಾಳ್ವೆಯ ಹುಣ್ಣು ಎಂಥದೆಂಬುದು ಆಗ ಸಂಪೂರ್ಣ ಅನುಭವವಾಯಿತು. ಶವವನ್ನು ಹೊತ್ತು ಮನೆಗೆ ತಂದ. ಒಂದು ದಿವಸದ ತನಕವೂ ಪೊಲೀಸರು ಬರುವ ತನಕವೂ, ಅದನ್ನು ಮನೆಯಲ್ಲಿರಿಸಬೇಕಾಯಿತು. ಹಲವರು ಶವವನ್ನು ಕಾಣಲು ಬಂದರು. ಸಂಕಪ್ಪಯ್ಯನವರಿಗೆ ಆ ಸುದ್ದಿಯು ಮುಟ್ಟಿತು. ಅವರೂ ಬಂದರು. ಚೋಮನು ಶವವನ್ನಿರಿಸಿಕೊಂಡು, ಮನೆಯ ಕದವನ್ನು ಮುಚ್ಚಿ, ಯಾರ ಕಣ್ಣಿಗೂ ಬೀಳದಂತೆ ಕುಳಿತುಕೊಂಡ ಹೊರಗಿಂದ ಕೂಗಿದರೂ, ಕರೆದರೂ ಮಾತಿಲ್ಲ, ಕತೆಯಿಲ್ಲ. ಬೆಳ್ಳಿ ಮಾತ್ರ ಗೋಳೋ ಎಂದ ಅಳತೊಡಗಿದಳು. "ಅತ್ತರೆ, ಈ ಮಗುವನ್ನು ತಿಂದಂತೆ" ಎಂದು ಆಣೆ ಮಾಡಿದ.

ಆ ರಾತ್ರಿ ಪೊಲೀಸರು ಬಂದು ತನಿಖೆ ಮಾಡಿ ಹೋದರಂತೆ. ಶವ ಯಾರ ಕಣ್ಣಿಗೂ ಬೀಳದಂತೆ ಮಣ್ಣುಗೂಡಿತು. ಮರು ಬೆಳಿಗ್ಗೆ ಚೋಮ ದುಡಿಯನ್ನು ಬಾರಿಸುತ್ತಿದ್ದನಂತೆ!

❑



# IV. ವಿನೋದ

'ವಿನೋದ' ಎಂಬ ಪದಕ್ಕೆ ಪರ್ಯಾಯವಾಗಿ ಸಂತೋಷ, ಆನಂದ, ಹಾಸ್ಯ ಪದಗಳು ಬಳಕೆಯಲ್ಲಿವೆ. ಬಳಕೆಯ ದೃಷ್ಟಿಯಿಂದ ವಿನೋದಕ್ಕೆ ಸರಿಸಮಾನವಾಗಿ ' ಹಾಸ್ಯ' ಪದವನ್ನು ಬಳಸುತ್ತೇವೆ. ನವರಸರಗಳಲ್ಲಿ ಹಾಸ್ಯವೂ ಒಂದು.

ಭರತನು ತನ್ನ ನಾಟ್ಯಶಾಸ್ತ್ರದಲ್ಲಿ ನವರಸಗಳ ಬಗ್ಗೆ ಚರ್ಚಿಸುತ್ತ, ಹಾಸ್ಯಕ್ಕೆ ಎರಡನೆಯ ಸ್ಥಾನ ನೀಡಿದ್ದಾನೆ. 'ಶೃಂಗಾರದ ಅನುಕರಣವೇ ಹಾಸ್ಯ' ಎಂಬುದು ಆತನ ಅಭಿಮತ. ಅಭಿನವಗುಪ್ತನ ಪ್ರಕಾರ 'ಅನೌಚಿತ್ಯ ಪ್ರವೃತ್ತಿಯಿಂದ ಉಂಟಾಗತಕ್ಕದ್ದೇ ಹಾಸ್ಯದ ವಿಭಾವ' ಅಂದರೆ 'ಅನೌಚಿತ್ಯವೇ ಹಾಸ್ಯದ ಮೂಲ'

ಪ್ರತಿಯೊಬ್ಬರ ಬದುಕಿನಲ್ಲಿ ಹಾಸ್ಯವು ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಸಂತೋಷ, ಆನಂದವನ್ನು ಹಾಸ್ಯದ ಮೂಲಕವೂ ಅಭಿವ್ಯಕ್ತಿಸಬಹುದಾಗಿದೆ. ಇಂತಹ ಹಾಸ್ಯರಸವನ್ನು ಅಭಿವ್ಯಕ್ತಿಸುವ ವಿಧಾನ ನಗೆ. ಈ ನಗು ಮಾನವ ಜೀವನದ ಅವಿಭಾಜ್ಯ ಅಂಶ. ನಕ್ಕು ನಲಿಯದೇ ಇರುವ ಮನುಷ್ಯನನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಮನುಷ್ಯನ ಸ್ವಭಾವದಲ್ಲಿ, ಸನ್ನಿವೇಶದಲ್ಲಿ, ಮಾತುಕತೆಯಲ್ಲಿ ಹೀಗೆ ಎಲ್ಲದರಲ್ಲೂ ಹಾಸ್ಯ ಉಕ್ಕಬಹುದು. ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಇಲ್ಲವೇ ಅರಿವಿಲ್ಲದೆ ಆಕಸ್ಮಿಕವಾಗಿ ಹಾಸ್ಯ ಹೊಮ್ಮುತ್ತದೆ. ಹಾಸ್ಯದಲ್ಲಿ ನಾವು ಮೃದುಹಾಸ್ಯ, ಕಟುಹಾಸ್ಯ, ಕುತ್ಸಿತ ಹಾಸ್ಯ ಎಂಬ ಬಗೆಗಳನ್ನು ಗುರುತಿಸಬಹುದು.

"ಬಹುಕಾಲ ದುಃಖಪೀಡಿತನಾಗಿದ್ದರೆ ದುಃಖವನ್ನು ಕಂಡು ನಗುವಂತಾಗುತ್ತದೆ" ಎಂಬ ಷೇಕ್ಸ್‌ಪಿಯರನ ಮಾತು ನಗುವಿಗಿರುವ ಅದಮ್ಯ ಶಕ್ತಿಯನ್ನು ಸೂಚಿಸುತ್ತದೆ.

'ನಗುವುದು ಸಹಜಧರ್ಮ, ನಗಿಸುವುದು ಪರಧರ್ಮ' ಎಂಬ ಡಿ.ವಿ.ಜಿ ಅವರ ನುಡಿ ಶ್ಲಾಘನೀಯ. ಏಕೆಂದರೆ ಜಗತ್ತಿನ ಸಕಲ ಜೀವರಾಶಿಗಳಲ್ಲಿ ನಗಲೂ ಬಲ್ಲ, ಅಳಲೂ ಬಲ್ಲ ಏಕೈಕ ಪ್ರಾಣಿ ಮನುಷ್ಯ. ವಸ್ತುಸ್ಥಿತಿ ಹೀಗಿರುವುವಾಗ ಮನುಷ್ಯ ತನ್ನಿಂತಾನೇ ನಗುವುದು ಸಹಜ. ಆದರೆ ಪರರನ್ನು ನಗಿಸುವುದಿದೆಯಲ್ಲ ಅದು ಅತ್ಯಂತ ಕಷ್ಟವೂ ಹೌದು ಶ್ರೇಷ್ಠವೂ ಹೌದು. ತಾವು ನೊಂದರೂ ಮತ್ತೊಬ್ಬರನ್ನು ನಗಿಸುವ ಕಲೆ ಕೆಲವರಿಗೆ ಮಾತ್ರ ಸಾಧ್ಯ. ಉದಾ:ಚಾರ್ಲಿಚಾಪ್ಲಿನ್.

ಪ್ರತಿಯೊಬ್ಬರ ಬದುಕಿನಲ್ಲಿ ಕಷ್ಟಸುಖ ಬಂದೇ ಬರುತ್ತದೆ. ಸುಖಬಂದಾಗ ಸಂತೋಷಗೊಳ್ಳುವುದು ಎಷ್ಟು ಸಹಜವೋ, ಕಷ್ಟ ಬಂದಾಗ ದುಃಖವಾಗುತ್ತದೆ. ಅತೀವವಾದ ದುಃಖಕ್ಕೆ ಒಳಗಾದ ಮನುಜ ಖಿನ್ನತೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚು. ಇಂತಹ ಮನಸ್ಥಿತಿಯಲ್ಲಿರುವವರು ಹೊರಬರಲು ಹಾಸ್ಯವು ದಾರಿದೀಪವಾಗುತ್ತದೆ.

# ದೆವ್ವಗಳನ್ನು ಕುರಿತು

**– ಡಾ. ಎ.ಎನ್. ಮೂರ್ತಿರಾವ್**

ದೆವ್ವಗಳಿವೆಯೆನ್ನುವುದಕ್ಕೆ ನನಗೆ ಇದುವರೆಗೆ ಯಾವ ಆಧಾರವೂ ದೊರೆತಿಲ್ಲ. ಎಷ್ಟೋ ವೇಳೆ ಹವೇಲಿಯಂತಿರುವ ದೊಡ್ಡ ಮನೆಗಳಲ್ಲಿ, ಊರ ಹೊರಗಿರುವ ಪ್ರವಾಸಿಮಂದಿರಗಳಲ್ಲಿ, ಒಂಟಿಯಾಗಿ ರಾತ್ರಿಯನ್ನು ಕಳೆದಿದ್ದೇನೆ; ಅಮಾವಾಸ್ಯೆಯ ಕತ್ತಲಿನ ಅವೇಳೆಯಲ್ಲಿ ಸ್ಮಶಾನಗಳ ಬಳಿ ತಿರುಗಾಡಿದ್ದೇನೆ; ದೆವ್ವಗಳಿಗೆ ಪ್ರಿಯವೆಂದು ಹೆಸರು ಪಡೆದಿರುವ ಹುಣಸೆಯ ತೋಪುಗಳನ್ನು ಹಾದುಹೋಗಿದ್ದೇನೆ. ಇಷ್ಟಾದರೂ ಒಂದೇ ಒಂದು ದೆವ್ವ ನನ್ನ ಕಣ್ಣಿಗೆ ಬಿದ್ದಿಲ್ಲ. ಇದನ್ನು ನೆನೆದು ನನಗೆ ಅವಮಾನವಾದಂತಾಗಿದೆ. ಈ ಲೋಕದಲ್ಲಿ ಸತ್ತವರ ಸಂಖ್ಯೆ ಎಣಿಸಲಾರದಷ್ಟು. ಅವರಲ್ಲಿ ಸಾವಿರಕ್ಕೆ ಒಂದರಷ್ಟು ಜನ ದೆವ್ವಗಳಾಗಿದ್ದಾರೆಂದರೂ ನನ್ನ ಸುತ್ತಮುತ್ತ ಸಾವಿರಗಟ್ಟಲೆ ದೆವ್ವಗಳು ಗಾಳಿಯಾಗಿ ಅಲೆಯುತ್ತಿರಬೇಕು. ಅವುಗಳಲ್ಲಿ ಯಾವುದಾದರೂ ಒಂದು ಅನಾಥಪ್ರೇತ ನನಗೆ ಕಾಣಿಸಿಕೊಂಡು ಕುಶಲಪಶ್ನೆ ಮಾಡಬೇಡವೆ? ಒಂದು ಮೋಹಿನಿ ಕೈನೀಡಿ ತಾಂಬೂಲ ಕೊಡಬೇಡವೆ–ನಾನು ಅದನ್ನು ಸ್ವೀಕರಿಸಲಿ ಬಿಡಲಿ! ಅವುಗಳ ದೃಷ್ಟಿಯಲ್ಲಿ ನಾನು ಗಣನೆಗೇ ಬಾರದ ಮನುಷ್ಯ ಎಂದಂತಾಯಿತು. ಹಿಂದೆ ಯಾವನೋ ಒಬ್ಬ ಸಂದೇಹವಾದಿ 'ನಾನು ದೆವ್ವಗಳನ್ನು ನಂಬಬೇಕಾದರೆ ಅವು ಧೈರ್ಯವಾಗಿ ನನ್ನೆದುರು ಬಂದು ನಿಲ್ಲಲಿ' ಎಂದನಂತೆ. ಕೂಡಲೇ ಅಶರೀರವಾಣಿಯೊಂದು 'ನಿನ್ನಂಥವನು ನಂಬಿದ್ದರಿಂದ ನಮಗೆ ಆಗಬೇಕಾದ್ದೇನು!' ಎಂದು ಉತ್ತರ ಕೊಟ್ಟಿತು. ನನ್ನ ವಿಷಯದಲ್ಲೂ ದೆವ್ವಗಳಿಗೆ ಇದೇ ತಿರಸ್ಕಾರ ಭಾವನೆಯಿರಬೇಕು. ಅವುಗಳ ನಡುವೆ ನಾನು ಅರ್ಧ ಶತಮಾನಕ್ಕಿಂತ ಹೆಚ್ಚು ಕಾಲ ಬದುಕಿದ್ದೇನೆ. ಆದರೆ ಅವು ನನ್ನ ಇರವನ್ನೇ ಗಮನಕ್ಕೆ ತಂದುಕೊಂಡಿಲ್ಲ. ಅವುಗಳ ಭಾಗಕ್ಕೆ ನಾನು ಇದ್ದರೆಷ್ಟೋ ಇಲ್ಲದಿದ್ದರೂ ಅಷ್ಟೇ. ಇತ್ತೀಚೆಗೆ ನನ್ನ ಮಿತ್ರರೊಬ್ಬರು ನನ್ನ ಸ್ವಾಭಿಮಾನಮನ್ನು ಉಳಿಸುವಂಥ ಥಿಯರಿಯೊಂದನ್ನು ನನ್ನ ಗಮನಕ್ಕೆ ತಂದಿದ್ದಾರೆ: ಮಾನವರಲ್ಲಿ ದೇವಗಣ ಭೂತಗಣ ಎಂದು ಎರಡು ವರ್ಗಗಳಿವೆಯಂತೆ. ದೆವ್ವ ಭೂತಗಳು ಭೂತಗಣದವರಿಗೆ ಮಾತ್ರ ಕಾಣಿಸಿಕೊಳ್ಳುತ್ತವೆ; ದೇವಗಣದವರಿಗೆ ಕಾಣಿಸುವುದಿಲ್ಲ. ಇದು ನಿಜವಾದರೆ ನಾನು ಹೆಮ್ಮೆಯಿಂದ ಬೆನ್ನು ತಟ್ಟಿಕೊಳ್ಳಬಹುದು. ದೆವ್ವಗಳಿಗೆ ನನ್ನ ವಿಷಯದಲ್ಲಿ ಆಸಕ್ತಿಯೇನೋ ಇದೆ; ಆದರೆ ನನ್ನ ಕಣ್ಣೆದುರಿಗೆ ಸುಳಿಯುವ ಧೈರ್ಯವಿಲ್ಲ.

ನಾವು ದೆವ್ವಗಳನ್ನು ಕಂಡಿಲ್ಲ ಎಂದ ಮಾತ್ರಕ್ಕೇ ಅವುಗಳ ಆಸ್ತಿತ್ವವನ್ನು ಅಲ್ಲಗಳೆಯುವುದು ತರ್ಕಬದ್ಧವಾದ ಮಾತಲ್ಲ. ನಮ್ಮ ಅನುಭವ ಎಷ್ಟೇ ವಿಶಾಲವಾದದ್ದೆಂದರೂ ಅದರ ವ್ಯಾಪ್ತಿ ಎಷ್ಟಿದ್ದೀತು! ದೆವ್ವವಿಲ್ಲ ಎನ್ನುವವನು ಒಬ್ಬನಿದ್ದರೆ,



ಇದೆ ಎನ್ನುವವರು ಹತ್ತು ಜನರಿದ್ದಾರೆ. ನಾವು 'ಅವನ್ನು ಕಂಡಿಲ್ಲ' ಎಂದು ಮಾತ್ರ ಹೇಳುತ್ತೇವೆ. ಅವರು 'ನಾವೇ ಸ್ವತಃ ಕಂಡಿದ್ದೇವೆ' ಎಂದು ಹೇಳುತ್ತಾರೆ. ನಮ್ಮ ಮಾತಿನಲ್ಲಿರುವುದು ಸಾಕ್ಷ್ಯದ ಅಭಾವ; ಅವರ ಮಾತಿನಲ್ಲಾದರೋ, ಸಾಕ್ಷ್ಯದ ಪ್ರಮಾಣ. ಅವರು ಸುಳ್ಳು ಹೇಳುತ್ತಿರಬಹುದು, ಅಥವಾ ಆತ್ಮವಂಚನೆ ಮಾಡಿಕೊಂಡಿರಬಹುದು. ಆದರೆ ಅದನ್ನು ದೃಢಪಡಿಸುವುದು ಹೇಗೆ? ಆದ್ದರಿಂದ ಲೋಕದಲ್ಲಿ ಅವರ ಮಾತಿಗೇ ಬೆಲೆ ಹೆಚ್ಚು. ಇದನ್ನೆಲ್ಲಾ ಯೋಚಿಸಿ ನಾನೇನೋ ದೆವ್ವಗಳ ವಿಷಯದಲ್ಲಿ ನಂಬಿಕೆಯಿಡದಿದ್ದರೂ ಆಸಕ್ತಿಯನ್ನಿಟ್ಟುಕೊಂಡಿದ್ದೇನೆ.

ನನಗೆ ಈ ವ್ಯಕ್ತಿಗಳ ವಿಷಯದಲ್ಲಿ ಭಯಕ್ಕಿಂತ ಮರುಕ ಹೆಚ್ಚು. ಭೌತಶರೀರವನ್ನು ಬಿಟ್ಟೊಡನೆಯೇ ಭವದ ಬಂಧನವೂ ಕಳಚಿ ಹೋಗುತ್ತದೆಂದು ನಮ್ಮಲ್ಲಿ ಬಹು ಜನ ಭ್ರಾಂತಿಗೊಂಡಿದ್ದಾರೆ. ಆದರೆ ದೃಷ್ಟಪ್ರಪಂಚದ ಹೊರವಲಯದಲ್ಲಿ, ಆದರೂ ನಮಗೆ ತೀರ ಸಮೀಪವಾಗಿ ಸುಳಿದಾಡುತ್ತಿರುವ ಈ ಬಡಪಾಯಿ ದೆವ್ವಗಳ ಚಲನವಲನಗಳನ್ನು ಗಮನಿಸಿದರೆ, ಅವುಗಳಿಗೆ ಸಾವಿನಿಂದ ಇಂಥ ಪ್ರಯೋಜನವೇನೂ ಆಗಿಲ್ಲವೆಂದು ಸ್ಪಷ್ಟವಾಗುತ್ತದೆ. ಅವುಗಳ ಹಣೆಬರಹವನ್ನು ನೋಡಿ: ಹಿಂದೆ ಎಲ್ಲೋ ಒಂದು ಕಡೆ ಬದುಕಿದ್ದು, ಏನೋ ಸಂಕಟವನನ್ನುಭವಿಸಿ, ಕೊನೆಗೆ ಬಹುಶಃ ದುರ್ಮರಣಕ್ಕೆ ಈಡಾಗಿ ಪ್ರೇತಗಳಾಗಿರುತ್ತವೆ. ಆ ಸಂಕಟವನ್ನು ನೆನಪಿಗೆ ತರುವ ಸ್ಥಳಗಳನ್ನು ಬಿಟ್ಟು ಬೇರೆ ಕಡೆ ಹೋಗಿ ಸುಖವಾಗಿರಬಾರದೆ? ನ್ಯಾಯವಾಗಿ ನೋಡಿದರೆ ಮಾನವರಿಗೆ ಲಭ್ಯವಲ್ಲದ ಸ್ವಾತಂತ್ರ್ಯ ಈ ಪ್ರೇತಗಳಿಗೆ ದೊರಕಿರಬೇಕು. ದೇವರು ಅವಕ್ಕೆ ಅದೃಶ್ಯವಾಗುವ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾನೆ. ಆದ್ದರಿಂದ ಯಾವ ಆಡಚಣೆಗಳೂ ಇಲ್ಲದೆ ಎಲ್ಲಿಗೆಂದರೆ ಅಲ್ಲಿಗೆ ತೋರಿದ ಘಳಿಗೆಯಲ್ಲಿ ಪ್ರಯಾಣ ಬೆಳೆಸಬಹುದು. ಅವುಗಳೇನು ಪಾಸ್‌ಪೋರ್ಟ್ ಕಚೇರಿಗೆ ಅಲೆಯಬೇಕೆ, ಸುಂಕದ ಕಟ್ಟೆಗಳಲ್ಲಿ ಹೇಳಿಕೆ ಕೊಡಬೇಕೆ, ಟಿಕೆಟ್ಟಿಗೆ ಹಣವಿಲ್ಲವೆಂದು ಚಿಂತೆಪಡಬೇಕೆ? ಮೊದಲೇ ಸತ್ತಿರುವ ಈ 'ಪ್ರಾಣಿ' ಗಳಿಗೆ ಚಳಿಗಾಳಿಗಳ ಹೆದರಿಕೆಯಿಲ್ಲ, ಪ್ಲೇನು ದುರಂತಕ್ಕೀಡಾದೀತೆಂಬ ಭಯವಿಲ್ಲ. ಆದ್ದರಿಂದ ಅವು ಧಾರ್ಮಿಕ ಶ್ರದ್ಧೆಯುಳ್ಳ ದೆವ್ವಗಳಾದರೆ ಮನಸ್ಸು ಬಂದ ಘಳಿಗೆಯಲ್ಲಿ ಕಾಶಿ ರಾಮೇಶ್ವರಗಳಿಗೆ ಯಾತ್ರೆ ಹೊರಡಬಹುದು. ರಸಿಕ ಅಥವಾ ಸಾಹಸಿ ದೆವ್ವಗಳಾದರೆ, ಇಂದು ರೀವಿಯೇರಾ, ನಾಳೆ ನಯಾಗರಾ ಜಲಪಾತ, ನಾಳಿದ್ದು ತಾಜ್‌ಮಹಲ್–ಯಾವುದನ್ನಾದರೂ ನೋಡಲು ಹೊರಡಬಹುದು. ಬೇಕೆಂದರೆ ಎವರೆಸ್ಟ್ ತುದಿಯಲ್ಲಿ ನಿಂತು ಆ ಶಿಖರವನ್ನೇರಲಾರದೆ ಸತ್ತವರ ಪ್ರೇತಗಳನ್ನು ಹಂಗಿಸಬಹುದು.

ಇಷ್ಟಾದರೂ ಅವುಗಳ ಬುದ್ಧಿಗೆ ಅದೇನು ಮಂಕು ಬಡಿದಿದೆಯೋ, ಅವು ಸತ್ತ ಕಡೆಯೇ ಬಿದ್ದು ಸಾಯುತ್ತವೆ; ಅನುಭವಿಸಿದ ಸಂಕಟವನ್ನೇ ಮತ್ತೆ ಅನುಭವಿಸುತ್ತವೆ. ಒಬ್ಬ ಹೊಳೆಗೆ ಬಿದ್ದು ಸತ್ತನೆನ್ನಿ. ಅವನ ಪ್ರೇತ ಆ ಸ್ಥಳದಲ್ಲೇ ಓಡಾಡುತ್ತಿರಬೇಕು. ಅಲ್ಲಿಗೆ ಬಂದವರನ್ನು ಕೀಟಲೆ ಮಾಡಲು ಮತ್ತೆ ಮತ್ತೆ ಹೊಳೆಗೆ ಬಿದ್ದು ಸಾಯುವ ಆಟವನ್ನು ಆಡಬೇಕು. ಬಾಣಂತಿ ದೆವ್ವವಾದರೆ ಪ್ರಸವ ಗೃಹದ ಬಳಿಯಲ್ಲೇ ಇದ್ದು

ಇತರ ಬಾಣಂತಿಯರನ್ನು ಹೆದರಿಸಬೇಕು. ಕೊಠಡಿಯೊಂದರಲ್ಲಿ ನೇಣುಹಾಕಿಕೊಂಡು ಸತ್ತರೆ, ಅವನ ಪ್ರೇತ ಅಲ್ಲೇ ಇದ್ದು ಬಂದವರೆದುರಿಗೆಲ್ಲಾ ನೇಣು ಹಾಕಿಕೊಂಡು ಸಾಯುವ ದೃಶ್ಯವನ್ನು ಅಭಿನಯಿಸಬೇಕು. ನಾನು ಕೇಳಿರುವ ಕಥೆಗಳೆಲ್ಲಾ ನಿಜವಾದರೆ ಕೆಲವು ದೆವ್ವಗಳು ಶತಮಾನಗಳ ಕಾಲ ಹೀಗೆ ಮಾಡಿದ ಕೆಲಸವನ್ನೇ ಮತ್ತೆ ಮತ್ತೆ ಮಾಡುತ್ತಾ ಬಂದಿವೆ.

ಇದಕ್ಕೆ ಕಾರಣವೇನು? ಯಾವ ನಿಷ್ಠುರ ನಿಯಮ, ಯಾವ ಸುಗ್ರೀವಾಜ್ಞೆ, ಅವುಗಳನ್ನು ಈ ಕಠಿಣ ಸನ್ನಿವೇಶಕ್ಕೆ ಕಟ್ಟಿಹಾಕಿದೆ? ಜೀವನದಲ್ಲಿದ್ದ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನೂ ಅವು ಕಳೆದುಕೊಂಡುವೇಕೆ? ಮಾನವದೇಹಿಯಾಗಿದ್ದಾಗ ಪಡೆದಿದ್ದ ಕಲ್ಪನಾಶಕ್ತಿ, ವೈವಿಧ್ಯಾಕಾಂಕ್ಷೆ, ಸೌಂದರ್ಯಾನುಭವ ಶಕ್ತಿ–ಅದೆಲ್ಲಾ ಎಲ್ಲಿ ಹೋಯಿತು? ಭೌತಶರೀರದ ಕೀಳ್ಸೆಳೆತ ನಿಂತು ಪ್ರಕೃತಿ ಲಘುವಾದ ಮೇಲೆ ಈ ಗುಣಗಳು ಮತ್ತಷ್ಟು ವೃದ್ಧಿಯಾಗಬೇಕಲ್ಲವೆ? ಈ ದೆವ್ವಗಳದ್ದು ಅದೆಂಥ ಯಾಂತ್ರಿಕ ಜೀವನ!

ಅಥವಾ ಅದು ನಿಜವಾಗಿ ಯಾಂತ್ರಿಕ ಜೀವನವೆ? ದೆವ್ವಗಳು ಹಾಗೆ ಆಡುವುದು ನಿರ್ಬಂಧಕ್ಕೆ ಒಳಪಟ್ಟೋ ಅಥವಾ ಸ್ವಾಭಾವಿಕವಾಗಿ ತಮ್ಮಲ್ಲಿರುವ ಗೆಲುವನ್ನು ಹೊರಹಾಕಲು ದಾರಿಕಾಣದೆಯೋ? ದೆವ್ವಗಳ ಚೇಷ್ಟೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಅವುಗಳ 'ಜೀವನ'ದಲ್ಲಿರುವ ಕುಂದುಕೊರತೆಗಳನ್ನು ಗಮನಿಸಬೇಕು. ಅನಂತಕಾಲ ಇದ್ದ ಕಡೆಯಲ್ಲೇ ಇದ್ದು, ಮಾಡಿದ ಕೆಲಸವನ್ನೇ ಮಾಡುತ್ತಾ, ಯಾವ ಸಂಕಟವನ್ನು ಮರೆಯಲು ಪ್ರಾಣಬಿಟ್ಟವೋ ಆ ಸಂಕಟದ ಆವರಣದಲ್ಲೇ ಕೊಳೆಯಬೇಕೆಂದರೆ ಅವುಗಳ ಮನಸ್ಸಿಗೆ ಎಷ್ಟು ಜಿಗುಪ್ಸೆಯಾಗಬೇಕು! ಈ ಅಸಹ್ಯ ಬೇಸರವನ್ನು ಕಳೆಯುವುದು ಹೇಗೆ? ಇತರ ದೆವ್ವಗಳೊಡನೆ ನಕ್ಕು ನಲಿಯುವಂತಿಲ್ಲ. ಅವುಗಳ ಪ್ರಪಂಚದಲ್ಲಿ ಸಂಘಜೀವನ ಬೆಳೆದಂತೆ ತೋರುವುದಿಲ್ಲ. ನಾನು ಕೇಳಿರುವ ದೆವ್ವದ ಕಥೆಗಳೆಲ್ಲಾ ಒಂಟಿ ದೆವ್ವದ ಕಥೆಗಳು.

ಆದ್ದರಿಂದ ಅವು ಬಯಸಿದರೆ ಮಾನವನ ಸಖ್ಯವನ್ನೇ ಬಯಸಬೇಕು. ಆದರೆ ಈ ಪುಕ್ಕಲು ಮಾನವನು ದೆವ್ವದ ಸುಳಿವು ಕಂಡರೆ ಸಾಕು, ಯೋಜನ ದೂರ ಓಡಿ ಹೋಗುತ್ತಾನೆ. ಪೂರ್ವಾಶ್ರಮದಲ್ಲಿ ಆ ಪ್ರೇತ ಯಾರೇ ಆಗಿದ್ದಿರಲಿ– ತಾಯಿ, ತಂದೆ, ಪ್ರೇಯಸಿ, ಮಗು–ಯಾರೇ ಆಗಿದ್ದಿರಲಿ, ಅದರ ಗೊಡವೆ ಮಾನವನಿಗೆ ಬೇಕಿಲ್ಲ. ಆದ್ದರಿಂದ ದೆವ್ವ 'ಸ್ನೇಹ ಸಾಧ್ಯವಿಲ್ಲದಿದ್ದರೆ ಈ ಹೇಡಿಯನ್ನು ಹೆದರಿಸಿ ಕೀಟಲೆ ಮಾಡೋಣ' ಎಂದುಕೊಳ್ಳುತ್ತದೆ. ದೆವ್ವಕ್ಕಿರುವ ಮನೋರಂಜನೆಯ ಮಾರ್ಗ ಒಂದೇ ಒಂದು–ಮಾನವನನ್ನು ಹೆದರಿಸಿ ಕಾಡುವುದು.

ನಿಜವಾಗಿ ನೋಡಿದರೆ ಈ ಚೇಷ್ಟೆಯಲ್ಲಿ ದುರುದ್ದೇಶವೇನೂ ಕಾಣುವುದಿಲ್ಲ. ದೆವ್ವಗಳು ಯಾರನ್ನೋ ಕತ್ತುಹಿಸುಕಿ ಕೊಂದವೆಂದು ಕೇಳಿದ್ದೇನೆ. ಆದರೆ ಇಂಥ ಸಂದರ್ಭಗಳು ಅಪರೂಪ, ಅಂಥ ಕೊಲೆಪಾತಕ ದೆವ್ವಗಳು ತಮ್ಮ ಕುಲಕ್ಕೆ ಅಪವಾದ. ಸಾಮಾನ್ಯವಾಗಿ ಅವುಗಳಿಗೆ ಯಾರನ್ನೂ ಕೊಲ್ಲುವ ಅಪೇಕ್ಷೆಯಿಲ್ಲ. ಕೆಲವು ವೇಳೆ



ಅವು ಕೊಠಡಿಯಲ್ಲಿ ಮಲಗಿದ್ದವನನ್ನು ಹೊತ್ತು ತಂದು ಬಾವಿಯ ಕಟ್ಟೆಯ ಮೇಲೆ ಮಲಗಿಸುತ್ತವೆ–ಬಾವಿಗೆ ಎಸೆಯುವುದಿಲ್ಲ. ಹಾಗೆ ಮಲಗಿಸಿದವರು ನಿದ್ದೆಯಲ್ಲಿ ಹೊರಳಿ ಬಾವಿಗೆ ಬಿದ್ದರೆಂದು ನಾನು ಎಲ್ಲೂ ಕೇಳಿಲ್ಲ. ಬಹುಶಃ ಅವರು ಹಾಗೆ ಬೀಳದಂತೆ ದೆವ್ವ ಕಾವಲು ನಿಂತಿರುತ್ತದೆಯೋ ಏನೊ, ಎಚ್ಚರವಾದಾಗ ಅವರು ಕಕಮಕ ಹಿಡಿದು 'ಇದೇನು ಇಲ್ಲಿ ಮಲಗಿದ್ದೇನೆ!' ಎಂದು ಬೆರಗುಗೊಂಡರೆ ದೆವ್ವಕ್ಕೆ ಸಂತೋಷ. ಇನ್ನು ಕೆಲವು ವೇಳೆ ದೆವ್ವವು ಬೆಂಕಿಯಾಗಿ ಬಂದು ಬಟ್ಟೆಗಳನ್ನು ಸುಡುತ್ತದೆ. ಆದರೆ ಮೈಮೇಲಿರುವ ಬಟ್ಟೆಗಳನ್ನು ಸುಟ್ಟು ಪ್ರಾಣಕ್ಕೆ ಅಪಾಯ ತರುವುದಿಲ್ಲ. ಗಳುವಿನ ಮೇಲೆ ಹರವಿರುವ ಬಟ್ಟೆಗಳನ್ನು ಮಾತ್ರ ಸುಟ್ಟು ತನ್ನ ಚಪಲವನ್ನು ತೀರಿಸಿಕೊಳ್ಳುತ್ತದೆ. ಕಲ್ಲೆಸೆಯುವ ದೆವ್ವಗಳ ಮನೋವೃತ್ತಿಯೂ ಇಂಥದೇ. ಬಾಗಿಲು ಕಿಟಕಿಗಳನ್ನೆಲ್ಲಾ ಮುಚ್ಚಿರುವ ಕೊಠಡಿಯಲ್ಲಿ ಇದ್ದಕ್ಕಿದ್ದ ಹಾಗೆ ಕಲ್ಲುಗಳು ಬೀಳುತ್ತವೆ. ಆದರೆ ಒಂದು ಕಲ್ಲೂ ಅಲ್ಲಿರುವ ಜನರ ಮೇಲೆ ಬೀಳುವುದಿಲ್ಲ. ಒಂದೆರಡು ಕಿಟಕಿಗಳ ಗಾಜುಗಳು ಒಡೆದರೆ ಒಡೆಯಬಹುದು; ಅಷ್ಟೂ ಆಗದಿದ್ದರೆ ದೆವ್ವಕ್ಕೆ ಬೇಸರ ಹೇಗೆ ಕಳೆದೀತು!

ಇದನ್ನೆಲ್ಲ ನೋಡಿದರೆ ಈ ಪ್ರೇತ ಪ್ರಪಂಚವು ಭೂತದಯೆಗೆ ಹೊರತಾದದ್ದೇನೂ ಅಲ್ಲವೆಂದು ಒಪ್ಪಬೇಕಾಗುತ್ತದೆ. ದೆವ್ವಗಳು ಆನಂದ ಪಡೆಯುವುದು ಜನರ ಸಂಕಟದಿಂದಲ್ಲ, ಅವರ ಭಯ ಆಶ್ಚರ್ಯಗಳಿಂದ. ಅವುಗಳ ಮನಸ್ಸು ತುಂಟರಾದ ಮಕ್ಕಳ ಮನಸ್ಸಿನಂತೆ. ಮಕ್ಕಳಿಗೆ ತಮ್ಮ ಚೇಷ್ಟೆಯನ್ನು ನೋಡಿ ದೊಡ್ಡವರು ಪ್ರಶಂಸೆ ಮಾಡಲೆಂದು ಆಸೆ. ಹಾಗೆಯೇ ದೆವ್ವಗಳು ಕಲ್ಲೆಸೆಯುವಾಗ ನಾಲ್ಕು ಜನ ನಿಂತು ನೋಡಿ ಮೂಗಿನ ಮೇಲೆ ಬೆರಳಿಟ್ಟುಕೊಂಡರೆ, ಅಥವಾ ಮಾಂತ್ರಿಕರನ್ನು ಕರೆಸಿ ಮಂತ್ರ ತಂತ್ರದ ಗಲಭೆ ಮಾಡಿಸಿದರೆ ಅವಕ್ಕೆ ತೃಪ್ತಿ. ಅಲ್ಲೊಬ್ಬರು ಇಲ್ಲೊಬ್ಬರು ಅವುಗಳ ಚೇಷ್ಟೆಗೆ ಹೆದರಿ ಜ್ವರ ತಂದುಕೊಂಡು ಪ್ರಾಣ ಒಪ್ಪಿಸಿದರೆ ಅದು ದೆವ್ವಗಳ ತಪ್ಪಲ್ಲ.

ಅವುಗಳ ಉದ್ದೇಶ ಕೆಟ್ಟದ್ದಲ್ಲವೆಂದರೂ ಇಂಥ ಚೇಷ್ಟೆ ಅವಕ್ಕೆ ಗೌರವ ತರತಕ್ಕದ್ದಲ್ಲ. ಅದು ಬಾಲಿಶವೃತ್ತಿ ಎಂದು ಬೇಕಾದರೆ ಒಪ್ಪೋಣ. ಹೀಗೆ ಚೇಷ್ಟೆಮಾಡುವ ದೆವ್ವಗಳು ಅಸಂಸ್ಕೃತ ಚೇತನಗಳೇ ಹೌದು. ಆದರೆ ಎಲ್ಲಾ ದೆವ್ವಗಳೂ ಈ ಬಗೆಯವಲ್ಲ. ಕೆಲವು ಇಹಲೋಕದಲ್ಲಿದ್ದಾಗಲೇ ಸಾಕಾದಷ್ಟು ಸಂಸ್ಕಾರ ಪಡೆದು ಆತ್ಮವನ್ನು ಪರಿಪಕ್ವ ಮಾಡಿಕೊಂಡಿರಬೇಕೆಂದು ತೋರುತ್ತದೆ. ನಮ್ಮೂರಿನಲ್ಲಿ ಕೆಲವು ವರ್ಷದ ಹಿಂದೆ ಗಂಡಹೆಂಡರಿಬ್ಬರೇ ಇದ್ದ ಸಣ್ಣ ಸಂಸಾರವೊಂದಿತ್ತು. ಆ ಮನೆಯ ಯಜಮಾನಿತಿಗೆ ಅತ್ತೆಮಾವಂದಿರಾಗಲಿ, ತಾಯಿ ತಂದೆಯರಾಗಲಿ ಯಾರೂ ದಿಕ್ಕಿಲ್ಲ. ಆಕೆ ಮೊದಲ ಸಾರಿ ಗರ್ಭಿಣಿಯಾಗಿದ್ದಾಗ ನೆರೆಹೊರೆಯ ಹೆಂಗಸರು 'ಏನೇ ನರಸು, ಬಾಣಂತಿತನದ ಸಮಯದಲ್ಲಿ ಕೈನೆರವಾಗಿ ಯಾರಾದರೂ ಇರಬೇಕಲ್ಲಮ್ಮ' ಎಂದಾಗ ಆಕೆ ನಿರಾಶೆಯ ದನಿಯಲ್ಲಿ 'ನನಗೆ ಯಾರು ದಿಕ್ಕು, ಹೇಳು. ದೆವ್ವವೋ ಪಿಶಾಚಿಯೋ ಸಹಾಯ ಮಾಡಬೇಕು. ಅಷ್ಟೆ' ಎಂದಳು. ನೆರೆಮನೆಯಾಕೆ 'ಹಾಗೆಲ್ಲಾ ಮಾತಾಡಬೇಡ ನನ್ನ

ತಾಯಿ. ಇಂಥ ಮಾತಿಗೆಲ್ಲಾ ಪಿಶಾಚಿ ಅಸ್ತು ಎನ್ನುತ್ತದಂತೆ. ನಾವೆಲ್ಲಾ ಇಲ್ಲವೆ? ಕೈಲಾದ ಸಹಾಯ ಮಾಡುತ್ತೇವೆ' ಎಂದರು.

ಮನೆಯಲ್ಲಿದ್ದ ದೆವ್ವಕ್ಕೆ ಈ ಮಾತು ಕೇಳಿಸಿತು. ಅದು 'ಅಸ್ತು' ಎಂದದ್ದು ಮಾತ್ರವಲ್ಲ– ಪ್ರಸವಕಾಲಕ್ಕೆ ಹದಿನೈದು ದಿನ ಮುಂಚೆಯೇ ಇಳಿವಯಸ್ಸಿನ ಹೆಂಗಸಿನ ರೂಪವನ್ನು ತಾಳಿ ಆಕೆಯ ಬಳಿಗೆ ಬಂದು, 'ತಾಯಿ, ನಿಮಗೆ ಸಹಾಯಕ್ಕೆ ಯಾರಾದರೂ ಬೇಕು ಅಂತ ಕೇಳಿದೆ. ನನಗೂ ಯಾರೂ ಗತಿಯಿಲ್ಲ. ನೀನು ಒಪ್ಪುವುದಾದರೆ ಎರಡು ಮೂರು ತಿಂಗಳು ಇಲ್ಲೇ ಇದ್ದು ಮನೆಗೆಲಸವನ್ನೆಲ್ಲಾ ಮಾಡಿಕೊಡುತ್ತೇನೆ. ನನಗೇನು, ಒಪ್ಪೊತ್ತು ಅನ್ನವಾದರೆ ಸಾಕು ಎಂದಿತು. ನರಸಮ್ಮನಿಗೆ ಬೇಕಾಗಿದ್ದದ್ದೂ ಅದೇ. ಅವಳು ಗಂಡನ ಒಪ್ಪಿಗೆಯನ್ನು ಪಡೆದು ಆಕೆಯನ್ನು ಮನೆಯಲ್ಲೇ ಇರಹೇಳಿದಳು.

ಪ್ರಸವವಾದ ಮೇಲೆ ಆ ಮುದುಕಿ ಬಹು ವಿಶ್ವಾಸದಿಂದ ಮಗು ಬಾಣಂತಿಯರಿಗೆ ಉಪಚಾರ ನಡೆಸಿದಳು. ಆಕೆ ನರಸಮ್ಮನಿಗೆ ಒಂದು ಎಚ್ಚರಿಕೆಯನ್ನು ಮಾತ್ರ ಕೊಟ್ಟಿದ್ದಳು. 'ತಾಯಿ, ನೀನು ಯಾವ ಕಾರಣದಿಂದಾಗಲಿ ಅಡಿಗೆ ಮನೆಯ ಕಡೆಗೆ ಮಾತ್ರ ಬರಬೇಡ, ಕಂಡೆಯ. ನೀನು ಹಸಿ ಮೈಯವಳು ಕೊಠಡಿಯಿಂದ ಹೊರಗೆ ಬರಲೇಬಾರದು; ನಿನಗೂ ಮಗುವಿಗೂ ನಂಜಾದೀತು. ಮೂರು ತಿಂಗಳು ಕಳೆದ ಮೇಲೆ ಅಡಿಗೆ ಮನೆಯ ರಾಜ್ಯ ಎಂದಿದ್ದರೂ ನಿನ್ನದೇ. ಅಲ್ಲಿಯವರೆಗೆ ಮಾತ್ರ ಹಲ್ಲು ಕಚ್ಚಿಕೊಂಡಿರು. ಆ ಕಡೆ ಕಾಲಿಡಬೇಡ' ಎಂದು ಹೇಳಿ ನರಸಮ್ಮನಿಂದ ಆಶ್ವಾಸನೆ ಪಡೆದಳು. ನರಸಮ್ಮ ಹಾಗೆಯೇ ನಡೆದುಕೊಂಡಳು. ಮುದುಕಿ ಯಾವುದಕ್ಕೂ ಯಾರ ಕೈಯನ್ನೂ ಕಾಯದೆ ಸುಸೂತ್ರವಾಗಿ ಸಂಸಾರ ನಡೆಸಿಕೊಂಡು ಹೋದಳು.

ಮಗುವಿಗೆ ಎರಡು ತಿಂಗಳಾಗುವ ವೇಳೆಗೆ ನರಸಮ್ಮನಿಗೆ ತನ್ನ ಕೊಠಡಿಯಲ್ಲೇ ಸದಾ ಮಲಗಿರುವುದು ಬೇಸರವಾಗುತ್ತ ಬಂತು. ಅಲ್ಲದೆ ಆ ಮುದುಕಿ ಬೆಳಗಿನಿಂದ ಸಂಜೆಯವರೆಗೂ ಒಂದೇ ಸಮ ದುಡಿಯುತ್ತಾರಲ್ಲ, ಪಾಪ, ಎಂದು ಕನಿಕರ ಹುಟ್ಟಿ, ಸಣ್ಣ ಸಣ್ಣ ಕೆಲಸಗಳಲ್ಲಾದರೂ ಆಕೆಗೆ ನೆರವಾಗಬೇಕು ಎನ್ನಿಸಿತು. ಒಂದು ದಿನ ಬೆಳಗ್ಗೆ ಮಗು ನಿದ್ದೆಯಲ್ಲಿದ್ದಾಗ ತರಕಾರಿ ಹೆಚ್ಚಿಕೊಡೋಣವೆಂದು ಅಡಿಗೆ ಮನೆಯ ಬಳಿಗೆ ಬಂದಳು. ಅಲ್ಲಿ ನೋಡಿದರೆ –ದೇವರ ದೀಪ ಮಂಕಾಗಿ ಉರಿಯುತ್ತಿತ್ತು. ಮುದುಕಿ ಕುಳಿತ ಕಡೆಯಿಂದಲೇ ನಾಲಗೆಯನ್ನು ಎರಡು ಮೊಳದಷ್ಟು ದೂರ ಚಾಚಿ ಉರಿಯುವ ಬತ್ತಿಯನ್ನು ಅದರಿಂದ ಮೀಟಿದಳು. ಆಕೆ ಸೌದೆಗೆ ಬದಲಾಗಿ ತನ್ನ ಕಾಲುಗಳನ್ನೇ ಒಲೆಯೊಳಕ್ಕೆ ಚಾಚಿದ್ದಳು. ಕಾಲುಗಳೆರಡೂ ಒಣಗಿದ ಚುಜ್ಜಲು ಸೌದೆಯಂತೆ ಧಗಧಗನೆ ಉರಿಯುತ್ತಿದ್ದವು! ನರಸಮ್ಮ ಭಯದಿಂದ ಚೀರಿ ಮೂರ್ಛೆ ಹೋದಳು.

ತಿಳಿವು ಬಂದಾಗ ಆಕೆ ತನ್ನ ಕೊಠಡಿಯಲ್ಲೇ ಹಾಸಿಗೆಯ ಮೇಲೆ ಮಲಗಿದ್ದಳು. ಕಣ್ಣು ತೆರೆದು ನೋಡಿದಾಗ ಆಗ ತಾನೆ ಯಾರೋ ಕೊಠಡಿಯನ್ನು ಬಿಟ್ಟುಹೋದಂತೆ ತೋರಿತು. ಮಂಚದ ಬಳಿಯಲ್ಲಿದ್ದ ಕಾಲ್ಮಣೆಯ ಮೇಲೆ ಒಂದು ಲೋಟದಲ್ಲಿ



ಬಿಸಿಬಿಸಿಯಾದ ಮೆಣಸಿನ ಕಷಾಯವಿತ್ತು. ಅದರ ಮಗ್ಗುಲಲ್ಲಿ ಎರಡು ಸೀಸೆಗಳ ತುಂಬ ಲೇಹ್ಯ. ಮಗುವಿನ ತೊಟ್ಟಿಲ ಮೇಲೆ ಹೊಸದೊಂದು ಗಿಣಿಯ ಚಪ್ಪರ ಕಟ್ಟಿದ್ದುದಲ್ಲದೆ ನೆಲದ ಮೇಲೆ ಒಂದು ತೆಂಗಿನ ಗರಿಯ ಬುಟ್ಟಿಯ ತುಂಬ ಎಳೆಮಕ್ಕಳ ಆಟದ ಸಾಮಾನುಗಳಿದ್ದುವು. ಕಷಾಯ ಇನ್ನೂ ಬಿಸಿಯಾಗಿದ್ದುದನ್ನು ನೋಡಿದರೆ, ಆಕೆಗೆ ತಿಳಿವು ಬರುವವರೆಗೂ ದೆವ್ವ ಅಲ್ಲಿಯೇ ಕಾದಿದ್ದು ಆಗ ತಾನೆ ಅದೃಶ್ಯವಾಗಿದ್ದಿರಬೇಕೆಂದು ತೋರಿತು.

ನರಸಮ್ಮ ಕ್ಷಣಕಾಲ ಮಂಕಾಗಿ ಕುಳಿತಿದ್ದಳು. ತಾನು ಹಿಂದೆ 'ದೆವ್ವವೋ ಪಿಶಾಚಿಯೋ ಸಹಾಯ ಮಾಡಬೇಕು' ಎಂದದ್ದು ನೆನಪಾಯಿತು. ಆದರೆ ಈಗ ಅವಳ ಮನಸ್ಸಿನಲ್ಲಿ ಭಯವೇನೂ ಇರಲಿಲ್ಲ. ಗಿಣಿ ಚಪ್ಪರವನ್ನೂ ಆಟದ ಸಾಮಾನನ್ನೂ ನೋಡಿ ಆಕೆಯ ಕಣ್ಣಿನಲ್ಲಿ ನೀರು ಉಕ್ಕಿಬಂತು. ಹಿರಿಯರ ಆಶೀರ್ವಾದವನ್ನು ಸ್ವೀಕರಿಸುವ ಮನೋಭಾವದಿಂದ ಸಿದ್ಧವಾಗಿದ್ದ ಕಷಾಯವನ್ನು ಕುಡಿದಳು. ಅಲ್ಲಿಂದ ಅಡಿಗೆ ಮನೆಗೆ ಹೋಗಿ ನೋಡಿದರೆ, ಅಲ್ಲಿ ಮುದುಕಿ ಇರಲಿಲ್ಲ. ನಂದಾದೀಪದ ಹತ್ತಿರ ಅಚ್ಚ ಹೊಂಬಣ್ಣದ ಹಸುವಿನ ತುಪ್ಪ ತುಂಬಿದ್ದ ಕಂಚು ಮಾತ್ರ ಕಾಣಿಸಿತು. ನರಸಮ್ಮ ಧಾರೆಯಾಗಿ ಕಣ್ಣೀರು ಸುರಿಸುತ್ತಾ ನೆಲಮುಟ್ಟಿ ನಮಸ್ಕಾರ ಮಾಡಿದಳು–ದೇವರಿಗಲ್ಲ, ದೆವ್ವಕ್ಕೆ. 'ದೆವ್ವವಾದರೇನು, ಪಿಶಾಚಿಯಾದರೇನು! ನನ್ನ ತಾಯಿ ಬದುಕಿದ್ದರೆ ತಾನೆ ಇದಕ್ಕಿಂತ ಹೆಚ್ಚಿನ ಆದರವನ್ನೇನು ತೋರಿಸುತ್ತಿದ್ದಳು!' ಎಂದುಕೊಂಡು ಮತ್ತೆ ಮಗುವಿನ ಬಳಿಗೆ ಹೋದಳು. ಆ ತುಪ್ಪದ ಕಂಚು ಇಂದಿಗೂ ಅವರ ಮನೆಯಲ್ಲಿದೆ.

ಈ ಕಥೆ ನಡೆದದ್ದು ತಮ್ಮ ಊರಿನಲ್ಲಿ ಎಂದು ನನ್ನ ಮಿತ್ರರು ಕೆಲವರು ಹೇಳಿದ್ದಾರೆ. ಅಲ್ಲಿಯೂ ನಡೆದಿರಬಹುದು; ಎರಡು ಮೂರು ಕಡೆಗಳಲ್ಲಿ ನಡೆದಿರಬಾರದೇಕೆ? ನಾನು ಕೇಳಿರುವ ನೂರೆಂಟು ದೆವ್ವದ ಕಥೆಗಳಲ್ಲಿ ಇದೊಂದನ್ನು ಬಹು ಸಂತೋಷದಿಂದ ನೆನೆಯುತ್ತೇನೆ. ಎಷ್ಟೋ ಮಾನವರಿಗಿಲ್ಲದ ಮಾನವತೆ ಈ ದೆವ್ವಕ್ಕೆ ಇತ್ತು. ಅದು ಹೆಣ್ಣು ದೆವ್ವವೇ ಇರಬೇಕು. ಮನುಷ್ಯ ಪ್ರಪಂಚದಲ್ಲಿ ಬದುಕಿದ್ದಾಗ ಏನೇನು ಕಷ್ಟವನ್ನು ಅನುಭವಿಸಿತ್ತೋ ತಿಳಿಯದು. ಆ ಕಷ್ಟದಿಂದ ಆಕೆಯ ಹೃದಯ ಕಲ್ಲಾಗದೆ ಮತ್ತಷ್ಟು ಮೃದುವಾಗಿ ಪರಿಪಕ್ವವಾಗಿದ್ದಿರಬೇಕು. ಅದಕ್ಕೆ ಪ್ರೇತತ್ವ ಏಕೆ ಬಂತೋ! ಹೀಗೆ ಸೇವೆಮಾಡಿದ್ದರಿಂದ ಕರ್ಮಫಲ ಬೇಗ ಸವೆದು ಮುಕ್ತಿ ದೊರೆಯಲೆಂದು? ಅಥವಾ ಆ ಚೇತನಕ್ಕೆ ಮುಕ್ತಿ ಬೇಡ ಎನ್ನಿಸಿತೊ? ತಾಯ್ತನದ ನೋವಿಗೆ ನೆರವಾಗುವುದು, ಎಳೆಯ ಜೀವವನ್ನು ಕಾಪಾಡಿ ಅದರ ನಲಿವಿಗೆ ಬೇಕಾದ್ದನ್ನು ಒದಗಿಸುವುದು– ಇಂಥ ಕರ್ಮ ನಿಲ್ಲುವುದಾದರೂ ಏಕೆ? ಇದಕ್ಕಿಂತ ಮುಕ್ತಿಯ ಹೆಚ್ಚುಗಾರಿಕೆಯಾದರೂ ಏನು!

ಇಂಥ ಕಥೆಗಳನ್ನು ಕೇಳಿದಾಗ 'ನಾವು ದೆವ್ವಗಳಿಗೆ ಏತಕ್ಕೆ ಹೆದರಬೇಕು?' ಎಂಬ ಪ್ರಶ್ನೆ ಉದಿಸುವುದು ಸಹಜ. ಮಾನವರು ತಮ್ಮ ತಮ್ಮಲ್ಲಿ ಪ್ರದರ್ಶಿಸುವ ಕುಟಿಲತೆ ಕ್ರೌರ್ಯ ಗಳಿಗಿಂತ ಹೆಚ್ಚಿನ ಕ್ರೌರ್ಯವೇನುಂಟು, ಈ ಬಯಲು ಚೇತನಗಳಲ್ಲಿ?

ನಮಗಿಂತ ಅವೇ ಸಾವಿರ ಪಾಲು ವಾಸಿ ಎಂದರೂ ಎನ್ನಬಹುದು. ಆದರೂ ದೆವ್ವಗಳೆಂದರೆ ನಮಗೆ ಮೈ ನಡುಕ, ತಪ್ಪದು. ಅಷ್ಟು ಮಾತ್ರವಲ್ಲ, ಆ ನಡುಕ ಭಯಜನ್ಯವಾದ ರೋಮಾಂಚ, ನಮಗೆ ಹೇಗೋ ಪ್ರಿಯವೂ ಆಗುತ್ತದೆ. ದೈವಿಕ ವಿಷಯಗಳಲ್ಲಿ ನಂಬಿಕೆ ಶ್ರದ್ಧೆಗಳಿಲ್ಲದಿದ್ದರೆ ಹೇಗೆ ಜೀವನ ನಿಸ್ಸಾರವೆಂದು ತೋರುತ್ತದೋ ದೆವ್ವಗಳ ವಿಷಯಗಳಲ್ಲಿ ಹಾಗೆಯೇ. ಇಂದ್ರಿಯಗೋಚರವಾದ ವಿಷಯಗಳಲ್ಲಿ ನಮ್ಮೆಲ್ಲರಿಗೂ ಆಸಕ್ತಿಯುಂಟು. ನಮ್ಮ ದಿನದಿನದ ಜೀವನದಲ್ಲಿ ಆ ಬಗೆಯ ನಂಬಿಕೆಗಳ ಪರಿಣಾಮವುಂಟೋ ಇಲ್ಲವೋ, ಅದು ಬೇರೆ ಮಾತು. ದೇವರಿಲ್ಲ ಎಂಬ ಮಾತಿಗೆ ಎಷ್ಟು ಪ್ರತಿಭಟನೆಯುಂಟೋ ದೆವ್ವವಿಲ್ಲ ಎಂದರೂ ಅಷ್ಟೇ ಪ್ರತಿಭಟನೆ ಬರಬಹುದು. ದೆವ್ವಗಳಿವೆಯೆಂದರೆ ನಮ್ಮ ಕಲ್ಪನಾಶಕ್ತಿಯ ಕೆಲಸಕ್ಕೆ ಸಾಮಗ್ರಿ ದೊರೆತಂತಾಗುತ್ತದೆ. ಅದರ ವಿಷಯ ಕಥೆಯನ್ನು ಕಟ್ಟಬಹುದು, ಅದಕ್ಕೊಂದು ರೂಪ ಕೊಡಬಹುದು. ಜೀವನದಲ್ಲಿ ಅದ್ಭುತವಾದ ವ್ಯಾಪಾರ ನಡೆಯಬಹುದೆಂದು, ಕಾರ್ಯಕಾರಣ ನಿಯಮವನ್ನು ಮೀರಿದ್ದು ಏನೋ ಇದೆಯೆಂದು–ಅದೇ ಒಂದು ಆನಂದ. ಆದ್ದರಿಂದ ದೆವ್ವಗಳಿಲ್ಲವೆಂದು ನಿಸ್ಸಂದೇಹವಾಗಿ ಸಮರ್ಥಿಸಿಕೊಡುವವರು ಯಾರಾದರೂ ಬಂದರೂ ಅವರ ಬಾಯಿ ಕಟ್ಟಬೇಕು ಎನ್ನಿಸುತ್ತದೆ.

ನನ್ನ ಜೀವನದಲ್ಲೇನೂ ನಾನು ದೆವ್ವಗಳಿಗೆ ಹೆದರಿ ಯಾವ ಕೆಲಸವನ್ನೂ ನಿಲ್ಲಿಸಿಲ್ಲ. ಯಾವ ಕಾರ್ಯಕ್ರಮವನ್ನೂ ಬದಲಾಯಿಸಿಲ್ಲ. ನಾನು ಈ ವಿಷಯದಲ್ಲಿ ಧೈರ್ಯಸ್ಥನೇ ಹೌದು. ಆದರೂ ಭೂತಪ್ರೇತಾದಿಗಳ ಭಯವನ್ನು ಅನುಭವಿಸಿಯೇ ಇಲ್ಲವೆಂದು ಹೇಳಲಾರೆ. ರಾತ್ರಿಯ ಹೊತ್ತು ಖುದ್ದು ರಾಜಿಯಿಂದ ದೆವ್ವದ ಕತೆಗಳನ್ನು ಓದಿದ್ದೇನೆ. ಮದ್ಯಪಾಯಿಯು ಆಲ್ಕೊಹಾಲಿನ ಅಮಲಿನಲ್ಲಿ ಓಲಾಡುವಂತೆ ನಾನೂ ಭಯದ ಅಮಲಿನಲ್ಲಿ ಓಲಾಡಿದ್ದೇನೆ. ಅಂಥ ಕಥೆಗಳನ್ನು ಓದುವಾಗ ಮನಸ್ಸಿನ ಸಂದೇಹ ಪ್ರವೃತ್ತಿಯನ್ನು ನಿರ್ದಾಕ್ಷಿಣ್ಯವಾಗಿ ಹೊರದೂಡಿ ಕಥೆಯ ರೋಮಾಂಚಕಾರಕ ಶಕ್ತಿ ಕುಂಠಿತವಾಗದಂತೆ ನೋಡಿಕೊಳ್ಳುತ್ತೇನೆ.

ಕಥೆ ಕಾದಂಬರಿಗಳಿಂದ ಉತ್ಪನ್ನವಾಗುವ ಭಯದ ಅನುಭವವೇ ಬೇರೆ, ನಿಜಜೀವನದಲ್ಲಿ ಆಗುವ ಅನುಭವವೇ ಬೇರೆ, ಎನ್ನುವುದೇನೋ ನಿಜ. ಆದರೆ ಜೀವನದ ಭಯಾನುಭವ ಆ ಘಳಿಗೆಗೆ ಹಿತವಾಗಿ ತೋರದಿದ್ದರೂ ಕೆಲವು ದಿನ ಕಳೆದ ನಂತರ ಅದನ್ನು ಇತರರಿಗೆ ಹೇಳುವಾಗ ಆನಂದ ಕೊಡುತ್ತದೆ. ದೆವ್ವವನ್ನು ನಂಬುವವರು, ನಂಬದವರು, ಯಾರೇ ಆಗಲಿ ಹಾಡುಹಗಲಿನಲ್ಲಿ ಇತರ ಮಾನವರ ಜೊತೆಯಲ್ಲಿರುವಾಗ ಹೆದರುವುದಿಲ್ಲ. ಆದರೆ ರಾತ್ರಿಯ ಕತ್ತಲಲ್ಲಿ, ನಿರ್ಜನವಾದ ಸ್ಥಳದಲ್ಲಿ, ಬಹುಕಾಲ ಜನರ ಸುಳಿವನ್ನೇ ಕಾಣದ ಹಳೆಯ ಮನೆಗಳಲ್ಲಿ, ರಾತ್ರಿಯನ್ನು ಒಂಟಿಯಾಗಿ ಕಳೆಯಬೇಕೆಂದರೆ, ಆಗಿನ ಮಾತು ಬೇರೆ. ಆಗಲೂ ದೆವ್ವಗಳ ನೆನಪು ಬರದಿದ್ದರೆ ಭಯವಿಲ್ಲ; ನೆನಪು ಬಂದಿತೋ, ರಕ್ತ ತಣ್ಣಗಾಗಲು ಪ್ರಾರಂಭವಾಗುತ್ತದೆ.

ಒಂದು ದಿನ ಸಂಜೆ ಮಿತ್ರರೊಡನೆ ಮೈಸೂರಿನ ಕುಕ್ಕರಹಳ್ಳಿ ಕೆರೆಯ ಏರಿಯ



ಮೇಲೆ ಸಂಚಾರ ಹೊರಟಿದ್ದೆ. ಮಾತು ಹೇಗೋ ದೆವ್ವಗಳ ಕಡೆಗೆ ಹೊರಳಿತು. ನಮ್ಮಿಬ್ಬರಿಗೂ ದೆವ್ವಗಳಲ್ಲಿ ನಂಬಿಕೆಯಿಲ್ಲ. ಆದರೆ ಅವುಗಳ ಕಥೆಗಳನ್ನು ಹೇಳುವುದರಲ್ಲೂ ಕೇಳುವುದರಲ್ಲೂ ಆಸಕ್ತಿ. ನನ್ನ ಮಿತ್ರರು ಮದರಾಸಿನಲ್ಲಿ 'ನಡೆದ' ಒಂದು ಸಂಗತಿಯನ್ನು ಹೇಳಿದರು. ಸುಮಾರು ಇಪ್ಪತ್ತು ವರುಷಗಳ ಹಿಂದಿನ ಮಾತು. ಬೇಸಗೆಯ ಸಂಜೆ ಫ್ರೀಮನ್ ಎಂಬ ವರ್ತಕ ಮೆರೀನಾ ಬೀಚಿನಲ್ಲಿ ಹವಾಸೇವನೆಗಾಗಿ ಹೊರಟಿದ್ದ. ಸೂರ್ಯಾಸ್ತವಾಗಿ ಸ್ವಲ್ಪ ಹೊತ್ತು ಕಳೆದಿತ್ತು. ಚೌತಿಯ ಚಂದ್ರನ ಅಸ್ಪಷ್ಟ ಬೆಳಕು. ಸಮುದ್ರ ತೀರದ ಮರಳಿನ ಮೇಲೆ ಗುಂಪು ಗುಂಪಾಗಿ ಕುಳಿತಿದ್ದ ಜನರೆಲ್ಲಾ ಮನೆಗೆ ಹೊರಟು ಹೋಗಿದ್ದರು. ದೂರದಿಂದ ಯಾರೋ ದೋಣಿಯವರು ಮಾತಾಡಿಕೊಳ್ಳುತ್ತಿದ್ದ ಸದ್ದು ಮಾತ್ರ ಅಲೆಗಳ ಮೊರೆತದೊಡನೆ ಆಗಾಗ ಕೇಳಿಬರುತ್ತಿತ್ತು. ಫ್ರೀಮನ್ ಅಲ್ಲೇ ಒಂದು ಪೀಠದ ಮೇಲೆ ಗಾಳಿಗೆ ಮೈಯೊಡ್ಡಿ ಕುಳಿತ. ಸ್ವಲ್ಪ ಹೊತ್ತು ಕಳೆಯುವುದರೊಳಗೆ ಮತ್ತೊಬ್ಬ ಯಾರೋ ತನ್ನ ಕಡೆಗೆ ನಡೆದು ಬಂದದ್ದು ಕಾಣಿಸಿತು. ಆ ವ್ಯಕ್ತಿ ಹತ್ತಿರ ಬಂದು ಫ್ರೀಮನ್ನಿಗೆ 'ಗುಡ್ ಈವಿನಿಂಗ್' ಹೇಳಿ ಅಲ್ಲಿಯೇ ಕುಳಿತುಕೊಂಡ. ಅಪರಿಚಿತನಾದವನು ಹೀಗೆ ಸಲಿಗೆಯಿಂದ ಹತ್ತಿರ ಕುಳಿತದ್ದು ಫ್ರೀಮನ್ನಿಗೆ ಹಿತವಾಗದಿದ್ದರೂ ಮರ್ಯಾದೆಗಾಗಿ ಆತನೊಡನೆ ಮಾತಿಗೆ ತೊಡಗಿದ್ದ. ಸ್ವಲ್ಪ ಹೊತ್ತು ಲೋಕಾಭಿರಾಮವಾದ ಮಾತು ನಡೆದ ಮೇಲೆ ಆ ಅಪರಿಚಿತ ತನ್ನ ಚರಿತ್ರೆಯನ್ನು ಹೇಳಿದ. 'ನಾನು ಮದರಾಸಿಗೆ ಬಂದದ್ದು ಮೂವತ್ತು ವರ್ಷಗಳ ಕೆಳಗೆ. ಹೆಂಡತಿಯೊಡನೆ ಬಂದು ಇಲ್ಲೇ ಸಂಸಾರ ಹೂಡಿದೆ. ಒಂದೆರಡು ವರ್ಷ ಸುಖವಾಗಿಯೇ ಇದ್ದೆವು. ಅನಂತರ ನನ್ನ ಹೆಂಡತಿ ಯಾವನೋ ಯುವಕನೊಡನೆ ಸ್ನೇಹ ಬೆಳಸಿದಳು. ನನಗೆ ಸ್ವಲ್ಪ ಸಂಶಯ ಹುಟ್ಟಿದ್ದು ಆ ಯುವಕನಿಗೆ ಗೊತ್ತಾಯಿತು. ಹೊಂಚು ಕಾಯುತ್ತಿದ್ದು ಒಂದು ದಿನ ನಾನು ಬೀಚಿನಲ್ಲಿ ಹೋಗುತ್ತಿದ್ದಾಗ ನನ್ನನ್ನು ಕೊಂದು ಇಗೋ ಈ ಜಾಗದಲ್ಲೇ ಹೂಳಿದ.'

ಆತ ತನ್ನ ಹೆಂಡತಿಯ ಮಾತು ಆಡುತ್ತಿದ್ದಾಗ ಆಸಕ್ತಿ ತೋರಿಸುವುದು ಉಚಿತವಲ್ಲವೆಂದು ಕತ್ತು ಬಗ್ಗಿಸಿ ಕಥೆ ಕೇಳುತ್ತಿದ್ದ ಫ್ರೀಮನ್ 'ನನ್ನನ್ನು ಕೊಂದು ಇಲ್ಲೇ ಹೂಳಿದ' ಎಂಬ ಮಾತನ್ನು ಕೇಳಿದಾಗ ಚಕಿತನಾಗಿ ಕತ್ತೆತ್ತಿ ನೋಡಿದರೆ– ಆ ಅಪರಿಚಿತ ವ್ಯಕ್ತಿ ಅದೃಶ್ಯನಾಗಿದ್ದ!*

ಕೆರೆಯ ಏರಿಯ ಮೇಲೆ ಎಂಟು ಎಂಟೂವರೆ ಘಂಟೆವರೆಗೂ ಕಾಲ ಕಳೆಯುವುದು ನನ್ನ ಪದ್ಧತಿ. ಮೇಲಿನ ಕಥೆ ಹೇಳಿದ ನನ್ನ ಮಿತ್ರರು ಸ್ವಲ್ಪ ಮುಂಚೆಯೇ ಹೊರಟುಹೋದರು. ನಾನು ಒಂಟಿಯಾಗಿ ಕಾಲು ಘಂಟೆ ಕಳೆಯುವುದರೊಳಗೇ ಮನಸ್ಸಿನಲ್ಲಿ ಭಯ ಹೊಗೆಯಾಡಲಾರಂಭಿಸಿತು. ಆಗ ಕೆರೆಯಲ್ಲಿ ಏರಿಯ ಮೇಲೆ ದೀಪಗಳಿರಲಿಲ್ಲ. ಅಷ್ಟು ಹೊತ್ತಿನಲ್ಲಿ ಅಲ್ಲಿ ಜನ ಸಂಚಾರವೂ ಇಲ್ಲ. ಆ ಕೆರೆಯಲ್ಲಿ

---

* ನನಗೆ ಈ ಕಥೆಯನ್ನು ಹೇಳಿದ ಮಿತ್ರರು ಇದನ್ನು ಸಣ್ಣಕಥೆಯಾಗಿ ಬರೆದಿದ್ದಾರೆ.

ಈಜಲು ಬಂದವರೆಷ್ಟೋ ಜನ ದುರ್ಮರಣಕ್ಕೆ ಈಡಾಗಿದ್ದಾರೆ. ಅದೇ ಸನ್ನಿವೇಶದಲ್ಲೇ ನಾನು ಎಷ್ಟೋ ದಿನ ನಿರಾತಂಕನಾಗಿ ಕುಳಿತಿದ್ದದ್ದುಂಟು. ಆ ದಿನ ಮಾತ್ರ ಇದ್ದಕ್ಕಿದ್ದ ಹಾಗೇ ಭಯ ಕವಿಯುತ್ತ ಬಂತು. ಪೀಠದ ಮಗ್ಗುಲಲ್ಲಿದ್ದ ಪೊದೆಗಳಿಂದ ಯಾವ ಘಳಿಗೆಯಲ್ಲಿ ದೆವ್ವ ಇಣಕಿನೋಡುತ್ತದೆಯೋ ಎಂಬ ಪಿಕೀಲು. 'ಛೇ, ಇದೇನು ಮನೋದೌರ್ಬಲ್ಯ! ಇದಕ್ಕೆ ಅವಕಾಶ ಕೊಡಬಾರದು' ಎಂದು ನನ್ನನ್ನು ನಾನೇ ಹಳಿದುಕೊಂಡು ಮೊಂಡುತನದಿಂದ ಅಲ್ಲೇ ಕುಳಿತೆ. ಆದರೆ ಏನು ಮಾಡಿದರೂ ಮನಸ್ಸು ಹದಕ್ಕೆ ಬರಲೊಲ್ಲದು. ಆಗ ನಾನು ಬೇಡುತ್ತಿದ್ದ ವರ ಒಂದೇ: ಎಲ್ಲಿಂದಲಾದರೂ ನನ್ನಂತೆ ಮಾನವನವಾದವನ ಕಂಠಸ್ವರ ಕೇಳಿ ಬರಲೆಂದು. ಆದರೆ ಸುತ್ತ ಎಲ್ಲ ನೀರವ; ದನಗಳ ಕೊರಳಿನ ಘಂಟೆಯ ಸದ್ದು ಸಹ ಕೇಳಿಬರಲಿಲ್ಲ. ಕೊನೆಗೆ ತನ್ನ ಸ್ವಂತ ದನಿಯಾದರೂ ಕಿವಿಗೆ ಬೀಳಲೆಂದು ಗಟ್ಟಿಯಾಗಿ ಹಾಡಿಕೊಳ್ಳಲಾರಂಭಿಸಿದೆ. ಸುತ್ತಲಿನ ನಿಶ್ಶಬ್ದದಲ್ಲಿ ನನ್ನ ದನಿ ವಿಕಾರವಾಗಿ ಕಂಡಿತು; ಒಂದು ಸ್ವರವೂ ಸರಿಯಾಗಿ ಹೊರಡಲೊಲ್ಲದು. ಭಯವೊಂದು ಮಾತ್ರ ಕ್ಷಣಕ್ಷಣಕ್ಕೂ ಏರುತ್ತಿತ್ತು. ಇನ್ನು ಇಲ್ಲಿ ಅರ್ಧ ದಾರಿ ನಡೆದ ಮೇಲೆ ಅಕಸ್ಮಾತ್ ಏರಿಯ ಕೆಳಗಿರುವ ಮಂಟಪದ ಕಡೆಗೆ ದೃಷ್ಟಿ ಹೊರಳಿತು. ನೋಡಿದರೆ–ಆ ಮಂಟಪದ ತಾರಸಿಯ ತುದಿಯಲ್ಲಿ ಮಹಾರಾಜರ ಚಿತ್ರಗಳಲ್ಲಿ ಕಾಣಬರುವಂಥ ಗೌನು, ರುಮಾಲು, ಶಿರಪೇಷ್‌ಗಳನ್ನು ಧರಿಸಿ ಯಾವನೋ ಒಬ್ಬ ಠೀವಿಯಿಂದ ನಿಂತಿದ್ದಾನೆ! ಆ ಕತ್ತಲೆಯ ಹೊತ್ತಿನಲ್ಲಿ ಅಂಥ ಪೋಷಾಕನ್ನು ಧರಿಸಿ ಮಂಟಪವನ್ನು ಹತ್ತಿ ಅಲ್ಲಿ ನಿಲ್ಲುವ ಹುಚ್ಚು ಯಾರಿಗೆ ತಾನೆ ಹಿಡಿದೀತು! ಅದು ದೆವ್ವವೇ ಇರಬೇಕಲ್ಲವೆ? ನನ್ನ ಎದೆ ಝುಗ್ಗೆಂದಿತು. ದೆವ್ವಗಳು ಮನುಷ್ಯನನ್ನು ಕಾಣಲು ಬಂದಾಗ ಮೊದಲು ಅವನ ಕೈಬೆರಳುಗಳನ್ನು ನೋಡುತ್ತವೆಯಂತೆ. ಬೆರಳುಗಳು ನಡುಗುತ್ತಿದ್ದರೆ ಮನುಷ್ಯ ಹೆದರಿದ್ದಾನೆಂದು ತಿಳಿದು ಅವನಿಗೆ ಗಂಟು ಬೀಳುತ್ತವೆ. ಇಲ್ಲದಿದ್ದರೆ, 'ಇವನನ್ನು ಪೀಡಿಸಿ ಪ್ರಯೋಜನವಿಲ್ಲ' ಎಂದುಕೊಂಡು ಬೇರೆ ಯಾವುದಾದರೂ ಬೇಟೆಯನ್ನು ಹುಡುಕಿಕೊಂಡು ಹೋಗುತ್ತವೆ. ಇಂಥ ಕಥೆಗಳನ್ನು ನಾನು ಸಾವಿರ ಬಾರಿ ಹಾಸ್ಯ ಮಾಡಿದ್ದೇನೆ. ಆದಿನ ಮಾತ್ರ ಇದನ್ನು ನೆನೆದು ಕೈಗಳನ್ನು ಮುಷ್ಠಿ ಕಟ್ಟಿ ಜೇಬಿನೊಳಕ್ಕೆ ಹಾಕಿಕೊಂಡೆ!

ಸ್ವಲ್ಪ ಹೊತ್ತು ಅಲ್ಲೇ ನಿಂತು ಆ ವ್ಯಕ್ತಿಯನ್ನು ದಿಟ್ಟಿಸಿ ನೋಡಿದೆ. ಅದು ಅಲುಗಾಡಿದ ಚಿಹ್ನೆಯೇ ಕಾಣಲಿಲ್ಲ. ಅಲ್ಲಿಂದ ಹತ್ತು ಹೆಜ್ಜೆ ಮುಂದೆ ಹೋಗಿ ಮತ್ತೆ ಆ ಕಡೆ ತಿರುಗಿದಾಗ ಅದರ ಗುಟ್ಟು ತಿಳಿಯಿತು. ಅದು ಮಂಟಪದ ಪ್ಯಾರಪೆಟ್ ಗೋಡೆಯ ವೈಖರಿಯೇ ಹೊರತು ಮತ್ತೇನೂ ಅಲ್ಲ. ಮುಂಭಾಗದಲ್ಲಿ ಅಲಂಕಾರವಾಗಿ ಕಾಣಲೆಂದು ಅಲ್ಲಿ ಮಾತ್ರ ಗೋಡೆಯನ್ನು ಎತ್ತರಿಸಿ ತ್ರಿಕೋಣಾಕಾರವಾಗಿ ಕಟ್ಟಿ ತುದಿಯಲ್ಲಿ ಕಲಶವನ್ನು ನಿರ್ಮಿಸಿದ್ದರು. ಆ ಕಲಶವೇ ನನಗೆ ರುಮಾಲು ಶಿರಪೇಷ್‌ಗಳಂತೆ ಕಂಡದ್ದು, ಎದುರಿನಿಂದ ನೋಡಿದರೆ ಅದು ಗೋಡೆ. ಏರಿಯ ಮೇಲೆ ಅದೊಂದು ಸ್ಥಳದಲ್ಲಿ ನಿಂತು ಪಕ್ಕದಿಂದ ನೋಡಿದರೆ ಮನುಷ್ಯನಂತೆ ಕಾಣುತ್ತದೆ. ಆ ದೃಶ್ಯ ಹಿಂದೆ



ಯಾವಾಗಲೂ ನನ್ನ ಅನುಭವಕ್ಕೆ ಬಂದಿರಲಿಲ್ಲ.

ನನ್ನ ಹುಚ್ಚಿಗೆ ನಾನೇ ನಗುತ್ತಾ ಮುಂದಕ್ಕೆ ಹೊರಟು ಒಗೆದ ಬಟ್ಟೆಗಳನ್ನು ಕೈಯಲ್ಲಿ ಹಿಡಿದು ಕೆರೆಯ ದಡದಿಂದ ಏರಿಯನ್ನು ಹತ್ತಿ ಬರುತ್ತಿದ್ದವನೊಬ್ಬನನ್ನು ಕಂಡೆ. ಮನಸ್ಸಿಗೆ ಧೈರ್ಯವಾಯಿತು. ಆದರೆ ಮರುಕ್ಷಣದಲ್ಲಿಯೇ ಆ ಮದರಾಸಿನ ದೆವ್ವದ ನೆನಪಾಗಿ ಮತ್ತೆ ಮೈ ನಡುಗಿತು. ಆತ ದೆವ್ವವಲ್ಲ, ಮನುಷ್ಯ, ಎಂಬ ಭರವಸೆ ಏನುಂಟು? ಅವನೊಡನೆ ಮಾತಿಗೆ ನಿಂತರೆ 'ಇಲ್ಲೇ ನಾನು ಕಾಲು ಜಾರಿ ಬಿದ್ದು ಸತ್ತೆ' ಎನ್ನುತ್ತಾನೋ ಏನೊ! ನನ್ನ ಕೈಗಳು ಮತ್ತೆ ಜೇಬಿನೊಳಕ್ಕೆ ಇಳಿದವು. ಈ ಸಾರಿ ನಾಚಿಕೆ ಹೇಸಿಗೆ ಎಲ್ಲವನ್ನೂ ಬಿಟ್ಟು ಓಡಲಿಲ್ಲ, ವೇಗವಾಗಿ ಮುಂದೆ ನುಗ್ಗಿದೆ. ಹಿಂದಿರುಗಿ ನೋಡಬಾರದೆಂದು ಎಷ್ಟು ಮನಸ್ಸು ಗಟ್ಟಿಮಾಡಿಕೊಂಡರೂ ಕತ್ತು ತಾನಾಗಿ ಹಿಂದಿರುಗುತ್ತಿತ್ತು. ಆತ ಹಿಂದೆಯೇ ಬರುತ್ತಿದ್ದ, ಅದೃಶ್ಯನಾಗಲಿಲ್ಲ. ಐದು ನಿಮಿಷ–ನನ್ನ ಭಾಗಕ್ಕೆ ಒಂದು ಯುಗ–ಕಳೆಯುವುದರೊಳಗೆ ರೈಲು ರಸ್ತೆಯ ಮಗ್ಗುಲಲ್ಲಿದ್ದ ಕಾವಲುಗಾರನ ಮನೆ ಸಿಕ್ಕಿತು. ಬಾಗಿಲಲ್ಲೇ ಇದ್ದ ಕಾವಲುಗಾರನನ್ನು ಏನೋ ನೆಪ ತೆಗೆದು ಮಾತನಾಡಿಸಿದೆ. ಮನುಷ್ಯನೆಂದು ನಂಬಿಕೆ ಬಂತು.

ನನಗೆ ಇದಕ್ಕಿಂತ ವಿಚಿತ್ರವಾದ ಇನ್ನೊಂದು ಅನುಭವವಾಗಿದೆ. ಮೈಸೂರಿಗೆ ಏಳು ಮೈಲಿ ದೂರದಲ್ಲಿರುವ ಇಲವಾಲದ ಬೋರೆಯ ಮೇಲೆ ಹಳೆಯ ಬಂಗಲೆಯೊಂದಿದೆ. ನಾವು ಆಗಿಂದಾಗ ಶನಿವಾರ ಭಾನುವಾರ ಅಲ್ಲಿಗೆ 'ಪಿಕ್‌ನಿಕ್ ಪಾರ್ಟಿ' ಮಾಡಿಕೊಂಡು ಹೋಗಿ ಎರಡು ದಿನ ಇದ್ದು ಬರುವುದುಂಟು. ಅದರ ಸುತ್ತ ಒಂದು ಮೈಲಿ ಫಾಸಲೆಯಲ್ಲಿ ಯಾವ ಮನೆಯೂ ಇಲ್ಲ. ಕಾಡು ಪ್ರದೇಶ. ಹುಲಿ ಕರಡಿಗಳ ಕಾಟವಿಲ್ಲದಿದ್ದರೂ ಅಲ್ಲಿ ಆಗಾಗ ಚಿರತೆಗಳು ಕಾಣಿಸಿಕೊಳ್ಳುತ್ತವೆಯಂತೆ. ಹಿಂದೆ ಕೊಡಗಿನ ಛೀಫ್ ಕಮೀಷನರೇ ಮೈಸೂರಿನ ರೆಸಿಡೆಂಟರಾಗಿದ್ದಾಗ ದಾರಿಯಲ್ಲಿ ತಂಗುವುದಕ್ಕೆಂದು ಆ ಬಂಗಲೆಯನ್ನು ಕಟ್ಟಿಸಿದರಂತೆ. ದೇಶೋವಿಶಾಲವಾದ ಕಟ್ಟಡ. ಅದರ ಮಧ್ಯದಲ್ಲಿ ದೊಡ್ಡದೊಂದು ನಡುಮನೆಯಿದೆ. ಅಲ್ಲಿಂದ ಎರಡು ಕಡೆಗಳಲ್ಲೂ ಹಕ್ಕಿಯ ರೆಕ್ಕೆಗಳಂತೆ ಕಟ್ಟಡ ಹರಡಿದೆ. ರೆಕ್ಕೆಗಳ ಎರಡು ತುದಿಗಳಲ್ಲೂ ಎರಡೆರಡು ಕೊಠಡಿಗಳು. ನಡುಮನೆಯಿಂದ ಕೊಠಡಿಗಳಿಗೆ ಹೋಗಬೇಕಾದರೆ ಸುಮಾರು ಮೂವತ್ತು ನಲವತ್ತು ಅಡಿ ಉದ್ದವೂ ಐದಾರು ಅಡಿ ಅಗುಲವೂ ಉಳ್ಳ ಕತ್ತಲು ಕತ್ತಲಾದ ದಾರಿಯನ್ನು ತುಳಿಯಬೇಕು. ಹಳೆಯ ಕಾಲದ ಕಟ್ಟಡ. ಅದರ ಒಂದೊಂದು ಗೋಡೆಯೂ ಒಂದೊಂದು ವಿಚಿತ್ರವಾದ ಕಥೆಯನ್ನು ಹೇಳಬಹುದು ಎನ್ನಿಸುತ್ತದೆ. ಹಗಲು ಹೊತ್ತಿನಲ್ಲಿ ಸಹ ಅಲ್ಲಿ ಒಬ್ಬೊಬ್ಬರೇ ಇರುವುದು ಕಷ್ಟವೆನ್ನಿಸಬಹುದು. ನಮಗೇನೋ ಬಳಕೆಯಿಂದ ಅಲ್ಲಿರುವುದೆಂದರೆ ಸರ್ವಸಾಧಾರಣವಾಗಿಹೋಗಿತ್ತು.

ಒಂದು ಬಾರಿ ನಾವು ಹತ್ತು ಹನ್ನೆರಡು ಜನ ಆ ಬಂಗಲೆಯಲ್ಲಿ ಎರಡು ದಿನ ತಂಗಬೇಕೆಂದು ಹೊರಟೆವು. ನಮ್ಮ ಗುಂಪಿನಲ್ಲಿ ಸ್ವಲ್ಪ ಪುಕ್ಕಲು ಸ್ವಭಾವದರೊಬ್ಬರಿದ್ದರು.

ನಾನೂ ನನ್ನ ಮಿತ್ರರೊಬ್ಬರೂ ಚೇಷ್ಟೆಗಾಗಿ ಆತನನ್ನು ಹೆದರಿಸಲು ದೆವ್ವದ ಕಥೆಯೊಂದನ್ನು ಕಟ್ಟಿದೆವು:

ಆ ಬಂಗಲೆಯನ್ನು ಕಟ್ಟಿದ ಹೊಸದರಲ್ಲಿ ಒಂದು ಬಾರಿ ರೆಸಿಡೆಂಟರ ಪಾರ್ಟಿ ಮಡಿಕೇರಿಯಿಂದ ಬೆಂಗಳೂರಿಗೆ ಹೊರಟು ಆ ಬಂಗಲೆಯಲ್ಲಿ ಇಳಿದಿತ್ತು. ಆ ದಿನ ರಾತ್ರಿ ಮೈಸೂರಿನ ದೊಡ್ಡ ಮನುಷ್ಯರು ಕೆಲವರು ಆಂಗ್ಲರಿಗೆ ಭಾರಿ ಔತಣವನ್ನು ಏರ್ಪಡಿಸಿದ್ದರು. ಮದ್ಯದ ಕೋಡಿಯೇ ಹರಿಯಿತು. ಭೋಜನವಾದ ಮೇಲೆ ಆ ನಡುಮನೆಯಲ್ಲೇ ನೃತ್ಯದ ಏರ್ಪಾಡಿತ್ತು. ಆಂಗ್ಲರಲ್ಲಿ ಜೊತೆ ಜೊತೆಯಾಗಿ ನರ್ತಿಸುವ ಗಂಡುಹೆಣ್ಣುಗಳು ಗಂಡ–ಹೆಂಡತಿಯರೇ ಆಗಿರಬೇಕೆಂಬ ನಿಯಮವಿಲ್ಲವಷ್ಟೆ. ಮಾರ್ಟಿಹ್ಯಾರಿಸನ್ ಎಂಬೊಬ್ಬ ಯುವಕ (ಅವನು ಸೈನ್ಯದಲ್ಲಿ ಕ್ಯಾಪ್ಟನ್) ಮತ್ತು ಮೇರಿ ಎಂಬ ಯುವತಿ, ಇಬ್ಬರೂ ನೃತ್ಯದಲ್ಲಿ ಮೈಮರೆತಿದ್ದರು. ಮೇರಿಯ ಗಂಡ–ಮೆಕ್‌ನಿಕಾಲ್–ಇಳಿವಯಸ್ಸಿನವನು. ಆಕೆ ಕೆಲವು ಕಾಲದಿಂದ ಮಾರ್ಟಿಯ ಜೊತೆ ಓಡಿಯಾಡುವುದು ಸ್ವಲ್ಪ ಹೆಚ್ಚಾಗಿತ್ತಂತೆ. ಅದು ದೌಷ್ಟ್ಯರಹಿತವಾದ ಸ್ನೇಹ ಮಾತ್ರ, ಆದರೂ ಜನರ ಬಾಯಿಂದ ಇವರಿಬ್ಬರ ಹೆಸರುಗಳೂ ಆಗಾಗ ಒಟ್ಟಿಗೆ ಹೊರಡುವುದುಂಟು. ಇದನ್ನು ಕೇಳಿ ಮೆಕ್‌ನಿಕಾಲ್ ಅಸಮಾಧಾನಗೊಂಡಿದ್ದ; ಮಾರ್ಟಿಹ್ಯಾರಿಸನ್‌ನ ಸಹವಾಸವನ್ನು ಬಿಡು ಎಂದು ಹೆಂಡತಿಗೆ ಎಚ್ಚರಿಕೆಯನ್ನೂ ಕೊಟ್ಟಿದ್ದ. ಮೇರಿಯೂ ಅವನ ವಿಷಯದಲ್ಲಿ ಸಾಮಾಜಿಕ ವ್ಯವಹಾರಕ್ಕೆ ಅವಶ್ಯಕವಾದದ್ದಕ್ಕಿಂತ ಹೆಚ್ಚಿನ ಸ್ನೇಹವನ್ನೇನೂ ತೋರಿಸುತ್ತಿರಲಿಲ್ಲ. ಅಂದು ಮಾತ್ರ ಮಾರ್ಟಿ ಮದ್ಯದ ಅಮಲಿನಲ್ಲಿ ಮೈಮರೆತು ಸ್ವಲ್ಪ ಹೆಚ್ಚಿನ ಬಳಕೆಯುಳ್ಳವನಂತೆ ನಡೆದುಕೊಂಡ! ಅವನ ನಡೆವಳಿಕೆ ಅಸಭ್ಯವೆನ್ನುವಂತಿರಲಿಲ್ಲವಾದ್ದರಿಂದ ಮೇರಿ ಅದನ್ನು ತಡೆಯುವ ಪ್ರಯತ್ನ ಮಾಡಲಿಲ್ಲ.

ಮೆಕ್‌ನಿಕಾಲ್‌ನೂ ಚೆನ್ನಾಗಿ ಕುಡಿದಿದ್ದ. ಮದ್ಯ ಮಾತ್ಸರ್ಯಗಳ ಪ್ರಭಾವದಿಂದಾಗಿ ಅವನ ರೋಷ ಮಿತಿಮೀರಿತು. ಮೇರಿ–ಮಾರ್ಟಿಯರು ನೃತ್ಯವನ್ನು ಮುಗಿಸಿದರು; ಮೇರಿ ಆ ಕತ್ತಲು ಕತ್ತಲಾದ ದಾರಿಯಲ್ಲಿ ತನ್ನ ಕೊಠಡಿಗೆ ಹೊರಟಳು. ಮೆಕ್‌ನಿಕಾಲ್ ಅವಳನ್ನು ಹಿಂಬಾಲಿಸಿ ಕೊಠಡಿಯ ಬಾಗಿಲ ಬಳಿಯಲ್ಲೇ ಅವಳನ್ನು ಚೂರಿಯಿಂದ ಇರಿದುಬಿಟ್ಟ. ಅವಳು ಆ ದಿನ ಅಚ್ಚಬಿಳಿಯ ಉಡುಪನ್ನು ಧರಿಸಿ ವಕ್ಷಸ್ಥಲದ ಮೇಲೆ ಒಂದು ಗುಲಾಬಿ ಹೂವನ್ನು ಧರಿಸಿದ್ದಳು. ಚೂರಿ ಆ ಹೂವನ್ನು ಸೀಳಿ ಅಕೆಯ ಹೃದಯವನ್ನು ಹೊಕ್ಕಿತು. ಅವಳು ಚೀರುತ್ತಾ ಹೊಸಲಿನ ಮೇಲೆ ಬಿದ್ದು ಪ್ರಾಣಬಿಟ್ಟಳು. ಆಕೆಯ ಬಿಳಿಯ ಉಡುಪಿನ ಮೇಲೆ ರಕ್ತ ಹರಿದು ಭಯಂಕರವಾಗಿ ಕಾಣುತ್ತಿತ್ತು. ಮೆಕ್‌ನಿಕಾಲ್‌ಗೆ, ಆ ವೇಳೆಗೆ ಅಮಲು ಇಳಿದು ತಾನು ಮಾಡಿದ ಕೆಲಸವೇನೆಂಬುದರ ಅರಿವಾಗಿತ್ತು. ಅವಳ ದೇಹವನ್ನು ಎತ್ತಿ ಕೊಠಡಿಯಲ್ಲಿದ್ದ ಮಂಚದ ಮೇಲೆ ಮಲಗಿಸಿ, ಕೊನೆಯ ಸಾರಿ ಮುತ್ತಿಟ್ಟು, 'ಮೇರಿ, ಮಾರ್ಟಿಯನ್ನು ನಾನು ಕೊಲ್ಲುವುದಿಲ್ಲ, ತಿಳಿಯಿತೆ? ನಿನ್ನ ಜೊತೆಗೆ ನಾನೇ ಬರುತ್ತೇನೆ' ಎನ್ನುತ್ತಾ ತಾನೂ ಇರಿದುಕೊಂಡು ಅಲ್ಲಿಯೇ



ಪ್ರಾಣಬಿಟ್ಟ. ಈಗಲೂ ರಾತ್ರಿ ಹನ್ನೆರಡು ಘಂಟೆಯ ಹೊತ್ತಿನಲ್ಲಿ ಆ ಕೊಠಡಿಯಲ್ಲಿ ಚೀರಿದ ಧ್ವನಿ ಕೇಳುತ್ತದೆ: ಮೇರಿಯ ಪ್ರೇತ ರಕ್ತ ಸುರಿಸುತ್ತಾ ಆ ಕತ್ತಲು ದಾರಿಯಲ್ಲಿ ನರಳುತ್ತಾ ತಿರುಗುತ್ತಿರುತ್ತದೆ.

ಇದು ಸಂಪೂರ್ಣವಾಗಿ ಕಟ್ಟುಕಥೆ–ನಾವೇ ಕಟ್ಟಿದ್ದು. ನಾವು ಆ ದಿನ ರಾತ್ರಿ ಆ ಬಂಗಲೆಯಲ್ಲೇ ತಂಗಿದ್ದೆವಷ್ಟೆ. ಊಟ ಸ್ವಲ್ಪ ಹೊತ್ತೇ ಆಯಿತು. ಆಮೇಲೆ ನಮ್ಮ ಮಿತ್ರರೊಬ್ಬರು ಸ್ವಲ್ಪ ಹೊತ್ತು ಹಾಡಿದರು. ಮಲಗುವ ವೇಳೆಗೆ ಹನ್ನೊಂದೂವರೆ ಘಂಟೆಯಾಗಿದ್ದಿರಬೇಕು. ನಾನೂ ನನ್ನ ಜೊತೆಗೆ ಕಥೆಗಾರರಾಗಿದ್ದ ಶಾಸ್ತ್ರಿಗಳೂ ಆ ಕತ್ತಲು ದಾರಿಯ ಕೊನೆಯಲ್ಲಿದ್ದ ಕೊಠಡಿಯಲ್ಲೇ ಮಲಗಿದ್ದೆವು. ನಾನು ಮಲಗಿದ್ದಂತೂ ಆ ನನ್ನ ಕಾಲ್ಪನಿಕ ಮೇರಿಯ ಶವವನ್ನಿಟ್ಟಿದ್ದ ಮಂಚದ ಮೇಲೆಯೇ–ಆದರೆ ಆ ವೇಳೆಗೆ ಕಥೆಯ ನೆನಪೇನೂ ಇರಲಿಲ್ಲ. ಮಲಗಿದೊಡನೆಯೇ ಸ್ವಲ್ಪ ನಿದ್ದೆ ಬಂದಿರಬೇಕು. ಇದ್ದಕ್ಕಿದ್ದ ಹಾಗೆಯೇ ಯಾರೋ ಅತಿ ಸಂಕಟದಿಂದ ನರಳಿ 'ಮಾರ್ಟಿ' ಎಂದು ಚೀರುತ್ತಾ ಮೇಲುಸಿರೆಳೆದ ಸದ್ದು ನಿದ್ದೆಯನ್ನು ಒಡೆಯಿತು. ನಾನು ಮಲಗಿದ್ದ ಹಾಗೆಯೆ ಬೆಚ್ಚಿ ಎರಡು ಅಡಿ ಮೇಲಕ್ಕೆ ನೆಗೆದೆ. ನಡುಗುತ್ತಲೇ ದೀಪದ ಸ್ವಿಚ್ ಹಾಕಿದೆ.... ಕೊಠಡಿಯಲ್ಲೆಲ್ಲೂ ಮೇರಿಯ ದೆವ್ವ ಕಾಣಲಿಲ್ಲ. ಇನ್ನೊಂದು ಮಂಚದಲ್ಲಿ ಶಾಸ್ತ್ರಿಗಳು ಎದ್ದು ಕೂತಿದ್ದರು.

ಆಗಿದ್ದು ಇಷ್ಟೆ: ಶಾಸ್ತ್ರಿಗಳಿಗೆ ಅಜೀರ್ಣವಾಗಿ ವಾಂತಿ ಬರುವಂತಾಯಿತು. ನನಗೆ ಕೇಳಿದ ಮೇಲುಸಿರು ಮೇರಿಯ ಉತ್ಕ್ರಮಣ ಕಾಲದ ಉಸಿರಲ್ಲ–ಶಾಸ್ತ್ರಿಗಳು ವಮನಕ್ಕೆ ಪೂರ್ವ ಭಾವಿಯಾಗಿ ಮಾಡಿದ ಸದ್ದು. ಅವರಿಗೆ ನೀರು ಬೇಕಾಗಿದ್ದದ್ದರಿಂದ 'ಮೂರ್ತಿರಾವ್' ಎಂದು ನನ್ನನ್ನು ಕೂಗಹೊರಟರು, ಆದರೆ 'ರಾವ್' ಎಂಬ ಭಾಗ ಮೇಲುಸಿರಿನಿಂದ ಕತ್ತರಿಸಿಹೋಗಿತ್ತು. ನಿದ್ದೆಯಲ್ಲಿದ್ದ ನನಗೆ 'ಮೂರ್ತಿ' ಎಂದದ್ದು 'ಮಾರ್ಟಿ' ಎಂದಂತೆ ಕೇಳಿಸಿತು! ಇಷ್ಟಕ್ಕೆ ಹೆದರಿದೆನಲ್ಲ ಎಂದು ನನಗೆ ನಾಚಿಕೆಯಾಯಿತು. ಶಾಸ್ತ್ರಿಗಳಿಗೆ ಅದರ ಸುಳಿವು ಕೊಡದೆ ಅವರಿಗೆ ಮಾಡಬೇಕಾದ ಉಪಚಾರವನ್ನು ಮಾಡಿ ಮತ್ತೆ ಮಲಗಿಕೊಂಡೆ. ಆದರೆ ಏನು ಮಾಡಿದರೂ ನಿದ್ದೆ ಬರಲೊಲ್ಲದು. ಬಯಲಿನಲ್ಲಿರುವ ಒಂಟಿ ಮನೆಗಳ ಸುತ್ತ ಗಾಳಿ ಬೀಸುವಾಗ ರಾತ್ರಿಯ ನಿಶ್ಶಬ್ದ ವಾತಾವರಣದಲ್ಲಿ ಅದರ ಸುಯ್ಯಲು ಯಾರೋ ಕಷ್ಟದಿಂದ ನಿಟ್ಟುಸಿರು ಬಿಟ್ಟಂತೆ, ಒಂದೊಂದು ವೇಳೆ ಬಿಕ್ಕಿಬಿಕ್ಕಿ ಅತ್ತಂತೆ, ತೋರುತ್ತದೆ. ಆ ದಿನವಂತೂ ಹೊಯ್ಗಾಳಿ ಕ್ಷಣಕ್ಕೊಂದು ಸಲ ಏರಿ ತಗ್ಗುವ ವೇಗದಿಂದ ಬೀಸಿ ಬಂಗಲೆಯ ಮೂಲೆಗಳನ್ನು ತಿರುವಿ ಬರುತ್ತಿತ್ತು. ಒಂದೊಂದು ಮೂಲೆಯಲ್ಲೂ ಒಬ್ಬೊಬ್ಬ ಹೆಣ್ಣು ನಿಂತು, ತಡೆಯಲಾರದ ಸಂಕಟವನ್ನು ತಡೆದು ತಡೆದು ಒಳದನಿಯಲ್ಲೇ ಅತ್ತಂತೆ ತೋರಿತು. ಹೊರಗಿನ ಕಾಡಿನಿಂದ ಏನೇನೋ ಅಸ್ಪಷ್ಟ ಶಬ್ದಗಳು ಬೇರೆ ಆಗಿಂದಾಗ ಕೇಳಿಬರುವುವು. ಒಂದೊಂದು ಸಾರಿ ಇದ್ದಕ್ಕಿದ್ದ ಹಾಗೇ ಹತ್ತಾರು ನರಿಗಳು ಹುಯಿಲಿಡುವುವು. ನನ್ನ ಮನಸ್ಸಿನಲ್ಲಿ ಭಯ ಬೆಟ್ಟದಂತೆ ಬೆಳೆದು ರೋಮಾಂಚನವಾಯಿತು.

ನಾನು ಕಟ್ಟಿದ ಕಥೆಯೇ ಈಗ ನನ್ನನ್ನು ಕಾಡಲಾರಂಭಿಸಿತು. ಕಥೆಯೇನೋ ನಾನೇ ಕಟ್ಟಿದ್ದು, ನಿಜ. ಆದರೇನು, ಅದು ಎಲ್ಲಿಯಾದರೂ ನಡೆದಿರಬಹುದಾದದ್ದು. ಮೇರಿಯಲ್ಲದಿದ್ದರೆ ಲೂಸಿ, ಮಾರ್ಟಿಯಲ್ಲದಿದ್ದರೆ ಪರ್ಸಿ–ನನ್ನ ಕಥೆಯ ಕಾಲ್ಪನಿಕ ಕ್ರಿಯೆಯನ್ನು ಅವರು ನಿಜವಾಗಿ ನಡೆಸಿರಬಾರದೇಕೆ? ನಮ್ಮ ಸಾಹಿತಿಗಳ ಕಟ್ಟುಕಥೆಗಳೆಲ್ಲಾ ಒಂದಲ್ಲ ಒಂದು ಕಡೆ ನಡೆದಿರುವಂಥವೇ ತಾನೆ! ಅದೇ ಘಳಿಗೆಯಲ್ಲೇ ಮೇರಿಯ ಪ್ರೇತ ಹೊಸಲಿನ ಮೇಲೆ  ಬಿದ್ದಿರಬಹುದು, ಅವಳ ಹೆಣ ಮಂಚದ ಮೇಲೆಯೇ ಇರಬಹುದು, ರಕ್ತ ಮಂಚದಿಂದ ಸೋರಿ ತೊಟ್ಟಿಕ್ಕುತ್ತಿರಬಹುದು. ನನ್ನ ಭಯ ಎಲ್ಲಿಯವರೆಗೆ ಹೋಯಿತೆಂದರೆ–ಹಾಸಿಗೆಯ ಬಟ್ಟೆ ರಕ್ತದಿಂದ ತೊಯ್ದಿರಬಹುದೇನೋ ಎಂದು ಒಂದು ಬಾರಿ ಮುಟ್ಟಿ ನೋಡಿದೆ!

ಆ ಸ್ಥಳವನ್ನು ಬಿಟ್ಟು ನಡುಮನೆಗೆ ಹೋಗಿ ಮಲಗೋಣವೆಂದರೆ ಆ ಕತ್ತಲೆಯ ಪಡಸಾಲೆಯಲ್ಲಿ ನಡೆದುಹೋಗಬೇಕು. ಆಗ ಹನ್ನೆರಡು ಘಂಟೆ, ದೆವ್ವಗಳು ಹೊರ ಹೊರಡುವುದಕ್ಕೆ ಸರಿಯಾದ ಮುಹೂರ್ತ. ಮೇರಿಯ ದೆವ್ವ ನನ್ನ ಹಿಂದೆಯೇ ಬಂದರೆ  ಆಶ್ಚರ್ಯವೇನಲ್ಲ. ಅಲ್ಲದೆ, ಮತ್ತೊಬ್ಬರ ಪಿಕೀಲನ್ನು ಹಾಸ್ಯಮಾಡಲು ಕಥೆ ಕಟ್ಟಿದ ನಾನೇ ಹೆದರಿದೆನೆಂದರೆ ನನ್ನ ಮಿತ್ರರು ಪೀಡಿಸಿ ಪ್ರಾಣ ತೆಗೆಯುತ್ತಾರೆ. ಕೊಠಡಿಯನ್ನು ಬಿಟ್ಟು ಹೋದದ್ದಕ್ಕೆ ಶಾಸ್ತ್ರಿಗಳಿಗೆ ಏನು ನೆಪ ಹೇಳಲಿ! ಆತನ ನಾಲಗೆಯೋ, ಕ್ಷೌರದ ಕತ್ತಿಗಿಂತ ಹರಿತ; ನಾನು ಬದುಕಿರುವವರೆಗೆ ಅವರ ಹಾಸ್ಯದ ಪೆಟ್ಟು ತಪ್ಪುವಂತಿಲ್ಲ. ಹೀಗೆ ಯೋಚಿಸುತ್ತಿರುವಷ್ಟರಲ್ಲಿ ಕೊಠಡಿಯ ಹೊರ ಭಾಗದಲ್ಲಿ ಎರಡು ಬೆಕ್ಕುಗಳು  ಒಂದರೊಡನೊಂದು ಸ್ಪರ್ಧೆ ಹೂಡಿ ಅಳಲಾರಂಭಿಸಿದವು. ನಮ್ಮ ಸ್ವಂತ ಮನೆಯಲ್ಲಿ ಮಲಗಿರುವಾಗಲೇ ರಾತ್ರಿಯ ಹೊತ್ತು ಬೆಕ್ಕಿನ ಅಳುವನ್ನು ಕೇಳಿದಲ್ಲಿ ನನಗೆ ಮೈ ನವಿರೇಳುತ್ತದೆ. ಇನ್ನು ಆ ವಾತಾವರಣದಲ್ಲಿ ಅದರ ವಿಕಟ ಪರಿಣಾಮವನ್ನು ಕೇಳಬೇಕೆ! ಮೈಮೇಲೆ ಭಯದ ತೆರೆ ಬಂದು ಅಪ್ಪಳಿಸಿದಂತಾಯಿತು. ನಾಚಿಕೆ ಹೇಸಿಕೆಗಳನ್ನು ಬಿಟ್ಟು ಶಾಸ್ತ್ರಿಗಳನ್ನು ಎಚ್ಚರಿಸಿದೆ.

‘ಶಾಸ್ತ್ರಿ!’

‘ಏನ್ರಿ, ನಿದ್ದೆ ಬರಲಿಲ್ಲವೇ?’ – ಅವರಿಗೂ ನಿದ್ದೆ ಬಂದಿರಲಿಲ್ಲ. ಬೆಕ್ಕಿನ ಅಳುವಿನಿಂದ ಎಚ್ಚರವಾಗಿರಬಹುದೆಂದು  ಭಾವಿಸಿದೆ.

‘ಇಲ್ಲಿ ನೋಡಿ ಶಾಸ್ತ್ರಿ ಇವೊತ್ತು ಸಂಜೆ ನಾವು ಕಟ್ಟಿದ ಕಥೆ ಈಗ ನೆನಪಿಗೆ ಬಂದು ಪ್ರಾಣ ತಿನ್ನುತ್ತಾ ಇದೆ. ನಗಬೇಡಿ–ಈಗ ನನಗೆ ಮಲಗಿರುವುದಕ್ಕೂ ಭಯ, ಏಳುವುದಕ್ಕೂ ಭಯ.  ಈ ಹಾಳು ಬೆಕ್ಕಿನ ಅಳು ಬೇರೆ; ನಾಚಿಕೆಯಿಲ್ಲದೆ ಒಪ್ಪಿಕೊಂಡು ಬಿಡುತ್ತೇನೆ: ನನಗೆ ಹೆದರಿಕೆ  ಹತ್ತಿಬಿಟ್ಟಿದೆ.’

ಶಾಸ್ತ್ರಿಗಳು ನಕ್ಕರು. ‘ಸದ್ಯ, ನೀವು ಮುಂಚೆ ಒಪ್ಪಿಕೊಂಡು ನನ್ನನ್ನು ಬದುಕಿಸಿದಿರಿ. ನನಗೂ ಹಾಗೇ ಆಗಿದೆ. ನಿಮ್ಮನ್ನು ಕೂಗಿ ಎಚ್ಚರಿಸುವಷ್ಟು ಧೈರ್ಯವೂ ಇರಲಿಲ್ಲ.’



ಇಬ್ಬರೂ ಸ್ವಲ್ಪ ಹೊತ್ತು ಮಾತಾಡಿ ಒಬ್ಬರನ್ನೊಬ್ಬರು ಹಾಸ್ಯ ಮಾಡಿದ ಮೇಲೆ ಭಯ  ಕಳೆಯಿತು.

ನಾನು ಎಷ್ಟೋ ದೆವ್ವದ ಕತೆಗಳನ್ನು ಕೇಳಿದ್ದೇನೆ, ಹೇಳಿಯೂ ಇದ್ದೇನೆ. ಆದರೆ ಆ  ಕಥೆಗಳಲ್ಲಿ ಬರುವ ಘಟನೆಗಳಲ್ಲಿ ಮುಕ್ಕಾಲು ಮೂರು ವೀಸಪಾಲು ನನ್ನ ಸ್ವಂತ ಅನುಭವಕ್ಕೆ ಬಂದುವಲ್ಲ. ಉಳಿದವುಗಳಿಗೆ ಪ್ರಕೃತ್ಯತೀತವಾದ ಕಾರಣವನ್ನು ಹುಡುಕುವ ಅವಶ್ಯಕತೆ ಕಂಡುಬಂದಿಲ್ಲ. ಇಷ್ಟಾದರೂ ಮುಂದೆ ಅಂಥ ಪ್ರಸಂಗವೇನಾದರೂ ಒದಗಿಬಂದರೆ, ಭಯವನ್ನು ಎದುರಿಸಿ ಅದನ್ನು ಜಯಿಸುತ್ತೇನೆಂದು ಹೇಳಬಹುದೇ ಹೊರತು ಭಯಕ್ಕೆ ಒಳಗಾಗುವುದೇ ಇಲ್ಲವೆಂದು ಹೇಳಲಾರೆ. ಅಂಥ ಭಯಕ್ಕೆ ಅವಕಾಶ ಕೊಡದಿರಬೇಕೆಂಬ ಇಚ್ಛೆಯೂ ನನಗಿಲ್ಲ. ಪ್ರಕೃತ್ಯತೀತವಾದ ರಹಸ್ಯವೊಂದಿರಲಿ, ಅದನ್ನು ಹುಡುಕುವ ಪ್ರವೃತ್ತಿಯೂ ನಮ್ಮಲ್ಲಿರಲಿ, ಎಂಬ ಬಯಕೆ ಬಹುಶಃ ನಮ್ಮೆಲ್ಲರಲ್ಲೂ ನೆಟ್ಟು ನಿಂತಿದೆ–ಆ ರಹಸ್ಯ ದೈವವಾಗಲಿ, ದೆವ್ವವಾಗಲಿ. ನಮ್ಮ ದೇಹದಲ್ಲಿ ನಡೆಯುತ್ತಿರುವ ‘ಜೀವ’ ಎಂಬ ರಾಸಾಯನಿಕ ಕ್ರಿಯೆ ನಿಂತ ಮೇಲೂ ಏನೋ ಒಂದು ಅಂಶ ಅಳಿಯದೆ ನಿಲ್ಲುತ್ತದೆಂಬ ನಂಬಿಕೆ ನಮಗೆ ಪ್ರಿಯವಾದದ್ದು. ಅಷ್ಟು ಮಾತ್ರವಲ್ಲ; ಆ ಅಂಶ ಉಳಿದಿರಲಿ ಇಲ್ಲದಿರಲಿ, ಅದರ ಭಯದ ಅಮಲಾದರೂ ನಮಗೆ ಪ್ರಿಯವಾದುದು, ಅದರಿಂದ ನಮ್ಮ ಭಾವಜೀವನಕ್ಕೂ ಕಲ್ಪನಾಶಕ್ತಿಗೂ ಪ್ರಚೋದನೆಯುಂಟು, ಪುಷ್ಟಿಯೂ ಉಂಟು. ತಾವು ಎಂದೂ ಭಯಕ್ಕೆ ಸಿಕ್ಕಿಯೇ ಇಲ್ಲವೆಂದು ಹೇಳುವ ಜನರನ್ನು ನಾನು ನಂಬುವುದಿಲ್ಲ. ಒಂದು ವೇಳೆ ಅವರ ಮಾತು ನಿಜವಾದರೂ ಅವರ ಜೀವನ ಅಪೂರ್ಣವೆಂದೇ ನನ್ನ ನಂಬಿಕೆ.

❑

# ಶಿವನ ಮೀಸುವ ಹಾಡು

– ವೈದೇಹಿ

ಅಭಿಷೇಕ ಮಾಡಿದಳು ಗೌರಿ
ತ್ರಿಲೋಕ ಸಂಚಾರಿಗೆ
ಕರೆದೊಯ್ದಳು ಶಿವನ
ಶುಭ್ರ ಸ್ನಾನಕ್ಕೆ

ಮೂಗಾಲು ಮಣೆಯಲ್ಲಿ ಮೂಗಣ್ಣಿನವನ
ಕುಳ್ಳಿರಿಸಿ ಪ್ರೀತಿಯೊತ್ತಿ
ಮೂಜಗದಲೋಡಾಡಿ ಎಂತು ದಣಿದವೋ ಪಾದ
ಎಂಬ ನೆಪ ತುದಿಯಿಂದ ಧೂಳನೆತ್ತಿ
ಯಾರ ಮನೆ ಬೀದಿಯದು ಪತ್ತೆ ಹಚ್ಚಿ
ನಗುವ ನಟರಾಜನನು ಕರೆವಳೋ ಸ್ನಾನಕ್ಕೆ
ದುಃಖ ಹತ್ತಿಕ್ಕಿ
ಮುಗಿಯಿತೇ ಬೇಟೆ? ಪ್ರಶ್ನೆ ಚುಚ್ಚಿ.

ಇದೋ ಈ ತಂಬಿಗೆ ನೀರು ಗಂಗೆಯವತಾರಕ್ಕೆ
ಇದು ಇಗೋ ಆ ಮಣಿಕರ್ಣಿಕೆಗೆ
ಮಿಂದ ನದಿ ನೆನಪಿಗೆ ಒಂದೊಂದು ತಂಬಿಗೆ ನೀರು
ಕಡೆಯದಿಗೋ ನನ್ನ ಅನುದಿನದ ಬಡ ಕನಲು
ಎಂದಾಗ ನೀರೊಳಗೆ ಗೌರು ಕಂಬನಿ ಬಿಂದು
ಮಿಸಕ್ಕನೇ ಬೆರತು ಬಿಸಿಯಾಗಲು
'ಅಯ್' ಎಂದು ಶಿವ ಬೆವರಿ
"ನನ್ನನೇನೆಂದುಕೊಂಡೆ? ನಿನ್ನ ಬಿಟ್ಟರೆ ಶುದ್ಧ ಬೈರಾಗಿ"
ಈ ಮಾತಿಗೆ "ಶಿವನೇ, ನಾನೆಷ್ಟನೆಯ ನಾರಿ?"
ಎನ್ನುತ್ತ ಮೃದು ಚಿವುಟಿ ಮೀಸುವಳು ನಮ್ಮ ಗೌರಿ.

ಬೈರಾಗಿ ಬೂದಿ ತೊಳೆಯುತ್ತ ಹಚ್ಚಗೆ ನೋಡುವಳು
ಮೆತ್ತಗೆ ಮೈ ಒರೆಸಿ ತಂಬಾಲು ಕುಡಿಸಿ
ತೊಡೆ ಮೆತ್ತೆಯನು ನೀಡಿ ಕೋರುವಳು
ಶಿವ ಶಿವಾ!



ಎಲ್ಲ ನದಿಗಳ ನೆನೆದು ಮಲಗು ದೇವ!
ನುಡಿರೇಶಿಮೆಯಡಿ ನಂಜು ನುಂಗಿದ ಕಿರಾತ
ಹೃದಯದಲಿ ಕಚಗುಳಿಯ ಹೂವು ಹತ್ತಿಸಿಕೊಂಡು
ಕಚಗುಳಿಯ ಹರಿಗೋಲು ಹರನ ಹತ್ತಿಸಿಕೊಂಡು
ಮತ್ತೆ ಸಾಗಿತು ಗೌರಿಯಿಂದ ದೂರ.

ಶಿವನಿದ್ದೂ ಶಿವನಿಲ್ಲದಂಥ ಚೋದ್ಯಗಳೆಲ್ಲ
ಹೊಸತೇನು ಶಿವಕಾಮಿಗೆ?
ಮಿಸುಕಾಡದೇ ಕುಳಿತು ತಲ್ಲಣವ ತಡೆಯುವ
ಆರ್ದ್ರ ಗರ್ವದ ಹುಡುಗಿ ನಮ್ಮ ಗೌರಿ.

ಸಂಚಾರ ಮುಗಿಸಿ ಬರುವ ಈಶ್ವರ ಜೋಗಿ
ಗೌರಿ ಕರೆವಳು ಅವನ ಸ್ನಾನಕಾಗಿ
ಮದ್ದಿನೆಣ್ಣೆಯ ಪೂಸಿ, ಬಿದ್ದ ಕಂಗಳ ಒರೆಸಿ
ಜ್ವರ ಹಿಡಿಸಿಕೊಂಡಿರುವ ಲೋಕ ಸಂಚಾರಿಗೆ
ಕಿರಾತ ಕಡ್ಡಿಯ ಕಷಾಯ ಕುಡಿಸಿ.

❑

# ಏಳಯ್ಯ ಬೆಳಗಾಯಿತು!

**– ಪ್ರೊ. ಅ.ರಾ. ಮಿತ್ರ**

ಬೆಳಗಿನಜಾವ ಎನ್ನುವುದಕ್ಕೆ ಬದಲಾಗಿ ಅನೇಕರು ಬೆಳಗಿನ ಝಾವ ಎಂದು ಜೋರಾಗಿ ಉಚ್ಚರಿಸುತ್ತಾರೆ. ಹೊಕ್ಕಳು ಸೀಳಿದ ಈ ಮಹಾಪ್ರಾಣಾಕ್ಷರ ಕಂಡಾಗ ಅಥವಾ ಕೇಳಿದಾಗಲೆಲ್ಲಾ ನಾನು ಗಾಬರಿಯಿಂದ ನಡುಗಿದ್ದೇನೆ. ಅದನ್ನು ಉಚ್ಚರಿಸಿದರೇ ಇಷ್ಟು ಅನಾಹುತವಾಗುವಾಗ ಇನ್ನು ಬೆಳಗಿನ ಜಾವಕ್ಕೆ ಏಳಬೇಕು ಎಂದರೆ ನನ್ನ ಗತಿ ಏನಾಗಬೇಕು? ನಮ್ಮನ್ನು ಎಬ್ಬಿಸುವವರ ದೃಷ್ಟಿಯಲ್ಲಿ ಬೆಳಗಿನ ಜಾವ ಅತ್ಯಂತ ಪವಿತ್ರವಿರಬಹುದು. ಆದರೆ ಅಂತಹ ಪವಿತ್ರ ಮುಹೂರ್ತಗಳನ್ನು ಹಾಳುಮಾಡುವುದು ಸರಿಯೆ? ಅಂಥ ಪ್ರಶಾಂತ ಸಮಯದಲ್ಲಿ ಮಲಗುವುದಕ್ಕಿಂತಲೂ ಚೇತನಕ್ಕೆ ಸುಖ ದಾಯಕವಾದ ಅನುಭವ ಬೇರೊಂದು ಇದೆಯೆ? ಕಣ್ಣ ರೆಪ್ಪೆಗಳ ಅಪ್ಪುಗೆಯನ್ನು ಸಡಿಲಿಸಿ  ಕಣ್ಣನ್ನು ಕೆಟ್ಟದಾಗಿ ಉಜ್ಜಿ ಅರಳಿಸಿ, ನಿದ್ದೆಯ ಹೊಕ್ಕಳನ್ನು ಸೀಳಿ ನಾನು ಯಾವ ನರಕಕ್ಕೆ ಹೋಗಲಿ! ಆದುದರಿಂದ ಇರುಳಿನ ನೀರವ ತಟಾಕದಲ್ಲಿ ಎಚ್ಚರದ ದೋಣಿಯನ್ನು ತೇಲಿಸಿ, ಓದಿನ ಹುಟ್ಟು ಹಾಕುವುದು ಸ್ವಲ್ಪವೂ ಇಷ್ಟವಿಲ್ಲದೆ ಹೊದಿಕೆ ಎಳೆದುಕೊಂಡು ಮಲಗಿ ಬಿಡುತ್ತೇನೆ.

ಆದರೆ ನನ್ನ ಸ್ನೇಹಿತನೊಬ್ಬನಿದ್ದಾನೆ. ಬೆಳಗಿನಜಾವದ ಮಹತ್ವದ ಬಗೆಗೆ ಅವನು ಯಾವಾಗಲೂ ನನಗೆ ಭಾಷಣ ಬಿಗಿಯುತ್ತಾನೆ. ಅವನು ನಿಶಾಚರನಲ್ಲದಿದ್ದರೂ ನಿಶೋತ್ತಿಷ್ಠ, ಅಂದರೆ ರಾತ್ರಿಯಲ್ಲೇ ನಿದ್ದೆಯ ಹೊಕ್ಕಳನ್ನು ಸೀಳಿ ಏಳತಕ್ಕವನು. ಅವನ ಮನೆಯಾಕೆಯೂ ಶೀಘ್ರೋದಯಿ! ಅವರ ಮಗುವಂತೂ 3–15ಕ್ಕೇ ಎದ್ದು ಸಣ್ಣದಾಗಿ ಉದಯರಾಗ ಪ್ರಾರಂಭಿಸುತ್ತದೆ. ಅಮ್ಮನ ನಿದ್ರೆಯನ್ನು ಕೆಡಿಸುತ್ತದೆ. ಈ ಕತ್ತಲಲ್ಲಿ ಮೂರೂವರೆ ಗಂಟೆಗೆ ಎದ್ದು ನನ್ನ ಗೆಳೆಯ ಯಾವ ರಾಜ್ಯವನ್ನು ಉದ್ಧಾರ ಮಾಡಬೇಕಾಗಿದೆ ಎಂದು ಒಂದೊಂದು ಸಲ ನನಗೆ ರೇಗಿದೆ.  ನಾನು ಬೇಕಾದರೆ ರಾತ್ರಿ ಒಂದು ಗಂಟೆಯವರೆಗೆ ಎಚ್ಚರವಾಗಿ ಇರಬಲ್ಲೆ. ಆದರೆ ಬೆಳಗಿನ ಜಾವ ಏಳುವುದು ಮಾತ್ರ ನನ್ನ ಕೈಯಲ್ಲಿ ಆಗದ ಕೆಲಸ. ಈ ವಿಚಾರದಲ್ಲಿ ನನಗೂ ನನ್ನ ಸ್ನೇಹಿತನಿಗೂ ಒಮ್ಮೆ ವಾಗ್ಯುದ್ಧವೇ ನಡೆದು ಹೋಯಿತು.

ನಾವು ಒಂದು ಊರಿಗೆ ಪ್ರವಾಸ ಹೊರಡಲು ನಿಶ್ಚಯಿಸಿದ್ದೆವು. ಬೆಳಗಿನಜಾವಕ್ಕೆ ಎದ್ದು  ಊರಿಗೆ ಹೋಗುವ ರೈಲು ಹಿಡಿಯಬೇಕೆಂದು ಸ್ನೇಹಿತ ಸಲಹೆ ನೀಡಿದ. ದಾಕ್ಷಿಣ್ಯಕ್ಕೆ ಒಪ್ಪಿಕೊಂಡು ಒದ್ದಾಡುವುದು ನನ್ನ ಸ್ವಭಾವವಲ್ಲ. ಆದ್ದರಿಂದ ಬೆಳಗಿನಜಾವ ಏಳುವುದು ಮಾತ್ರ ಸಾಧ್ಯವಿಲ್ಲ. ನನ್ನ ಕೈಲಾಗುವುದಿಲ್ಲ ಎಂದು ಕಡ್ಡಿ ಮುರಿದ ಹಾಗೆ ತಿಳಿಸಿದೆ. ನನ್ನ ಸ್ನೇಹಿತನಿಗೆ ರೇಗಿರಬೇಕು.



"ಇಷ್ಟು ದೊಡ್ಡವನಾಗಿ ಹೀಗೆ ಹೇಳಲು ನಾಚಿಕೆಯಾಗುವುದಿಲ್ಲವೆ?" ಎಂದು ಅಣಕಿಸಿದ. ನಾನು ಶಾಂತನಾಗಿ "ಊಹು, ಆಗುವುದಿಲ್ಲ" ಎಂದೆ.

"ಬೆಳಗಿನಜಾವದ ಹೊತ್ತಿಗೆ ಕ್ಷುದ್ರ ಪ್ರಾಣಿಗಳಾದ ಕ್ರಿಮಿಕೀಟಗಳೆಲ್ಲಾ ಎದ್ದಿರುತ್ತವೆ, ನಿನಗೆ ಏಳುವುದಕ್ಕೆ ಏನು ಧಾಡಿ?" ಎಂದು ಚುಚ್ಚು ಮಾತನ್ನಾಡಿದ. ನಾನು ಮತ್ತೆ ಶಾಂತನಾಗಿಯೇ ಉತ್ತರ ಕೊಟ್ಟೆ.

"ಕ್ಷುದ್ರ ಪ್ರಾಣಿಗಳು ಕೂಡ ಎದ್ದಿರುತ್ತವೆಯೇ? ಇರಬಹುದು; ಅವು ಕ್ಷುದ್ರ ಪ್ರಾಣಿಗಳು, ನಾವು ಮನುಷ್ಯರು."

ನನ್ನ ಸ್ನೇಹಿತ ಮುಂದೆ ಮಾತನಾಡಲಿಲ್ಲ. ಆದರೆ ಆ ದಿನವೆಲ್ಲಾ ಗುರ್ ಎನ್ನುತ್ತಲೇ ಇದ್ದ.

ಹುಡುಗನಾಗಿದ್ದಾಗ ಬೆಳಗಿನ ಜಾವ ಏಳುವುದು ಕಷ್ಟ ಎಂದು ನಾನು ಅಂದುಕೊಂಡಿರಲಿಲ್ಲ. ಇಂದಿಗೂ ಹಾಗೆಯೇ ಅಂದುಕೊಂಡಿದ್ದೇನೆ. ಏಳುವುದು ಬಹಳ ಸುಲಭ ಎಂದು ಯಾರಿಗೆ ಬೇಕಾದರೂ ಹೇಳಬಲ್ಲೆ. ಎಷ್ಟೋ ದಿನ ರಾತ್ರಿ ಮಲಗುವಾಗ ನಾನು ಬೆಳಗಿನ ಜಾವ  ಏಳಬೇಕೆಂಬ ನಿರ್ಧಾರ ಮಾಡಿಕೊಂಡೇ ಮಲಗಿದ್ದೇನೆ. ಆದರೆ ಬೆಳಗಿನಜಾವದಲ್ಲಿ ಅದೇನು ಅನಿರೀಕ್ಷಿತ ಬದಲಾವಣೆ ಆಗಿರುತ್ತದೆಯೋ ಇನ್ನೂ ನನಗೆ ಅರ್ಥವಾಗಿಲ್ಲ. ಎಚ್ಚರಗೊಂಡ ಮನಸ್ಸು, ಸೋಮಾರಿಯಾದ ದೇಹ ಇವೆರಡಕ್ಕೂ ಸ್ವಲ್ಪ ಕಾಲ ಉಗ್ರ ಹೋರಾಟ ನಡೆಯುತ್ತಿರುತ್ತದೆ. ಎಚ್ಚರ ಖಂಡಿತ ಆಗಿರುತ್ತದೆ.

ತಂದೆ ಎದ್ದು ದೀಪ ಹಾಕಿದ ವಿಷಯ ಗೊತ್ತು. ಅವರು ಕೂಗುತ್ತಿರುವುದೂ ಸ್ಪಷ್ಟವಾಗಿ ಕೇಳಿಸುತ್ತದೆ. ಎಲ್ಲಿ ಹತ್ತಿರ ಬಂದು ಹೊರಳಿಸುತ್ತಾರೋ ಎಂಬ ಭಯ. ಹಾಗೂ ಎಷ್ಟೋ ಸಲ  ಆಗಿದೆ. ಕೊನೆಗೆ ತಂದೆಯವರೇ 'ಹೋಗಲಿ ಪಾಪ ತುಂಬಾ ನಿದ್ರೆ ಇರಬೇಕು' ಎಂದು ಅಮ್ಮನೊಡನೆ ಹೇಳುತ್ತಿರುವುದೂ ಕೇಳಿಸುತ್ತದೆ. ಸದ್ಯ ಬದುಕಿದೆ ಎಂದು ಆನಂದದಿಂದ ಮುಸುಕೆಳೆದುಕೊಳ್ಳುತ್ತೇನೆ.

ಹಾಸ್ಟೆಲಿನಲ್ಲಿಯೂ ಹೀಗೆಯೆ. ಬೆಳಗಿನ ಜಾವ ಏಳಬೇಕೆಂದು ನನಗೂ ನನ್ನ ರೂಂಮೇಟಿಗೂ ಆಸೆಯೇನೋ ಇತ್ತು. ಆದರೆ ಪ್ರತಿನಿತ್ಯವೂ ಅಲಾರಂಗೆ ಕೆಳಗಿವಿ ಮಾಡಿ ಮಲಗಿಬಿಡುತ್ತಿದ್ದೆವು. ಪರೀಕ್ಷೆ ಹತ್ತಿರ ಬಂದಂತೆ ನಮ್ಮಲ್ಲಿ ಒಂದು ಒಪ್ಪಂದವಾಯಿತು. ಬೆಳಗಿನಜಾವ ಯಾರು ಮೊದಲು ಏಳುತ್ತಾರೋ ಅವರು ಇನ್ನೊಬ್ಬರನ್ನು ಮೂರು ಸಲ ಕೂಗಬೇಕು. ಆದರೂ ಏಳದಿದ್ದರೆ ಒಂದು ಬೋಸಿ ತಣ್ಣೀರನ್ನು ನಿರ್ದಾಕ್ಷಿಣ್ಯವಾಗಿ ಮಲಗಿದವನ ಮುಖಕ್ಕೆ ಸುರಿದು ಎಬ್ಬಿಸಬೇಕು. ಇದು ಈ ಒಪ್ಪಂದದ ಸಾರಾಂಶ. ಆದರೆ ಆ ಒಪ್ಪಂದದಿಂದ ನನಗೆ ಬಹಳ ನಷ್ಟವಾಯಿತು ಎಂದು ಹೇಳಬೇಕಾಗಿಲ್ಲವಷ್ಟೆ!

ಅಂದಿನಿಂದ ಬೆಳಗಿನ ಜಾವದ ನನ್ನ ಶತ್ರುವೆಂದರೆ ನನ್ನ ರೂಂಮೇಟಿನ ಅಲಾರಂ ಗಡಿಯಾರ. ಉಳಿದ ಸಮಯಗಳಲ್ಲಿ ಗಡಿಯಾರದ ನಿಷ್ಠುರ ಕಾಲ ನಿಯಮವನ್ನು

ನಾನು ಮೆಚ್ಚಿಕೊಂಡರೂ ಬೆಳಗಿನಜಾವದಲ್ಲಿ ಮಾತ್ರ ಅದರ ದಬ್ಬಾಳಿಕೆಯನ್ನು ಪ್ರತಿಭಟಿಸಬೇಕು. ಬ್ರಾಹ್ಮೀ ಮಹೂರ್ತದಲ್ಲಿ ನಮ್ಮ ಸುಂದರ ಕನಸುಗಳ ಧ್ವಂಸಕನಾಗಿ ಸೈತಾನನಂತೆ ಈ ಗಡಿಯಾರ ಒಂದೇ ಸಮನೆ ಕೀರಲು ಕಂಠದಲ್ಲಿ ಹೊಡೆದುಕೊಳ್ಳುತ್ತದೆ. ನನಗೆ ಅದರ ಕುತ್ತಿಗೆಯನ್ನು ಹಿಸುಕಿ  ಮಹಡಿಯಿಂದ ಕೆಳಗೆ ಆದಷ್ಟು ದೂರ ಬಿಸಾಡಬೇಕು ಎನ್ನುವಷ್ಟು ಕೋಪ ಬರುತ್ತದೆ! ಅಥವಾ ಮಲಗಿದ್ದಂತೆಯೇ ಅದನ್ನು ಒದ್ದು 'ಹುಷಾರ್ ನಾನು ನಿನ್ನ ಗುಲಾಮನಲ್ಲ' ಎಂದು ಕೂಗೋಣ ಎನ್ನಿಸುತ್ತದೆ. ಆದರೆ ಗಡಿಯಾರ ನನ್ನದಲ್ಲ, ನನ್ನ ಗೆಳೆಯನದು. ಬಹಳ  ದುಬಾರಿಯದು. ಅದೂ ಅಲ್ಲದೆ ಎದ್ದು ಎಸೆಯುವಷ್ಟು ಅಥವಾ ಒದೆಯುವಷ್ಟು ಚಟುವಟಿಕೆ ನನ್ನಲ್ಲಿದ್ದಿದ್ದರೆ ನಾನು ಎಂದೋ ಎದ್ದು ಕುಳಿತಿರುತ್ತಿದ್ದೆ. ಮೈಗಳ್ಳತನದಿಂದ ಅಥವಾ ಪೂರ್ತಿ ಎಚ್ಚರವಾದೀತು ಎಂಬ ಭಯದಿಂದ ನಾನು ಗಡಿಯಾರದ ಮೇಲೆ ಕಾರ್ಯಾಚರಣೆ ನಡೆಸಿಲ್ಲ.

ಸುಮ್ಮನೆ ಏಳುವುದಾದರೆ ಏಳಬಹುದೇನೋ! ಏಳುವ ಶಿಕ್ಷೆಯನ್ನು ಸಹಿಸುವುದೇ ಕಷ್ಟ. ಇನ್ನು ಎದ್ದು ಓದಬೇಕಂತೆ! ವಿದ್ಯಾರ್ಥಿಗಳಿಗೆ ರೇಗುವುದಿಲ್ಲವೆ? ವಿದ್ಯಾರ್ಥಿಗೆ ಗಡಿಯಾರದ ಮೇಲೆ ಕೋಪ ಬರಲು ಇನ್ನೂ ಒಂದು ಕಾರಣವಿದೆ. ಅಪ್ಪ, ಅಮ್ಮ, ಅಣ್ಣ, ಮಾವ  ಇವರೆಲ್ಲಾ ವಿದ್ಯಾರ್ಥಿಯನ್ನು ಸೋಮಾರಿ, ದಡ್ಡ ಎಂದು ಮೂದಲಿಸಿ ಆನಂದಪಡುತ್ತಾರೆ. ಕಾಲೇಜಿನಲ್ಲಿ ಸದಾ ಓದುವ ಕೆಲವು 'ಕುಡುಮಿ' ವಿದ್ಯಾರ್ಥಿಗಳಿಂದಲೂ ಇವರಿಗೆ ಆಗಾಗ ಪರ್ಯಾಯವಾಗಿ ತೇಜೋಭಂಗವಾಗುವುದುಂಟು. ಇನ್ನು ಮೇಷ್ಟರುಗಳು, ವಾರ್ಡನರು ಎಲ್ಲರೂ ಎದುರಿಗೆ ಸಿಕ್ಕಿದಾಗಲೆಲ್ಲಾ 'ಹುಡುಗರ ಕರ್ತವ್ಯಗಳು, ಜವಾಬ್ದಾರಿಗಳು' ಇವನ್ನು ಕುರಿತು ಉದ್ದುದ್ದನೆಯ ಭಾಷಣಗಳನ್ನು ಕೊರೆದು ತಲೆಚಿಟ್ಟು ಹಿಡಿಯುವಂತೆ ಮಾಡಿರುತ್ತಾರೆ. ಈ ಎಲ್ಲ ಸಜೀವಿಗಳ ಕಾಟ ಸಾಲದೆಂದು ಬೆಳಗಿನಜಾವದಲ್ಲಿ ಗಡಿಯಾರವೂ ಕೊರಳುಬ್ಬಿಸಿ ಕೇಕೆ ಹಾಕಿ ರೇಗಿಸಿದರೆ ವಿದ್ಯಾರ್ಥಿಗೆ ಹೇಗಾಗಬೇಕು?

ನಿಜವಾಗಿ ನೋಡಿದರೆ ಬೆಳಗಿನ ಜಾವ ಏಳುವ ವಿಷಯದಲ್ಲಿ ವಿದ್ಯಾರ್ಥಿಗಳಿಗಿರಲಿ ಅವರ ತಂದೆ,  ಅಣ್ಣ ಇವರುಗಳಿಗೇ ಆಸಕ್ತಿ ಇರುವುದಿಲ್ಲ. ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ತಾಯ್ತಂದೆಗಳು ಎಬ್ಬಿಸಿ ಗೋಳು ಹುಯ್ದುಕೊಳ್ಳುತ್ತಿದ್ದುದರಿಂದ ಅದರ ಸೇಡನ್ನು ತೀರಿಸಿಕೊಳ್ಳಲು ಹಾಗೆ ಮಾಡುತ್ತಾರೆ ಅಷ್ಟೆ! ತಂದೆ ತಾಯಿಗಳಿರಲಿ ಮೈಸೂರು ದೇಶದಲ್ಲಿ ದೇವರು ಕೂಡ ಏಳು ಗಂಟೆಗೆ ಮುಂಚೆ ಏಳುವುದಿಲ್ಲ. ಆಕಾಶವಾಣಿಯಲ್ಲಿ 'ಏಳು ನಾರಾಯಣಾ ಏಳು ಲಕ್ಷ್ಮೀರಮಣ ಏಳುಗಿರಿಯೊಡೆಯ, ಏಳಯ್ಯ ಬೆಳಗಾಯಿತು!' ಎಂದು ಬಗೆಬಗೆಯಾಗಿ ಕೂಗಿ ಉದಯರಾಗವನ್ನು ಹಾಡಿ ಎಬ್ಬಿಸಲು ಯತ್ನಿಸುತ್ತಾರೆ. ಹೊತ್ತು ಏರಿ, ಕತ್ತಲು ಆರಿ, ಸುತ್ತಲೂ ಕಾಗೆಗಳು ಅರಚಿ ತಣ್ಣಗಾದ ಮೇಲೂ ದೇವರು ಏಳದಿದ್ದರೆ ಭಕ್ತರು ಆಕ್ಷೇಪಣೆ ಮಾಡದೆ ಭಕ್ತಿಯಿಂದ ಮತ್ತೆ ಮತ್ತೆ ರಾಗವಾಗಿ ಹೆಸರು ಹಿಡಿದು ಕರೆದು ಎಬ್ಬಿಸುತ್ತಾರೆ. ಆದರೆ ವಿದ್ಯಾರ್ಥಿಗಳು 5–30ಕ್ಕೆ ಏಳುವುದು



ಸ್ವಲ್ಪ ತಡವಾದರೆ ಅಪ್ಪ–ಅಮ್ಮಂದಿರು 'ಗಡವ, ಏಳೋ ಕಂಡಿದೀನಿ, ಎದ್ದು ಓದಿಕೊ' ಎಂದು (ನಿದ್ದೆ ಗಣ್ಣಿನಲ್ಲೇ) 'ಆಶೀರ್ವಧಿಸು'ತ್ತಾರೆ. ಆದರೂ ಮಕ್ಕಳು ಏಳದಿದ್ದರೆ 'ಹಾಳಾಗಿ ಹೋಗು' ಎಂದು ಬಾಯಿ ತುಂಬಾ ಹರಸಿ ತಾವೂ ಮಲಗಿಬಿಡುತ್ತಾರೆ!

ಬೆಳಗಿನಜಾವ ಏಳಬೇಕೆನ್ನುವವರು, ಹಾಗೆ ಏಳದಿದ್ದವರನ್ನು ಸೋಮಾರಿಗಳ ಗುಂಪಿಗೆ ಸೇರಿಸಿ, ತಾವು ಬಹಳ ಕಾರ್ಯದಕ್ಷರೆಂದು ಕೊಚ್ಚಿಕೊಳ್ಳುತ್ತಾರೆ. 'The early bird Catches the worm' (ಬೇಗ ಏಳುವ ಹಕ್ಕಿ, ಸುಲಭವಾಗಿ ಹುಳುಗಳನ್ನು ಹಿಡಿದು ಆಹಾರ ದಕ್ಕಿಸಿಕೊಳ್ಳುತ್ತದೆ) ಎಂಬ ಗಾದೆಯನ್ನು ಆಗಾಗ ಉದ್ಧರಿಸಿ ಈ ಜನ ತಮ್ಮ ಕುಲದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಈ ಗಾದೆಯಲ್ಲಿ ಬರುವ ಹಕ್ಕಿಯ ಬಗ್ಗೆ ನನಗೆ ದ್ವೇಷವಿಲ್ಲ. ಅದು ಬೇಗ ಎದ್ದು ಹುಳುವನ್ನು ಹಿಡಿಯಿತು. ಈ ದೃಷ್ಟಿಯಿಂದ ಅದು ಬೇಗ ಎದ್ದದ್ದು ಸಾರ್ಥಕ. ಆದರೆ ನನಗೆ ಆ ಬಡ ಹುಳುವಿನ ನಿರ್ಭಾಗ್ಯ ಸ್ಥಿತಿಯನ್ನು ಕಂಡು ಸಂಕಟವಾಗುತ್ತದೆ. ಈ ಸಂಪತ್ತಿಗೆ ಅದು ಬೆಳಗಿನ ಜಾವಕ್ಕೇ ಎದ್ದು ತನ್ನ ದೇಹವನ್ನು ಹಕ್ಕಿಗೆ ಅರ್ಪಿಸಿಕೊಂಡು ಹಕ್ಕಿಗೆ ಕೀರ್ತಿ ತಂದುಕೊಡಬೇಕಾಗಿತ್ತೆ? ಸೋಮಾರಿ ಎಂದು ಜಗತ್ತು ಬೈದರೂ ಚಿಂತೆಯಿಲ್ಲ ಎಂದುಕೊಂಡು ಆ ಹುಳು ಲಕ್ಷಣವಾಗಿ ಬೆಳಗಾಗುವವರೆಗೆ ಮಲಗಿರಬಾರದಾಗಿತ್ತೆ! ಇದರಿಂದ ಬೆಳಗಿನಜಾವದ ಬಗ್ಗೆ ನನ್ನ ತಿರಸ್ಕಾರ ಹೆಚ್ಚಾದೀತೇ ಹೊರತು ಬೇರೆಯಲ್ಲ. ಬೆಳಗಿನಲ್ಲಿ ಎದ್ದಕೂಡಲೇ ಇಂತಹ ವಿಪತ್ತಿಗೆ ಸಿಕ್ಕುವುದಕ್ಕಾಗಲೀ, ಇಂತಹ ಕ್ರೂರ ಬೇಟೆಗೆ ಹೊರಡುವುದಕ್ಕಾಗಲೀ ನನ್ನ ಮನಸ್ಸು ಒಪ್ಪುವುದಿಲ್ಲ.

"Dawn is the fountain head of light, hope, and love" ಎಂದು ಒಬ್ಬ ಕವಿ ಹೊಗಳಿದ್ದಾನೆ. ಸಮಸ್ತ ಜೀವಜಾಲವೂ ನವಚೇತನ ಪಡೆದು ಮುಂದುವರಿಯಲು ಬೆಳಗಿನ ಜಾವವೇ ಬಹಳ ಪ್ರಶಸ್ತವಾದ ಸಮಯವೆಂದು ಆತ ಹೇಳುತ್ತಾನೆ. ಬೆಳಗಿನ ಜಾವದಲ್ಲಿ ರಾತ್ರಿಯ ನಿಸ್ಸಾರ, ಭೀಕರ ಮೌನ ಕಳೆದು, ಉಲ್ಲಾಸದಾಯಕವಾದ ಬೆಳಕು ಕಾಲಿಡುತ್ತದೆ. ಹಕ್ಕಿಗಳು ಆನಂದಗೀತೆ ಹಾಡುತ್ತಾ ಸಾಗುತ್ತವೆ. ತಂಗಾಳಿ ಮುದದಿಂದ ತೀಡುತ್ತದೆ. ಆದುದರಿಂದ ಅನಂತವಾದ ಹಾಗೂ ದಿವ್ಯವಾದ ಭಾವನೆಗಳು ನಮ್ಮ ತಲೆಯೊಳಗೆ ತೂರುವುದು ಬೆಳಗಿನ ಜಾವದಲ್ಲಿಯೇ ಎಂದು ಜನ ನಂಬಿದ್ದಾರೆ. ಇವರೆಲ್ಲರ ನಂಬಿಕೆಯ ಬುಡ ಭದ್ರವಿಲ್ಲದುದೆಂದು ಯಾರು ಬೇಕಾದರೂ ಸಾಧಿಸಬಲ್ಲರು. ಆತ್ಮವು 'ನಿದ್ದೆಯ ಮೇಲುದನ್ನು ಹೊದ್ದು' ತನ್ನ  ಸಹಜಸ್ಥಿತಿಯಲ್ಲಿ ಸ್ವತಂತ್ರವಾಗಿ ಬೆಚ್ಚಗೆ ಮಲಗಿದ್ದಾಗ ಬಲವಾಗಿ ಹಾಕಿರುವ ಮುಚ್ಚುಬೀಗವನ್ನು ಮುರಿದು ಮನುಷ್ಯನ ಬದುಕಿನ ಅತ್ಯಂತ ಪ್ರಮುಖ ಕಾಲವನ್ನು ಹಾಳುಮಾಡುವುದು ಸರಿಯೆಂದು ನಾನಂತೂ ಒಪ್ಪುವುದಿಲ್ಲ.

ವಿದ್ಯಾರ್ಥಿಗಳನ್ನು ಬಿಟ್ಟರೆ, ಇನ್ನು ಬೆಳಗಿನಜಾವ ಏಳುವ ಅಲ್ಪಸಂಖ್ಯಾತ ಮಿತ್ರರು ಕೆಲವರಿದ್ದಾರೆ. ಬೆಳಗಿನಜಾವ ಏಳಲೇಬೇಕಾದ ನತದೃಷ್ಟರೆಂದರೆ ಕೆಲವು ಕಾರಖಾನೆಗಳ ಕೆಲಸಗಾರರು. ಉದರಂಭರಣಕ್ಕಾಗಿ ಅವರು (ಇಷ್ಟವಿರಲಿ ಇಲ್ಲದಿರಲಿ) ಕರ್ತವ್ಯ

ಪ್ರಜ್ಞೆಯಿಂದ ಏಳುತ್ತಾರೆಯೇ ಹೊರತು ಸ್ವ–ಇಚ್ಛೆ–ಪ್ರೇರಣೆಗಳಿಂದ ಅಲ್ಲ. ಇನ್ನು ಕೆಲವರು 'ಶಿಸ್ತಿನ ಸಿಪಾಯಿ'ಗಳೆಂದು ಹೆಮ್ಮೆಪಡುವ ನಾಗರೀಕರು. ಇವರು ನಾಲ್ಕುಗಂಟೆಗೇ ಏಳುತ್ತಾರೆ. ವ್ಯಾಯಾಮ ಸ್ನಾನಾದಿಗಳನ್ನು ಮಾಡಿ ಶತಪಥ ಹಾಕುತ್ತಾ ಓದುತ್ತಾ ಕಾಲ ಕಳೆಯುತ್ತಾರೆ ಅಥವಾ ಒಂದೆರಡು ಮೈಲಿಗಳಷ್ಟು ಗಾಳಿ ಸವಾರಿ ಮಾಡಿಕೊಂಡು ಬರುತ್ತಾರೆ. ಇಂಥವರು ಬಹಳ ಸ್ವಲ್ಪ ಮಂದಿ. Pillars of Society (ಸಮಾಜದ ಸ್ತಂಭಗಳು) ಎಂದು ಕರಸಿಕೊಳ್ಳುವುದುಕ್ಕಾಗಿ ಇವರು ತಮ್ಮ ಬೆಳಗಿನ ಜಾವದ ನಿದ್ರಾಸುಖವನ್ನು ಹೋಮ ಮಾಡುತ್ತಾರೆ. ಅಲ್ಲದೆ ಬೇಗ ಎದ್ದು ಲವಲವಿಕೆಯಿಂದ ಓಡಾಡುವುದರಿಂದ ತಮ್ಮ ಆರೋಗ್ಯ ವರ್ಧಿಸಿ ಬೇಗ ತಾವು ದೀರ್ಘಾಯುಗಳೂ ಬಲಿಷ್ಠರೂ ಆಗಬಹುದೆಂಬ ಕಲ್ಪನೆಯ ಭೂತ ಅವರನ್ನು ಹೊಕ್ಕು ಈ ಕೆಲಸ ಮಾಡಿಸುತ್ತದೆ. ನಾವೆಲ್ಲರೂ ಸಮಾಜದ ಸ್ತಂಭಗಳಾವುದು ಬೇಡ. ಆದುದರಿಂದ ಅಂಥ ಕೆಲವರಿಗೇ ಇದನ್ನು ಬಿಟ್ಟುಕೊಡೋಣ. ಇವರನ್ನು ಬಿಟ್ಟರೆ ಇನ್ನು ಬೆಳಗಿನಜಾವ ಏಳುವವರೆಂದರೆ ಕೆಲವರು ಮುದುಕರು ಮತ್ತು ಧಾರ್ಮಿಕರು. ಮುದುಕರದು 'ಅಭಾವ ವೇದಾಂತ' ವಾದುದರಿಂದ ಅವರನ್ನು ಕೈಬಿಡಬಹುದು. ಧಾರ್ಮಿಕರು ಬೆಳಗಿನ ಜಾವಕ್ಕೇ ಎದ್ದು ಕೈಯಲ್ಲಿ ಒಂದು ಕೋಲನ್ನೂ ಬುಟ್ಟಿಯನ್ನೂ ಹಿಡಿದು ಹೊರಗೆ ಸುತ್ತಾಡಿ ಬರಲು ಹೊರಡುತ್ತಾರೆ. ಸುತ್ತಾಟಕ್ಕೆ ಸುತ್ತಾಟವೂ ಆಯಿತು. ಅದರ ಜೊತೆಗೆ ರಸ್ತೆಯ ಬದಿಯಲ್ಲಿ ಅವರಿವರ ಮನೆಯ ಕಾಂಪೌಂಡಿನ ಸುತ್ತ ಬೆಳೆದ ಹೂವುಗಳನ್ನು (ಆ ಮನೆಯವರು ಏಳುವುದಕ್ಕೆ ಮೊದಲೇ) ಬಿಡಿಸಿಕೊಂಡು ಮನೆಗೆ ಬಂದು ವೈಭವದಿಂದ ದೇವರ ಪೂಜೆಯನ್ನು ನೆರವೇರಿಸುತ್ತಾರೆ. ಈ ಬಗೆಯ ಸ್ವಾರ್ಥ, ಈ ಬಗೆಯ ವಿವಿಧೋದ್ದೇಶ ಯೋಜನೆ ನನಗೆ ಹಿಡಿಸುವುದಿಲ್ಲ.

ವಿದ್ಯಾರ್ಥಿದಿಸೆಯಲ್ಲಿ ಆರಂಭವಾದ ನನ್ನ ಬೆಳಗಿನಜಾವದ ವೈರವನ್ನೂ ನಿದ್ರೆಯ ಸ್ನೇಹವನ್ನೂ ಈಗ ಶ್ರದ್ಧೆಯಿಂದ ಯಶಸ್ವಿಯಾಗಿ ಮುಂದುವರಿಸಿಕೊಂಡು ಬರುತ್ತಿದ್ದೇನೆ. ಮೊದಲಾದರೆ ಎದ್ದು ಓದಬೇಕು ಎಂಬ ಹೆದರಿಕೆಯಾದರೂ ಇರುತ್ತಿತ್ತು. ಈಗ ಅನಿರ್ಬಾಧಿತನಾಗಿ ನಿದ್ರೆಯ ಸ್ವಾತಂತ್ರ್ಯವನ್ನು ಚಲಾಯಿಸುತ್ತಿದ್ದೇನೆ. "Blessings on him that first invented sleep" ಎಂಬ 'ಸಾಂಕೋ'ನ ಮಾತುಗಳು, 'ತುಂಬುನಿದ್ರೆಯಿಂದೆ ದೇಹಕ್ಕೆ ಪರಮಾರೋಗ್ಯ' ಎಂಬ ರಾಜಶೇಖರನ ಮಾತುಗಳು ಮತ್ತು 'ಔಕುವುದು ಬಲುನಿದ್ದೆ' ಎಂಬ ಕುಮಾರವ್ಯಾಸನ ವಾಣಿ ನನ್ನ ನಿರ್ಧಾರಕ್ಕೆ ಸ್ಫೂರ್ತಿಯನ್ನು ತಂದುಕೊಟ್ಟಿವೆ.

❑



# ಊರು ಕೇರಿ (ಓದು ಪಠ್ಯ)

– ಡಾ. ಸಿದ್ಧಲಿಂಗಯ್ಯ

## ಗೋಪಾಲಸ್ವಾಮಿ ಅಯ್ಯರ್ ವಿದ್ಯಾರ್ಥಿನಿಲಯ

ಶ್ರೀರಾಮಪುರದ ಆರ್. ಗೋಪಾಲಸ್ವಾಮಿ ಅಯ್ಯರ್ ದಲಿತ ವಿದ್ಯಾರ್ಥಿನಿಲಯಕ್ಕೆ ನನ್ನ ತಾಯಿ ನನ್ನನ್ನು ಸೇರಿಸಿದಳು. ಅವಳು ಅದೇ ವಿದ್ಯಾರ್ಥಿನಿಲಯದಲ್ಲಿ ಕಸ ಗುಡಿಸುವ ಕೆಲಸ ಮಾಡುತ್ತಿದ್ದಳು. ಇದರಿಂದ ನನಗೆ ಕೊಂಚ ಧೈರ್ಯವಿತ್ತು. ಬಡತನವೇ ಮೈದಳೆದಂತೆ ಇದ್ದ ನನ್ನ ತಂದೆ ಆಗಾಗ ಅಲ್ಲಿಗೆ ಬರುತ್ತಿದ್ದನು. ವಿದ್ಯಾರ್ಥಿನಿಲಯದ ವಾಸ ಹೊಸ ಅನುಭವ ನೀಡಿತು. ನಾವು ಒಟ್ಟು ಮುನ್ನೂರು ಜನ ವಿದ್ಯಾರ್ಥಿಗಳಿದ್ದೆವು. ಆ ವಿದ್ಯಾರ್ಥಿಗಳು ರಾಜ್ಯದ ನಾನಾ ಊರುಗಳಿಂದ ಬಂದವರು. ಕನ್ನಡವನ್ನು ಬೇರೆ ಬೇರೆ ರೀತಿಯಲ್ಲಿ ಮಾತನಾಡುತ್ತಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯವರ ಕನ್ನಡ ಒಂದು ರೀತಿಯಾದರೆ, ಕೊಳ್ಳೆಗಾಲ ಮಾಂಬಳ್ಳಿಯ ಕಡೆಯವರು ಬಾ ಹೋಗು ಎಂಬುದನ್ನು ಬಾರುಡೊ, ಹೋಗುಡೋ ಎನ್ನುತ್ತಿದ್ದರು. ಮಳವಳ್ಳಿ ಕಡೆಯ ಹುಡುಗರು ಇದನ್ನೇ ಬಾರುಜಾ, ಹೋಗುಜಾ ಎನ್ನುತ್ತಿದ್ದರು. ಬೆಂಗಳೂರು ನಗರದಲ್ಲಿಯೇ ಇದ್ದು ಅಲ್ಲಿ ಸೇರಿಕೊಂಡಿದ್ದ ನಾವು ನಾಲ್ಕೈದು ಜನ ಗೆಳೆಯರು ಬಾಯಿ ಬಿಟ್ಟರೆ ಬೈಗುಳಗಳಲ್ಲದೆ ಇನ್ನೇನು ಬರುತ್ತಿರಲಿಲ್ಲ. ಒಂದೊಂದು ಕೊಠಡಿಯಲ್ಲಿ ಹತ್ತರಿಂದ ಮೂವತ್ತು ಜನರವರೆಗೂ ಮಲಗುತ್ತಿದ್ದೆವು. ಹುಡುಗರ ಮೈಯಲ್ಲಿ ಕಜ್ಜಿ ವಿಪರೀತ. ಕಜ್ಜಿ ಬಂದವರು ಮುಲಾಮು ಹಚ್ಚಿಕೊಂಡು ಬಿಸಿಲಿನಲ್ಲಿ ಮೈಕಾಯಿಸುವುದು ಸಾಮಾನ್ಯವಾಗಿತ್ತು.

ಈ ವಿದ್ಯಾರ್ಥಿನಿಲಯದ ಕಟ್ಟಡ ಬಹಳ ದೊಡ್ಡದು. ಅದರ ಮುಂದೆ ನಾಲ್ಕು ಎಕರೆ ಮೈದಾನ ರಸ್ತೆಯ ಆ ಬದಿಗೆ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಮತ್ತು ಪೋಲೀಸ್ ಸ್ಟೇಷನ್. ರಾತ್ರಿಯ ಹೊತ್ತು ಪೋಲೀಸ್ ಸ್ಟೇಷನ್ನಿನಿಂದ ವಿಕಾರ ಧ್ವನಿಗಳು ಕೇಳಿ ಬರುತ್ತಿದ್ದವು. ಅವು ಬಂಧಿತರಿಗೆ ಪೊಲೀಸರ ಹೊಡೆತದ ಫಲ. ಮುಂದಿದ್ದ ಮೈದಾನದಲ್ಲಿ ನಮ್ಮ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳು ತುಂಬ ಚೆನ್ನಾಗಿ ವಾಲಿಬಾಲ್ ಆಡುತ್ತಿದ್ದರು. ಆಟ ನೋಡಲು ಬಹಳ ಜನ ಸೇರುತ್ತಿದ್ದರು. ಕುರ್ಚಿ ಹಾಕಿಕೊಂಡು ನಮ್ಮ ವಾರ್ಡನ್ ಆಟ ನೋಡುತ್ತಿದ್ದಾಗ ಚೆಂಡು ಅವರಿಗೆ ಬಿರುಸಾಗಿ ತಾಗಿ ಅವರು ಕೆಳಗೆ ಬಿದ್ದು ಆಸ್ಪತ್ರೆ ಸೇರಬೇಕಾಯಿತು. ಈ ವಾಲಿಬಾಲ್ ಟೀಮಿನವರು ರಾಜ್ಯದ ಟೀಮಿಗೂ ಆಟಗಾರರಾಗಿ ಹೆಸರು ಗಳಿಸಿದ್ದರು. ಟೀಮಿಗೆ ಅಂಬೇಡ್ಕರ್ ವಾಲಿಬಾಲ್ ಟೀಮ್ ಎಂದು ಹೆಸರಿಟ್ಟಿದ್ದರು. ಮೈದಾನದ ಇನ್ನೊಂದು ಕಡೆ ಕೆನಡಿ ಕಬಡ್ಡಿ ಟೀಮ್‌ನವರು ಬಹಳ ಚೆನ್ನಾಗಿ ಕಬಡಿ ಆಡುತ್ತಿದ್ದರು. ಅವರು ಬಹಳ ಒಳ್ಳೆಯ ಆಟಗಾರರಾಗಿದ್ದು ಅನೇಕ ಟೀಮುಗಳನ್ನು ಸೋಲಿಸಿದ್ದರು.

## ಸಂಪಿಗೆ ಮರ–ಕೊಳ್ಳಿದೆವ್ವ

ವಿದ್ಯಾರ್ಥಿನಿಲಯದ ಒಳಭಾಗದಲ್ಲಿ ಒಂದು ದೊಡ್ಡ ಸಂಪಿಗೆ ಮರವಿತ್ತು. ಅದರ ತುಂಬ ಹೂಗಳು. ಕೆಳಗೂ ಹೂಗಳು ಬಿದ್ದಿರುತ್ತಿದ್ದವು. ಆ ಸಂಪಿಗೆ ಮರದಲ್ಲಿ ದೆವ್ವ ಇರುವುದಾಗಿ ಹಿರಿಯ ವಿದ್ಯಾರ್ಥಿಗಳು ಹೇಳಿದ್ದರು. ಸಂಜೆ ಆಯಿತೆಂದರೆ ಆ ಮರದ ಬಳಿ ಸುಳಿಯುವುದಕ್ಕೂ ಭಯವಾಗುತ್ತಿತ್ತು. ಆ ಮರದೊಳಗೆ ಹಲವು ದೆವ್ವಗಳು ಸಂಸಾರ ಮಾಡಿಕೊಂಡಿರುವುದಾಗಿ ತಿಳಿದ ಮೇಲಂತೂ ಹುಡುಗರು ಆ ಮರವನ್ನು ನೋಡುವುದಕ್ಕೇ ಹೆದರುತ್ತಿದ್ದರು. ವಿದ್ಯಾರ್ಥಿನಿಲಯದ ಪಕ್ಕ ಇದ್ದ ಹಳೆಯ ಬಾವಿಯೊಳಗೆ ದೆವ್ವವೊಂದು ಇದೆ ಎಂದು ಎಲ್ಲರೂ ನಂಬಿದ್ದರು. ವಿದ್ಯಾರ್ಥಿಗಳು ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ತಣ್ಣೀರು ಸ್ನಾನ ಮಾಡುತ್ತಿದ್ದರು. ದೊಡ್ಡದಾದ ಸ್ನಾನದ ತೊಟ್ಟಿಗೆ ತಮ್ಮ ಊಟದ ತಟ್ಟೆಗಳಿಂದ ನೀರನ್ನು ಮೊಗೆದು ಮೈಗೆ ಹುಯ್ದು ಕೊಳ್ಳುವುದು ಸ್ನಾನ ಮಾಡುವ ರೀತಿ. ಒಂದು ಬೆಳಗಿನ ಜಾವ ಹೀಗೆ ಹತ್ತಾರು ಜನ ಸ್ನಾನ ಮಾಡುತ್ತಿದ್ದಾಗ ಎದುರಿಗಿದ್ದ ಬಯಲಿನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಹತ್ತಿಕೊಂಡು ಉರಿಯತೊಡಗಿತು. ಕೊಳ್ಳಿದೆವ್ವ ಎಂದು ಕೂಗುತ್ತಾ ಹುಡುಗರು ಓಡತೊಡಗಿದರು. ಬಹಳ ಜನ ಬರಿ ಮೈಯಲ್ಲೇ ಸ್ನಾನ ಮಾಡುತ್ತಿದ್ದರು. ದೂರದಲ್ಲಿದ್ದ ಬಟ್ಟೆ ಧರಿಸುವ ಗೊಡವೆಗೆ ಹೋಗದೆ ಪ್ರಾಣ ಉಳಿದರೆ ಸಾಕೆಂದು ಎಲ್ಲರೂ ಪರಾರಿಯಾದರು. ಅರ್ಧಂಬರ್ಧ ಸೋಪು ಹಚ್ಚಿದ್ದವರು, ಬರಿ ಮೈಯಲ್ಲೇ ಬಂದಿದ್ದರಿಂದ ಸ್ನಾನ ಮಾಡದವರಿಗೆ ತಾವೇ ಪಿಶಾಚಿಗಳಂತೆ ಕಂಡು ಭಯ ಹುಟ್ಟಿಸಿದರು. ಇದ್ದಕ್ಕಿದ್ದಂತೆ ಬಯಲಿನಲ್ಲಿ ಉರಿವ ಬೆಂಕಿ ಆರಿದಾಗ ಹುಡುಗರೆಲ್ಲ ಮರಳಿ ಬಂದು ತಮ್ಮ ಬಟ್ಟೆಬರೆ ತೆಗೆದುಕೊಂಡರು.

## ಪ್ರಾರ್ಥನೆಗೆ ಎಬ್ಬಿಸಿದ ದೆವ್ವ

ಬೆಳಿಗ್ಗೆ ಸ್ನಾನ ಮುಗಿಸಿದ ಕೂಡಲೇ ಎಲ್ಲರೂ ಪ್ರಾರ್ಥನೆಗೆ ಹೋಗಬೇಕಾಗಿತ್ತು. ಮುನ್ನೂರು ನಾನೂರು ಜನ ಕೂರಲು ಅನುಕೂಲವಾದ ಪ್ರಾರ್ಥನಾಲಯವಿತ್ತು. ಅದರಲ್ಲಿ ಒಳ್ಳೆಯ ವಿಶಾಲವಾದ ವೇದಿಕೆಯೂ ಇತ್ತು. ಶಿಸ್ತಿನಿಂದ ಸಾಲಾಗಿ ಕುಳಿತು ಬೆಳಗಿನ ಐದು ಗಂಟೆಯಲ್ಲಿ ಎಲ್ಲರೂ ಪ್ರಾರ್ಥನೆ ಮಾಡುತ್ತಿದ್ದಾಗ ಒಬ್ಬ ಹುಡುಗ 'ಅಯ್ಯಯ್ಯೋ' ಎಂದು ಚೀರುತ್ತ ಪ್ರಾರ್ಥನಾಲಯಕ್ಕೆ ನುಗ್ಗಿ ಪ್ರಾರ್ಥನೆಗೆ ಭಂಗ ತಂದನು. ಇದನ್ನು ಕಂಡು ಹೆದರಿದ ಪಾಲಕರು 'ಪ್ರಯರ್ ಸ್ಟಾಪ್ ಕರೋ' ಎಂದರು. ನಾವೆಲ್ಲ ಗಾಬರಿಯಿಂದ ಪ್ರಾರ್ಥನೆ ನಿಲ್ಲಿಸಿದೆವು. ಪಾಲಕರು ಅವನ ತೊಂದರೆ ಏನೆಂದು ವಿಚಾರಿಸಿದರು. ಅವನು ಬೆಳಗ್ಗೆ ಎದ್ದು ತಣ್ಣೀರು ಸ್ನಾನವನ್ನು ಮಾಡಿರಲಿಲ್ಲ. ಪ್ರಾರ್ಥನೆಗೂ ಕೈಕೊಟ್ಟು ತನ್ನ ಕೊಠಡಿಯಲ್ಲಿ ಮಲಗಿದ್ದ. ಇದನ್ನು ಅವನು ಬಹಳ ದಿನದಿಂದ ಮಾಡುತ್ತಿದ್ದ. ಯಾರ ಕೈಗೂ ಸಿಕ್ಕಿಬಿದ್ದಿರಲಿಲ್ಲ. ಈ ದಿನವೂ ಅವನು ಹಾಗೆ ಮಲಗಿದ್ದಾಗ ಯಾರೋ ಅವನ ಬಳಿ ಬಂದು 'ಏಳಪ್ಪ ಪ್ರಾರ್ಥನೆಗೆ ಹೋಗು'



ಎಂದರಂತೆ. ಅವನು ವಾರ್ಡನ್ ಇರಬಹುದು ಎಂದು ಹೊದಿಕೆ ತೆಗೆದು ನೋಡಿದರೆ ವಾರ್ಡನ್ ಅಲ್ಲ, ಇವನ ಚಾಪೆಯ ಪಕ್ಕ ನೆಲದ ಮೇಲೆ ಅವನ ಕಾಲಿದ್ದರೂ ಛಾವಣಿಯ ಹತ್ತಿರ ಬಹು ಮೇಲೆ ತಲೆ ಇದೆ. ಅಂಥ ವ್ಯಕ್ತಿಯನ್ನು ಇವನು ಎಂದೂ ನೋಡಿರಲಿಲ್ಲ. ಅದು ದೆವ್ವವೆಂದು ಅರಿವಾಗಲು ಇವನಿಗೆ ಬಹಳ ಹೊತ್ತು ಬೇಕಾಗಲಿಲ್ಲ. ಕೂಡಲೇ ಎದ್ದು ಚೀರುತ್ತಾ ಪ್ರಾರ್ಥನಾಲಯಕ್ಕೆ ನುಗ್ಗಿದನು. ಈ ಸಂಗತಿಯನ್ನು ಅವನ ಬಾಯಿಂದ ಕೇಳಿದ್ದೇ ತಡ ವಾರ್ಡನ್ ಅವನಿಗೆ ಹಿಗ್ಗಾಮುಗ್ಗಾ ಚಚ್ಚಿ ಪಾರ್ಥನೆಗೆ ಕೂರಿಸಿದನು. ಅವನ ಮೈನಡುಕ ನಿಂತಿರಲಿಲ್ಲ. ನಮ್ಮ ಪ್ರಾರ್ಥನೆ ಮುಂದುವರೆಯಿತು.

## ಊಟಕ್ಕೆ ಕುಳಿತಿದ್ದ ದೆವ್ವ

ಒಂದು ದಿನ ಭೋಜನಾಲಯದಲ್ಲಿ ಎಲ್ಲರೂ ಊಟಕ್ಕೆ ಸಾಲಾಗಿ ಕುಳಿತಿದ್ದರು. ಅದು ರಾತ್ರಿಯ ಊಟ. ಪಕ್ಕದಲ್ಲಿ ಕುಳಿತ ವ್ಯಕ್ತಿಯ ಬಗ್ಗೆ ಒಬ್ಬ ವಿದ್ಯಾರ್ಥಿಗೆ ಅನುಮಾನ ಬಂತು. ಇಂಥ ವ್ಯಕ್ತಿಯನ್ನು ಎಲ್ಲೂ ನೋಡಿಲ್ಲವಲ್ಲ ಎಂಬುದೇ ಆ ವಿದ್ಯಾರ್ಥಿಯ ಅನುಮಾನಕ್ಕೆ ಕಾರಣ. ವಿದ್ಯಾರ್ಥಿ ವ್ಯಕ್ತಿಯ ಮುಖವನ್ನು ನೋಡಿದನು. ಆ ಹೊಸ ವ್ಯಕ್ತಿ ಸಹಜವಾಗಿಯೇ ಕುಳಿತಿದ್ದನು. ವಿದ್ಯಾರ್ಥಿ ಅನುಮಾನ ಬಗೆಹರಿಯದೆ ವ್ಯಕ್ತಿಯ ಪಾದಗಳನ್ನು ನೋಡಿದನು. ಅವು ಬೇರೆಯವರ ಪಾದಗಳಿಗಿಂತ ಮೂರುಪಟ್ಟು ಉದ್ದವಾಗಿದ್ದುವಲ್ಲದೆ ತಿರುಗುಮುರುಗಾಗಿದ್ದವು. ವಿದ್ಯಾರ್ಥಿಗೆ ಇದು ದೆವ್ವವೆಂದು ಹೊಳೆದದ್ದೇ ತಡ ಅವನು 'ದೆವ್ವಾ ದೆವ್ವಾ' ಎಂದು ಜೋರಾಗಿ ಕೂಗುಹಾಕಿದನು. ಇದನ್ನು ಕೇಳಿದ ಹುಡುಗರು ಹಿಂದು ಮುಂದು ನೋಡದೆ ಪರಾರಿಯಾದರು. ರಾತ್ರಿ ಊಟವಾದ ನಂತರ ವಿದ್ಯಾರ್ಥಿಗಳು ದೆವ್ವದ ಕಥೆಗಳನ್ನು ಮಲಗುವ ತನಕ ಹೇಳುತ್ತಿದ್ದರು. ಮಲಗಿದ ಮೇಲೂ ದೆವ್ವಗಳದೇ ಕನಸು.

## ಮಾರಕುನ್ನ

ಮಳವಳ್ಳಿಯ ಕಡೆ ಮಾರಕುನ್ನ ಎಂಬ ಸಾಹಸಿ ಇದ್ದನು. ಅವನು ದೆವ್ವಗಳಿಗೆ ಅಂಜುತ್ತಿರಲಿಲ್ಲ. ಕಣ ಮಾಡುವಾಗ ಮೆದೆಯ ಬಳಿ ಒಬ್ಬನೇ ಮಲಗುತ್ತಿದ್ದನು. ಅವನ ಬಳಿ ಒಳ್ಳೆಯ ಮಚ್ಚಿತ್ತು. ಆ ಮಚ್ಚನ್ನು ಸದಾ ಪಕ್ಕದಲ್ಲಿಟ್ಟುಕೊಂಡು ಮಲಗುತ್ತಿದ್ದನು. ಒಂದು ರಾತ್ರಿ ಅವನು ಹೀಗೆ ಮಲಗಿದ್ದಾಗ ದೆವ್ವಗಳು ಬಂದು ಮೆಲ್ಲಗೆ ಅವನ ಮಚ್ಚನ್ನು ಅಪಹರಿಸಿದವು. ಹೀಗೆ ಮಾಡಿದ್ದಷ್ಟೇ ಅಲ್ಲ, ಇವನ ಸುತ್ತ ವೃತ್ತಾಕಾರದಲ್ಲಿ ನಿಂತು ಮಚ್ಚನ್ನು ಹಿಡಿದು 'ಮಾರಕುನ್ನ ಮಚ್ಚು ಕೊಟ್ಟ. ಸುಯ್ಯೋ ಸುಯ್ಯೋ' ಎಂದು ನೃತ್ಯ ಮಾಡತೊಡಗಿದವು. ಅವನ ಮಚ್ಚು ಒಂದು ದೆವ್ವದ ಕೈಯಿಂದ ಇನ್ನೊಂದು ದೆವ್ವದ ಕೈಗೆ ಬದಲಾವಣೆಯಾಗುತ್ತಿತ್ತು. ಮಾರಕುನ್ನನಿಗೆ ಎಚ್ಚರವಾಯಿತು. ನೋಡುತ್ತಾನೆ ತನ್ನ ಮಚ್ಚನ್ನೇ ಹಿಡಿದು ಗೇಲಿ ಮಾಡುತ್ತಾ ಕುಣಿಯುತ್ತಿರುವ ದೆವ್ವಗಳು. ಮಾರಕುನ್ನ ಗಾಬರಿಗೊಳ್ಳಲಿಲ್ಲ. ತಾನೂ ದೆವ್ವಗಳ ಜೊತೆ ಕುಣಿತಕ್ಕೆ ಸೇರಿಕೊಂಡು ದೆವ್ವಗಳಂತೆಯೇ ಹೆಜ್ಜೆ ಇಟ್ಟು ಕುಣಿಯತೊಡಗಿದನು. ದೆವ್ವಗಳಿಗೂ ಸಂತೋಷವಾಯಿತು.

ಮಚ್ಚು ತನ್ನ ಕೈಗೆ ಬದಲಾದದ್ದೆ ತಡ ಒಂದು ದೆವ್ವದ ಜುಟ್ಟನ್ನು ಹಿಡಿದು ಒಂದು ಕೂದಲನ್ನು ಕತ್ತರಿಸಿ ತನ್ನ ತೊಡೆಯನ್ನು ಬಗೆದು ಅದರಲ್ಲಿ ಇಟ್ಟುಕೊಂಡನು. ಉಳಿದ ದೆವ್ವಗಳು ಓಡಿದವು. ಕೂದಲು ಕಳೆದುಕೊಂಡ ದೆವ್ವ ಇವನ ಗುಲಾಮನಾಯಿತು. ಅವನು ಆ ದೆವ್ವದ ಕೈಯಿಂದ ಬಹಳ ಕೆಲಸ ಮಾಡಿಸಿದನು. ಗದ್ದೆಯ ಕೆಲಸದಿಂದ ಮನೆ ಕಟ್ಟುವ ಕೆಲಸದವರೆಗೂ ಇದು ನಡೆಯಿತು. ಮಾರಕುನ್ನನಿಗೆ ಆ ದೆವ್ವದ ಮೇಲೆ ಸ್ನೇಹ ಕರುಣೆ ಹೆಚ್ಚಾಗಿ ಅದರ ಕೂದಲನ್ನು ಹಿಂದಿರುಗಿಸಿ ಕಳುಹಿಸಿಕೊಟ್ಟನು. ಮಳವಳ್ಳಿ ಕಡೆಯವರು ಈ ಕಥೆ ಹೇಳಿದರೆ ಮಡಿಕೇರಿ ಕಡೆಯ ವಿದ್ಯಾರ್ಥಿ ಮರಿ ಎನ್ನುವವನು ಅವನ ಊರಿಗೆ ಹೋಗುವ ದಾರಿಯಲ್ಲಿ ಒಂದು ಮರದ ಮೇಲೆ ಇಪ್ಪತ್ತು, ಮೂವತ್ತು ದೆವ್ವಗಳಿವೆಯೆಂದೂ, ಅವು ರಾತ್ರಿಯೆಲ್ಲಾ ಗೋಳಾಡುತ್ತವೆಯೆಂದೂ ಹೇಳುತ್ತಿದ್ದನು. ಹಿಂದೆ ಯಾವಾಗಲೋ ಬಸ್ ಅಪಘಾತವೊಂದರಲ್ಲಿ ಪ್ರಯಾಣಿಕರೆಲ್ಲ ಸತ್ತು ಹೋದರು. ಅವರೆಲ್ಲಾ ದೆವ್ವಗಳಾಗಿ ಆ ಮರವನ್ನು ಆಶ್ರಯಿಸಿಕೊಂಡಿದ್ದಾರೆ. ರಾತ್ರಿಯಾಗುತ್ತಲೇ ಅವರ ಗೋಳಾಟ ಹೇಳತೀರದು ಎಂದು ಭಯಪೂರ್ಣವಾಗಿ ವರ್ಣಿಸುತ್ತಿದ್ದನು. ಹೀಗೆ ನಮ್ಮ ಮನಸ್ಸೆಲ್ಲಾ ದೆವ್ವಗಳ ಭಯದಿಂದ ತುಂಬಿತ್ತು. ಯಾರಾದರೂ ಅಪರಿಚಿತರು ರಾತ್ರಿ ಹೊತ್ತು ಬಂದರೆ ನಾವು ಮೊದಲು ಅವರ ಕಾಲನ್ನು ನೋಡಿ ಆತ ಮನುಷ್ಯನೋ, ದೆವ್ವವೋ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಿದ್ದೆವು. ಕಾಲು ಹಿಂದುಮುಂದಾಗಿರದಿದ್ದರೆ, ಕಣ್ಣು ನೆತ್ತಿಯಲ್ಲಿರದಿದ್ದರೆ ಆತ ದೆವ್ವವಲ್ಲ ಎಂದು ಧೈರ್ಯ ತಂದುಕೊಳ್ಳುತ್ತಿದ್ದೆವು.

## ಪ್ರಾರ್ಥನೆ ಮಾಡದೆ ಸತ್ತವನು

ಪ್ರಾರ್ಥನೆಗೆ ಬರದ ಹುಡುಗರ ಬಗ್ಗೆ ಪಾಲಕರಿಗೆ ಅಪಾರವಾಗಿ ಸಿಟ್ಟು ಬಂದಿತು. ಅವರು ಬೆಳಗಿನ ಜಾವ ಪ್ರಾರ್ಥನೆ ನಡೆಯುತ್ತಿದ್ದಾಗ ಕೊಠಡಿಗಳಲ್ಲಿ ಇನ್ನೂ ಯಾರಾದರೂ ಮಲಗಿದ್ದಾರೆಯೇ ಎಂದು ಪರೀಕ್ಷಿಸತೊಡಗಿದರು. ಯಾರಾದರೂ ಹಾಗೆ ಮಲಗಿದ್ದರೆ ಅವರ ಹೆಸರನ್ನು ಬರೆದುಕೊಂಡು ಬರುತ್ತಿದ್ದರು. ಪ್ರಾರ್ಥನಾಲಯದಲ್ಲಿ ಮುನ್ನೂರು ಜನರ ಹೆಸರನ್ನು ಕೂಗಿ ಹಾಜರಿ ತೆಗೆದುಕೊಳ್ಳುವುದಕ್ಕಿಂತ ಕೊಠಡಿಗೇ ಹೋಗಿ ಪ್ರಾರ್ಥನೆಗೆ ಬಾರದವರನ್ನು ಕಂಡುಹಿಡಿಯುವುದು ಅವರಿಗೆ ಸುಲಭವಾಗಿತ್ತು. ಹೀಗೆ ಮಲಗಿದ್ದವರ ಹೆಸರನ್ನು ಭೋಜನಾಲಯದಲ್ಲಿ ಎಲ್ಲರೂ ಊಟಕ್ಕೆ ಕುಳಿತಿದ್ದಾಗ ಕೂಗುತ್ತಿದ್ದರು. ಪ್ರಾರ್ಥನೆಗೆ ತಪ್ಪಿಸಿಕೊಂಡವನು ಎದ್ದು ನಿಲ್ಲಬೇಕಾಗಿತ್ತು.

ಅವನನ್ನು ಊಟದ ಪಂಕ್ತಿಯಿಂದ ಹೊರಕ್ಕೆ ಕಳುಹಿಸುತ್ತಿದ್ದರು. ಆ ದಿನ ಆತನಿಗೆ ಊಟಕ್ಕೆ ಸಂಚಕಾರವಾಗುತ್ತಿತ್ತು. ಪ್ರಾರ್ಥನೆ ಮಾಡಿದವನಿಗೆ ಊಟ, ಪ್ರಾರ್ಥನೆ ಮಾಡದಿದ್ದವನಿಗೆ ಉಪವಾಸ ಎಂಬ ನಿಯಮ ಅಲ್ಲಿ ಕಟ್ಟುನಿಟ್ಟಾಗಿ ಜಾರಿಯಾಗಿತ್ತು. ಬೆಳಗಿನ ಜಾವ ಸುಖವಾಗಿ ನಿದ್ದೆ ಹೊಡೆದವರು ಊಟದಿಂದ ವಂಚಿತರಾಗಿ



ಭೋಜನಾಲಯದಿಂದ ತಮ್ಮ ತಟ್ಟೆಯೊಂದಿಗೆ ಬಹಳ ದುಃಖದಿಂದ ನಿಧಾನವಾಗಿ ಹೆಜ್ಜೆ ಇಡುತ್ತ ಹೊರಕ್ಕೆ ಹೋಗುತ್ತಿದ್ದರು. ಗೋವಿಂದ ಎಂಬ ನನ್ನ ಗೆಳೆಯನೊಬ್ಬನು ಬಹಳ ನಿದ್ರಾಪ್ರಿಯ. ಊಟ ಬಿಟ್ಟರೂ ಅವನು ನಿದ್ದೆಯನ್ನು ಬಿಡಲು ತಯಾರಿರಲಿಲ್ಲ. ಪ್ರಾರ್ಥನೆಗೆ ಕೈಕೊಟ್ಟು ನಿದ್ದೆ ಹೋಗುವುದರಲ್ಲಿ ಬಹಳ ಹೆಮ್ಮೆ ಪಡುತ್ತಿದ್ದನು. ಊಟದ ಹಾಲಿನಲ್ಲಿ ಅವನ ಹೆಸರನ್ನು ಕೂಗಿ ಓಡಿಸಿದಾಗ ಅಷ್ಟೇ ಸ್ವಾಭಿಮಾನದಿಂದ ಹೊರಕ್ಕೆ ಹೋಗುತ್ತಿದ್ದನು. ಅವನು ಊಟಕ್ಕೆ ಏನು ಮಾಡುತ್ತಾನೆ ಎಂಬುದು ನಮಗೆಲ್ಲ ಒಗಟಾಯಿತು. ಒಂದು ದಿನ ಅವನು ಬೀದಿಯ ಪಕ್ಕದ ನಲ್ಲಿಯಲ್ಲಿ ಯಥೇಚ್ಚವಾಗಿ ನೀರು ಕುಡಿಯುತ್ತಿದ್ದುದನ್ನು ನಾನು ನೋಡಿದೆ. ಕೆಲವು ದಿನಗಳ ನಂತರ ಅವನು ಇದ್ದಕ್ಕಿದ್ದಂತೆ ಸತ್ತು ಹೋದನು.

## ಕಬೋರ್ಡಿನಲ್ಲಿ ವಾಸ

ಪ್ರಾರ್ಥನೆ ಕಡ್ಡಾಯವಾದುದರಿಂದಲೋ ಏನೋ ಅದರ ಬಗ್ಗೆ ನನಗೆ ಜಿಗುಪ್ಸೆ ಬರತೊಡಗಿತು. ನಿದ್ದೆ ಎಳೆಯತೊಡಗಿತು. ಆದರೆ ಊಟ ಕಳೆದುಕೊಳ್ಳಲು ನಾನು ತಯಾರಿರಲಿಲ್ಲ. ಅದಕ್ಕಾಗಿ ಪಾಲಕರು ಮಲಗಿರುವವರ ಹೆಸರನ್ನು ಬರೆದುಕೊಳ್ಳಲು ಬರುವ ಸಮಯದಲ್ಲಿ ನಾನು ಬೇರೆಯವರ ಸ್ಥಳದಲ್ಲಿ ಅವರ ಹೊದಿಕೆಯನ್ನು ಹೊದ್ದು ಮಲಗತೊಡಗಿದೆ. ಆಗ ಪರೀಕ್ಷಿಸಲು ಬಂದ ಪಾಲಕರು ನಾನು ಯಾರ ಸ್ಥಳದಲ್ಲಿ ಮಲಗಿದ್ದೆನೋ ಅವರ ಹೆಸರನ್ನು ಬರೆದುಕೊಂಡು ಹೋಗಿ ಭೋಜನಾಲಯದಲ್ಲಿ ಅದನ್ನೇ ಕೂಗಿ ಆ ವಿದ್ಯಾರ್ಥಿಯನ್ನು ಭೋಜನಾಲಯದಿಂದ ಓಡಿಸುತ್ತಿದ್ದರು. ಆತ ಪರಿಪರಿಯಾಗಿ ಬೇಡಿಕೊಂಡರೂ ಅವನ ಮಾತನ್ನು ನಂಬದೆ ಹೊರದಬ್ಬುತ್ತಿದ್ದರು. ನನ್ನ ಊಟ ಸರಾಗವಾಗಿ ಸಾಗುತ್ತಿತ್ತು. ಹೀಗೆ ನನ್ನ ನಿದ್ದೆಯ ಹುಚ್ಚಿಗೆ ಅನೇಕರು ಊಟ ಕಳೆದುಕೊಂಡು ಪರಿತಪಿಸಿದರು. ನಾನು ನಿದ್ದೆ ಮಾಡಿದ ಜಾಗದವರು ಹೊರ ಹೋಗುವುದನ್ನು ನೋಡಿ ನನ್ನ ಮನಸ್ಸಿಗೆ ನೋವಾಗಲು ಪ್ರಾರಂಭವಾಯಿತು. ಅಂದಿನಿಂದ ನಾನು ಬೇರೆಯವರ ಸ್ಥಳದಲ್ಲಿ ಮಲಗುವುದನ್ನು ಬಿಟ್ಟುಬಿಟ್ಟೆ. ಪ್ರತಿಯೊಂದು ಕೊಠಡಿಯಲ್ಲೂ ತಟ್ಟೆ, ಲೋಟ ಇಡಲು ಕಬೋರ್ಡ್‌ಗಳು ಇರುತ್ತಿದ್ದವು. ನಾನು ಆಕಾರದಲ್ಲಿ ಬಹಳ ಸಣ್ಣಗೂ, ಕುಳ್ಳಗೂ ಇದ್ದುದರಿಂದ ಎಲ್ಲರೂ ಪ್ರಾರ್ಥನೆಗೆ ಹೊರಡುತ್ತಿದ್ದಂತೆ ನಾನು ಆ ಕಬೋರ್ಡಿನ ಒಳಗೆ ಕೋತಿಯಂತೆ ಸೇರಿಕೊಳ್ಳುತ್ತಿದ್ದೆ. ಈ ವಿಚಾರದಲ್ಲಿ ನನಗೆ ಸಹಾಯಕರಾಗಿದ್ದ ಮಿತ್ರರು ಕಬೋರ್ಡನ್ನು ಮುಚ್ಚಿ ಹೊರಗಿನಿಂದ ಬೀಗ ಹಾಕಿಕೊಂಡು ಹೋಗುತ್ತಿದ್ದರು. ಕಬೋರ್ಡಿನ ಸಣ್ಣ ಸಂದಿನಿಂದ ಬರುವ ಗಾಳಿಯ ಸಹಾಯದಿಂದ ಹಲವು ಗಂಟೆ ನಿದ್ದೆ ಮಾಡುತ್ತಿದ್ದೆ. ಸ್ನೇಹಿತರು ಪ್ರಾರ್ಥನೆ, ಡ್ರಿಲ್ಲನ್ನು ಮುಗಿಸಿಕೊಂಡು ಬಂದು ಕಬೋರ್ಡಿನ ಬೀಗ ತೆಗೆದು ನನ್ನನ್ನು ಹೊರಕ್ಕೆ ಬಿಡುತ್ತಿದ್ದರು. ಹೀಗೆ ತಿಂಗಳುಗಟ್ಟಲೆ ನಿದ್ದೆ ಮಾಡಿದೆ. ಬಹುದಿನಗಳ ನಂತರ ಪಾಲಕರಿಗೆ ಹೇಗೋ ಇದರ ಸುಳಿವು ಸಿಕ್ಕಿದ ಮೇಲೆ ಈ ಅಭ್ಯಾಸವನ್ನು ನಿಲ್ಲಿಸಿದೆ.

## ಊಟಕ್ಕೆ ಬಡಿದಾಟ

ವಿದ್ಯಾರ್ಥಿನಿಲಯದಲ್ಲಿ ಕೊಡುತ್ತಿದ್ದ ಊಟ ಏನೇನೂ ಸಾಲುತ್ತಿರಲಿಲ್ಲ. ಕೊನೆಯಲ್ಲಿ ಮಿಕ್ಕಿದ ಮುದ್ದೆ ಸಾರಿಗಾಗಿ ಹುಡುಗರು ತಟ್ಟೆಯ ಸಮೇತ ಮುನ್ನುಗ್ಗುತ್ತಿದ್ದರು. ಬಡಿಸುವವನು ಪಾತ್ರೆಯನ್ನು ರಕ್ಷಣೆಗಾಗಿ ತುಂಬಾ ಮೇಲಕ್ಕೆ ಎತ್ತಿ ಹಿಡಿಯುತ್ತಿದ್ದ. ಹುಡುಗರ ನೂಕಾಟದಲ್ಲಿ ಸಾರಿನ ಪಾತ್ರೆ ಎಷ್ಟೇ ಬಲವಾಗಿ ಮೇಲಕ್ಕೆತ್ತಿ ಹಿಡಿದಿದ್ದರೂ ಕೆಳಕ್ಕೆ ಮಗುಚಿಕೊಂಡು ಊಟಕ್ಕಾಗಿ ಬಡಿದಾಡುತ್ತಿದ್ದ ಹುಡುಗರ ತಲೆ, ಅಂಗಿ, ಚೆಡ್ಡಿಯೆಲ್ಲ ಸಾರಾಗಿ ಅವರಿಗೆ ವಿಶೇಷವಾದ ಬಣ್ಣ ಪ್ರಾಪ್ತವಾಗುತ್ತಿತ್ತು. ಕೊನೆಯಲ್ಲಿ ಮುದ್ದೆ ಮಿಕ್ಕಿದರೆ ಅರ್ಧ ಮುದ್ದೆ ಮಾಡಿ ಸಾಲಿನಲ್ಲಿ ಕುಳಿತ ಎಲ್ಲರಿಗೂ ಹಂಚುವುದು ಪದ್ಧತಿ. ಇದನ್ನು 'ಎಕ್ಸ್‌ಟ್ರಾ' ಎಂದು ಹೇಳುತ್ತಿದ್ದರು. ತುಂಬಾ ಚಿಕ್ಕ ಹುಡುಗರು ಈ 'ಎಕ್ಸ್‌ಟ್ರಾ'ವನ್ನು  ಬೇಡವೆನ್ನುತ್ತಿದ್ದರು. ಇದನ್ನರಿತಿದ್ದ ದೊಡ್ಡ ಹುಡುಗರು ಮೊದಲೇ ಹೋಗಿ ಊಟದ ಸಾಲಿನಲ್ಲಿ ಕುಳಿತು ಚಿಕ್ಕ ಹುಡುಗರಿಗಾಗಿ ಸ್ಥಳವನ್ನು ಕಾದಿರಿಸುತ್ತಿದ್ದರು. ಚಿಕ್ಕವರು ಬರುತ್ತಿದ್ದಂತೆ ಸ್ನೇಹವನ್ನು ನಟಿಸಿ ಅವರನ್ನು ಪಕ್ಕದಲ್ಲಿ ಕೂರಲು ಆಹ್ವಾನಿಸುತ್ತಿದ್ದರು. ಒಮ್ಮೊಮ್ಮೆ ಇದರಲ್ಲಿ ಪೈಪೋಟಿಯೂ ಇರುತ್ತಿತ್ತು. ಎಕ್ಸ್‌ಟ್ರಾ ಮುದ್ದೆ ಬಂದಾಗ ಬೇಡವೆನ್ನದೆ ಬಡಿಸಿಕೊಂಡು ನಂತರ ತನಗೆ ನೀಡಬೇಕೆಂದು ಹೇಳುತ್ತಿದ್ದರು. ಹೀಗೆ ಚಿಕ್ಕವರಿಂದ ದೊಡ್ಡವರಿಗೆ ಪ್ರಯೋಜನವಾಗುತ್ತಿತ್ತು. ನಾನು ಬಹಳ ಚಿಕ್ಕವನಾಗಿದ್ದೆ. ಚಿಕ್ಕವರಲ್ಲೇ ಚಿಕ್ಕವನು ಎನ್ನುವಷ್ಟು ಚಿಕ್ಕವನಾಗಿದ್ದೆ. ಒಬ್ಬ ದೊಡ್ಡ ಹುಡುಗ ಭೋಜನಾಲಯದಲ್ಲಿ ನನ್ನನ್ನು ಕಂಡದ್ದೇ ತಡ ನಿಧಿಯನ್ನು ಕಂಡವನಂತೆ ಬಹಳ ಪ್ರೀತಿಯಿಂದ ಕರೆದು ಪಕ್ಕದಲ್ಲಿ ಕೂರಿಸಿಕೊಂಡ. ಎಕ್ಸ್‌ಟ್ರಾ ಹಾಕಿಸಿಕೊಂಡು ತನಗೆ ಕೊಡುವಂತೆ ಹೇಳಿದ. ನಾನು ಅವನ ಕೋರಿಕೆಯನ್ನು ಮನ್ನಿಸದೆ ನನಗೇ ಊಟ ಸಾಲುತ್ತಿಲ್ಲವೆಂದೂ, ಎಕ್ಸ್‌ಟ್ರಾ ಮುದ್ದೆ ಕೊಟ್ಟರೆ ನಾನೇ ಉಣ್ಣುವುದಾಗಿ ತಿಳಿಸಿದೆ. ಆಶ್ಚರ್ಯಗೊಂಡ ಅವನು ಕಂಗಾಲಾದನು.

## ಮರದ ಮೇಲೆ ಕುಳಿತವನು

ಬೆಳಿಗ್ಗೆ ಎದ್ದವರೇ ಶ್ರೀರಾಮಪುರದಿಂದ ಮಲ್ಲೇಶ್ವರಂ ಹದಿನೆಂಟನೇ ಕ್ರಾಸಿನಲ್ಲಿರುವ ಸರ್ಕಾರಿ ಪ್ರೌಢಶಾಲೆಗೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದೆವು. ಏನೂ ತಿನ್ನದೆ ಹೋಗುತ್ತಿದ್ದುದರಿಂದ ಹೋಗುವಾಗಲೇ ನಮಗೆ ಹಸಿವು ಪ್ರಾರಂಭವಾಗುತ್ತಿತ್ತು. ಆದ್ದರಿಂದ ಮಲ್ಲೇಶ್ವರಂನ ಮನೆ ಮುಂದೆ ಕಾಂಪೌಂಡಿನ ಒಳಗೆ ಬೆಳೆದಿರುವ ಮರಗಿಡಗಳ ಮೇಲೆ ನಮ್ಮ ಕಣ್ಣು ಬೀಳುತ್ತಿತ್ತು. ಮನೆಯವರು ಅಷ್ಟು ಹೊತ್ತಿಗೆ ಇನ್ನೂ ಎದ್ದಿರುತ್ತಿರಲಿಲ್ಲ. ಕಾಂಪೌಂಡಿಗೆ ದುಮುಕಿ ಅಲ್ಲಿ ಬೆಳೆದಿದ್ದ ಮಾವು, ಸೀಬೆ, ಚಕ್ಕೋತದ ಹಣ್ಣುಗಳನ್ನು ಹುಷಾರಾಗಿ ಕೀಳುತ್ತಿದ್ದೆವು. ದಟ್ಟವಾಗಿ ಬೆಳೆದ ಬೆಟ್ಟದ ನೆಲ್ಲಿಕಾಯಿಗಳನ್ನು ಬಿಡಿಸುತ್ತಿದ್ದೆವು. ಕೆಳಗೆ ಬಿದ್ದ ಜಮ್ಮುನೇರಳೆ ಹಣ್ಣುಗಳನ್ನು ಆಯ್ದು ಜೇಬುಗಳಿಗೆ ತುಂಬಿಕೊಳ್ಳುತ್ತಿದ್ದೆವು. ಕಾಂಪೌಂಡಿನಲ್ಲಿಯೇ ಇರುತ್ತಿದ್ದ ನಲ್ಲಿಗಳಲ್ಲಿ ನೀರನ್ನು



ಕುಡಿಯುತ್ತಿದ್ದೆವು. ನಂತರ ಅಲ್ಲಿ ಬೆಳೆದಿದ್ದ ಮಲ್ಲಿಗೆ, ಸಂಪಿಗೆ, ಲಿಂಗದ ಹೂಗಳನ್ನು ಕೀಳುತ್ತಿದ್ದೆವು. ಹದಿನೆಂಟನೇ ಕ್ರಾಸಿನಲ್ಲಿರುವ ನಮ್ಮ ಶಾಲೆಗೆ ಹೋಗುವ ದಾರಿಯಲ್ಲಿಯೇ ಹದಿಮೂರನೇ ಕ್ರಾಸಿನಲ್ಲಿ ಬಾಲಕಿಯರ ಪ್ರೌಢಶಾಲೆಯಿತ್ತು. ಕದ್ದ ಹೂಗಳನ್ನು ಕೆಲವರು ಎದುರಿಗೆ ಬರುತ್ತಿದ್ದ ಹುಡುಗಿಯರಿಗೆ ದಿನವೂ ಕೊಟ್ಟು ಅವರ ಜೊತೆಯಲ್ಲಿ ಮಾತನಾಡುವಷ್ಟು ಸಲಿಗೆಯನ್ನು ಸಂಪಾದಿಸಿದ್ದರು. ಶಾಲೆಗೆ ಹೋದರೆ ತರಗತಿಯಲ್ಲಿ ಬಾಯಿಬಿಟ್ಟಾಗ ಯಾರ ಹಲ್ಲುಗಳು ನೀಲಿಯಾಗಿವೆಯೋ ಆ ಹುಡುಗರನ್ನು ಉಪಾಧ್ಯಾಯರು ಮತ್ತು ಇತರ ಹುಡುಗರು ಹಾಸ್ಟೆಲ್‌ನಿಂದ ಬರುವ ಹುಡುಗರು ಎಂದು ಸುಲಭವಾಗಿ ಗುರುತಿಸುತ್ತಿದ್ದರು. ಹಾಸ್ಟೆಲ್‌ನಿಂದ ಶಾಲೆಗೆ ಬರುವ ದಾರಿಯಲ್ಲಿ ಎಂದಿನಂತೆ ಒಬ್ಬ ಹುಡುಗನನ್ನು ಬೇಲದ ಹಣ್ಣುಗಳನ್ನು ಕೀಳಲು ಎತ್ತರದ ಮರಕ್ಕೆ ಹತ್ತಿಸಿದೆವು. ಅವನು ಬಹಳ ಪರಾಕ್ರಮದಿಂದಲೇ ಮರ ಏರಿದ್ದ. ಅವನ  ದುರಾದೃಷ್ಟಕ್ಕೆ ಮನೆಯ ಮಾಲೀಕ ಒಂದು ಕೋಲಿನೊಂದಿಗೆ ಹೊರಕ್ಕೆ ಬಂದುಬಿಟ್ಟ. ನಾವು ಪರಾರಿಯಾದೆವು. ಮೇಲೆ ಇದ್ದವನನ್ನು ಬೇಗ ಕೆಳಕ್ಕೆ ಬರುವಂತೆ ಕೂಗಿದರು. ಮೇಲಿದ್ದವನು ಹೆದರಿ ಹಾಗೇ ಕುಳಿತ್ತಿದ್ದ. ಕೆಳಗಿದ್ದ ಮಾಲೀಕ ಸಿಕ್ಕಾಪಟ್ಟೆ ಕೂಗುತ್ತಾ ಕೆಳಕ್ಕೆ ಇಳಿಯುವಂತೆ  ಆಜ್ಞಾಪಿಸುತ್ತಿದ್ದ. ಮೇಲಿದ್ದವನು ಧೈರ್ಯಮಾಡಿ 'ನೀವು ಒಳಕ್ಕೆ ಹೋಗಿ ಇಳೀತೀನಿ' ಎಂದ. ಮಾಲೀಕ ಇನ್ನೂ ಸಿಟ್ಟಾಗಿ ಈ ಮರ ಮನೆ ನಿಮ್ಮಪ್ಪನದಲ್ಲ ಇಳಿಯೋ ಕಳ್ಳ ಎಂದ. ಗೆಳೆಯನ ಗತಿ ಏನಾಗುವುದೋ ಎಂದು ದೂರದಲ್ಲಿ ನೋಡುತ್ತಾ ನಿಂತಿದ್ದೆವು. ಮಾಲೀಕನ ಕೋಪ ನೆತ್ತಿಗೇರಿ ಒಂದು ಕಲ್ಲನ್ನು ಮೇಲಿದ್ದವನ ಕಡೆಗೆ ಎಸೆದ. ಮೇಲಿದ್ದ ಮಿತ್ರ ತನಗೆ ಅದು ತಗುಲದೆ ಇದ್ದರೂ ಅಯ್ಯಯ್ಯೋ ಎಂದು ಕಿರುಚುತ್ತಾ ಕೆಳಕ್ಕಿಳಿಯಲು ಅನುವಾಗುತ್ತಿದ್ದಂತೆ ನಮ್ಮ ಗುಂಪಿನ ಒಬ್ಬ ಹುಡುಗ ಮಾಲೀಕನ ಕಡೆಗೆ ಕಲ್ಲು ಬೀಸಿದ. ಮಾಲೀಕ  ಕೋಲಿನೊಂದಿಗೆ ನಮ್ಮ ಕಡೆಗೆ ನುಗ್ಗಿದ. ಈ ಗಲಾಟೆಯಲ್ಲಿ ಮೇಲಿದ್ದವನು. ಇಳಿದು ಕಾಂಪೌಂಡ್ ಹಾರಿ ಬಚಾವಾಗಿ ಬಂದ. ನಾವೂ ಶಾಲೆಯ ಕಡೆ ವೇಗವಾಗಿ ಓಡಿದೆವು. ಮರ ಹತ್ತಿದ್ದವನ ಮುಖ, ಮೂತಿ, ಮಂಡಿ ತರಚಿ ಹೋಗಿ ಅವನು ಥೇಟ್ ಕೋತಿಯಂತೆಯೇ ಕಾಣುತ್ತಿದ್ದನು. ನಾವು ಶಾಲೆಗೆ ಹೋಗುವಾಗ ಕೆಲವು ದಿನ ಆ ಮಾರ್ಗವನ್ನೇ ಬದಲಾಯಿಸಿದೆವು.

## ಮಾಂಸಾಹಾರದ ಗಲಾಟೆ

ಕೆಲವು ಭಾನುವಾರಗಳಲ್ಲಿ, ಹಬ್ಬದ ದಿನಗಳಲ್ಲಿ ಪಾಲಕರು ನಮಗೆಲ್ಲ ಗೋಣಿ ಚೀಲಗಳನ್ನು ಕೊಟ್ಟು ಸಿಟಿ ಮಾರ್ಕೆಟ್ಟಿಗೆ ಕಳುಹಿಸುತ್ತಿದ್ದರು. ನಾವು ಮಾರ್ಕೆಟ್ಟಿನ ಅಂಗಡಿಗಳ ಮುಂದೆ ನಿಂತು ದವಸಧಾನ್ಯ, ತರಕಾರಿಯನ್ನು ಬೇಡುತ್ತಿದ್ದೆವು. ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದು ಪರಿಪರಿಯಾಗಿ ವಿನಂತಿಸುತ್ತಿದ್ದೆವು. ಕೆಲವು ಅಂಗಡಿಗಳವರು ಉದಾರವಾಗಿ ಇದ್ದುದನ್ನು ಕೊಡುತ್ತಿದ್ದರು. ಕೆಲವರು ಕೊಳೆತ

ತರಕಾರಿಗಳನ್ನು ಉದಾರವಾಗಿ ನೀಡುತ್ತಿದ್ದರು. ಅವನ್ನೆಲ್ಲ ಮೂಟೆಗಳಲ್ಲಿ ಹೊತ್ತು ಕೊಂಡು ವಿದ್ಯಾರ್ಥಿ ನಿಲಯಕ್ಕೆ ಸಂಜೆ ವೇಳೆಗೆ ಬರುತ್ತಿದ್ದೆವು. ಮುನ್ನೂರು ಜನ ವಿದ್ಯಾರ್ಥಿಗಳು ಸಾಲಾಗಿ ಮೆರವಣಿಗೆಯಲ್ಲಿ ಬರುವಾಗ ಕೆಲವು ಕಡೆ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿತ್ತು. ನಮ್ಮ ಶಿಸ್ತನ್ನು ದಾರಿಹೋಕರು ಮೆಚ್ಚಿಕೊಳ್ಳುತ್ತಿದ್ದರು. ಒಂದು ಸಾರಿ ದವಸಧಾನ್ಯ ತರಕಾರಿ ಸಂಗ್ರಹದೊಡನೆ ವಿದ್ಯಾರ್ಥಿನಿಲಯಕ್ಕೆ ಸಂಜೆ ಬಂದಾಗ ಆಶ್ಚರ್ಯ ಕಾದಿತ್ತು. ಭೋಜನಾಲಯದಲ್ಲಿ ಮೂಳೆಗಳ ರಾಶಿ. ನಾವು ಅಲ್ಲಿ ತರಕಾರಿಗಾಗಿ ಪರದಾಡುತ್ತಿದ್ದರೆ, ಇಲ್ಲಿ ಮಾಂಸಾಹಾರವನ್ನು ಉಂಡವರು ಯಾರು ಎಂದು ವಿದ್ಯಾರ್ಥಿಗಳು ಸಿಟ್ಟಾದರು. ನಾವು ಎಂದೂ ವಿದ್ಯಾರ್ಥಿನಿಲಯದಲ್ಲಿ ಮಾಂಸ ತಿಂದವರಲ್ಲ. ಈ ದಿನ ಯಾರು ತಿಂದವರು ಎಂದು ಪ್ರಶ್ನಿಸಿದರು. ಈ ವಿದ್ಯಾರ್ಥಿನಿಲಯಕ್ಕೆ ಆರ್. ಗೋಪಾಲ ಸ್ವಾಮಿ ಅಯ್ಯರ್ ವಿದ್ಯಾರ್ಥಿನಿಲಯ ಎಂದು ಹೆಸರಿಟ್ಟು ಹೀಗೆ ಮಾಡಬಹುದೇ ಎಂದು ಹುಡುಗರು ಕೂಗಾಡತೊಡಗಿದರು. ಇಲ್ಲಿ ಮಾಂಸ ಸೇವನೆ ನಡೆದಿರುವುದರಿಂದ ಅಯ್ಯರ್ ಎಂಬ ಶಬ್ದಕ್ಕೆ ಅವಮಾನವಾಗಿದೆ. ಆದ್ದರಿಂದ ನಾಮಫಲಕದಿಂದ ಅಯ್ಯರ್ ಎಂಬ ಪದವನ್ನು ಕಿತ್ತುಹಾಕಿ ಎಂದು ಕೆಲವರು ಗಲಾಟೆ ಮಾಡಿದರು. ಅಲ್ಲಿಯವರೆವಿಗೂ ಊಟ ಮಾಡುವುದಿಲ್ಲ ಎಂದು ಹಟ ಹಿಡಿದರು. ಹಿರಿಯರಾದ ಡಿ. ವೆಂಕಟಯ್ಯನವರು ಬಂದು ವಿದ್ಯಾರ್ಥಿಗಳಲ್ಲಿ ಕ್ಷಮೆಯಾಚಿಸಿ ಈ ಗಲಭೆಯನ್ನು ನಿಲ್ಲಿಸಿದರು.

❑